ಕರ್ನಾಟ ಪುಸ್ತಕಮಾಲೆ–೩

ಸರಣಿ ಸಂಪಾದಕ: ಆರ್ವಿಯಸ್ ಸುಂದರಂ

# ಕನಕದಾಸರ ರಾಮಧಾನ್ಯಚರಿತ್ರೆ

ವ್ಯಾಖ್ಯಾನ

ನಾಗರತ್ನಮ್ಮ

ಕರ್ನಾಟ

ಅಭಿಜಾತ ಕನ್ನಡ ಕೇಂದ್ರ

**Ramadhanyacaritre – Vyakhyana**

A commentary by Nagarathnamma on Kanakadasa’s Ramadhanyacaritre

© 2026 Tattva Heritage Foundation

*First Edition: July 2026*

ISBN: 978-81-985025-0-6

Series Editor: R. V. S. Sundaram
Karṇāṭa Classical Series 3

Karṇāṭa: Centre for Classical Kannada (karnata.org)
Executive Board
R.V.S Sundaram, Gil Ben-Herut, and Manish Maheshwari

Published by
Tattva Heritage Foundation
Kolkata, India

All rights reserved. No part of this publication may be reproduced, stored, or transmitted in any form without the prior written permission of the publisher.

The views and interpretations expressed in this book are those of the author. The publisher does not take responsibility for any errors or omissions.

For permissions, enquiries, rights-related matter, please contact:

Manish Maheshwari
Tattva Heritage Foundation
namaste@tattvaheritage.org

Typeset by Shivananda, Mysuru.

Cover design by Sathi Patel, Puducherry.

Printed at Keerthan Graphics, Mysuru
Ph. 9916226213

**ಅಧಿಕೃತ ಮಾರಾಟಗಾರರು**

**ಅಭಿರುಚಿ ಪ್ರಕಾಶನ**

# 386, 14ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–09

ಚರವಾಣಿ: 99805 60013

# ಮುನ್ನುಡಿ

ಕನ್ನಡಭಾಷಾಸಾಹಿತ್ಯಗಳ ಪ್ರಾಚೀನತೆ, ವೈಶಿಷ್ಟ್ಯ, ವೈವಿಧ್ಯ ಮತ್ತು ಶ್ರೀಮಂತಿಕೆಗಳ ಬಗೆಗಿನ ಅರಿವು ಅತ್ಯಗತ್ಯ. ಪ್ರಪಂಚದ ಯಾವ ಭಾಷೆಯ ಸಾಹಿತ್ಯಕ್ಕೆ ಹೋಲಿಸಿದರೂ ಕನ್ನಡದ್ದು ಕಡಮೆ ಸಾಧನೆಯೇನಲ್ಲ. ಆಧುನಿಕ ಸಂದರ್ಭದ ಅಗತ್ಯ ಗಳಿಗನುಗುಣವಾಗಿ ಕನ್ನಡ ಭಾಷೆಯನ್ನು ರೂಪಿಸಿಕೊಂಡು ಅದನ್ನು ಪ್ರಪಂಚ ಭಾಷೆಯನ್ನಾಗಿ ಮಾಡುವುದು ನಮ್ಮ ಗುರಿಯಾಗಬೇಕು. ಅದರ ಜತೆಗೆ ಕನ್ನಡದ ಭವ್ಯಪರಂಪರೆಯನ್ನು ಕೂಡ ಅರ್ಥಮಾಡಿಕೊಳ್ಳುವುದು ಅಗತ್ಯ. ಇದಕ್ಕೆ ಸಮಗ್ರದೃಷ್ಟಿ ಬೇಕು.

ಅಭಿಜಾತ ಕನ್ನಡ ಪರಂಪರೆಯ ದೃಷ್ಟಿಯಿಂದ ನೋಡಿದಾಗ ಕನ್ನಡದ ಕೊಡುಗೆ ಅಪೂರ್ವವಾದುದು. ಒಂಬತ್ತನೆಯ ಶತಮಾನದಷ್ಟು ಹಿಂದೆಯೇ 'ಕವಿರಾಜಮಾರ್ಗ'ದಂತಹ ಕಾವ್ಯಮೀಮಾಂಸೆ ರಚಿತವಾಗಿರುವುದು ಮಹತ್ತ್ವದ ಸಂಗತಿ. ಈ ಕೃತಿಯ ಹಿರಿಮೆಯನ್ನು ಗಮನಿಸಲೇಬೇಕಾಗಿದೆ. ಕನ್ನಡನಾಡು, ನುಡಿ, ಜನ, ಭಾಷೆ, ವಿವಿಧ ಭಾಷಾರೂಪಗಳು, ನಾಡಿನ ಹರವು, ಅಲ್ಲಿಯ ಜನರ ಚತುರತೆ ಮೊದಲಾದ ಹಲವು ವಿಷಯಗಳಿಗೆ ಕವಿರಾಜಮಾರ್ಗ ಒಂದು ದಾಖಲೆಯಾಗಿದೆ. ಹಾಗಾಗಿ ಇದೊಂದು ಮಾಹಿತಿಕೇಂದ್ರವೆನ್ನಬಹುದು. ಇದರ ಇನ್ನೊಂದು ವಿಶೇಷ ಎಂದರೆ ಭಾರತೀಯ ಕಾವ್ಯ ಸಂಪ್ರದಾಯವನ್ನೂ ಪರಿಚಯಿಸಿ ಅದರೊಂದಿಗೆ ಕನ್ನಡ ಭಾಷಾಭಿವ್ಯಕ್ತಿಯ ಸ್ವಂತಿಕೆಯನ್ನು ಮಿಲನಗೊಳಿಸಿರುವುದು. ಆದುದರಿಂದ ಈ ಕೃತಿ ಭಾರತೀಯ ಕಾವ್ಯಮೀಮಾಂಸೆಗೂ ಪ್ರಮುಖ ಕೊಡುಗೆ ಎನ್ನಬಹುದು.

ನೂರಾರು ವರ್ಷಗಳ ಹಿಂದೆಯೇ ಇಂದಿಗೂ ಪ್ರಸ್ತುತವೆನಿಸುವ ಕಾವ್ಯಮೀಮಾಂಸೆ, ಛಂದಸ್ಸು, ವ್ಯಾಕರಣ ಮೊದಲಾದವನ್ನು ಪರಿಚಯಿಸುತ್ತದೆ ಕವಿರಾಜಮಾರ್ಗ. ಛಂದೊಂಬುಧಿ, ಶಬ್ದಮಣಿದರ್ಪಣದಂತಹ ಶಾಸ್ತ್ರಗ್ರಂಥಗಳನ್ನು ನೀಡಿರುವುದು ಕನ್ನಡದ ಹಿರಿಮೆ. ಕನ್ನಡಕ್ಕೆ ಶಾಸ್ತ್ರಗ್ರಂಥಗಳ ಸುದೀರ್ಘ ಪರಂಪರೆಯೇ ಇದೆ. ಛಂದಸ್ಸು, ವ್ಯಾಕರಣಗಳಲ್ಲದೆ ಅಶ್ವಶಾಸ್ತ್ರ, ಗಜಶಾಸ್ತ್ರ, ಸೂಪಶಾಸ್ತ್ರ, ಮದನತಿಲಕ, ಲಾಸ್ಯರಂಜನಂ ಮೊದಲಾದ ವಿಶಿಷ್ಟಶಾಸ್ತ್ರಗಳಿಂದ ಕನ್ನಡ ಭಾಷೆ ಸಂಪದ್ಭರಿತವಾಗಿದೆ.

ಶಾಸ್ತ್ರಗ್ರಂಥಗಳು ಮಾತ್ರವಲ್ಲದೆ ವಡ್ಡಾರಾಧನೆ, ಚಾವುಂಡರಾಯ ಪುರಾಣ ದಂತಹ ಗದ್ಯಗ್ರಂಥಗಳು, ವಿಕ್ರಮಾರ್ಜುನ ವಿಜಯ, ಆದಿಪುರಾಣದಂತಹ ಚಂಪೂ ಕೃತಿಗಳು, ವಚನ ಸಾಹಿತ್ಯ, ಹರಿದಾಸ ಸಾಹಿತ್ಯ, ಬಸವಪುರಾಣ, ಕುಮಾರ ವ್ಯಾಸ ಭಾರತದಂತಹ ಷಟ್ಪದಿ ಕಾವ್ಯಗಳು, ಸಾಂಗತ್ಯ, ತ್ರಿಪದಿ ಛಂದಸ್ಸುಗಳಲ್ಲಿ ರಚಿತಾದ ಕೃತಿಗಳು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿವೆ.

ಹಳಗನ್ನಡ ಕೃತಿಗಳನ್ನು ಅರ್ಥಮಾಡಿಕೊಳ್ಳಲು, ಸರಿಯಾಗಿ ಗ್ರಹಿಸಲು ಪರಿಶ್ರಮ ಅಗತ್ಯವೆಂಬುದು ನಿಜ. ಆದರೆ ಕನ್ನಡ ಭಾಷೆಯ ವಿಶಿಷ್ಟಸಾಹಿತ್ಯವನ್ನು ಕಡೆಗಣಿಸುವುದು ಸರಿಯಲ್ಲ. ಈ ಸಾಹಿತ್ಯದ ಬಗೆಗೆ ಅಭಿರುಚಿಯನ್ನು ಬೆಳೆಸಲು ಹಾಗೂ ಅಧ್ಯಯನ ಮಾಡಲು ಮಾರ್ಗಗಳನ್ನು ಹುಡುಕಬೇಕು. ಹಲವು ಹಳಗನ್ನಡ ಕಾವ್ಯಗಳಿಗೆ ಗದ್ಯಾನುವಾದಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಅತ್ಯುತ್ತಮ ಸೇವೆ ಮಾಡಿದೆ. ಕವಿರಾಜಮಾರ್ಗ, ಪಂಪಭಾರತ, ಗದಾಯುದ್ಧ, ಯಶೋಧರ ಚರಿತೆ ಮೊದಲಾದ ಕೃತಿಗಳಿಗೆ ಬಂದಿರುವ ವ್ಯಾಖ್ಯಾನಗಳು ಆ ಕೃತಿಗಳನ್ನು ಅರ್ಥಮಾಡಿಕೊಂಡು ಅಭಿರುಚಿ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸಹಾಯಕ ವಾಗಿವೆ.

'ಕರ್ಣಾಟ' ಎಂಬ ಹೆಸರಿನಲ್ಲಿ ಅಭಿಜಾತ ಕನ್ನಡ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅಭಿಜಾತ ಕನ್ನಡ ಕೃತಿಕಾರರ ಅದ್ಭುತ ಸಾಧನೆಯನ್ನು ಲೋಕಕ್ಕೆ ತಿಳಿಸುವ ಪ್ರಯತ್ನ ಮಾಡಲಾಯಿತು. ಅಭಿಜಾತ ಕನ್ನಡ ಭಾಷೆ, ಸಾಹಿತ್ಯ, ಶಾಸನಗಳು ಮತ್ತು ಪರಂಪರೆಯ ಅಧ್ಯಯನ 'ಕರ್ಣಾಟ'ದ ಗುರಿಯಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಗಳಲ್ಲಿ ಜಾಲತಾಣದ ಮೂಲಕ ಅಭಿಜಾತ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ. ಹಳಗನ್ನಡ ಪಠ್ಯಗಳನ್ನು ಹಾಗೂ ಶಾಸನಗಳನ್ನು ಜಾಲ ತಾಣಕ್ಕೆ ಅಳವಡಿಸುವುದರ ಜತೆಗೆ ಪಠ್ಯದ ವಿಷಯಗಳನ್ನು ಹುಡುಕುವ ಅವಕಾಶ ವನ್ನೂ ಕಲ್ಪಿಸಲಾಗಿದೆ.

'ಕರ್ಣಾಟ'ದ ವಿವಿಧ ಯೋಜನೆಗಳಲ್ಲಿ ಅಭಿಜಾತ ಸಾಹಿತ್ಯದಲ್ಲಿ ಆಸಕ್ತರು, ಸಂಶೋಧಕರು, ಅನುವಾದಕರು, ಸಂಪಾದಕರು, ವ್ಯಾಖ್ಯಾನಕಾರರು ಪಾಲ್ಗೊಳ್ಳು

ತ್ತಿದ್ದಾರೆ. 'ಕರ್ಣಾಟ' ಅನೇಕ ಉಪಯುಕ್ತ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಪ್ರಮುಖವಾದವು:

೧. ಪಂಪಭಾರತದ ಇಂಗ್ಲಿಷ್ ಭಾಷಾಂತರ

೨. ಗಿರಿಜಾಕಲ್ಯಾಣದ ಇಂಗ್ಲಿಷ್ ಭಾಷಾಂತರ

೩. ಲಾಸ್ಯರಂಜನಂ ಗ್ರಂಥದ ಇಂಗ್ಲಿಷ್ ಭಾಷಾಂತರ

೪. ಅಭಿಜಾತ ಕನ್ನಡ ಪಠ್ಯಗಳ ಡೇಟಾಬೇಸ್ (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

೫. ಕನ್ನಡ ಶಾಸನ ಪದಕೋಶ (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

೬. ಕನ್ನಡ ಪಂಡಿತ ಪರಂಪರೆ (ಕನ್ನಡ ವಿದ್ವತ್ ಪ್ರಪಂಚಕ್ಕೆ ಕೊಡುಗೆ ನೀಡಿದ ೬೦ ಜನ ವಿದ್ವಾಂಸರ ಸಾಧನೆ.

ಈ ಯೋಜನೆಗಳ ಜತೆಗೆ ಹಳಗನ್ನಡ ಕೃತಿಗಳಿಗೆ ವ್ಯಾಖ್ಯಾನ ಮತ್ತು ಗದ್ಯಾನುವಾದವನ್ನು ಸಿದ್ಧಪಡಿಸುವ ಕೆಲಸವೂ ಮುಂದುವರಿದಿದೆ. ಈ ನಿಟ್ಟಿನಲ್ಲಿ ಕನಕದಾಸರ 'ನಳಚರಿತ್ರೆ' ಹಾಗೂ 'ಚೂಡಾರತ್ನ ಶತಕ'ಗಳ ವ್ಯಾಖ್ಯಾನಗಳು ಸಿದ್ಧವಾಗಿವೆ. ಈ ಸರಣಿಯಲ್ಲಿ ಸಿದ್ಧವಾಗಿರುವ ಮತ್ತೊಂದು ಕೃತಿ 'ರಾಮಧಾನ್ಯ ಚರಿತೆ'. ಇದನ್ನು ಸಿದ್ಧಪಡಿಸಿದವರು ಡಾ. ನಾಗರತ್ನಮ್ಮ. ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಇವರು ಕನ್ನಡ ನಾಟಕಗಳಿಗೆ ಸಂಬಂಧಿಸಿದಂತೆ ವಿವಿಧ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ 'ಟಿ ಪಿ ಕೈಲಾಸಂ', 'ಕಾವ್ಯಸೌರಭ', 'ಸಾಂಗತ್ಯ ಸಾಹಿತ್ಯ 'ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಲ್ಲಮಪ್ರಭು' ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಡಾ. ನಾಗರತ್ನಮ್ಮ 'ಪರ್ವತವಾಣಿಯವರ ನಾಟಕಗಳು– ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡದ ಒಂದು ವಿಶಿಷ್ಟಕೃತಿಯಾದ 'ರಾಮಧಾನ್ಯಚರಿತ್ರೆ'ಯ ಶಬ್ದಾರ್ಥ, ಗದ್ಯಾನುವಾದ ಹಾಗೂ ವಿಶೇಷ ವಿಚಾರಗಳನ್ನು ಸಿದ್ಧಪಡಿಸಿ ಕೊಟ್ಟಿದ್ದಕ್ಕೆ ಡಾ. ನಾಗರತ್ನಮ್ಮ ಅವರಿಗೆ ಧನ್ಯವಾದಗಳು.

ಆರ್ವಿಯಸ್. ಸುಂದರಂ

# ಪೀಠಿಕೆ

ಹದಿನಾರನೆಯ ಶತಮಾನದ ಪ್ರಸಿದ್ಧ ದಾರ್ಶನಿಕ, ಕಾಲಜ್ಞಾನಿ ಹಾಗೂ ಸಂತರೆನಿಸಿಕೊಂಡಿರುವ ಕನಕದಾಸರಿಗೆ ಹರಿದಾಸ ಸಾಹಿತ್ಯದಲ್ಲಿ ಅನನ್ಯ ಹಾಗೂ ವಿಶಿಷ್ಟ ಸ್ಥಾನವಿದೆ. ಕೀರ್ತನಕಾರರೂ ಕವಿಯೂ ಕಲಿಯೂ ಆಗಿರುವ ಇವರು ತಮ್ಮ ಕಾವ್ಯಶಕ್ತಿಯಿಂದ ಅನೇಕ ಕೃತಿಗಳನ್ನು ರಚಿಸಿ ಪಂಡಿತ ಕವಿಗಳಿಗು ಮಿಗಿಲಾಗಿದ್ದಾರೆ.

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ ೧೫೦೮ರಲ್ಲಿ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ದಂಪತಿಗಳ ಮಗನಾಗಿ ಜನಿಸಿದರು. ಶ್ರೀವ್ಯಾಸರಾಯರ ಮೆಚ್ಚಿನ ಶಿಷ್ಯರು. ಉಡುಪಿ ಶ್ರೀಕೃಷ್ಣ ಹಾಗೂ ಕಾಗಿನೆಲೆಯ ಆದಿಕೇಶವನ ಭಕ್ತರಾದ ಇವರು "ಕಾಗಿನೆಲೆಯ ಆದಿಕೇಶವರಾಯ" ಎಂಬ ಅಂಕಿತವನ್ನು ಹೊಂದಿದರು. ಮೂಲ ಹೆಸರು ತಿಮ್ಮಪ್ಪನಾಯಕ, ದಂಡನಾಯಕರಾಗಿದ್ದ ಇವರು ಯುದ್ಧವೊಂದರಲ್ಲಿ ಸೋತು ವೈರಾಗ್ಯ ಉಂಟಾಗಿ ಹರಿಭಕ್ತರಾದರು. ಕನ್ನಡ, ಸಂಸ್ಕೃತ, ವೇದ, ಆಗಮ, ಉಪನಿಷತ್ತು, ರಾಮಾಯಣ, ಮಹಾಭಾರತಗಳನ್ನು ಅಧ್ಯಯನ ಮಾಡಿದರು. ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿ, ಉಗಾಭೋಗಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ಅರ್ಪಿಸಿರುವುದಲ್ಲದೆ ಸಂಗೀತ ಪ್ರಪಂಚಕ್ಕೆ ತನ್ನದೇ ರೂಪದಲ್ಲಿ ಮುಂಡಿಗೆಗಳನ್ನು ನೀಡಿದ್ದಾರೆ. ಸು.೩೧೬ ಕೀರ್ತನೆಗಳು, ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯಚರಿತ್ರೆ, ಹರಿಭಕ್ತಿಸಾರ, ನೃಸಿಂಹಸ್ತವ(ಅನುಪಲಬ್ಧ) ಎಂಬ ಕೃತಿಗಳನ್ನು ರಚಿಸಿದ್ದಾರೆ.

ನಳಚರಿತೆ, ಮೋಹನತರಂಗಿಣಿ, ಹರಿಭಕ್ತಿಸಾರ, ಕೃತಿಗಳಿಗಿಂತ ತೀರ ಭಿನ್ನವಾದ ಕೃತಿಯೇ ರಾಮಧಾನ್ಯ ಚರಿತ್ರೆ. ಕೆಳವರ್ಗದಲ್ಲಿ ಹುಟ್ಟಿದ ಕವಿ ಸಾಧನೆಯ ಹಾದಿಯಲ್ಲಿ ಮೇಲಿಂದ ಮೇಲೆ ಉಚ್ಚ ವರ್ಗದವರ ಟೀಕೆ, ಅವಹೇಳನ, ಅವಮಾನ, ನಿಂದೆ, ನೋವುಗಳಿಗೆ ಒಳಗಾಗಿ ಯಾತನೆಯನ್ನು ಅನುಭವಿಸಿದರು. ಅವರಿಗೆ

ಪ್ರತ್ಯುತ್ತರ ಕೊಡುವ ಅಗತ್ಯ ಬಹಳವಾಗಿತ್ತು. ಇಂಥ ಸಮಯದಲ್ಲಿ ಸೂಕ್ಷ್ಮ ಮನಸ್ಸಿನ ಪ್ರಗತಿಪರ ಚಿಂತಕರಾದ ಕನಕದಾಸರು ರಾಮಧಾನ್ಯ ಚರಿತ್ರೆ ಕಾವ್ಯವನ್ನು ರಚಿಸಿದರು.

ರಾಮಾಯಣದಿಂದ ಆರಿಸಿಕೊಂಡ ವಸ್ತುವಿನಂತೆಯೇ ತೋರಿದರೂ ಇದೊಂದು ಸ್ವತಂತ್ರ ಕಲ್ಪನಾ ಕಥಾವಸ್ತುವುಳ್ಳ ಕೃತಿ. ಈ ಕಥೆಗೆ ಆಧಾರ ಬಹುಶಃ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ಜನಪದ ಕಥೆ. ಇದು ೧೫೮ ಪದ್ಯಗಳನ್ನು ಒಳಗೊಂಡಿದ್ದು ಭಾಮಿನೀಷಟ್ಪದಿಯಲ್ಲಿದೆ. ರಾಮಾಯಣದ ಕಥೆಯನ್ನು ಆಧಾರವಾಗಿಟ್ಟುಕೊಂಡರೂ ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಹಿತಮಿತವಾಗಿ ವಿಸ್ತರಿಸುತ್ತ, ಸಂಗ್ರಹಿಸುತ್ತ ಸಾಹಿತ್ಯ ಪ್ರಪಂಚವೇ ಅಚ್ಚರಿಪಡುವಂತೆ ವಿನೂತನ ರೀತಿಯಲ್ಲಿ ಕಥೆಯನ್ನು ಹೆಣೆದಿದ್ದಾರೆ. ವಾಸ್ತವವಾಗಿ ಇದು ರಾಗಿ ಬತ್ತಗಳ ಕಥೆ. ಸಂಭಾಷಣೆಯನ್ನು ಪ್ರಧಾನವಾಗುಳ್ಳ ರೂಪಕ ಕಥೆ. ಪಂಚತಂತ್ರದ ಕಥೆಗಳಲ್ಲಿ ಪ್ರಾಣಿಗಳನ್ನು ಮಾನವನ ಪ್ರತಿನಿಧಿಯಾಗಿ ನಿಲ್ಲಿಸಿದಂತೆ ಈ ಕಾವ್ಯದಲ್ಲಿ ಧಾನ್ಯಗಳನ್ನು ಮಾನವ ಪ್ರತಿನಿಧಿಯಾಗಿ ನಿಲ್ಲಿಸಿದ್ದಾರೆ. ಕನಕರು ರಾಗಿ ಮತ್ತು ಬತ್ತಗಳನ್ನು ಪಾತ್ರವಾಗಿಸಿ ಅನ್ಯೋಕ್ತಿ ರೂಪಕದ ಮೂಲಕ ನಡೆಸಿದ ಸಾಮಾಜಿಕ ಸಂವಾದವು ಸಾಮಾಜಿಕ ವಿವೇಕವಾಗಿ, ಸಾಮಾಜಿಕ ನ್ಯಾಯದ ಮೌಲ್ಯವಾಗಿ, ಸಮಾಜದಲ್ಲಿ ಇಡಿಯಾಗಿ ಆಚರಣೆಗೆ ಇಳಿದಿದ್ದರೆ ಬಡವ-ಶ್ರೀಮಂತ, ಮೇಲುಜಾತಿ-ಕೆಳಜಾತಿ, ಶ್ರೇಷ್ಠ-ಕನಿಷ್ಠ ಎಂಬ ತರತಮದ ಸಾಮಾಜಿಕ ಭಾವಗಳು ಮತ್ತು ಸ್ತರಗಳೇ ಇರುತ್ತಿರಲಿಲ್ಲ. ಈ ರೂಪಕ ಕೇವಲ ಸಾಹಿತ್ಯಕ ಉಲ್ಲೇಖ ಮಾತ್ರವಾಗಿ ಉಳಿಯಬೇಕಿತ್ತು. ಅರೆ ಸಹಸ್ರಮಾನದ ನಂತರವೂ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ವಿವರಿಸಲು ಇದೊಂದು ಕಾವ್ಯರೂಪಕವಾಗಿ, ವಿಶ್ಲೇಷಣೆಯ ಬಗೆಗಿನ ನುಡಿಗಟ್ಟಾಗಿ ಬಳಕೆ ಮಾಡುತ್ತಿದ್ದೇವೆ. ಈ ನೆಲೆಯಲ್ಲಿ ಅದು ಹಿಂದಿಗಿಂತ ಹೆಚ್ಚು ಪ್ರಸ್ತುತವಾಗುತ್ತಿರುವುದು ವಿಷಾದದ ಸಂಗತಿ.

ವೈಚಾರಿಕತೆ ಹಾಗೂ ಧಾರ್ಮಿಕ ವಿಡಂಬನೆಯ ಕಾರಣದಿಂದಲೇ ಈ ಕೃತಿಗೆ ಸಾರ್ವಕಾಲಿಕ ಮನ್ನಣೆ, ನಿರಂತರತೆ ಒದಗಿಬಂದಿದೆ. ಸಮಾನತೆಯ ಆಶಯವನ್ನು ಎತ್ತಿ ಹಿಡಿಯುವ ಕನ್ನಡದ ಮೊದಲ ವೈಚಾರಿಕ ಬಂಡಾಯ ಕೃತಿಗಳಲ್ಲಿ ಇದನ್ನು ಸೇರಿಸಬೇಕಾಗಿದೆ. ಕೃತಿಯ ಬಂಡಾಯದ ಸ್ವರೂಪ ಹೇಗೆ ಇರಲಿ, ಕನ್ನಡದ ವೈಚಾರಿಕ ಪರಂಪರೆಯಲ್ಲಿ ಪ್ರಮುಖ ಸ್ಥಾನವನ್ನು ಈ ಕೃತಿ ಪಡೆದುಕೊಂಡಿದೆ.

ಕಾವ್ಯದ ಆರಂಭದಲ್ಲಿ ಕಥಾನಾಯಕನಾದ ಶ್ರೀರಾಮದೇವನು ಸಮಸ್ತ ಸಜ್ಜನರನ್ನು ರಕ್ಷಿಸಲಿ ಎಂದು ಕವಿ ಕನಕದಾಸರು ಪ್ರಾರ್ಥಿಸಿದ್ದಾರೆ. ಅನಂತರ ಶಿವ, ವಿಷ್ಣು, ಗಣೇಶ, ಸರಸ್ವತಿ ಮುಂತಾದ ದೈವಗಳನ್ನು ಸ್ತುತಿಸಿ, ಈ ಕೃತಿಯನ್ನು ಓದಿದವರಿಗೆ ಒದಗಬಹುದಾದ ಸುಕೃತದ ಬಗ್ಗೆ ತಿಳಿಸಿದ್ದಾರೆ. "ಇಡೀ ಭೂಮಂಡಲ ಅಚ್ಚರಿಗೊಳ್ಳುವಂತೆ, ಜನಸಮೂಹವೆಲ್ಲ ಗೌರವಿಸುವಂತೆ ಈ ಮಹಾಕಥೆಯನ್ನು ಹೇಳುವೆನು, ಆಲಿಸಿದ ಸಹೃದಯರ ಮನದ ಆಸೆ–ಆಕಾಂಕ್ಷೆಗಳನ್ನು ಶ್ರೀರಾಮದೇವ ನೆರವೇರಿಸುವನು" ಎಂದೆನ್ನುತ್ತಾ ಪಾಂಡವರ ಅರಣ್ಯವಾಸದ ಕಥೆಯೊಂದಿಗೆ ಮೂಲಕಥೆಗೆ ಚಾಲನೆ ನೀಡಲಾಗಿದೆ.

ರಾಜ್ಯವನ್ನು ಕಳೆದುಕೊಂಡು ಅರಣ್ಯವಾಸಕ್ಕಾಗಿ ಕಾಮ್ಯಕವನಕ್ಕೆ ಬಂದ ಪಾಂಡವರನ್ನು ಶಾಂಡಿಲ್ಯಮುನಿ ಸಮಾಧಾನಪಡಿಸುವ ಸಂದರ್ಭ, ಧರ್ಮಪರ ಹಾಗೂ ಸದ್ಗುಣಿಯಾದ ಧರ್ಮರಾಯನು ಒಡಹುಟ್ಟಿದವರೊಂದಿಗೆ ಕಾಡುಪಾಲಾದದ್ದು ಆಶ್ರಮವಾಸಿಗಳಾದ ಋಷಿಗಳಿಗೆ ಆತಂಕವನ್ನುಂಟು ಮಾಡುತ್ತದೆ. ಹಾಗಾಗಿ ತಮ್ಮ ಕೈಲಾದ ಮಟ್ಟಿಗೆ ಸತ್ಕಾರ್ಯವನ್ನು ಮಾಡಲು ಶಾಂಡಿಲ್ಯಮುನಿಯ ನೇತೃತ್ವದಲ್ಲಿ ಪಾಂಡವರ ಕಷ್ಟಕ್ಕೆ ಒದಗಿಬರುತ್ತಾರೆ. ಬಂದ ಋಷಿ ಮುನಿಗಳ ಪಾದಕ್ಕೆ ಪಾಂಡವರು ನಮಸ್ಕರಿಸಿದಾಗ ಶಾಂಡಿಲ್ಯಮುನಿಯು "ಧರ್ಮರಾಯನೇ, ಸಿರಿವಂತಿಕೆ ಹಾಗೂ ಬಡತನ ಯಾರಿಗೂ ಶಾಶ್ವತವಲ್ಲ, ನಿಮಗೂ ಸುಖ ಒದಗಿ ಬರುತ್ತದೆ. ರಾಜ್ಯ ಮರಳಿ ಸಿಗುತ್ತದೆಂದು" ಆಶೀರ್ವದಿಸಿ, "ಅರಣ್ಯವಾಸ ಅನುಭವಿಸುತ್ತಿರುವವರು ನೀವು ಮಾತ್ರವಲ್ಲ ಈ ಮೊದಲೇ ಶ್ರೀರಾಮನು ಅರಣ್ಯವಾಸವನ್ನು ಅನುಭವಿಸಿದ್ದಾನೆ. ಭೂಮಿಯೊಳಗೆ ಶ್ರೇಷ್ಠ ಸತ್ಯವಂತ ಅರಸರಾದ ನಳ, ಶ್ರೀರಾಮ, ಹರಿಶ್ಚಂದ್ರರಲ್ಲಿ ನೀನೂ ಒಬ್ಬ. ಅಲ್ಲದೇ ರಾಗಿ ಮತ್ತು ಬತ್ತದ ನಡುವೆ ನಡೆದ ಜಗಳದಲ್ಲಿ ಶ್ರೀರಾಮ ಒಳ್ಳೆಯ ತೀರ್ಮಾನ ನೀಡಿ ಉದಾತ್ತನೆನಿಸಿ ಕೊಂಡಿದ್ದಾನೆ" ಎಂದು ಶಾಂಡಿಲ್ಯಮುನಿ ಹೇಳಿದಾಗ, ಧರ್ಮರಾಯನು "ರಾಮಚರಿತ್ರೆಯನ್ನು ನೀವು ಎನಗೆ ಪೇಳಿದೆಡೆ ಆಲಿಸುವೆನು" ಎನ್ನುವುದರ ಮೂಲಕ ಈ ವಿಸ್ತಾರವಾದ ಕಥೆಗೆ ಯುಧಿಷ್ಠಿರ ಶ್ರೋತೃವಾಗಿರುವುದು ಈ ಕಾವ್ಯದ ವಿಶೇಷವಾಗಿದೆ. ಸಂತಸಗೊಂಡ ಶಾಂಡಿಲ್ಯಮುನಿ ಧರ್ಮರಾಯನನ್ನು ಪ್ರೀತಿಯಿಂದ ಹತ್ತಿರ ಕರೆದು ಶ್ರೀರಾಮನ ಕಥೆಯನ್ನು ಸವಿಸ್ತಾರವಾಗಿ ವಿವರಿಸುತ್ತಾರೆ:

"ಕೇಳು ಕುಂತೀತನಯ ಗಂಗಾನದಿಯ ಉತ್ತರ ಭಾಗದಲ್ಲಿ ವಿಸ್ತಾರವಾದ ಅಯೋಧ್ಯಾನಗರ. ಅಲ್ಲಿ ಸೂರ್ಯವಂಶಕ್ಕೆ ಸೇರಿದ ದಶರಥ ಮಹಾರಾಜ ಆಳುತ್ತಿದ್ದ. ಆತನ ಮಡದಿಯರು ಕೌಸಲ್ಯ, ಸುಮಿತ್ರೆ, ಕೈಕೆಯರು" ಎಂದು ರಾಮನ ಜನನ, ರಾಜ್ಯ, ತಂದೆ, ತಾಯಿಯರ ವಿವರದೊಂದಿಗೆ ಕಾವ್ಯ ಆರಂಭಗೊಂಡು ತಾಟಕಿ ಸಂಹಾರ, ಮಾರೀಚ ಸುಬಾಹು ಸಂಹಾರ, ಅಹಲ್ಯಾಶಾಪವಿಮೋಚನೆ, ಸೀತಾಸ್ವಯಂವರ, ಅರಣ್ಯವಾಸ, ಕಾಕಾಸುರನ ಸನ್ನಿವೇಶ, ಶೂರ್ಪನಖಿ ಪ್ರಸಂಗ, ಸೀತಾಪಹರಣ, ವಾಲಿಸಂಹಾರ ಈ ಎಲ್ಲಾ ಪ್ರಸಂಗಗಳನ್ನು ಕೇವಲ ೧೦ ಪದ್ಯಗಳಲ್ಲಿ ಮುಗಿಸಿ ರಾಮಾಯಣದ ಕಥೆಗೆ ನಾಗಾಲೋಟವನ್ನು ನೀಡಿದ್ದಾರೆ. ೧೫೮ ಪದ್ಯಗಳಲ್ಲಿ ೧೦ ಪದ್ಯಗಳನ್ನು ಮಾತ್ರ ರಾಮಾಯಣದ ಕಥೆಗೆ ಮೀಸಲಿಟ್ಟು ಉಳಿದ ಪದ್ಯಗಳಲ್ಲಿ ರಾಗಿ ಮತ್ತು ಬತ್ತದ ಕಥೆಯನ್ನು ವಿಸ್ತರಿಸಿದ್ದಾರೆ. ನಡುನಡುವೆ ಋಷಿಮುನಿಗಳು, ವಿಭೀಷಣ, ಸುಗ್ರೀವ, ಹನುಮಂತ ಮುಂತಾದವರ ಸ್ನೇಹ ಬಾಂಧವ್ಯ, ಲಕ್ಷ್ಮಣ, ಭರತ ಶತ್ರುಘ್ನರ ಪ್ರೀತಿಧಾರೆಯನ್ನು ಕವಿ ಕಟ್ಟಿಕೊಟ್ಟಿದ್ದಾರೆ.

ಕಾವ್ಯಾರಂಭದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುವ ಶಾಂಡಿಲ್ಯಮುನಿ ಮತ್ತು ಧರ್ಮರಾಯನ ಸಂಭಾಷಣೆಯ ಆವರಣ ಕಥೆ ಮುಂದುವರಿದಂತೆಲ್ಲಾ ಪಕ್ಕಕ್ಕೆ ಸರಿದು ರಾಮ, ಋಷಿಗಳು, ರಾಕ್ಷಸರು, ರಾಗಿ, ಬತ್ತದ ಸಂಭಾಷಣೆ ಪ್ರಾಧಾನ್ಯವನ್ನು ಪಡೆದುಕೊಳ್ಳುತ್ತದೆ.

ಸೀತೆಯನ್ನು ಅಪಹರಿಸಿದ ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿ ವಿಭೀಷಣ ಹಾಗೂ ದಾನವಸೈನ್ಯ, ಸುಗ್ರೀವ ಹಾಗೂ ಕಪಿಸೈನ್ಯ ಇವರೆಲ್ಲರೊಂದಿಗೆ ಅಯೋಧ್ಯೆಗೆ ರಾಮ ಹಿಂದಿರುಗುವಾಗ, ಮಾರ್ಗ ಮಧ್ಯೆ ಋಷಿ ಗಳು ರಾಮನ ಸೈನ್ಯಕ್ಕೆ ನೀಡಿದ ಆತಿಥ್ಯವನ್ನು ಸ್ವೀಕರಿಸುವ ಸಂದರ್ಭದಲ್ಲಿ ರಾಮ ಧಾನ್ಯದ ಕಥೆ ಆರಂಭವಾಗುತ್ತದೆ. ಆತಿಥ್ಯ ಸ್ವೀಕರಿಸಿದ ಹನುಮನನ್ನು ಕರೆದು ಊಟದ ರುಚಿ ಹೇಗಿದೆ? ಎಂದು ರಾಮ ಕೇಳಲು, ಎಲ್ಲ ಅಡುಗೆಗಳ ರುಚಿಯ ಬಗ್ಗೆ ಮೆಚ್ಚುಗೆ ಸೂಚಿಸಿ ಇವುಗಳಲ್ಲಿ ಸಾರಭರಿತವಾದದ್ದು ಯಾವುದು ನೋಡಬೇಕು ಎಂದಾಗ, ಶ್ರೀರಾಮನು ಗೌತಮಮುನಿಗೆ ಹೇಳಿ ಧಾನ್ಯಗಳನ್ನು ತರಿಸುವರು. ಆಗ ರಾಮನು 'ಇದರಲ್ಲಿ ಪರಮಸಾರದ ಹೃದಯನಾರೆಂದು ಅರಸಿ' ಎನಲು ಗೌತಮಋಷಿಯು

“ನಮ್ಮ ಪ್ರದೇಶಕ್ಕೆ ನರೆದಲೆಗನೇ ಮೇಲಾದವನು ಮಿಕ್ಕಿನ ಧಾನ್ಯವೇಕೆ” ಎಂದಾಗ ಬತ್ತ “ಒಳ್ಳೆಯ ಮಾತನಾಡಿದೆ ಮುನಿಪ” ಎಂದು ಸಿಟ್ಟಿಗೆದ್ದು ರಾಗಿಯನ್ನು ಹೀನಾ ಮಾನವಾಗಿ ಬೈಯ್ಯುವುದು, ಅನಂತರದ ಸರದಿ ರಾಗಿಯದು. ಹೀಗೆ ಇವೆರಡೂ ಪರಸ್ಪರರನ್ನು ನಿಂದಿಸಿಕೊಳ್ಳುತ್ತಾ ತಮ್ಮನ್ನು ತಾವು ಹೊಗಳಿಕೊಳ್ಳುತ್ತಾ ಸುಮಾರು ಇಪ್ಪತ್ತು ಪದ್ಯಗಳಲ್ಲಿ ಕಥೆ ಮುಂದೆ ಸಾಗುತ್ತದೆ. ಇದೇ ಕಾವ್ಯದ ಸತ್ವಪೂರ್ಣವೂ ಸ್ವಾರಸ್ಯವೂ ಆದ ಹೃದಯಭಾಗ. ಕನಕದಾಸರು ಅತ್ಯಂತ ಸೂಕ್ಷ್ಮವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸುವುದರ ಮೂಲಕ ಕಾವ್ಯಕ್ಕೆ ಮೆರಗನ್ನು ನೀಡಿದ್ದಾರೆ.

ರಾಗಿ ಮತ್ತು ಬತ್ತದ ವಾಗ್ವಾದ ತಾರಕಕ್ಕೇರಿ ಇಬ್ಬರಲ್ಲೂ ದ್ವೇಷ-ಮತ್ಸರಗಳು ಉಲ್ಬಣಗೊಂಡಾಗ ರಾಮನು ಇವರ ಮತ್ಸರವನ್ನು ಸರಿಪಡಿಸಬೇಕೆಂದು ಯೋಚಿಸಿ, “ಅರಸರು ನಾವು ಈ ನಿಮ್ಮ ಜಗಳವನ್ನು ಪರಿಹರಿಸಲು ಶಕ್ತರಲ್ಲ, ಇದಕ್ಕೆ ವಿಷ್ಣು, ಶಿವ, ಬ್ರಹ್ಮರನ್ನು ಅಯೋಧ್ಯೆಗೆ ಕರೆಸುವೆನು. ಅವರು ನಿಮ್ಮ ಯೋಗ್ಯತೆಯನ್ನು ಆಧರಿಸಿ ತೀರ್ಮಾನಿಸುವರು. ಅಲ್ಲಿಯವರೆಗೂ ಅಂದರೆ ಆರು ತಿಂಗಳು ಸೆರೆಯೊಳಿರಿ” ಎಂದು ಗೌತಮಮುನಿಯ ನೇತೃತ್ವದಲ್ಲಿ ಸೆರೆಗೆ ಹಾಕುವರು. ಬಳಿಕ ಋಷಿಮುನಿಗಳನ್ನೆಲ್ಲಾ ಸತ್ಕರಿಸಿ ವೀಳೆಯವನಿತ್ತು ಅಯೋಧ್ಯೆಯ ಕಡೆಗೆ ಪ್ರಯಾಣ ಬೆಳೆಸುವರು. ಈ ಸುದೀರ್ಘ ಪಯಣದ ವರ್ಣನೆ ೫೨ನೆಯ ಪದ್ಯದಿಂದ ಆರಂಭಗೊಂಡು ೮೧ನೆಯ ಪದ್ಯದಲ್ಲಿ ಮುಕ್ತಾಯವಾಗುತ್ತದೆ. ಗೌತಮಮುನಿಯ ಆಶ್ರಮದ ಪರಿಚಯ ಮಾಡುವಾಗ ಕೌಶಿಕ, ಜಮದಗ್ನಿ, ಜಹ್ನು, ಪರಾಶರ, ಜಾಬಾಲಿ, ಭೃಗು, ದುರ್ವಾಸ ಮುಂತಾದ ಋಷಿಗಳನ್ನು ಕವಿ ಪರಿಚ ಯಿಸಿದರೆ, ಭಾರದ್ವಾಜರ ಆಶ್ರಮಕ್ಕೆ ರಾಮ ಬಂದಾಗ ಅಲ್ಲಿಯ ಋಷಿಮುನಿಗಳಾದ ಉರಗಮಾಲಿ, ಮತಂಗ, ಗಾರ್ಗ್ಯ, ಅಂಗೀರಸ, ಗಾಲವ, ಕಣ್ವ, ಜಯಮುನಿ, ಪರಶುರಾಮ, ಪರಾಶರ, ಕೌಶಿಕ, ದಾಲ್ಭ್ಯ ಮುಂತಾದವರನ್ನು ಕವಿ ಹೆಸರಿಸಿದ್ದಾರೆ. ಪ್ರಯಾಣದ ಸಂದರ್ಭದಲ್ಲಿ ಸೈನಿಕರ ಪಾತ್ರ ಅವರು ಬಳಸುತ್ತಿದ್ದ ತಮಟೆ, ಡಮರುಗ, ಗಿಡಿಗಿಡಿ, ಡೌಡೆ, ಡಿಂಡಿಮ, ಢಕ್ಕೆ, ಶಂಖ, ಮೃದಂಗ ಮುಂತಾದ ವಾದ್ಯಗಳ ವಿವರವನ್ನು ನೀಡಿದ್ದಾರೆ. ಅಲ್ಲದೇ ಪ್ರಯಾಣದ ಆಯಾಸವನ್ನು ಪರಿಹರಿಸಿಕೊಳ್ಳಲು ಭಾರದ್ವಾಜರ ಆಶ್ರಮದ ಬಳಿ ಕಪಿಸೇನೆ ನಿರ್ಮಿಸಿದ ಗುಡಿ ಗುಡಾರಗಳ ವಿವರವಿದೆ. ಅದಕ್ಕೆ ಅವರು ಬಳಸುತ್ತಿದ್ದ ಹಳದಿ, ಕೆಂಪು, ನೀಲವರ್ಣ ಸಿಂಪಡಿಸಿದ ಚಳೆಯ ಪಟ್ಟೆ, ಹೊಳೆಯುವ ರತ್ನಗಳು ಮತ್ತು

ಕಳಶದ ಗೋಪುರಗಳಿಂದ ಸಾಲು ಸಾಲಾಗಿ ಮೂರು ಯೋಜನಗಳ ಅಂತರದಲ್ಲಿ ತುಂಗಭದ್ರಾ ನದಿಯ ದಂಡೆಯಲ್ಲಿ ನಿರ್ಮಿಸಿದ ಪಟ್ಟಣ ಕಂಗೊಳಿಸುತ್ತದೆ. ರಾಮ ಅಲ್ಲಿ ಬೀಡುಬಿಟ್ಟ ಸಂದರ್ಭದಲ್ಲಿ ಹನುಮಂತನನ್ನು ಕರೆದು ನಾವು ಅಯೋಧ್ಯೆಗೆ ಹಿಂದಿರುಗುತ್ತಿರುವ ಸುದ್ದಿಯನ್ನು ನಂದಿಗ್ರಾಮದಲ್ಲಿರುವ ಭರತನಿಗೆ ಮುಟ್ಟಿಸಿ ಬಾ ಎನಲು ಸಂತಸಗೊಂಡ ಹನುಮ ಶರವೇಗದಲ್ಲಿ ಮುಟ್ಟಿಸುವನು. ಆನಂದಭರಿತರಾದ ಭರತ, ಶತ್ರುಘ್ನ, ಕೌಸಲ್ಯ, ಸುಮಿತ್ರೆ, ಕೈಕೇಯಿ ಹಾಗೂ ಯುವರಾಣಿಯರು ಅಪಾರ ಸೈನ್ಯದೊಂದಿಗೆ ಭಾರದ್ವಾಜರ ಆಶ್ರಮದ ಕಡೆಗೆ ರಥ ಹಾಗೂ ಮೇನೆಗಳಲ್ಲಿ ತೆರಳುತ್ತಾರೆ. ಇವರ ಆಗಮನವನ್ನು ದೂರದಿಂದ ಕಂಡ ರಾಮನು ಸಂಭ್ರಮದಿಂದ ಸೀತೆ ಹಾಗೂ ಲಕ್ಷ್ಮಣರಿಗೆ ತೋರಿಸುತ್ತಾನೆ. ಎಲ್ಲರೂ ಮುಖಾಮುಖಿಯಾಗಿ ಉಭಯ ಕುಶಲೋಪರಿಯ ಅನಂತರ ಅಯೋಧ್ಯೆಗೆ ಪ್ರಯಾಣ ಬೆಳೆಸುವರು.

ರಾಮನನ್ನು ಸ್ವಾಗತಿಸಲು ಅಯೋಧ್ಯೆಯನ್ನು ಶೃಂಗರಿಸಿ ಮಂತ್ರಿಗಳು, ಬಂಧುಮಿತ್ರರು ಋಷಿಮುನಿಗಳು ಮುಂತಾದವರೆಲ್ಲಾ ಸೇರಿದ್ದರು. ಈ ಸುಸಂದರ್ಭದಲ್ಲಿ ದಶರಥನ ಮಂತ್ರಿಯಾದ ಸುಮಂತನು ವಸಿಷ್ಠ ಮಹರ್ಷಿಯ ಒಪ್ಪಿಗೆಯ ಮೇರೆಗೆ ರಾಮನ ಪಟ್ಟಾಭಿಷೇಕದ ವಿಷಯವನ್ನು ಪ್ರಸ್ತಾಪಿಸುವನು. ಅವಿರೋಧವಾಗಿ ಒಪ್ಪಿಗೆ ಸಿಕ್ಕ ಬಳಿಕ ಚೋಳ, ಗುಜ್ಜರ, ದ್ರವಿಡ, ವಂಗ, ವರಾಳ, ಚೋಟಕ, ಸಿಂಧು, ಶಿಖ, ನೇಪಾಳ, ಪಾಂಡ್ಯ, ಮರಾಟ, ಸಿಂಹಳ, ಹೂಣ, ಸವೀರ, ಲಾಳ, ಮಗದ, ಕೇರಳ, ವಿದರ್ಭ, ರುತು, ಮಲೆಯಾಳ, ನಿಷಧ, ಕಳಿಂಗ, ಪಾಂಚಾಳ, ಆಂಧ್ರಕ, ಬರ್ಬರ, ರುಷವರ, ಬಂಗಾಳ, ಕೋಸಲ, ಕೊಡಗ, ಕಾಶ್ಮೀರ, ಗಾಂಧಾರ, ಕರ್ನಾಟ, ಗೌಳ, ಕುಂತಳ, ಕೊಂಕಣ, ಚೀನ, ಕೇಕೆಯ, ರಾಳ ಮೊದಲಾದ ದೇಶಗಳ ರಾಜರನ್ನು ಆಮಂತ್ರಿಸಲಾಯಿತು. ಹಾಗೂ ದೇವಲೋಕ, ಭೂಲೋಕ, ಪಾತಾಳಲೋಕದ ಒಡೆಯರು, ದಿಕ್ಪಾಲಕರು, ದೇವತೆಗಳು, ಕವಿವರೇಣ್ಯರು, ಪಂಡಿತರು, ಗಾಯಕರು, ಜಟ್ಟಿಗಳು, ಜ್ಯೋತಿಷಿಗಳು, ನುರಿತನಾಟ್ಯದವರು, ಕುಶಲಕಲಾಪಂಡಿತರು ಎಲ್ಲರೂ ಅಲ್ಲಿ ನೆರೆದು ತಾವು ತಂದ ಕಾಣಿಕೆಗಳನ್ನು ನೀಡಿದರು. ಕಲಾವಿದರು, ಸಂಗೀತಗೋಷ್ಠಿ, ನೃತ್ಯ – ಪ್ರದರ್ಶನಗಳ ಸೇವೆಯನ್ನು ನೀಡಿ ರಾಮನಿಗೆ ಸಂತಸವನ್ನುಂಟು ಮಾಡಿದರೆ, ರಾಮ ಅವರಿಗೆ ತಕ್ಕ ಕಾಣಿಕೆಗಳನ್ನು ನೀಡಿ ಗೌರವಿಸಿದನು. ಬಂದ ರಾಜರಿಗೆ ಆನೆ, ರಥ, ಕುದುರೆ ಮುಂತಾದವನ್ನು ದಾನ

ಮಾಡಿದರೆ ಬ್ರಾಹ್ಮಣರಿಗೆ ಕಾಮಧೇನು, ಕನಕ, ರೇಶಿಮೆ ವಸ್ತ್ರಗಳನ್ನು ನೀಡಿ ಗೌರವಿಸಿದರು.

ಎಲ್ಲಾ ಮುಗಿದ ಮೇಲೆ ಮರು ದಿನವೇ ಒಡ್ಡೋಲಗವನ್ನು ಆರಂಭಿಸಿ ಸೆರೆಮನೆಗೆ ಹಾಕಿದ್ದ ರಾಗಿ, ಬತ್ತವನ್ನು ಸ್ಮರಿಸಿ ತನ್ನ ನೆಚ್ಚಿನ ಬಂಟ ಹನುಮನನ್ನು ಗೌತಮರ ಬಳಿಗೆ ಅಟ್ಟುತ್ತಾನೆ. ಹನುಮ ಸುದ್ದಿ ಮುಟ್ಟಿಸಲು ಗೌತಮಋಷಿ ಇನ್ನಿತರ ತಪೋಬಲರೊಡನೆ ರಾಗಿ ಮತ್ತು ಬತ್ತವನ್ನು ಕರೆದುಕೊಂಡು ರಾಮನ ಒಡ್ಡೋಲಗಕ್ಕೆ ಬರುತ್ತಾರೆ. ಎಲ್ಲರನ್ನು ಕೂರಿಸಿ ರಾಮ ಶುದ್ಧ ಮನಸ್ಸಿನಿಂದ ಶಿವನನ್ನು ಪ್ರಾರ್ಥಿಸಲು ಆಗ ಮೂರುಲೋಕಗಳ ಒಡೆಯರು ಇಂದ್ರ ಮೊದಲಾದವರು ಸಭೆಗೆ ಬರುತ್ತಾರೆ.

ಅಲ್ಲದೇ ಅಷ್ಟವಸುಗಳು, ಅಮರರು, ನಾಗಲೋಕದ ದೇವತೆಗಳು, ಕಿನ್ನರ, ಕಿಂಪುರುಷ, ಯಕ್ಷ, ಶಶಿ, ರವಿ, ದ್ವಾದಶ ಆದಿತ್ಯರು, ವಿದ್ಯಾಧರರು, ಗುಹ್ಯಕರು, ವಸುಧೆಯ ಅಮರರು, ಕ್ಷತ್ರಿಯರು, ಜ್ಯೋತಿಷಿಗಳು, ವೈಶ್ಯರು, ಶೂದ್ರರು, ಕುಶಲಕಲಾಪಂಡಿತರು ಎಲ್ಲರು ಅಂದಿನ ಸಭೆಗೆ ಸೇರಿದ್ದಾರೆ. ಜೊತೆಗೆ ರಾಮನ ಬಂಧುಬಳಗವಾದ ಭರತ, ಶತ್ರುಘ್ನ, ಲಕ್ಷ್ಮಣ ಹಾಗೂ ವಿಭೀಷಣ, ಜಾಂಬವಂತ, ನಳ ಮೊದಲಾದವರೂ ಅಲ್ಲಿದ್ದಾರೆ.

ರಾಮ ಸಭೆಯನ್ನು ಉದ್ದೇಶಿಸಿ "ಮನಃಸಾಕ್ಷಿಗೆ ವಂಚನೆ ಮಾಡಿಕೊಳ್ಳದೇ ನ್ಯಾಯ ಅನ್ಯಾಯಗಳನ್ನು ಚೆನ್ನಾಗಿ ಅರಿತು ಪ್ರೀತಿಯಿಂದ ರಾಗಿ ಮತ್ತು ಬತ್ತಕ್ಕೆ ತೀರ್ಮಾನವನ್ನು ನೀಡಿ" ಎಂದು ಋಷಿಮುನಿಗಳು ಹಾಗೂ ದೇವತೆಗಳಲ್ಲಿ ಬಿನ್ನೈಸಿದಾಗ, ಇಂದ್ರನು "ಸಾರ ಹೃದಯನು ನರೆದಲೆಗ, ನಿಸ್ಸಾರನು ನೆಲ್ಲು" ಎಂಬ ತೀರ್ಪನ್ನು ನೀಡಲು ನಾರದ ಮುನಿಯು "ಹೌದೌದು ನರೆದಲೆಗ ಬಹಳ ಬಲ ಯುತನು ಸೆರೆಮನೆಯಲ್ಲಿ ತನ್ನ ಹೊಳಪನ್ನು ಕಳೆದುಕೊಳ್ಳದೇ ಕಾಂತಿಯುತನಾಗಿದ್ದಾನೆ. ಬತ್ತವಾದರೆ ಸವೆದು ಬಣ್ಣಗೆಟ್ಟು ಹೋಗಿದೆ" ಎಂದು ಸಮರ್ಥನೆಯನ್ನು ನೀಡುತ್ತಾನೆ. ಕಪಿಲಮುನಿ ನಸುನಗುತ್ತಾ ರಾಗಿಯ ಗುಣವನ್ನು ಹೊಗಳುತ್ತಾರೆ. ರಾಗಿಗೆ ಬಡವ ಬಲ್ಲಿದರ ಭೇದವಿಲ್ಲ. ನೆಲ್ಲು ಶ್ರೀಮಂತರನ್ನು ಮಾತ್ರ ಸಲಹುತ್ತದೆನ್ನುತ್ತಾರೆ. ದೇವತೆಗಳು ಹೊಗಳಲಾರಂಭಿಸಿದಾಗ ರಾಮ "ನರೆದಲೆಗನೇ ಬಾ" ಎಂದು ಕರೆದು ಮೆಚ್ಚುಗೆ ಯಿಂದ 'ರಾಘವ' ಎಂಬ ತನ್ನ ಅಭಿಧಾನ ನೀಡಲಾಗಿ

ಭೂಲೋಕದಲ್ಲಿ ರಾಘವ, ರಾಗಿ ಎಂಬ ಹೆಸರಿನಿಂದ ಪ್ರಸಿದ್ಧಗೊಳ್ಳುತ್ತದೆ. ತನಗಾದ ಅವಮಾನವನ್ನು ತಡೆಯಲಾಗದೇ ನೆಲ್ಲು ತಲೆ ತಗ್ಗಿಸುತ್ತದೆ. ರಾಗಿ, ಎಲ್ಲರಿಂದ ಆಶೀರ್ವಾದ ಹಾಗೂ ಉಡುಗೊರೆಗಳನ್ನು ಸ್ವೀಕರಿಸುತ್ತದೆ.

ಬ್ರಹ್ಮ-ಕಮಂಡಲ ಪಾತ್ರೆ, ಶಿವ-ತ್ರಿಶೂಲ, ಯಮ-ಯಮದಂಡ, ನಾರದ-ಚಕ್ರ, ಇಂದ್ರ-ಕೂರಿಗೆ, ಸರ್ಪರಾಜ-ಹಗ್ಗ ಮತ್ತು ಬಲೆ, ಕುಬೇರ-ಯಂತ್ರ ರಕ್ಷೆ, ಅರಣ್ಯದ ಮೂಲಿಕೆಗಳು ಹಾಗೂ ಮಂತ್ರಗಳನ್ನು ನೀಡಿದರೆ ಕಾಲಭೈರವನು ಭಸ್ಮವನ್ನು, ಸೂರ್ಯಚಂದ್ರರು ಜಲ್ಲರಿ, ವರುಣ-ಚಿನ್ನ ಮುತ್ತುಗಳಿಂದ ಮಾಡಿದ ಕಳಶವನ್ನು ಕೊಟ್ಟು ಗೌರವಿಸಿದರು. ಪಾರ್ವತಿ ತನ್ನ ಗಣಧರೆಯರನ್ನು ಕರೆದು ಭೂಲೋಕದಲ್ಲಿ ನೀವು ಸತಿಯ ರೂಪ ತಾಳಿ ಸಕಲ ಜೀವಾತ್ಮರಿಗೆ ಪಕ್ವಾನ್ನವನ್ನು ತಯಾರಿಸಿ ನೀಡಿ ಎಂದು ಕಳುಹಿಸಿಕೊಡುತ್ತಾಳೆ.

ಶ್ರೀರಾಮನು ಸಭೆಯಲ್ಲಿ ಅವಮಾನಕ್ಕೀಡಾದ ಬತ್ತವನ್ನು ಹತ್ತಿರ ಕರೆದು "ಏಕೆ ಚಿಂತಿಸುತ್ತಿರುವೆ? ನಾವು ರಾಗಿಯನ್ನು ಕೊಂಡಾಡಿದೆವೆಂದು ಕೋಪ ಗೊಂಡೆಯಾ? ಭೂಲೋಕದಲ್ಲಿ ಭೀಕರ ಕ್ಷಾಮ ಉಂಟಾದಾಗ ಕರುಣೆಯಿಂದ ಲೋಕವನ್ನು ಸಲಹಿದ ಕಾರಣಕ್ಕೆ ರಾಗಿಯನ್ನು ಹೊಗಳಿದೆವು. ಜನಸಾಮಾನ್ಯರಲ್ಲಿ ನೀನು ನಿರ್ದಯನೆಂದಷ್ಟೇ ನಿನ್ನನ್ನು ನಿರಾಕರಿಸಿದೆವು" ಎಂದು ರಾಮ ಬತ್ತದ ತಪ್ಪನ್ನು ಮನವರಿಕೆ ಮಾಡುತ್ತಾ ಆದರೂ "ನೀನು ದೇವತೆಗಳಿಗೆ ನೀಡುವ ಪರಮಾನ್ನವಾಗು, ಮನುಷ್ಯರಿಗೆ ಪಕ್ವಾನ್ನ ನರೆದಲೆಗನಾಗಲಿ ನೀವಿಬ್ಬರೂ ಭೂಲೋಕದಲಿ ಎಲ್ಲ ಕಾಲಕ್ಕೂ ಸುಖಿಗಳಾಗಿರಿ" ಎಂದು ಹರಸುತ್ತಾ ಇತರ ದವಸಧಾನ್ಯಗಳನ್ನು ಕರೆದು ನೀವೆಲ್ಲಾ ಸತ್ವಭರಿತರು ನೀವು ಸಹ ಭೂಲೋಕಕ್ಕೆ ತೆರಳಿ ದೇವತೆಗಳಿಗೆ ಹಾಗೂ ಮನುಷ್ಯರಿಗೆ ಹಿತವಾಗುವಂತೆ ನಡೆದುಕೊಳ್ಳಬೇಕು ಎಂದು ಆಶೀರ್ವದಿಸುತ್ತಾನೆ. ಸಭೆ ಮುಗಿದ ಅನಂತರ ಶ್ರೀರಾಮನು ಋಷಿಮುನಿಗಳನ್ನು ರಾಜಮಹಾರಾಜರನ್ನು ಗೌರವಿಸಿ, ಬ್ರಾಹ್ಮಣರನ್ನು ಉಪಚರಿಸಿ, ಪಂಡಿತರು, ಕವಿಗಳು, ಜಟ್ಟಿಗಳು, ಸಂಗೀತಗಾರರು, ಪ್ರಾರ್ಥಿಸುವವರು ಎಲ್ಲರನ್ನು ಗೌರವದಿಂದ ಬೀಳ್ಕೊಟ್ಟನು. ಸುಗ್ರೀವನ ಕಪಿಸೈನ್ಯ, ವಿಭೀಷಣ ಹಾಗೂ ಅವರ ದಾನವ ಸೈನ್ಯವನ್ನು ಆದರದಿಂದ ಸತ್ಕರಿಸಿ ಕಳುಹಿಸುತ್ತಾನೆ.

ಗುರು ವಸಿಷ್ಠರ ಅಭಿಪ್ರಾಯದಂತೆ, ಆದಿಕೇಶವನ ಅನುಗ್ರಹದಿಂದ ಶ್ರೀರಾಮ ಸಹೋದರರೊಡಗೂಡಿ ಅತ್ಯಂತ ವೈಭವದಿಂದ ಸತ್ಯಪಥದಲ್ಲಿ ರಾಜ್ಯವಾಳುತ್ತಾನೆ

"ಶಿವ, ವಿಷ್ಣು, ಬ್ರಹ್ಮ, ಇಂದ್ರ ಮುಂತಾದವರು ಸೇರಿ ರಾಗಿ ಮತ್ತು ಬತ್ತದ ಜಗಳವನ್ನು ರಾಮನ ಸಭೆಯಲ್ಲಿ ತೀರ್ಮಾನಿಸಿದ ಕಥೆಯನ್ನು ನಾನು ದೇವೇಂದ್ರನ ಒಡ್ಡೋಲಗದಲ್ಲಿ ಕೇಳಿದ್ದೆನು. ರಾಗಿಯು ರಾಮಧಾನ್ಯವಾದ ಆ ಕಥೆಯನ್ನು ನಾನು ಇದುವರೆಗೂ ವಿವರಿಸಿದೆ"ನೆಂದು ಶಾಂಡಿಲ್ಯಮುನಿ ಧರ್ಮರಾಯನಿಗೆ ಹೇಳುತ್ತಾರೆ. ರಾಮಧಾನ್ಯದ ಕಥೆಯನ್ನು ಕೇಳಿ ಸಂತೃಪ್ತನಾದ ಧರ್ಮರಾಯನು "ನಾನು ಮಾತ್ರವಲ್ಲ ಈ ಕಥೆಯನ್ನು ಕೇಳಿದ ಎಲ್ಲಾ ಸಹೃದಯರ ಕಿವಿಗಳೂ ಪುನೀತವಾಗಿವೆ. ಹೃದಯಗಳು ತಂಪಾಗಿವೆ. ಬೇಸರ ದೂರವಾಗಿ, ಸಂತಸ ಮನಸ್ಸಿಗೆ ದಾಳಿ ಇಟ್ಟಿದೆ" ಎನ್ನುತ್ತಾ ಶಾಂಡಿಲ್ಯಮುನಿಗಳ ಪಾದಕ್ಕೆ ನಮಸ್ಕರಿಸುತ್ತಾನೆ. ಶಾಂಡಿಲ್ಯಮುನಿಯೂ "ನೀನು ಇಂದು ಪರಮ ಪುಣ್ಯದ ಕಥೆಯನ್ನು ಕೇಳಿರುವೆ. ಶ್ರೀಹರಿ ನಿನ್ನ ಸಕಲ ಇಷ್ಟಾರ್ಥಗಳನ್ನೆಲ್ಲ ನೆರವೇರಿಸುವನು. ಶುಭವಾಗಲಿ" ಎಂದು ಅಲ್ಲಿಂದ ತೆರಳುವನು. "ಸಕಲ ಚರಾಚರಗಳ ಒಡೆಯನಾದ ಮೂರು ಲೋಕಗಳಿಂದ ವಂದಿಸಲ್ಪಟ್ಟ, ಆರಾಧ್ಯ ದೈವ ಆದಿಕೇಶವನ ಪಾದ ಕಮಲಗಳಿಗೆ ಈ ಕೃತಿಯನ್ನು ಅರ್ಪಿಸುತ್ತಿದ್ದೇನೆ. ಹಾಗೂ ಪರಮಧಾನ್ಯವಾದ ರಾಗಿಯ ಕಥೆ ಸೂರ್ಯ ಚಂದ್ರರಿರುವವರೆಗೆ ಭೂಲೋಕದಲ್ಲಿ ಶಾಶ್ವತವಾಗಿ ಇರಲಿ" ಎಂದು ಆಶಿಸುತ್ತಾ ಕಥೆಯನ್ನು ಮುಕ್ತಾಯಗೊಳಿಸಿದ್ದಾರೆ ಕನಕದಾಸರು.

ಒಟ್ಟಿನಲ್ಲಿ ಧಾನ್ಯಗಳನ್ನು ಕಾವ್ಯಮಟ್ಟಕ್ಕೆ ಏರಿಸಿದ ಖ್ಯಾತಿ ಕನಕದಾಸರದು. ಬಹುಶಃ ವಿಶ್ವಸಾಹಿತ್ಯದ ಯಾವುದೇ ಕೃತಿಗಳಲ್ಲಿ ಈ ಬಗೆಯನ್ನು ಕಾಣಲಾಗುವುದಿಲ್ಲ. "The greatness of Kanakadasa lies not only in retelling the story of Rama but in dovetailing the allegorical rivalry between rice and millet. Personification of food grains for allegorical depiction cannot perhaps be found in any literary work of world literature" (Basavaraj Naikar, The golden Servant of lord Hari – P.62, 2001)

ರಾಮಧಾನ್ಯ ಚರಿತ್ರೆಯಲ್ಲಿ ಬರುವ ರಾಗಿಯ ಪ್ರಸಂಗಕ್ಕೂ ಕನಕದಾಸರ ದಾಸ್ಯ ಜೀವನಕ್ಕೂ ನಿಕಟವಾದ ಹೋಲಿಕೆ ಇದೆ. ಇವರ ಕೃತಿಯಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ರಾಮ, ರಾಗಿ, ಬತ್ತ ಮತ್ತು ದೇವಗಣ, ಮುನಿಗಣಗಳು. ಕನಕದಾಸರ ಜೀವನದಲ್ಲಿ ಎದುರಾದ ಪ್ರಸಂಗಗಳೊಂದಿಗೆ ಈ ನಾಲ್ಕು ಪ್ರಮುಖ ಪಾತ್ರಗಳನ್ನು ತಾಳೆ ಮಾಡಿ ಹೀಗೆ ವಿಶ್ಲೇಷಿಸಿದ್ದಾರೆ.

೧. ಮರ್ಯಾದಾ ಪುರುಷೋತ್ತಮ ಶ್ರೀರಾಮ – ಗುರು ವ್ಯಾಸರಾಯರು

೨. ಕೆಳವರ್ಗದ ರಾಗಿ – ಶೂದ್ರ ಕನಕದಾಸರು

೩. ಮೇಲ್ವರ್ಗದ ಬತ್ತ – ಮಡಿವಂತಿಕೆಯ ಮತ್ಯರು(ವ್ಯಾಸಕೂಟದವರು)

೪. ದೇವಗಣ ಮುನಿಗಣಗಳು – ಜನ ಸಮುದಾಯ

ರಾಮ ತನ್ನ ನಾಮಾಂಕಿತವನ್ನೇ ರಾಗಿಗಿತ್ತು ಉದ್ಧರಿಸಿದಂತೆ ವ್ಯಾಸರಾಯರು ಕನಕನಿಗೆ ತಮ್ಮ ಅಭಯ ಹಸ್ತ ನೀಡಿ ತೀರ್ಥ ಕೊಟ್ಟು ಆಶೀರ್ವದಿಸಿದ್ದಾರೆ. ಬತ್ತ ತನ್ನ ಗುಣಗಾನ ಮಾಡಿಕೊಳ್ಳುವಲ್ಲೆಲ್ಲ ಮಡಿವಂತಿಕೆಯ ಮತ್ಯರೇ ಕಣ್ಣೆದುರಿಗೆ ನಿಲ್ಲುತ್ತಾರೆ. ರಾಮನ ತೀರ್ಪನ್ನು ಶಿರಸಾವಹಿಸಿ ಸ್ವೀಕರಿಸಿ ಒಪ್ಪಿಕೊಂಡ ದೇವಗಣ ಮುನಿಗಣಗಳಂತೆ ವ್ಯಾಸರಾಯರ ತೀರ್ಪಿಗೆ ಜನಸಮುದಾಯ ಮೌನವಾಗಿ ಕನಕನನ್ನು ಸ್ವೀಕರಿಸಿ ಸಹಿಸಿಕೊಂಡಂತೆ ತೋರುತ್ತದೆ.

ಕವಿಯ ಆತ್ಮವೃತ್ತ ಕಥನದ ಎಳೆಗಳನ್ನು ಈ ಕಾವ್ಯ ಒಳಗೊಂಡಂತೆ ವರ್ಗ ಸಂಘರ್ಷದ ಅಂಶಗಳನ್ನು ಒಳಗೊಂಡಿದೆ. ಕಾವ್ಯದ ಉದ್ದಕ್ಕೂ ಕ್ರಾಂತಿಯ ಕಿಡಿ, ಪ್ರತಿಭಟನೆಯ ನುಡಿ, ಅನ್ಯಾಯಕ್ಕೆ ಗುಡುಗುವ ಧ್ವನಿಗಳೇ ಮೈತಾಳಿವೆ. ಬಡವ-ಬಲ್ಲಿದ, ಬ್ರಾಹ್ಮಣ-ಶೂದ್ರ, ಮೇಲ್ವರ್ಗ-ಕೆಳವರ್ಗ ಇಂಥ ಭೇದಭಾವಗಳನ್ನು ವಿರೋಧಿಸುವ ಅಭಿವ್ಯಕ್ತಿ ಕಂಡುಬರುತ್ತದೆ. ರಾಮಧಾನ್ಯ ಚರಿತೆಯು ಭಾರತೀಯ ಕಾವ್ಯಮೀಮಾಂಸೆ ಅರ್ಥಾತ್ ಸಂಸ್ಕೃತ ಕಾವ್ಯಮೀಮಾಂಸೆ ಮಂಡಿಸುವ ಕಾವ್ಯ ತತ್ವಗಳಿಗಿಂತ ಭಿನ್ನವಾದ ತತ್ವಗಳನ್ನು ಪ್ರತಿಪಾದಿಸುತ್ತದೆ. ಇದು ಕೇವಲ ಕಾವ್ಯದ ಸೊಗಸು, ಲಯ ಆನಂದರಸಗಳಿಗಾಗಿ ರೂಪುಗೊಂಡಿರುವ ಕಾವ್ಯವಲ್ಲ. ಕನ್ನಡದ್ದೇ ಆದ ಬೇರೆಯ ಕಾವ್ಯಮೀಮಾಂಸೆ – ಜೀವನ ಮೀಮಾಂಸೆಯೊಂದನ್ನು ಪ್ರತಿಪಾದಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಸಮಾಜಗಳ ನಡುವಿನ ತಾಕಲಾಟಗಳಲ್ಲಿ ಕಳೆದು

ಹೋಗಿರುವ ನೆಮ್ಮದಿಯ ಬದುಕು 'ಜೀವನತತ್ವ'ದ ಮತ್ತು ಬದುಕಿನ ಮುಖ್ಯ ನೆಲೆಗಳ ಅನ್ವೇಷಣೆಯೇ ಸಾಹಿತ್ಯದ ಪ್ರಧಾನ ಭಿತ್ತಿಯಾಗಿದೆ. ಅಂತಹದ್ದರಲ್ಲಿ ಮನೋರಂಜನೆ ಒಂದು ಆನುಷಂಗಿಕ ಸಂಗತಿಯಾಗಿ ಇರಬಹುದಷ್ಟೇ. ಅದೇ ಪ್ರಧಾನ ಭಿತ್ತಿಯಲ್ಲ. ಕನಕರ ರಾಮಧಾನ್ಯ ಚರಿತ್ರೆಯ ಉದ್ದೇಶವೂ ಸೌಂದರ್ಯಾನುಭವ ಅಷ್ಟೇ ಅಲ್ಲ, ಗಾಂಧಿ ನಂಬಿದ್ದ ರಾಮರಾಜ್ಯದ ನ್ಯಾಯ ಕಲ್ಪನೆಯ ವಿಧಾನವನ್ನು ಮಂಡಿಸುವುದು. ಕೃಷ್ಣ ಮಹಿಮೆಯನ್ನು ಹೇಳಲು ರಾಮಧಾನ್ಯದ ಈ ರೂಪಕ ಹುಟ್ಟಿಕೊಂಡಿಲ್ಲ, ಬದಲಿಗೆ ಅದು ಸಾಮಾಜಿಕ ಸಂಘರ್ಷದ ಧ್ವನಿಯನ್ನು ಸಮಾಜದ ಕೆಳಸ್ತರದ ಜನರ ಧ್ವನಿಯನ್ನು ದಿಟ್ಟವಾಗಿ ದಾಖಲಿಸಲೆಂದೇ ಸೃಷ್ಟಿಸಿಕೊಂಡಿರುವ ರೂಪಕ. ಅದರಲ್ಲೂ ವಿಜಯನಗರ ಸಾಮ್ರಾಜ್ಯದ ಪ್ರಭುತ್ವದ ಮೇಲೆ ಹಾಗೂ ಪ್ರಭುತ್ವವು ಪುರೋಹಿತಶಾಹಿ ಬೆಂಬಲಕ್ಕೆ ನಿಂತಿದ್ದಾಗ ಈ ಕೃತಿ ಹುಟ್ಟಿಕೊಂಡಿದೆ. ಹಾಗೆ ಹುಟ್ಟಿಕೊಂಡ ಕಾವ್ಯವು ರಸಾನಂದಗಳಿಗೆ ಮಿಗಿಲಾದ ತೀವ್ರವಾದ ವೈಚಾರಿಕತೆಯನ್ನು ಮಂಡಿಸುತ್ತಿದೆ. ಅಂತಹ ವೈಚಾರಿಕತೆಯನ್ನು ಮಂಡಿಸುವಾಗ ಕನಕ ನಿಲ್ಲುವ ನೆಲೆ ಸಮಾಜದ ಮೇಲುಸ್ತರದಲ್ಲಿ ಅಲ್ಲ, ಯಾವುದು ಸಾಮಾಜಿಕವಾಗಿ ಮೂಲೆಗೆ ತಳ್ಳಲ್ಪಟ್ಟಿರುತ್ತದೆಯೋ ಅಂತಹ 'ಶ್ರೀ ಸಾಮಾನ್ಯ'ನ ನೆಲೆ ಅಲ್ಲಿ ನಿಂತು ತನ್ನ ವಿಚಾರವನ್ನು ಮಂಡಿಸುತ್ತಿರುವುದು ವಿಶಿಷ್ಟ ಸಂಗತಿ.

ಕನಕದಾಸರಿಗೆ ಬತ್ತದ ಪಾರಮ್ಯವನ್ನು ಪ್ರಶ್ನಿಸಿ ಶಾಶ್ವತ ವಿರೋಧಿ ಗುಂಪುಗಳನ್ನು ಸೃಷ್ಟಿಸುವುದರಲ್ಲಿ ಆಸಕ್ತಿ ಇಲ್ಲ. ಹಾಗಾಗಿ ರಾಗಿ ಬತ್ತಗಳ ನಡುವಿನ ಕೃತಕ ಶ್ರೇಷ್ಠತೆ-ಕನಿಷ್ಠತೆಗಳನ್ನು ಕಟುವಾಗಿ ಪ್ರಶ್ನಿಸುತ್ತಲೇ ಅವುಗಳ ನಡುವಿನ ಸಾಮರಸ್ಯಕ್ಕೂ ಅವಕಾಶ ಕಲ್ಪಿಸುತ್ತಾರೆ.

"ಕನಕರ ರಾಮಧಾನ್ಯ ಚರಿತ್ರೆ ಸಾಮಾಜಿಕ ವಿವೇಕವನ್ನು ಎಚ್ಚರವನ್ನು ಮೂಡಿಸುವ ರೂಪಕವಾಗಿ ಬೆಳೆದು ಬಂದಿದೆ. ಅಂತಹ ರೂಪಕಗಳ ಹಿಂದಿನ ಆಶಯದ ವೈಚಾರಿಕತೆಯನ್ನು ಈ ಕಾಲದಲ್ಲಿ ಕಾಪಾಡಿಕೊಳ್ಳುವ ಹೊಣೆ ಇದೆ. ಅರಿವಿನ ಹಣತೆಗಳನ್ನು ಆರದಂತೆ ಕಾಪಾಡಿಕೊಳ್ಳಬೇಕಿದೆ. ಜಾಗತೀಕರಣಕ್ಕೆ ವಿರುದ್ಧದ ಜನರ ನುಡಿಯನ್ನು ರೂಪಿಸಿಕೊಳ್ಳುವಲ್ಲಿ, ಜನರ ಜೀವನ ಮೀಮಾಂಸೆಯನ್ನು

ಹುಡುಕಿಕೊಳ್ಳುವಲ್ಲಿ ಕನಕರ ರಾಮಧಾನ್ಯದ ರೂಪಕವು ನೆರವಾಗುತ್ತದೆ. ಅಂತಹ ಹಲವು ರೂಪಕಗಳನ್ನು ಅಂದರೆ ಜನಪರ ಧ್ವನಿಗಳನ್ನು ಹುಡುಕಿ ಇಂದಿನ ಸಾಮಾಜಿಕ ವಿವೇಕಕ್ಕೆ ಕಸಿ ಮಾಡಿಕೊಳ್ಳಬೇಕಾದ ಅಗತ್ಯವಿದೆ."[1] ವರ್ಗ ಸಂಘರ್ಷವನ್ನು ಪ್ರತಿ ಪಾದಿಸುವ ವಿಷಯವನ್ನು ಆಯ್ದುಕೊಂಡು ಕಾವ್ಯ ರಚಿಸಿದ ಮತ್ತೊಬ್ಬ ಕವಿ ಹಳಗನ್ನಡ ಕಾಲದಲ್ಲಂತೂ ನಮಗೆ ಸಿಗುವುದಿಲ್ಲ."[2] ಕನಕದಾಸರ ರಾಗಿ ರಾಮಾಯಣ ಕನ್ನಡ ಸಾಹಿತ್ಯದಲ್ಲಿಯೇ ಒಂದು ಅಪೂರ್ವ ಕೃತಿಯಾಗಿ ಮೈತಾಳಿದೆ. "ಈ ದೃಷ್ಟಿಯಿಂದ ಕನಕದಾಸರ ರಾಮಧಾನ್ಯ ಚರಿತ್ರೆ ೧೬ನೇ ಶತಮಾನದ ಒಂದು ಸಾಮಾಜಿಕ ಆಂದೋಲನದ ಜೀವಂತ ಪ್ರತಿನಿಧಿಯಾಗಿ ನಿಲ್ಲುತ್ತದೆಂಬುದರಲ್ಲಿ ಸಂದೇಹವಿಲ್ಲ."[3]

ರಾಮಧಾನ್ಯಚರಿತ್ರೆ ಕೃತಿಯನ್ನು ಕುರಿತ ಈ ವಿದ್ವಾಂಸರ ಹೇಳಿಕೆಗಳು ತಿಳಿಸುವುದಿಷ್ಟೆ. ವರ್ಗ, ವರ್ಣ ವ್ಯವಸ್ಥೆಯನ್ನು ಮೆಟ್ಟಿನಿಲ್ಲುವ ಪರಿಯಲ್ಲಿ ಈ ಕಾವ್ಯ ಮುಂಚೂಣಿಯಲ್ಲಿದೆ ಎಂಬುದೇ ಆಗಿದೆ. ಕಾವ್ಯರೂಪದ ಈ ಕೃತಿಯನ್ನು ಗದ್ಯರೂಪಕ್ಕೆ ತರುವ ಉದ್ದೇಶ ಎಲ್ಲ ವರ್ಗದ ಸಹೃದಯರಿಗೂ ತಲುಪಲಿ ಎಂಬುದಷ್ಟೇ ಆಗಿದೆ.

---

1.ಡಾ.ರಂಗನಾಥ ಕಂಟನ ಕುಂಟೆ ಬಯಲು ಆಲಯದೊಳಗೊ, ಪುಟ.೧೩೮

2.ಜ್ಯೋತಿ ಹೊಸೂರ, ಕನಕದಾಸರ ಜೀವನ ವಿಚಾರ, ಪುಟ.೧೯

3.ಹ.ಕ. ರಾಜೇಗೌಡ, ಕನಕ ಸಾಹಿತ್ಯ ದರ್ಶನ, ಪುಟ.೫೬೬, ೧೯೯೦

## ಕನಕದಾಸರ

# ರಾಮಧಾನ್ಯಚರಿತ್ರೆ

# ರಾಮಧಾನ್ಯ ಚರಿತ್ರೆ

ಶ್ರೀ ರಮಾಪತಿ ಸಿಂಧುಶಯನ ಮು
ರಾರಿ ಮುನಿಕುಲ ಪೂಜಿತಾಂಘ್ರಿ ಸ
ರೋರುಹಾಕ್ಷ ಸುದರ್ಶನಾಂಕಿತ ದೇವ ಭವದೂರ
ಮಾರಪಿತ ಕೌಸಲಾದೇವಿ ಕು
ಮಾರ ರಘುಕುಲ ರಾಮನೃಪ ವರ
ಪೌರ ಚೆನ್ನಿಗರಾಯ ಪಾಲಿಸು ಸಕಲ ಸಜ್ಜನರ ೧

ಶ್ರೀ ರಮಾಪತಿ= ಲಕ್ಷ್ಮಿಯ ಒಡೆಯ ನಾರಾಯಣ; ಸಿಂಧು ಶಯನ= ಸಾಗರದ ಮೇಲೆ ಮಲಗಿರುವ; ಮುರ+ಅರಿ=ಮುರನೆಂಬ ರಾಕ್ಷಸನನ್ನು ಕೊಂದ ಕೃಷ್ಣ; ಮುನಿಕುಲ=ಮುನಿಗಳ ಸಮೂಹದಿಂದ; ಪೂಜಿತ+ಅಂಘ್ರಿ=ಪೂಜಿಸಲ್ಪಟ್ಟಂಥ ಪಾದ; ಸರೋರುಹ+ಅಕ್ಷ=ಸರೋವರದಲ್ಲಿಹುಟ್ಟಿದ ತಾವರೆಯಂತೆ ಕಣ್ಣುಳ್ಳವನು; ಸುದರ್ಶನ+ ಅಂಕಿತ+ದೇವ=ಸುದರ್ಶನ ಚಕ್ರವನ್ನು ಧರಿಸಿದ ದೇವನು; ಭವದೂರ= ಹುಟ್ಟು ಮತ್ತು ಸಾವಿನಿಂದ ಹೊರತಾದವನು; ಮಾರಪತಿ=ಮನ್ಮಥನ ತಂದೆ ಕೃಷ್ಣ; ಕೌಸಲ್ಯಾದೇವಿ ಕುಮಾರ=ರಾಣಿ ಕೌಸಲ್ಯೆಯ ಮಗ; ರಘುಕುಲ=ರಘುವಂಶದ; ರಾಮನೃಪ= ರಾಜನಾದ ರಾಮ; ವರಪೌರ ಚೆನ್ನಿಗರಾಯ=ವರಪುರದ ದೇವ ಚೆನ್ನಿಗರಾಯನೇ; ಸಕಲ=ಸಮಸ್ತ; ಸಜ್ಜನರ= ಸತ್ಪ್ರಜೆಗಳನ್ನು ಪಾಲಿಸು=ರಕ್ಷಿಸು.

ಲಕ್ಷ್ಮೀಪತಿಯಾದಂತಹ, ಸಮುದ್ರದ ಮೇಲೆ ಮಲಗಿರುವ, ಮುರನೆಂಬ ರಾಕ್ಷಸನನ್ನು ಕೊಂದಂತಹ, ಮುನಿಗಳಿಂದ ಪೂಜಿಸಲ್ಪಟ್ಟ ಪಾದಗಳುಳ್ಳ, ತಾವರೆ ಯಂತಹ ಕಣ್ಣುಳ್ಳ, ಸುದರ್ಶನ ಚಕ್ರವನ್ನು ಹೊಂದಿರುವಂತಹ ದೇವ, ಹುಟ್ಟು ಸಾವಿನಿಂದ ಮುಕ್ತಿಯನ್ನು ಪಡೆದಂತಹ, ಮನ್ಮಥನ ಸೃಷ್ಟಿಗೆ ಕಾರಣನಾದಂತಹ,

ಕೌಸಲ್ಯಾದೇವಿಯ ಪುತ್ರ, ರಘುವಂಶದ ರಾಜನಾದ ರಾಮ, ವರಪುರದ ದೇವನಾದ ಚೆನ್ನಿಗರಾಯ, ಸಮಸ್ತ ಸಜ್ಜನರನ್ನು ರಕ್ಷಿಸು.

ಶ್ರೀರಾಮನ ಕಥೆಯನ್ನುಆರಂಭಿಸುವ ಸಂದರ್ಭದಲ್ಲಿ ರಾಮನ ಇತರ ಅವತಾರಗಳಾದ ವಿಷ್ಣು; ಕೃಷ್ಣರನ್ನು ಸ್ತುತಿಸುತ್ತಿರುವುದು ವಿಶೇಷವಾಗಿದೆ. ಆರಂಭದ ಪದ್ಯ ಇಷ್ಟದೈವದ ಸ್ತುತಿಯಾದರೆ, ಅನಂತರದ ಪದ್ಯಗಳಲ್ಲಿ ಕವಿ ತಾನು ಎಂಥ ಕಥೆಯನ್ನು ಹೇಳುತ್ತೇನೆ ಎಂಬುದರ ವಿವರ ಹಾಗೂ ಕಥೆ ಹೇಳಲು ಮಾಡಿಕೊಂಡ ಪೂರ್ವಸಿದ್ಧತೆಗಳ ಬಗೆಗೆ ತಿಳಿಸಿದ್ದಾನೆ.

ಗಿರಿಜೆಯರಸನ ಭಜಿಸಿ ಲ್ಷಕ್ಮೀ
ವರನ ಪಾದಾಂಬುಜಕೆ ವಂದಿಸಿ
ಕರಿಮುಖನ ಬಲಗೊಂಡು ಗೀರ್ವಾಣಿಗೆ ನಮಸ್ಕರಿಸಿ
ಗುರುವಿನಂಘ್ರಿಗೆ ನಮಿಸಿ ಸತ್ಕವಿ
ವರರ ಮನದಲಿ ನೆನೆದು ವರಪುರ
ದರಸನನು ಕೊಂಡಾಡಿ ಪೇಳುವೆನೀ ಮಹಾಕಥೆಯ ೨

ಗಿರಿಜೆಯ+ಅರಸನ=ಪಾರ್ವತಿಯ ಪತಿ ಶಿವನನ್ನು; ಭಜಿಸಿ=ಸ್ತುತಿಸಿ; ಲಕ್ಷ್ಮೀವರನ=ಲ್ಷಕ್ಮಿಪತಿ ವಿಷ್ಣುವಿನ; ಪಾದ+ ಅಂಬುಜಕೆ=ಪಾದ ಕಮಲಕ್ಕೆ; ವಂದಿಸಿ= ನಮಸ್ಕರಿಸಿ; ಕರಿಮುಖನ=ಆನೆಯ ಮುಖವನ್ನು ಹೊಂದಿದ; ಗಣೇಶನ; ಬಲಗೊಂಡು=ಪ್ರದಕ್ಷಿಣೆ ಮಾಡಿ; ಗೀರ್ವಾಣಿಗೆ=ಸರಸ್ವತಿಗೆ; ನಮಸ್ಕರಿಸಿ=ಕೈಮುಗಿದು; ಗುರುವಿನ ಅಂಘ್ರಿಗೆ=ಗುರುಗಳ ಪಾದಕ್ಕೆ; ನಮಿಸಿ=ನಮಸ್ಕರಿಸಿ; ಸತ್+ ಕವಿವರರ =ಶ್ರೇಷ್ಠ ಕವಿಗಳನ್ನು; ಮನದಲ್ಲಿ ನೆನೆದು=ಮನಸ್ಸಿನಲ್ಲಿ ಸ್ಮರಿಸಿ; ವರಪುರದ + ಅರಸ ನನ್ನು =ವರಪುರದ ಅರಸ ಶ್ರೀರಾಮನನ್ನು ಕೊಂಡಾಡಿ=ಹೊಗಳಿ; ಈ ಮಹಾ ಕಥೆಯ=ಬೃಹತ್ ಕಥೆಯನ್ನು; ಪೇಳುವೆನು=ಹೇಳುವೆನು.

ಪಾರ್ವತಿಯ ಪತಿ ಶಿವನನ್ನು ಸ್ತುತಿಸಿ, ಲಕ್ಷ್ಮಿಯ ಪತಿ ವಿಷ್ಣುವಿನ ಪಾದ ಕಮಲಕ್ಕೆ ನಮಸ್ಕರಿಸಿ, ಗಜಮುಖನಾದ ಗಣಪತಿಯನ್ನು ಪ್ರದಕ್ಷಿಣೆಮಾಡಿ, ಸರಸ್ವತಿಗೆ ಕೈಮುಗಿದು; ಗುರುವಿನ ಪಾದಗಳಿಗೆ ನಮಸ್ಕರಿಸಿ, ಶ್ರೇಷ್ಠ ಕವಿಗಳನ್ನು ಮನದಲ್ಲಿ

ನೆನೆದು. ವರಪುರದ ಅರಸನಾದ ಶ್ರೀರಾಮನನ್ನು ಈ ಬೃಹತ್ ಕಾವ್ಯದಲ್ಲಿ ಕೊಂಡಾಡುತ್ತೇನೆ.

ಕವಿಯು ಕಾವ್ಯ ರಚನಾ ಸಂಪ್ರದಾಯವನ್ನು ಪಾಲಿಸುತ್ತಿದ್ದಾನೆ. ವೈದಿಕ ದೈವಗಳಾದ ಶಿವ, ವಿಷ್ಣು, ಗಣಪತಿಯನ್ನು ಸ್ತುತಿಸಿ, ಸರಸ್ವತಿಗೆ ನಮಿಸಿ, ಗುರುಗಳಿಗೆ ವಂದಿಸಿ, ಸತ್ಕವಿಗಳನ್ನು ಸ್ಮರಿಸುವ ಸತ್ ಸಂಪ್ರದಾಯವನ್ನು ಅನುಸರಿಸಿದ್ದಾನೆ. ಸ್ತ್ರೀದೇವತೆಗಳಾದ ಪಾರ್ವತಿ, ಲಕ್ಷ್ಮಿ, ಸರಸ್ವತಿಯರನ್ನು ಇಲ್ಲಿ ಸ್ತುತಿಸಿರುವುದು ವಿಶೇಷ ವಾಗಿದೆ.

ರಾಮಧಾನ್ಯದ ಕೃತಿಯನು ಜನ
ಸ್ತೋಮವೆಲ್ಲಾದರಿಸುವಂದದಿ
ಭೂಮಿಗಚ್ಚರಿಯಾಗಿ ಪೇಳುವೆನೀ ಮಹಾಕಥೆಯ
ಪ್ರೇಮದಿಂದಾದರಿಸಿ ಕೇಳ್ದ ಸ
ನಾಮರಿಗೆ ಸತ್ಕರುಣದಲಿ ರಘು
ರಾಮ ಪಾಲಿಸಿಕೊಡುವ ಮನದಲಿ ಇಷ್ಟಸಂಪದವ ೩

ರಾಮಧಾನ್ಯದ=ರಾಮಧಾನ್ಯ ಎಂದು ಕರೆಸಿಕೊಂಡಿರುವ; ರಾಗಿಯ; ಕೃತಿ ಯನು=ಕಾವ್ಯ ಕಥೆಯನ್ನು ಈ ಜನದಾಮವೆಲ್ಲಾ=ಈಜನಸಮೂಹವೆಲ್ಲಾ; ಆದರಿಸು ವಂದದಿ=ಮೆಚ್ಚುವ ಹಾಗೆ; ಭೂಮಿಗೆ+ಅಚ್ಚರಿಯಾಗಿ=ಭೂಮಿಗೆ ಆಶ್ಚರ್ಯ ವಾಗು ವಂತೆ; ಪೇಳುವೆನು=ಹೇಳುವೆನು; ಈ ಮಹಾಕಥೆಯ=ಈ ವಿಸ್ತಾರವಾದ ಕಥೆಯನ್ನು; ಪ್ರೇಮದಿಂದ= ಪ್ರೀತಿಯಿಂದ; ಆದರಿಸಿ=ಆಸಕ್ತಿಯಿಂದ; ಕೇಳ್ದ=ಆಲಿಸಿದ; ಸನಾಮರಿಗೆ =ಸದ್ಗುಣಿಗಳಿಗೆ; ಸತ್ಕರುಣದಲ್ಲಿ=ಕರುಣೆಯಿಂದ; ರಘುವಂಶದ ರಘುರಾಮನು =ರಾಮನು; ಮನದಲ್ಲಿ=ಮನಸ್ಸಿನಲ್ಲಿ; ಇಷ್ಟಸಂಪದವ=ಬಯಸಿದ್ದನ್ನೆಲ್ಲ; ಪಾಲಿಸಿ ಕೊಡುವ =ಈಡೇರಿಸುವನು.

ರಾಮಧಾನ್ಯ ಎಂಬ ಕೃತಿಯನ್ನು ಈ ಜನಸಮೂಹವೆಲ್ಲ ಗೌರವಿಸುವಂತೆ, ಇಡೀ ಭೂಮಂಡಲವೆ ಅಚ್ಚರಿಗೊಳ್ಳುವಂತೆ, ಈ ಮಹಾಕಥೆಯನ್ನು ರಚಿಸುವೆನು. ಇದನ್ನು ಪ್ರೀತಿಯಿಂದ ಆಲಿಸಿದ ಸಹೃದಯರ ಮನದ ಆಸೆ-ಆಕಾಂಕ್ಷೆಗಳನ್ನು ಶ್ರೀರಾಮನು ಕರುಣೆಯಿಂದ ನೆರವೇರಿಸುವನು.

ಕೃತಿಯ ಸ್ವರೂಪ ಅದರ ರೀತಿ, ವೈಖರಿ ಹಾಗೂ ಆ ಅಧ್ಯಾತ್ಮಕೃತಿಯನ್ನು ಓದಿದ ಸಹೃದಯರಿಗೆ ಒದಗಬಹುದಾದ ಸುಕೃತದ ಬಗ್ಗೆ ಕವಿ ಪ್ರಸ್ತಾಪಿಸಿದ್ದಾನೆ.

ಧರೆಯನೆಲ್ಲವ ಸೋತು ಜೂಜಲಿ
ಕುರುಪತಿಗೆ ಕೈದಳಿಸಿ ತಮ್ಮಂ
ದಿರು ಸಹಿತ ಧರ್ಮಜನು ಕಾಮ್ಯಕ ವನದೊಳಿರುತಿರಲು
ಪರಮಋಷಿ ಶಾಂಡಿಲ್ಯಮುನಿ ಸ
ತ್ಕರುಣದಲಿ ನಡೆತಂದನಲ್ಲಿಗೆ
ವರ ತಪೋಧನರೊಡನೆ ಕಾಣಿಸಿಕೊಂಡನುಚಿತದಲಿ ೪

ಧರೆಯನೆಲ್ಲವ ಸೋತು=ರಾಜ್ಯವನ್ನೆಲ್ಲಾ ಕಳೆದುಕೊಂಡು; ಜೂಜಲಿ= ಪಗಡೆಯಾಟದಲ್ಲಿ; ಕುರುಪತಿಗೆ=ದುರ್ಯೋಧನನ; ಕೈದಳಿಸಿ=ಮೋಸಕ್ಕೆ ಒಳಗಾಗಿ; ತಮ್ಮಂದಿರು ಸಹಿತ=ಒಡಹುಟ್ಟಿದವರೊಂದಿಗೆ; ಧರ್ಮಜನು=ಧರ್ಮರಾಯನು; ಕಾಮ್ಯಕವನದಲ್ಲಿ; ಇರುತಿರಲು=ಇದ್ದಾಗ; ಪರಮಋಷಿ=ಶ್ರೇಷ್ಠ ಋಷಿ; ಶಾಂಡಿಲ್ಯ ಮುನಿಯು; ಸತ್+ ಕರುಣದಲಿ =ಕರುಣೆಯಿಂದ; ನಡೆತಂದನಲ್ಲಿಗೆ= ಬಂದರು ಧರ್ಮರಾಯನ ಬಳಿಗೆ; ವರತಪೋಧನರೊಡನೆ=ಶ್ರೇಷ್ಠ ತಪಸ್ವಿಗಳೊಂದಿಗೆ ಕಾಣಿಸಿ ಕೊಂಡನು+ಉಚಿತದಲಿ=ಸಮಯೋಚಿತವಾಗಿ ಕಾಣಿಸಿಕೊಂಡನು.

ದುರ್ಯೋಧನನ ಮೋಸದಿಂದ ಧರ್ಮರಾಯನು ಪಗಡೆಯಾಟದಲ್ಲಿ ರಾಜ್ಯವನ್ನೆಲ್ಲಾ ಕಳೆದುಕೊಂಡು ತಮ್ಮಂದಿರ ಸಹಿತ ಕಾಮ್ಯಕವನಕ್ಕೆ ಬಂದಾಗ ಶಾಂಡಿಲ್ಯಮುನಿಯು ಅವರ ಮೇಲಿನ ಕರುಣೆಯಿಂದ ಇತರ ತಪೋಧನರನ್ನು ಕೂಡಿಕೊಂಡು ಸಮಯೋಚಿತವಾಗಿ ಕಾಣಿಸಿಕೊಂಡನು.

ಧರ್ಮಪರ ಹಾಗೂ ಸದ್ಗುಣಿಯಾದ ಧರ್ಮರಾಯನು ಒಡಹುಟ್ಟಿದವರೊಂದಿಗೆ ಕಾಡುಪಾಲಾದದ್ದು ಆಶ್ರಮವಾಸಿಗಳಾದ ಮುನಿಗಳಿಗೆ ಆತಂಕವನ್ನುಂಟು ಮಾಡುತ್ತದೆ. ಹಾಗಾಗಿ ತಮ್ಮ ಕೈಲಾದ ಮಟ್ಟಿಗೆ ಅತಿಥಿ ಸತ್ಕಾರವನ್ನು ಮಾಡಲು ಶಾಂಡಿಲ್ಯಮುನಿಯ ನೇತೃತ್ವದಲ್ಲಿ ಇತರ ತಪೋಧನರು ಪಾಂಡವರ ಕಷ್ಟಕ್ಕೆ ಒದಗಿ ಬಂದರು.

ನಾಲ್ಕನೆಯ ಅಂದರೆ ಈ ಪದ್ಯದಿಂದ ಪಾಂಡವರ ಅರಣ್ಯವಾಸದ ವಿಷಯ ಆರಂಭಗೊಳ್ಳುತ್ತದೆ. ಹೀಗೆ ವನವಾಸಕ್ಕೆ ಬಂದ ಪಾಂಡವರಿಗೆ ಶಾಂಡಿಲ್ಯಮುನಿಯು ಸತ್ಯನಿಷ್ಠ ಶ್ರೀರಾಮನ ಕಥೆಯನ್ನು ಹೇಳುವ ಹಾಗೆ ಕವಿ ಕಥಾ ಹಂದರವನ್ನು ಹೆಣೆದಿದ್ದಾನೆ.

ಧರಣಿಪತಿ ಯಮಸೂನು ತಮ್ಮಂ
ದಿರು ಸಹಿತಲಿದಿರೆದ್ದು ಮುನಿಪನ
ಚರಣಕಾನತನಾಗಿ ಕೈ ಮುಗಿದಿರಲು ಧರ್ಮಜನ
ಕರೆದು ಲಾಲಿಸಿ ಕುಳ್ಳಿರಿಸಿ ಸ
ತ್ಕರುಣದಲಿ ಮುನಿ ನುಡಿದನೆಲೆ ನೃಪ
ಸಿರಿ ದರಿದ್ರತೆ ನಿಲದು ಪರಿಹರವಹುದು ಕೇಳೆಂದ ೫

ಧರಣಿಪತಿ=ರಾಜ; ಯಮಸೂನು=ಯಮನ ಮಗ ಧರ್ಮರಾಜ; ತಮ್ಮಂದಿರು ಸಹಿತಲಿ=ತಮ್ಮಂದಿರ ಜೊತೆಗೂಡಿ; ಇದಿರೆದ್ದು=ಎದುರುಗೊಂಡು; ಮುನಿಪನ ಚರಣಕೆ+ಆನತನಾಗಿ=ಋಷಿಯ ಪಾದಕ್ಕೆ ಬಾಗಿ; ಕೈ ಮುಗಿದಿರಲು= ನಮಸ್ಕರಿಸಲು; ಧರ್ಮಜನ ಕರೆದು ಲಾಲಿಸಿ=ಧರ್ಮರಾಯನನ್ನು ಪ್ರೀತಿಯಿಂದ ಕರೆದು; ಕುಳ್ಳಿರಿಸಿ=ಕೂರಿಸಿ; ಸತ್ಕರುಣದಲಿ=ಕರುಣೆಯಿಂದ; ಮುನಿ ನುಡಿದನು=ಋಷಿ ಹೇಳಿದನು; ಎಲೆನೃಪ=ರಾಜನೇ ಕೇಳು; ಸಿರಿ ದರಿದ್ರತೆ ನಿಲದು=ಸಿರಿತನ ಬಡತನ ಶಾಶ್ವತವಲ್ಲ; ಪರಿಹರವಹುದು ಕೇಳೆಂದ=ಪರಿಹಾರವಾಗುವುದು ಕೇಳು ಎಂದ.

ರಾಜನಾಗಿದ್ದ ಧರ್ಮರಾಯನು ತಮ್ಮಂದಿರೊಡನೆ ಎದುರು ಬಂದ ಮುನಿಗಳ ಪಾದಕ್ಕೆ ನಮಸ್ಕರಿಸಲು ಋಷಿ ಮುನಿಗಳು ಪ್ರೀತಿಯಿಂದ ಅವರನ್ನು ಕುಳ್ಳಿರಿಸಿ ಧರ್ಮರಾಯನೇ “ಸಿರಿವಂತಿಕೆ ಹಾಗೂ ಬಡತನ ಯಾರಿಗೂ ಶಾಶ್ವತವಲ್ಲ. ನಿಮ್ಮ ಈ ಕಷ್ಟ ಕಾರ್ಪಣ್ಯದ ಪರಿಸ್ಥಿತಿ ಹೀಗೇ ಇರುವುದಿಲ್ಲ. ನಿಮಗೂ ಸುಖ ಒದಗಿ ಬರುತ್ತದೆ. ರಾಜ್ಯ ಮರಳಿ ಸಿಗುತ್ತದೆಂದು” ಸಮಾಧಾನದ ನುಡಿಗಳನ್ನಾಡಿದರು.

ಸತ್ಪಾತ್ರರಾದವರು ಕಾಡಿಗೆ ಹೋದರೂ ಅಲ್ಲಿಯೂ ಅವರಿಗೆ ಸಾಂತ್ವನ; ಸಮಾಧಾನಗಳು; ಅಶನ ವಸನಾದಿಗಳು ಲಭಿಸುತ್ತವೆಂಬ ಸತ್ಯವನ್ನು ಕವಿ ಈ ಪದ್ಯದಲ್ಲಿ ಸಾರಿದ್ದಾನೆ. ಹಾಗೂ ಶ್ರೀಮಂತರೆಂದು ಬೀಗುವುದಾಗಲಿ ಬಡವರೆಂದು

ಪರಿತಪಿಸುವು ದಾಗಲಿ ಬೇಕಾಗಿಲ್ಲ. ಇವು ಎಲ್ಲರ ಬದುಕಿನಲ್ಲೂ ಅಶಾಶ್ವತವೆಂಬ ಲೋಕ ನೀತಿಯನ್ನು ಶಾಂಡಿಲ್ಯಮುನಿ ಹೇಳಿದ್ದಾನೆ.

ದೇವ ಋಷಿಗಳು ನಿಮ್ಮ ಕರುಣಾ
ಭಾವವೆಮ್ಮಲ್ಲಿರಲು ನಮಗಿ
ನ್ನಾವ ಕಷ್ಟದ ಬಳಕೆದೋರದು ನಿಮ್ಮ ದರುಶನದಿ
ಪಾವನರು ನಾವಾದೆವೆಮಗಿ
ನ್ನಾವ ಬುದ್ಧಿ ಯನರುಹುವಿರಿಯದ
ನೀವು ಪೇಳೆನೆ ನಸುನಗುತ ಮುನಿನಾಥನಿಂತೆಂದ ೬

ದೇವಋಷಿಗಳು=ಋಷಿವರ್ಯರೇ; ನಿಮ್ಮ ಕರುಣಾಭಾವ=ನಿಮ್ಮಯ ಕರುಣೆ ಎಮ್ಮಲ್ಲಿರಲು=ನಮ್ಮ ಮೇಲೆ ಇರಲು; ನಮಗಿನ್ನಾವ=ನಮಗೆ ಇನ್ನು ಯಾವದೇ; ಕಷ್ಟದ ಬಳಕೆದೋರದು=ಕಷ್ಟಗೋಚರಿಸದು; ನಿಮ್ಮ ದರುಶನದಿ=ನಿಮ್ಮ ದರ್ಶನ ದಿಂದ; ಪಾವನರು ನಾವಾದೆವು=ನಾವು ಪುನೀತರಾದೆವು. ಎಮಗೆ+ಇನ್ನಾವ= ನಮಗೆ ಇನ್ನು ಯಾವ; ಬುದ್ಧಿಯನ+ಅರಹುವಿರಿ+ಅದ=ಸಲಹೆಯನ್ನು ನೀಡುವಿರಿ ಅದನ್ನು; ನೀವು ಪೇಳು+ಎನೆ=ನೀವು ಹೇಳಿ ಎನಲು; ನಸುನಗುತ ಮುನಿನಾಥ ನಿಂತೆಂದ= ಶಾಂಡಿಲ್ಯಮುನಿ ಮುಗುಳ್ನಗುತ್ತಾ ಹೀಗೆಂದ.

ದೇವಋಷಿಗಳಾದ ನಿಮ್ಮ ಕರುಣಾಭಾವ ನಮ್ಮ ಮೇಲಿರಲು ನಮಗೆ ಇನ್ನು ಯಾವ ಕಷ್ಟವೂ ತಲೆತೋರದು, ನಿಮ್ಮ ದರುಶನಭಾಗ್ಯದಿಂದ ನಾವು ಪಾವನರಾದೆವು. ನಮಗೆ ಇನ್ನು ಯಾವ ಸಲಹೆಯನ್ನು ನೀಡುವಿರಿ ಹೇಳಿ ಎಂದು ಧರ್ಮರಾಯ ಕೇಳಲು ಶಾಂಡಿಲ್ಯಮುನಿ ನಗುತ್ತಾ ಹೀಗೆಂದನು.

ಪಾಂಡವರು ಮತ್ತು ಋಷಿಗಳ ಸಮಾಗಮವೇ ಒಂದು ಅಪೂರ್ವ ಸನ್ನಿವೇಶ, ಪರಸ್ಪರ ಭೇಟಿಯಿಂದ ಸಂತಸಗೊಳ್ಳುವರು ಹಾಗೂ ಋಷಿಗಳ ದರುಶನ ಮಾತ್ರದಿಂದಲೇ ಅವರಿಗೆ ಆನೆ ಬಲ ಬಂದಂತಾಗಿ ಅರಣ್ಯವಾಸವನ್ನು ಸಂತೋಷ ದಿಂದ ಕಳೆಯಲು ನಿರ್ಧರಿಸಿದರು.

ಧಾರುಣಿಯೊಳರಸುಗಳು ನಾಲ್ವರು
ಭೂರಿ ಸತ್ಯವ್ರತರು ನಳನೃಪ

ಧೀರ ರಾಮ ಯುಧಿಷ್ಠಿರ ಹರಿಶ್ಚಂದ್ರರಿವರೆಂದು
ಸಾರುತಿದೆ ಜಗವೆಲ್ಲ ನಿಮ್ಮನು
ದಾರನಿದರೊಳು ರಘುಪತಿಯ ಗುಣ
ಹಾರ ಧರ್ಮವ ಪಾಲಿಸಿದ ನರೆದಲೆಗ ವ್ರಿಹಿಯರಿಗೆ ೭

ಧಾರುಣಿಯೊಳು+ಅರಸುಗಳು=ಭೂಮಂಡಲದಲ್ಲಿ ರಾಜರು; ನಾಲ್ವರು= ನಾಲ್ಕುಮಂದಿ; ಭೂರಿ ಸತ್ಯವ್ರತರು=ಹೆಚ್ಚು ಸತ್ಯನಿಷ್ಠರು; ನಳನೃಪ=ನಳ ಮಹಾರಾಜ; ಧೀರರಾಮ=ಧೈರ್ಯಶಾಲಿ ರಾಮ; ಯುಧಿಷ್ಠಿರ ಹಾಗೂ ಹರಿಶ್ಚಂದ್ರರು+ ಇವರೆಂದು=ಯುಧಿಷ್ಠಿರ ಹಾಗೂ ಹರಿಶ್ಚಂದ್ರ ಇವರೆಂದು; ಸಾರುತಿದೆ=ಹೇಳುತಿದೆ; ಜಗವೆಲ್ಲ+ಜಗತ್ತೆಲ್ಲಾ; ಉದಾರನು+ಇದರೊಳು ರಘುಪತಿಯು=ಇವರಲ್ಲೂ ರಾಮನು ಉದಾರನು; ಗುಣ+ಆಹಾರ=ಉತ್ತಮ ಆಹಾರದ ಪರ; ಧರ್ಮವ=ನ್ಯಾಯವನ್ನು; ನರೆದಲೆಗೆ ವ್ರಿಹಿಯರಿಗೆ=ರಾಗಿ ಮತ್ತು ಬತ್ತದ ಜಗಳದಲ್ಲಿ; ಪಾಲಿಸಿದ=ತೀರ್ಮಾನಿಸಿದ.

ಭೂಮಿಯೊಳಗೆ, ಶ್ರೇಷ್ಠ, ಸತ್ಯವಂತ ಅರಸುಗಳು ನಾಲ್ಕು ಮಂದಿ; ನಳ ಮಹಾರಾಜ ಶ್ರೀರಾಮ, ಯುಧಿಷ್ಠಿರ, ಹರಿಶ್ಚಂದ್ರ ಎಂದು ಜಗತ್ತೆಲ್ಲಾ ನಿಮ್ಮನ್ನು ಹೊಗಳುತ್ತಿದೆ, ಅದರಲ್ಲೂ ಧೀರ ರಾಮನು ರಾಗಿ ಮತ್ತು ಬತ್ತದ ನಡುವೆ ನಡೆದ ಜಗಳದಲ್ಲಿ ಒಳ್ಳೆಯ ತೀರ್ಮಾನವನ್ನು ನೀಡಿ ಉದಾತ್ತನೆನಿಸಿಕೊಂಡ.

ಕವಿ ಶಾಂಡಿಲ್ಯಮುನಿಯ ಮೂಲಕ ಯುಧಿಷ್ಠಿರನನ್ನು ಸತ್ಯವಂತ ಎಂದು ಹೊಗಳುತ್ತಲೇ ನಿಮಗಿಂತ ಉದಾರನು ಸತ್ಯಸಂಧನು ಶ್ರೀರಾಮ ಎಂದಾಗ, ಯುಧಿಷ್ಠಿರ ಕೋಪಗೊಳ್ಳದೇ "ಹಾಗಾದರೆ ರಾಮಚರಿತ್ರೆಯನ್ನು ಹೇಳಿ ನಾವು ಆಲಿಸುತ್ತೇವೆ" ಎಂದು ಹೇಳಿಸುವ ಮೂಲಕ ಓದುಗರಿಗೆ ರಾಮನ ಕಥೆಯನ್ನು ಕವಿ ಮುಟ್ಟಿಸುತ್ತಾನೆ. ಧರ್ಮರಾಯನು ಶ್ರೀರಾಮನ ಕಥೆಗೆ ಶ್ರೋತೃವಾಗಿರುವುದು ಈ ಕಾವ್ಯದ ವಿಶೇಷ.

ಎನಲು ರಾಮಚರಿತ್ರೆಯನು ನೀ
ವೆನಗೆ ಪೇಳಿದಡಾಲಿಸುವೆನೆನೆ
ಮನದೊಳಗೆ ನಸುನಗುತ ಶಾಂಡಿಲ್ಯನು ಯುಧಿಷ್ಠಿರಗೆ
ಅನುನಯದೊಳಾದರಿಸಿ ರಘುನಂ

ದನನ ಚರಿತೆಯನರುಹಿ ಭೂಪನ
ಮನಸಿನಲ್ಲಿರುವಂತೆ ವಿಸ್ತರಿಸಿದ ಮಹಾಕಥೆಯ ೮

ಎನಲು=ಎಂದಾಗ; ರಾಮಚರಿತ್ರೆಯನು=ರಾಮನ ಕಥೆಯನ್ನು; ನೀವು+ ಎನಗೆ=ನೀವು ನನಗೆ; ಪೇಳಿದಡೆ+ಆಲಿಸುವೆನು+ಎನೆ=ಹೇಳಿದರೆ ಕೇಳುವೆನು ಎನಲು; ಮನದೊಳಗೆ ತಾ ನಸುನಗುತ ಶಾಂಡಿಲ್ಯನು=ಮನಸಿನಲ್ಲಿ ಶಾಂಡಿಲ್ಯಮುನಿ ಸಂತಸಗೊಂಡು; ಯುಧಿಷ್ಠಿರಗೆ=ಯುಧಿಷ್ಠಿರನಿಗೆ; ಅನುನಯದೊಳು+ ಆದರಸಿ= ಪ್ರೀತಿಯಿಂದ ಗೌರವಿಸಿ; ರಘುನಂದನನ ಚರಿತೆಯನು+ಅರುಹಿ=ಶ್ರೀರಾಮನ ಕಥೆ ಯನ್ನು ತಿಳಿಸಿ; ಭೂಪನ ಮನಸಿನಲ್ಲಿರುವಂತೆ=ಯುಧಿಷ್ಠಿರನ ಮನದಲ್ಲಿ ನಿಲ್ಲುವಂತೆ; ವಿಸ್ತರಿಸಿದ ಮಹಾಕಥೆಯನ್ನು=ವಿಸ್ತಾರವಾದ ಕಥೆಯನ್ನು ವಿವರಿಸಿದ.

ಧರ್ಮರಾಯನು "ರಾಮನ ಚರಿತ್ರೆಯನ್ನು ನೀವು ನನಗೆ ಹೇಳಿ" ಎನಲು ಮನದಲ್ಲೇ ಸಂತಸಗೊಂಡ ಶಾಂಡಿಲ್ಯಮುನಿ ಧರ್ಮರಾಯನನ್ನು ಪ್ರೀತಿಯಿಂದ ಹತ್ತಿರ ಕರೆದು ಶ್ರೀರಾಮನ ಕಥೆಯನ್ನು ಸವಿಸ್ತಾರವಾಗಿ ವಿವರಿಸಿದ.

ಶ್ರೀರಾಮನು ರಾಗಿ ಮತ್ತು ಅಕ್ಕಿಯ ಜಗಳವನ್ನು ನ್ಯಾಯವಾಗಿ ಪರಿಹ ರಿಸಿದರ ಬಗ್ಗೆ ಶಾಂಡಿಲ್ಯಮುನಿಯು ಹೇಳಲು ಧರ್ಮರಾಯನು "ಆ ಕಥೆಯನ್ನು ನನಗೂ ಹೇಳಿ ನಾನೂ ಆಲಿಸುತ್ತೇನೆ" ಎನ್ನುವುದು ಹಿರಿಯರಲ್ಲಿನ ಹಿರಿತನಕ್ಕೆ ಸಾಕ್ಷಿಯಾಗಿದೆ.

ಕೇಳು ಕುಂತೀತನಯ ಗಂಗಾ
ಕೂಲದುತ್ತರ ಭಾಗದಲಿ ವಿ
ಶಾಲ ವಿಭವದೊಳೆಸೆವಯೋಧ್ಯಾನಗರವಾ ಪುರವ
ಪಾಲಿಸುವ ದಿನಕರ ಕುಲಾನ್ವಯ
ಶೀಲ ದಶರಥನಾ ಮಹೀಲೋ
ಲಲೋಚನೆ ಕೌಸಲ್ಯೆ ದೇವಿ ಸುಮಿತ್ರೆ ಕೈಕೆಯರು ೯

ಕೇಳು ಕುಂತಿ ತನಯ=ಆಲಿಸು ಕುಂತಿದೇವಿಯ ಪುತ್ರನೆ; ಗಂಗಾಕೂಲ ದುತ್ತರ=ಗಂಗಾ+ಕೂಲದ+ಉತ್ತರ=ಗಂಗಾನದಿ ದಡದ ಉತ್ತರ; ಭಾಗದಲಿ=ದಿಕ್ಕಿನಲಿ; ವಿಶಾಲ= ವಿಸ್ತಾರವಾದ; ವಿಭವದೊಳ್ + ಎಸೆವ=ವೈಭವದಿಂದ ಶೋಭಿಸುವ;

ಅಯೋಧ್ಯಾ ನಗರವು; ಆ ಪುರವ ಪಾಲಿಸುವ; ಆ ನಗರವನ್ನು ಆಳುತ್ತಿರುವ; ದಿನಕರ =ಸೂರ್ಯ; ಕುಲ+ಅನ್ವಯ=ಕುಲಕ್ಕೆ ಸೇರಿದ; ಶೀಲ=ಒಳ್ಳೆಯ ಗುಣಗಳುಳ್ಳ; ದಶರಥನು; ಆ ಮಹೀಲೋಲ=ಆ ಭೂಪತಿಯ; ಲೋಚನೆ=ಕಣ್ಣುಗಳು; ಕೌಸಲ್ಯೆ ದೇವಿ, ಸುಮಿತ್ರೆ, ಕೈಕೆಯರು.

ಕೇಳು ಕುಂತೀಪುತ್ರ ಯುಧಿಷ್ಠಿರನೇ, ಗಂಗಾನದಿಯ ಉತ್ತರ ಭಾಗದಲ್ಲಿ ವಿಸ್ತಾರವಾದ ಹಾಗೂ ವೈಭವದಿಂದ ಕಂಗೊಳಿಸುವ ಅಯೋಧ್ಯಾನಗರ, ಆ ನಾಡನ್ನು ಆಳುತ್ತಿರುವ ಸೂರ್ಯವಂಶಕ್ಕೆ ಸೇರಿದ ದಶರಥ ಮಹಾರಾಜ, ಆತನ ಕಣ್ಣುಗಳೇ ಆತನ ಮಡದಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೆಯರು.

ಈ ಪದ್ಯದಿಂದ ಶಾಂಡಿಲ್ಯಮುನಿ ಪಾಂಡವರಿಗೆ ರಾಮನ ಕಥೆಯನ್ನು ಹೇಳಲು ಆರಂಭಿಸುತ್ತಿದ್ದಾರೆ. ರಾಮನ ರಾಜ್ಯ, ತಂದೆ-ತಾಯಿಯ ಪರಿಚಯದೊಂದಿಗೆ ಕಥೆ ಆರಂಭವಾಗುತ್ತಿದೆ.

ದಶರಥಗೆ ಕೌಸಲೆಗೆ ಜನಿಸಿದ
ರಸಿಕ ಗುಣನಿಧಿ ರಾಮನೃಪನಾ
ಅಸುರೆ ತಾಟಕಿಯೊರಸಿ ಮಾರೀಚನ ಸುಬಾಹುವನು
ಕುಸುರಿದರಿದಾ ಮುನಿಮಖವ ರ
ಕ್ಷಿಸಿಯಹಲ್ಯಾಶಾಪವನು ಖಂ
ಡಿಸಿ ನಿಜಾನುಜ ಮುನಿಪಸಹಿತಾ ಮಿಥಿಳೆಗೈದಿದನು ೧೦

ದಶರಥನಿಗೆ ಕೌಸಲೆಗೆ=ದಶರಥ ಮತ್ತು ಕೌಸಲ್ಯೆಯರಿಗೆ; ಜನಿಸಿದ=ಹುಟ್ಟಿದ; ರಸಿಕ ಗುಣನಿಧಿ=ಉತ್ಸಾಹದ ಗುಣಗಳುಳ್ಳ; ರಾಮನೃಪ=ರಾಜನಾದ ರಾಮನು; ಆ ಅಸುರೆ=ಆ ರಾಕ್ಷಸಿ; ತಾಟಕಿಯ+ಒರಸಿ=ತಾಟಕಿಯನ್ನು ಕೊಂದು; ಮಾರೀಚನ ಸುಬಾಹುವನ್ನು=ಮಾರೀಚನನ್ನು ಸುಬಾಹುವನ್ನು; ಕುಸುರಿದ=ಕೊಚ್ಚಿ ಹಾಕಿದ; ಅರಿದ=ಕತ್ತರಿಸಿದ; ಆ ಮುನಿಮಖವ =ಮುನಿಯ ಯಾಗವನ್ನು; ರಕ್ಷಿಸಿ=ಕಾಪಾಡಿ; ಅಹಲ್ಯಾ ಶಾಪವನು=ಅಹಲ್ಯೆಯ ಶಾಪವನ್ನು; ಖಂಡಿಸಿ=ಹೋಗಲಾಡಿಸಿ; ನಿಜ+ ಅನುಜ=ತನ್ನ ತಮ್ಮ ಲಕ್ಷ್ಮಣನು; ಮುನಿಪ ಸಹಿತಾ=ಮುನಿ ವಿಶ್ವಾಮಿತ್ರರೊಡನೆ; ಮಿಥಿಳೆಗೆ +ಐದಿದನು=ಮಿಥಿಳಾ ರಾಜ್ಯಕ್ಕೆ ಬಂದನು.

ದಶರಥ ಮಹಾರಾಜ ಕೌಸಲ್ಯೆಯರ ಪುತ್ರನಾದ, ಸದ್ಗುಣಗಳ ಸಾಕಾರ ಮೂರ್ತಿಯಾದ ರಾಮನು ಋಷಿಮುನಿಗಳ ಯಜ್ಞಯಾಗಗಳನ್ನು ಹಾಳು ಮಾಡುತ್ತಿದ್ದ ತಾಟಕಿಯೆಂಬ ರಾಕ್ಷಸಿಯನ್ನು ಕೊಂದು, ಆಕೆಯ ಮಕ್ಕಳಾದ ಮಾರೀಚ ಹಾಗೂ ಸುಬಾಹುವನ್ನು ಕತ್ತರಿಸಿ, ಮುನಿಗಳಿಗೆ ರಕ್ಷಣೆಯನ್ನು ನೀಡಿ, ಅಹಲ್ಯೆಯನ್ನು ಶಾಪದಿಂದ ವಿಮೋಚನೆಗೊಳಿಸಿ, ತಮ್ಮ ಲಕ್ಷ್ಮಣ ಹಾಗೂ ವಿಶ್ವಾಮಿತ್ರ ಮುನಿಯೊಂದಿಗೆ ರಾಮನು ಮಿಥಿಳಾ ನಗರಕ್ಕೆ ಬಂದನು.

ವಿಶ್ವಾಮಿತ್ರ ಮುನಿಯೊಂದಿಗೆ ರಾಮಲಕ್ಷ್ಮಣರು ಸೀತಾ ಸ್ವಯಂವರಕ್ಕೆ ಬರುವ ಸನ್ನಿವೇಶ ಹಾಗೂ ತಾಟಕಿ, ಮಾರೀಚ, ಸುಬಾಹುವಿನ ವಧೆ, ಅಹಲ್ಯೆಯ ಶಾಪ ವಿಮೋಚನಾ ಪ್ರಸಂಗಗಳು ಚಿತ್ರಿತವಾಗಿವೆ.

ಹರನ ಧನುವೇರಿಸಿದ ಸೀತೆಯ
ವರಮುಹೂರ್ತದಿ ವರಿಸಿ ತಮ್ಮಂ
ದಿರು ನಿಜಾಂಗನೆ ಸಹಿತ ಮಿಥಿಳಾಪುರದ ಹೊರವಂಟ
ಬರುತ ಮಾರ್ಗಾಂತರದಿ ಕಂಡನು
ಪರಶುರಾಮನ ಗೆಲಿದಯೋಧ್ಯಾ
ಪುರವ ಹೊಕ್ಕನು ರಾಜತೇಜದಿ ಸುರರು ನಲಿದಾಡೆ ೧೧

ಹರನ=ಶಿವನ; ಧನುವೇರಿಸಿದ=ಧನಸ್ಸನ್ನು ಏರಿಸಿದ; ಸೀತೆಯ= ಸೀತೆಯನ್ನು; ವರ ಮುಹೂರ್ತದಿ=ಶುಭ ಮುಹೂರ್ತದಲ್ಲಿ; ವರಿಸಿ=ಮದುವೆಯಾಗಿ; ತಮ್ಮಂದಿರು=ಸಹೋದರರು; ನಿಜಾಂಗನೆ=ಪತ್ನಿ; ಸಹಿತ=ಅವರೊಂದಿಗೆ; ಮಿಥಿಳಾ ಪುರದಿಂದ; ಹೊರವಂಟ=ಹೊರಟ; ಬರುವ=ಬರುತ್ತಿರುವ; ಮಾರ್ಗ+ ಅಂತರದಿ= ಮಾರ್ಗದ ನಡುವೆ; ಕಂಡನು=ನೋಡಿದನು; ಪರಶುರಾಮನ ಗೆಲಿದು= ಪರಶು ರಾಮನನ್ನು ಸೋಲಿಸಿ; ಅಯೋಧ್ಯಾಪುರವನ್ನು; ಹೊಕ್ಕನು=ಪ್ರವೇಶಿಸಿದ; ರಾಜ ತೇಜದಿ=ರಾಜ ತೇಜಸ್ಸಿನಿಂದ; ಸುರರು ನಲಿದಾಡೆ=ದೇವತೆಗಳು; ಸಂತಸಗೊಂಡರು.

ಶ್ರೀರಾಮ ಶಿವಧನುಸ್ಸು ಮುರಿದು ಸೀತೆಯನ್ನು ಗೆದ್ದು, ಲಕ್ಷ್ಮಣ ಹಾಗೂ ಸೀತೆಯೊಂದಿಗೆ ಅಯೋಧ್ಯಾನಗರಕ್ಕೆ ಬರುವ ಮಾರ್ಗ ಮಧ್ಯದಲ್ಲಿ ಪರಶುರಾಮನನ್ನು

ಸೋಲಿಸಿ, ಅವನಲ್ಲಿದ್ದ ವೈಷ್ಣವ ತೇಜಸ್ಸನ್ನು ಭಂಗಪಡಿಸಿ ಅಯೋಧ್ಯಾಪುರವನ್ನು ರಾಜಗಾಂಭೀರ್ಯದಿಂದ ಪ್ರವೇಶಿಸಿದ. ಇದರಿಂದ ದೇವತೆಗಳು ಸಂತುಷ್ಟರಾದರು.

ರಾಮನು ಸೀತೆಯನ್ನು ವರಿಸಿ ಸಂಭ್ರಮದಿಂದ ಅಯೋಧ್ಯಾಪುರವನ್ನು ಪ್ರವೇಶಿಸಿದ ಸಂದರ್ಭ ಈ ಪದ್ಯದಲ್ಲಿ ದಾಖಲಾಗಿದೆ.

ಕೇಳು ಧರ್ಮಜ ನಿಮ್ಮವೋಲ್ ವಿಪಿ
ನಾಲಯದ ಸಿರಿ ಸಂಭವಿಸೆ ಜನ
ಪಾಲ ರಾಮನು ಪಿತೃ ವಚನ ಪಾಲನೆಯ ನೇಮದಲಿ
ಬಾಲಕಿಯನೊಡಗೊಂಡು ಸತ್ಯವ
ಪಾಲಿಸುತ ಲಕ್ಷ್ಮಣನ ಕೂಡೆ ನಿ
ಜಾಲಯವ ಹೊರವಂಟು ಹೊಕ್ಕನು ಘೋರ ಕಾನನವ ೧೨

ಕೇಳು ಧರ್ಮಜ=ಆಲಿಸು ಯಮಸುತ; ನಿಮ್ಮವೋಲ್=ನಿಮ್ಮ ಹಾಗೆಯೇ; ವಿಪಿನಾಲಯದ ಸಿರಿ=ಅರಣ್ಯವಾಸದ ಯೋಗ; ಸಂಭವಿಸೆ=ಒದಗಿಬರಲು; ಜನಪಾಲ ರಾಮನು=ಜನ ಪಾಲಕ ರಾಮನು; ಪಿತೃವಚನ=ತಂದೆಯ ಮಾತು; ಪಾಲನೆಯ= ಪಾಲಿಸುವ; ನೇಮದಲಿ=ಸಲುವಾಗಿ; ಬಾಲಕಿಯನ್ನು+ ಒಡಗೊಂಡು= ಸೀತಾದೇವಿ ಯೊಂದಿಗೆ; ಸತ್ಯವ ಪಾಲಿಸುತ=ಸತ್ಯವನ್ನು ರಕ್ಷಿಸುತ್ತಾ; ಲಕ್ಷ್ಮಣನ ಕೂಡೆ= ಲಕ್ಷ್ಮಣನೊಡನೆ; ನಿಜಾಲಯವ ಹೊರವಂಟು=ಅರಮನೆಯನ್ನು ಬಿಟ್ಟು; ಘೋರ ಕಾನನವ=ದಟ್ಟ ಅಡವಿಯನ್ನು; ಹೊಕ್ಕನು=ಪ್ರವೇಶಿಸಿದನು.

"ಕೇಳು, ಯಮಧರ್ಮನ ಮಗನೇ, ನಿಮ್ಮಂತೆಯೇ ವನವಾಸದ ಸಂದರ್ಭವು ರಾಮನ ಬದುಕಿನಲ್ಲೂ ಎದುರಾಯಿತು; ರಾಜನಾದ ರಾಮನು ತಂದೆಯ ವಚನವನ್ನು ಪಾಲಿಸುವ ಸಲುವಾಗಿ ಹೆಂಡತಿ ಸೀತೆ ಹಾಗೂ ತಮ್ಮ ಲಕ್ಷ್ಮಣನೊಡನೆ ಅರಮನೆಯನ್ನು ಬಿಟ್ಟು ಘೋರಾರಣ್ಯವನ್ನು ಪ್ರವೇಶಿಸಿದನು."

ಶಾಂಡಿಲ್ಯಮುನಿ ರಾಮನ ವನವಾಸದ ಕಥೆಯನ್ನು ಧರ್ಮರಾಯನಿಗೆ ಹೇಳಿದಾಗ, ವನವಾಸ ನಮಗೆ ಮಾತ್ರವಲ್ಲ ನಮಗಿಂತಲೂ ಮೊದಲು, ಸತ್ಯಪಾಲಕ ನಾದ ರಾಮನೂ ಅನುಭವಿಸಿದ್ದಾನೆಂದುಕೊಂಡನು.

ಭರತನನು ಸಂತೈಸಿ ಕಾಕಾ
ಸುರನ ಪ್ರಾಣವ ಕಾಯ್ದು ದಾನವ
ತರುಣಿ ನಾಸಿಕವರಿದು ಮಾಯಾಮೃಗವ ಸಂಹರಿಸಿ
ಸರಸಿಜಾಕ್ಷಿಯನಗಲಿ ಮಾರ್ಗಾಂ
ತರದಿ ಕಂಡ ಜಟಾಯುವನು ಮನ
ಮರುಗಿ ವೃತ್ತಾಂತವನು ತಿಳಿದವನಲ್ಲಿ ಗತಿಗೊಳಿಸಿ ೧೩

ಭರತನನು ಸಂತೈಸಿ=ಸಹೋದರನಾದ ಭರತನನ್ನು ಸಮಾಧಾನಪಡಿಸಿ; ಕಾಕಾಸುರನ ಪ್ರಾಣವ ಕಾಯ್ದು=ಕಾಗೆರೂಪದ ಅಸುರನ ಪ್ರಾಣವನ್ನು ಉಳಿಸಿ; ದಾನವ ತರುಣಿ=ರಾಕ್ಷಸ ಸ್ತ್ರೀ; ನಾಸಿಕವ+ಅರಿದು=ಮೂಗನ್ನು ಕತ್ತರಿಸಿ; ಮಾಯಾ ಮೃಗವ ಸಂಹರಿಸಿ=ಮಾಯಾಜಿಂಕೆಯನ್ನು ಕೊಂದು; ಸರಸಿಜ+ಅಕ್ಷಿಯನ+ ಅಗಲಿ= ತಾವರೆ ಯಂತೆ ಕಣ್ಣುಳ್ಳ ಸೀತೆಯಿಂದ ದೂರವಾಗಿ; ಮಾರ್ಗ+ಅಂತರದಿ=ಮಾರ್ಗದ ನಡುವೆ; ಕಂಡ=ನೋಡಿದ; ಜಟಾಯುವನ್ನು=ಜಟಾಯು ಪಕ್ಷಿ; ಮನ ಮರುಗಿ= ಮನಸ್ಸು ಕರಗಿ; ವೃತ್ತಾಂತವನ್ನು ತಿಳಿದ ಅವನಲ್ಲಿ=ಅವನಿಂದ ವಿಚಾರಗಳನ್ನು ತಿಳಿದ; ಗತಗೊಳಿಸಿ=ಅದಕ್ಕೆ ಸಾವಿನ ಮುಕ್ತಿಯನ್ನು ನೀಡಿದ.

ಅರಣ್ಯವಾಸಕ್ಕೆ ರಾಮ ಸಿದ್ಧನಾದಾಗ ದುಖಿತನಾದ ಭರತನನ್ನು ಸಮಾಧಾನ ಪಡಿಸಿ, ಅರಣ್ಯದಲ್ಲಿ ಸೀತೆಯ ರೂಪಕ್ಕೆ ಮರುಳಾಗಿ ಕಾಗೆಯ ವೇಷದಲ್ಲಿ ಬಂದ ಅಸುರನನ್ನು ಸಂಹರಿಸಲು ಬಾಣ ಹೂಡಿ, ಶರಣಾಗತನಾದ ಕಾಕಾಸುರನ ಪ್ರಾಣವನ್ನು ಉಳಿಸಿ, ಅಸುರ ಸ್ತ್ರೀ ಶೂರ್ಪನಖಿಯ ಮೂಗು ಕತ್ತರಿಸಿ, ಮಾಯಾಜಿಂಕೆಯ ವೇಷದಲ್ಲಿದ್ದ ಮಾರೀಚನನ್ನು ಸಂಹರಿಸಿ, ಸೀತೆಯಿಂದ ದೂರವಾಗಿ (ಸೀತಾಪಹರಣವಾಗಿ) ಮಾರ್ಗಮಧ್ಯದಲ್ಲಿ ಅರೆಜೀವವಾಗಿದ್ದ ಜಟಾಯುವಿನ ಸ್ಥಿತಿಗೆ ಮನ ಮರುಗಿ ಅದಕ್ಕೆ ಮುಕ್ತಿಯನ್ನು ನೀಡಿ ಸೀತಾಪಹರಣದ ವೃತ್ತಾಂತವನ್ನು ತಿಳಿದ.

ರಾಮಾಯಣದ ಅನೇಕ ಪ್ರಮುಖ ಘಟನೆಗಳನ್ನು, ಅಂದರೆ ಅರಣ್ಯವಾಸಕ್ಕೆ ತೆರಳಿದಾಗ ಅರಮನೆಯ ಸ್ಥಿತಿ, ಕಾಕಾಸುರನ ಪ್ರಸಂಗ, ಶೂರ್ಪನಖಿಯ ಸನ್ನಿವೇಶ, ಮಾಯಾಜಿಂಕೆಯ ಸಂಹಾರ, ಸೀತಾಪಹರಣ ಹಾಗೂ ಜಟಾಯುವಿನ ದುರಂತ

ಎಲ್ಲವನ್ನು ಒಂದೇ ಷಟ್ಪದಿಯಲ್ಲಿ ಸ್ವಾರಸ್ಯಪೂರ್ಣವಾಗಿ ಕಟ್ಟಿಕೊಟ್ಟು ಕಥೆಯ ಓಟವನ್ನು ಹೆಚ್ಚಿಸಿದ್ದಾನೆ ಕವಿ.

ಅಲ್ಲಿ ಶೋಕೋದ್ರೇಕದಲಿ ಕರ
ಪಲ್ಲವದ ಕದಪಿನಲಿ ಊರ್ಮಿಳೆ
ವಲ್ಲಭನನೊಡಗೊಂಡು ಕಿಷ್ಕಿಂಧಾದ್ರಿಗೈತಂದು
ಅಲ್ಲಿ ಸಂಭಾಷಿಸಿದ ರವಿಸುತ
ನಲ್ಲಿ ವಾಲಿಯ ಮಡುಹಿ ವಾನರ
ರೆಲ್ಲರನು ಕೈಕೊಂಡು ನಡೆದನು ಮುಂದೆ ದಕ್ಷಿಣಕೆ ೧೪

ಅಲ್ಲಿ ಶೋಕೋದ್ರೇಕದಲಿ=ಅಲ್ಲಿ ಶೋಕ ಮತ್ತು ಉದ್ರೇಕದಿಂದ; ಕರಪಲ್ಲವದ= ಚಿಗುರಿನಂತಹ ಕೋಮಲ ಕೈಗಳನ್ನು; ಕದಪಿನಲಿ=ಕೆನ್ನೆಯಲ್ಲಿಟ್ಟು ಕೊಂಡು; ಊರ್ಮಿಳೆ ವಲ್ಲಭನನ್ನು=ಊರ್ಮಿಳೆಯ ಪತಿ ಲಕ್ಷ್ಮಣನನ್ನು; ಒಡಗೊಂಡು =ಜೊತೆಗೂಡಿ; ಕಿಷ್ಕಿಂಧ+ಅದ್ರಿಗೆ=ಕಿಷ್ಕಿಂಧಾ ಪರ್ವತಕ್ಕೆ; ಐತಂದು=ಬಂದರು; ಅಲ್ಲಿ ಸಂಭಾಷಿಸಿದ ರವಿಸುತ=ಅಲ್ಲಿ ಭೇಟಿಯಾದ ಸುಗ್ರೀವ; ಅಲ್ಲಿ ವಾಲಿಯ ಮಡುಹಿ=ಅಲ್ಲಿ ವಾಲಿಯನ್ನು ಕೊಂದು; ವಾನರರೆಲ್ಲರನ್ನು=ಕಪಿ ಸೈನ್ಯವನ್ನೆಲ್ಲಾ; ಕೈಕೊಂಡು= ಕೂಡಿಕೊಂಡು; ನಡೆದನು ಮುಂದೆ ದಕ್ಷಿಣಕ್ಕೆ=ದಕ್ಷಿಣ ದಿಕ್ಕಿನ ಕಡೆಗೆ ಶ್ರೀರಾಮ ನಡೆದನು.

ಸೀತೆಯನ್ನು ಕಳೆದುಕೊಂಡು ಶೋಕ ಹಾಗೂ ಉದ್ರೇಕಕ್ಕೆ ಒಳಗಾದ ರಾಮ ಕೆನ್ನೆಯ ಮೇಲೆ ಕೈಯಿಟ್ಟುಕೊಂಡು, ಲಕ್ಷ್ಮಣನೊಡನೆ ಕಿಷ್ಕಿಂಧಾಪರ್ವತಕ್ಕೆ ಬರಲು ಅಲ್ಲಿ ಸುಗ್ರೀವನ ಪರಿಚಯವಾಗಿ, ವಾಲಿಯಿಂದ ಘಾಸಿಗೊಂಡ ಸುಗ್ರೀವನ ರಕ್ಷಿಸಿ ಅವನ ವಾನರ ಸೈನ್ಯದೊಂದಿಗೆ ರಾಮ ದಕ್ಷಿಣ ದಿಕ್ಕಿಗೆ ಪ್ರಯಾಣವನ್ನು ಆರಂಭಿಸಿದ.

ವಾರುಧಿಯ ಬಂಧಿಸಿದ ಸೇನಾ
ಭಾರದಲಿ ನಡೆತಂದು ಲಂಕೆಯ
ಸೇರಿ ಮುತ್ತಿಗೆವಿಡಿದು ರಾವಣ ಕುಂಭಕರ್ಣರನು
ಭೂರಿಬಾಣದೊಳೊರಸಿ ದಾನವ

ವೀರರನು ಪರಿಹರಿಸಿ ರಘುನೃಪ
ತಾರಣನು ಪಟ್ಟವನು ಕಟ್ಟಿದನಾ ವಿಭೀಷಣಗೆ ೧೫

ವಾರುಧಿಯ ಬಂಧಿಸಿದ=ಸಮುದ್ರಕ್ಕೆ ಸೇತುವೆಯ ನಿರ್ಮಿಸಿದ; ಸೇನಾಭಾರದಲಿ ನಡೆತಂದು=ಹೆಚ್ಚಿನ ಸೇನೆಯೊಡನೆ; ಲಂಕೆಯ ಸೇರಿ=ಶ್ರೀಲಂಕೆಗೆ ಬಂದು; ಮುತ್ತಿಗೆ ವಿಡಿದು=ಮುತ್ತಿಗೆ ಹಾಕಿ; ರಾವಣ ಕುಂಭಕರ್ಣರನ್ನು=ರಾವಣ ಹಾಗೂ ಕುಂಭಕರ್ಣನನ್ನು; ಭೂರಿಬಾಣದೊಳು+ಒರಸಿ=ಅಸಂಖ್ಯಾತ ಬಾಣಗಳಿಂದ ನಾಶಪಡಿಸಿ; ದಾನವ ವೀರರನ್ನು ಪರಿಹರಿಸಿ=ರಾಕ್ಷಸ ವೀರರನ್ನು ಸಂಹರಿಸಿ; ರಘುನೃಪ ವಾರಣನು=ರಘುವಂಶದ ವೀರನು; ಆ ವಿಭೀಷಣಗೆ=ರಾವಣನ ತಮ್ಮ ವಿಭೀಷಣನಿಗೆ; ಪಟ್ಟವನು ಕಟ್ಟಿದ=ಪಟ್ಟಾಭಿಷೇಕವನ್ನು ಮಾಡಿದ.

ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಅಸಂಖ್ಯಾತ ಸೈನ್ಯದಿಂದ ಲಂಕೆಗೆ ಮುತ್ತಿಗೆಯನ್ನು ಹಾಕಿ, ರಾವಣ, ಕುಂಭಕರ್ಣನನ್ನು ಹರಿತ ಬಾಣಗಳಿಂದ ಸಂಹರಿಸಿ ದಾನವರ ಸೈನ್ಯವನ್ನೆಲ್ಲಾ ಕೊಂದು ರಘುವಂಶ ತಿಲಕಪ್ರಾಯನಾದ ರಾಮನು ರಾವಣನ ಸಹೋದರನಾದ ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿದನು.

ಮಡದಿ ಸೀತೆಯನ್ನು ಅಪಹರಿಸಿದ ರಾವಣನನ್ನು ಕೊಂದರೂ ಅವನ ಪ್ರಜೆಗಳಿಗೆ ತೊಂದರೆಯಾಗದಂತೆ ಹಾಗೂ ರಾವಣನ ತಮ್ಮನೇ ರಾಜ್ಯವಾಳುವಂತೆ ಪಟ್ಟಾಭಿಷೇಕವನ್ನು ನೆರವೇರಿಸುವುದು ರಾಮನ ಉದಾತ್ತ ಗುಣಕ್ಕೆ ಉತ್ತಮ ಸಾಕ್ಷಿಯಾಗಿದೆ.

ಧರಣಿಸುತೆಯನು ಕರೆಸಿ ದೇವಾ
ಸುರರುಲಿಯಲು ವಿಭೀಷಣಗೆ ವಿ
ಸ್ತರಿಸಿ ಪೇಳಿದ ಪುರಕೆ ಪಯಣವಮಾಡು ನೀನೆನಲು
ಕರೆಸಿದನು ನಿಜಮಂತ್ರಿ ಕರಿರಥ
ತುರಗ ಪಾಯ್ದಳವಾಕ್ಷಣವೆ
ನೆರೆದುದಗಣಿತ ವೀರದಾನವ ಸೇನೆ ನಿಮಿಷದಲಿ ೧೬

ಧರಣಿಸುತೆಯನು=ಭೂಮಿಯ ಮಗಳಾದ ಸೀತೆಯನ್ನು; ರಾಮನ ಬಳಿ ಕರೆಸಿ; ದೇವಾಸುರರು=ದೇವ ಮುನಿಗಳು; ಉಲಿಯಲು=ಹೇಳಲು; ವಿಭೀಷಣಗೆ=

ವಿಭೀಷಣನಿಗೆ; ವಿಸ್ತರಿಸಿ ಪೇಳಿದ=ವಿವರವಾಗಿ ಹೇಳಿದ; ಪುರಕೆ ಪಯಣವ ಮಾಡು ನೀನೆನಲು=ಅಯೋಧ್ಯಾನಗರಕ್ಕೆ ನೀವೂ ಪ್ರಯಾಣ ಮಾಡಬೇಕೆಂದು ಹೇಳಿದಾಗ; ಕರೆಸಿದನು ನಿಜಮಂತ್ರಿ=ಮಂತ್ರಿಯನು ಕರೆಸಿದನು; ಕರಿರಥ=ಆನೆ ರಥ; ತುರಗ ಪಾಯ್ದಳವ=ಕುದುರೆ ಕಾಲಾಳುಗಳ; ಆ ಕ್ಷಣವೆ=ತಕ್ಷಣವೆ; ನೆರೆದುದು=ಸೇರಿತು; ಅಸಂಖ್ಯಾತ ವೀರ ದಾನವ ಸೇನೆ=ಲೆಕ್ಕಕ್ಕೆ ಮೀರಿದ ಶೌರ್ಯ ಪರಾಕ್ರಮದ ಅಸುರ ಸೇನೆ; ನಿಮಿಷದಲ್ಲಿ=ಬೇಗನೆ.

ರಾವಣನ ರಾಜ್ಯದಲ್ಲಿದ್ದ ಸೀತೆಯನ್ನು ರಾಮನ ಬಳಿಗೆ ಕರೆಸಿ ಅನಂತರ ದೇವಮುನಿಗಳು ವಿಭೀಷಣನಿಗೆ ನೀನು ಅಯೋಧ್ಯಾಪುರಕ್ಕೆ ಪ್ರಯಾಣ ಮಾಡೆಂದು ವಿವರವಾಗಿ ತಿಳಿಸಲು ವಿಭೀಷಣನು ಮಂತ್ರಿಯನ್ನು ಕರೆಸಿ, ವಿಷಯ ತಿಳಿಸಲು ತಕ್ಷಣವೇ ಪ್ರಯಾಣಕ್ಕೆ ಬೇಕಾದ ಅಸಂಖ್ಯಾತ ಆನೆ, ರಥ, ಕುದುರೆ, ಕಾಲಾಳುಗಳು ಅಲ್ಲಿ ನೆರೆದುವು. ರಾವಣನನ್ನು ಕೊಂದ ರಾಮ ಸೀತೆಯೊಡಗೂಡಿ, ವಿಭೀಷಣನನ್ನು ಕರೆದುಕೊಂಡು ಅಸಂಖ್ಯಾತ ದಾನವ ಬಲದೊಂದಿಗೆ ತನ್ನೂರಿಗೆ ಮರಳುವ ಸನ್ನಿವೇಶ ಇದು.

ಹರುಷದಲಿ ತರಿಸಿದ ಕುಬೇರನ
ವರ ರಥವ ಮೇಳೈಸಿ ದೇವರ
ಸಿರಿಪದಾಂಬುಜಕರ್ಪಿಸಲು ಶ್ರೀರಾಮ ನಸುನಗುತ
ಕರೆಸಿ ಲಕ್ಷ್ಮಣದೇವನನು ನಿಜ
ತರುಣಿ ಸಹಿತೇರಿದ ವರೂಥವ
ತರಣಿಸುತ ಹನುಮಂತ ಜಾಂಬವರೈದಿತೊಗ್ಗಿನಲಿ ೧೭

ಹರುಷದಲಿ ತರಿಸಿದ=ಸಂತೋಷದಿಂದ ತರಿಸಿದ; ಕುಬೇರನ; ವರ ರಥವ= ಶ್ರೇಷ್ಠ ರಥವನ್ನು; ಮೇಳೈಸಿ=ಜೊತೆಗೆ ಅದನ್ನು; ದೇವರ ಸಿರಿ ಪದಾ+ ಅಂಬುಜಕ್ಕೆ=ಶ್ರೀರಾಮನ ತಾವರೆಯಂಥ ಪವಿತ್ರ ಪಾದಕ್ಕೆ; ಅರ್ಪಿಸಲು=ಒಪ್ಪಿಸಲು; ಶ್ರೀರಾಮ ನಸುನಗುತ ಕರೆಸಿ ಲಕ್ಷ್ಮಣದೇವನನು=ಶ್ರೀರಾಮನು ಲಕ್ಷ್ಮಣನನ್ನು ಕರೆಸಿ; ನಿಜ ತರಣಿ ಸಹಿತ=ಸತಿ ಸೀತೆಯೊಂದಿಗೆ; ಏರಿದ ವರೂಥವ=ರಥವನ್ನು ಹತ್ತಿದ;

ತರಣಿಸುತ=ಸೂರ್ಯನ ಮಗ ಸುಗ್ರೀವ; ಜಾಂಬವರು=ಜಾಂಬವಂತರು; ಒಗ್ಗಿನಲಿ= ಒಟ್ಟಿಗೆ; ಐದಿತು=ಹತ್ತಿದರು;

ಸಂತೋಷದಿಂದ ಕುಬೇರನ ರಥವನ್ನು ತರಿಸಿ; ರಾಮನ ಸಿರಿ ಪಾದಗಳಿಗೆ ಒಪ್ಪಿಸಿದಾಗ; ರಾಮನು ನಸುನಗುತ್ತಾ ಲಕ್ಷ್ಮಣ ಸೀತೆಯರೊಡನೆ ರಥವನೇರಲು; ಅವರೊಂದಿಗೆ ಸುಗ್ರೀವ ಜಾಂಬವಂತರು ಸಹ ರಥವನೇರಿದರು.

ಪುಣ್ಯ ಪುರುಷ ರಾಮನೊಂದಿಗೆ ವಿಭೀಷಣ; ಲಕ್ಷ್ಮಣ ಹಾಗೂ ಸೀತೆ; ಜಾಂಬವಂತ ಸುಗ್ರೀವ ಎಲ್ಲರೂ ಒಟ್ಟಿಗೆ ಸಂತೋಷದಿಂದ ಅಯೋಧ್ಯೆಗೆ ಪ್ರಯಾಣ ಬೆಳೆಸಿದರು.

ಅಂಗದನು ನಳನೀಲ ಶತಬಲಿ
ತುಂಗ ವಿಕ್ರಮ ಸುಷೇಣನಾ ಪ್ಲ
ವಂಗ ಗವಯ ಗವಾಕ್ಷ ಮೊದಲಾದಖಿಳ ವಾನರರು
ಸಂಗಡಿಸಿ ನೆರೆದುದು ಮಹಾಸಮ
ರಂಗವೀರರು ಮೋಹಿಸಿದ ರಘು
ಪುಂಗವನ ರಥದೊಡನೆ ನಡೆದುದು ಮುಂದೆ ಸಂದಣಿಸಿ ೧೮

ಅಂಗದ; ನಳ; ನೀಲ; ಶತಬಲಿ; ತುಂಗ; ವಿಕ್ರಮ; ಸುಷೇಣ; ಪ್ಲವಂಗ; ಗವಯ; ಗವಾಕ್ಷ ಮೊದಲಾದ=ಮುಂತಾದ; ಅಖಿಳ=ಸಮಸ್ತ; ವಾನರರು=ಕಪಿಗಳು; ಸಂಗಡಿಸಿ ನೆರೆದುದು=ಒಟ್ಟಾಗಿ ಸೇರಿ; ಮಹಾಸಮರ=ಮಹಾಯುದ್ಧ; ಅಂಗವೀರರು= ಅಂಗರಕ್ಷಕರು; ಮೋಹಿಸಿದ=ಪ್ರೀತಿಸಿದ; ರಘುಪುಂಗವನ=ನಾಯಕ ರಾಮನ; ಸಂದಣಿಸಿ=ಒಗ್ಗಟ್ಟಾಗಿ; ರಥ ದೊಡನೆ ನಡೆದುದು ಮುಂದೆ=ರಥದೊಂದಿಗೆ ಮುಂದೆ ಸಾಗಿತು.

ಅಂಗದ, ನಳ, ಶತಬಲಿ, ತುಂಗ, ವಿಕ್ರಮ, ಸುಷೇಣ, ಪ್ಲವಂಗ, ಗವಯ, ಗವಾಕ್ಷ ಇನ್ನೂ ಮುಂತಾದ ಎಲ್ಲಾ ವಾನರರು ಯುದ್ಧ ವೀರರು, ಒಟ್ಟುಗೂಡಿ, ಮೈಗಾವಲಿನವರೂ ಜೊತೆಗೂಡಿ ತಮ್ಮ ಪ್ರೀತಿಯ ನಾಯಕ ರಾಮನ ರಥದ ಮುಂದೆ ಗುಂಪಾಗಿ ನಡೆದರು.

ರಾಮನ ಮೇಲಿನ ಪ್ರೀತಿ ಹಾಗೂ ರಾಮ ನಂಬಿದವರನ್ನು ಪೋಷಿಸುತ್ತಿದ್ದ ರೀತಿ ಇದರಿಂದ ವ್ಯಕ್ತವಾಗುತ್ತದೆ.

ಧಾರುಣೀಪತಿ ಕೇಳು ಲಂಕೆಯ
ವೀರದಾನವ ಭಟರು ಪುರಜನ
ಪೌರಜನ ಸಹಿತಾ ವಿಭೀಷಣನೊಡನೆ ಮೇಳೈಸಿ
ಭೂರಿಬಲವೈತರುತಲಿರೆ ರಣ
ಭೇರಿ ದಂಧಣಧಣರೆನಲು ಮಿಗೆ
ಚೀರಿದವು ಕಹಳೆಗಳು ದಿಕ್ಪಾಲಕರ ಬೆದರಿಸಿತು ೧೯

ಧಾರುಣೀಪತಿ ಕೇಳು=ರಾಜ ಯುಧಿಷ್ಠಿರ ಕೇಳು; ಲಂಕೆಯ ವೀರ ದಾನವ ಭಟರು=ಲಂಕಾನಗರಿಯ ವೀರರಾದ ಅಸುರ ಸೈನಿಕರು; ಪುರಜನ ಪೌರಜನ ಸಹಿತ=ಇಡೀ ನಗರದ ಜನರು; ಆ ವಿಭೀಷಣನೊಡನೆ ಮೇಳೈಸಿ=ವಿಭೀಷಣನ ಜೊತೆ ಕೂಡಿಕೊಂಡು; ಭೂರಿಬಲವು+ಐತರುತಲ್+ಇರೆ=ಅಗಾಧ ಸೈನ್ಯ ಮುನ್ನಡೆ ಯುತ್ತಿರಬೇಕಾದರೆ; ರಣಭೇರಿ=ರಣಭೇರಿ ವಾದ್ಯವು ದಂಧಣಧಣರ್+ ಎನಲು= ದಂಧಣ ಎಂದು ಸದ್ದು ಮಾಡುತ್ತಿರಲು; ಮಿಗೆ ಚೀರಿದವು ಕಹಳೆಗಳು= ಕಹಳೆಗಳು ಜೋರಾಗಿ ಕೂಗಿದುವು; ದಿಕ್ಪಾಲಕರ ಬೆದರಿಸಿತು=ದಿಕ್ಕುಗಳನ್ನು ಕಾಯುತ್ತಿದ್ದ ದಿಕ್ಪಾಲಕರನ್ನು ಈ ಧ್ವನಿ ಹೆದರಿಸಿತು.

ರಾಜ ಯುಧಿಷ್ಠಿರ ಕೇಳು, ಲಂಕೆಯ ವೀರ ದಾನವ ಸೈನಿಕರು ಹಾಗೂ ಪ್ರಜೆಗಳ ಸಹಿತ ವಿಭೀಷಣನ ಅಗಾಧ ಸೈನ್ಯದೊಂದಿಗೆ ಶ್ರೀರಾಮ ಮುನ್ನಡೆಯುತ್ತಿರುವಾಗ ರಣಭೇರಿ ಹಾಗೂ ಕಹಳೆಗಳು ದೊಡ್ಡ ಧ್ವನಿಯನ್ನು ಮಾಡುತ್ತಿವೆ. ಈ ಸದ್ದಿಗೆ ದಿಕ್ಕುಗಳನ್ನು ಕಾಯುತ್ತಿದ್ದ ದಿಕ್ಪಾಲಕರು ಬೆಚ್ಚಿ ಬಿದ್ದರು.

ಲಂಕೆಯ ಮುಂದಿನ ರಾಜನಾದ ವಿಭೀಷಣ ಹಾಗೂ ದಾನವ ಸೈನಿಕರು ಶ್ರೀರಾಮನ ರಾಜ್ಯದ ಕಡೆಗೆ ಪ್ರಯಾಣ ಬೆಳೆಸಿದ ಸಂದರ್ಭದಲ್ಲಿ ಅವರಿಗಾದ ಸಂತೋಷ ಸಂಭ್ರಮವನ್ನು ರಣಭೇರಿ ಮತ್ತು ಕಹಳೆಗಳ ಸದ್ದು ವ್ಯಕ್ತಪಡಿಸುತ್ತದೆ.

ತಡೆಯದೈತಂದುಭಯಬಲ ಸಂ
ಗಡಿಸಿ ಬರುತಿರೆ ಮುಂದೆ ಸೇತುವ
ಮಡದಿಗೆಲ್ಲವ ತೋರಿಸುತ ನೆರೆ ಕಡಲ ದಾಂಟಿದರು
ನಡೆದು ರಾಮೇಶ್ವರದ ಬಳಿಯಲಿ
ಮೃಡನ ಪೂಜಿಸಿ ಭಕ್ತಿಭಾವದ
ಸಡಗರದಿ ವಾಲ್ಮೀಕಿಯಾಶ್ರಮಕೈದಿದನು ನೃಪತಿ ೨೦

ತಡೆಯದೆ+ಐತಂದು=ತಡಮಾಡದೇ ಬಂದು; ಉಭಯಬಲ=ಎರಡು ಬಲ; ಸಂಗಡಿಸಿ ಬರುತಿರೆ=ಒಟ್ಟುಗೂಡಿ ಬರುತ್ತಿರಬೇಕಾದರೆ; ಮುಂದೆ ಸೇತುವ=ಮುಂದೆ ಕಂಡ ಸೇತುವೆಯನ್ನು ಮಡದಿಗೆ+ಎಲ್ಲವ ತೋರಿಸುತ=ಮಡದಿಯಾದ ಸೀತೆಗೆ ತೋರಿಸುತ; ನೆರೆ ಕಡಲ ದಾಂಟಿದರು=ತುಂಬಿದ ಕಡಲನ್ನು ದಾಟಿದರು. ನಡೆದು ರಾಮೇಶ್ವರದ ಬಳಿಯಲ್ಲಿ=ರಾಮೇಶ್ವರದ ಹತ್ತಿರ; ಮೃಡನ ಪೂಜಿಸಿ=ಶಿವನನ್ನು ಪೂಜಿಸಿ; ಭಕ್ತಿ ಭಾವದ ಸಡಗರದಿ=ಭಕ್ತಿ ಹಾಗೂ ಸಡಗರದಿಂದ; ವಾಲ್ಮೀಕಿಯ+ ಆಶ್ರಮಕ್ಕೆ+ ಐದಿದನು ನೃಪತಿ=ರಾಜ ಶ್ರೀರಾಮನು ವಾಲ್ಮೀಕಿಯ ಆಶ್ರಮಕ್ಕೆ ಬಂದನು.

ವಿಭೀಷಣ ಹಾಗೂ ಸುಗ್ರೀವನ ಸೈನಿಕರು ಒಟ್ಟಾಗಿ ಲಂಕೆಯಿಂದ ಬರುತ್ತಿರಬೇಕಾದರೆ ಸಮುದ್ರಕ್ಕೆ ಕಟ್ಟಿಸಿದ ಸೇತುವೆಯನ್ನು, ಅಂದರೆ ರಾವಣನನ್ನು ಕೊಂದು ಸೀತೆಯನ್ನು ಬಿಡುಗಡೆಗೊಳಿಸಲು ಸಹಾಯವಾದ ಸೇತುವೆಯನ್ನು ತೋರಿಸುತ್ತಾ, ತುಂಬಿದ ಕಡಲನ್ನು ದಾಟಿ, ಅನಂತರ ರಾಮೇಶ್ವರದ ಹತ್ತಿರ ಶಿವನನ್ನು ಪೂಜಿಸಿ, ಅಷ್ಟೇ ಭಕ್ತಿ ಭಾವದಿಂದ ಶ್ರೀರಾಮನು ವಾಲ್ಮೀಕಿ ಋಷ್ಯಾಶ್ರಮಕ್ಕೆ ಬಂದನು.

ಕಪಿ ಸೈನ್ಯ ಕಟ್ಟಿದ ಸೇತುವೆಯಿಂದ ರಾಮನು ಸೀತೆಯನ್ನು ಲಂಕೆಯಿಂದ ಕರೆತರಲು ಸಾಧ್ಯವಾದದ್ದಲ್ಲದೇ, ವಿಭೀಷಣ ಹಾಗೂ ರಾಮರಾಜ್ಯಗಳು ಒಗ್ಗೂಡಲು ಕಾರಣವಾಯಿತು. ಎರಡೂ ಸೈನ್ಯಗಳು ಒಂದಾಗಿ ಆ ಸೇತುವೆಯ ಮೇಲೆ ನಡೆದು ಬರುತ್ತಿರುವುದು ಇಲ್ಲಿಯ ವಿಶೇಷವಾಗಿದೆ. ಸೇತುವೆ ಎರಡು ರಾಜ್ಯಗಳ ಸ್ನೇಹಬಂಧದ ಸಂಕೇತವಾಗಿದೆ.

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲರನು ಸತ್ಕರಿಸಿ ಜಾನಕಿ
ವಲ್ಲಭನು ನಡೆತಂದನಾ ಮುಚುಕುಂದನಾಶ್ರಮಕೆ
ಸಡಿಲದುನ್ನತ ಬಲಸಮೇತದಿ
ಕಡಲ ಕಂಡನು ಪಂಚನದಿಯೊಳ್
ಬಿಡದೆ ಪಲ್ಲೈಸಿರುವ ಫಲ ವಸ್ತುಗಳ ಸಂಭ್ರಮದಿ ೨೧

ಅಲ್ಲಿ ನೆರೆದ=ಅಲ್ಲಿ ಸೇರಿದ; ಮಹಾಮುನೀಶ್ವರರ್+ಎಲ್ಲರನ್ನು=ಮಹಾ ಮುನಿಗಳೆಲ್ಲರನ್ನೂ; ಸತ್ಕರಿಸಿ=ಗೌರವಿಸಿ; ಜಾನಕೀವಲ್ಲಭನು=ಸೀತಾಪತಿಯಾದ ಶ್ರೀರಾ ಮನು; ನಡೆತಂದನು=ಮುಂದೆ ಬಂದನು; ಆ ಮುಚುಕುಂದನ+ಆಶ್ರಮಕೆ=ಆ ಮುಚು ಕುಂದನ ಆಶ್ರಮಕ್ಕೆ; ಸಡಿಲದೆ=ಕಡಿಮೆ ಯಾಗದ; ಉನ್ನತ ಬಲ ಸಮೇತದಿ=ಒಳ್ಳೆಯ ಸೈನ್ಯದೊಂದಿಗೆ; ಪಂಚನದಿಯೊಳ್=ಐದು ನದಿಗಳಲ್ಲಿ; ಬಿಡದೆ ಪಲ್ಲೈಸಿರುವ=ಚೆನ್ನಾಗಿ ಚಿಗುರಿ ಹಬ್ಬಿರುವ; ಫಲ ವಸ್ತುಗಳ=ಹಲವು ವಸ್ತುಗಳನ್ನು; ಕಂಡು ಸಂಭ್ರ ಮದಿ=ಸಂತೋಷ; ಸಡಗರದಿಂದ; ಕಡಲ ಕಂಡನು=ಸಮುದ್ರವನ್ನು ಕಂಡನು.

ವಾಲ್ಮೀಕಿಯ ಆಶ್ರಮದಲ್ಲಿ ನೆರೆದ ಎಲ್ಲಾ ಮಹಾಮುನೀಶ್ವರನ್ನು ಸತ್ಕಾರ ಮಾಡಿ, ಸೀತಾಪತಿಯಾದ ಶ್ರೀರಾಮನು ಮುಚುಕುಂದನ ಆಶ್ರಮದ ಕಡೆಗೆ ತನ್ನ ಘನ ಸೇನೆಯೊಂದಿಗೆ ಬಂದನು. ಮಾರ್ಗ ಮಧ್ಯದಿ ಕಡಲು ಹಾಗೂ ಪಂಚನದಿಗಳನ್ನು ಕಂಡು ಪಂಚನದಿಗಳ ಬೀಡಿನಲ್ಲಿ ಪಲ್ಲವಿಸಿದ ಚಿಗುರು ಹೂಬಳ್ಳಿಗಳ ಸೊಗಸಿಗೆ ಮಾರು ಹೋದರು.

ಲಂಕೆಗೆ ಹೋಗುವ ಹಾಗೂ ಹಿಂದಿರುಗುವ ಸಂದರ್ಭದಲ್ಲಿ ರಾಮ ಮುನೀಶ್ವರರನ್ನು ಭೇಟಿ ಮಾಡುವುದು ಅಥವಾ ಅವರನ್ನು ಸಂಕಷ್ಟಗಳಿಂದ ಪಾರು ಮಾಡುವುದು ಇಲ್ಲವೇ ಸತ್ಕರಿಸಿ ಗೌರವಿಸುವುದನ್ನು ಕಾಣುತ್ತೇವೆ.

ಆ ಮಹಾವನದೊಳಗೆ ಸುಭಟ
ಸ್ತೋಮವಿಳಿದುದು ಪಾಳೆಯದ ಸಂ
ಗ್ರಾಮದಿದಿರಲಿ ಗುಡಿಗುಡಾರಂಗಳು ವಿರಾಜಿಸಿತು

ರಾಮಣೀಯಕ ರಚನೆಯಲಿ ಸು
ತ್ರಾಮನೋಲಗದಂತೆ ರಘುಕುಲ
ರಾಮನೈದಿರೆ ಬಂದು ಕಂಡರು ಸಕಲ ಮುನಿವರರು ೨೨

ಆ ಮಹಾವನದೊಳಗೆ=ಆ ದಟ್ಟ ಅಡವಿಯಲ್ಲಿ; ಸುಭಟ= ಯೋಧರ; ಸ್ತೋಮವು+ಇಳಿದುದು=ಗುಂಪು ಬೀಡು ಬಿಟ್ಟಿತು. ಪಾಳೆಯದ ಸಂಗ್ರಾಮದ+ ಇದಿರಲಿ=ಸೇನಾ ಶಿಬಿರದ ಎದುರು; ಗುಡಿ ಗುಡಾರಂಗಳು=ಡೇರೆಗಳು; ವಿರಾಜಿಸಿದವು =ಶೋಭಿಸಿದುವು;ರಾಮಣೀಯಕರಚನೆಯಲಿ=ಸೊಗಸಾದ ರೀತಿಯಲ್ಲಿ; ಸುತ್ರಾಮನ+ ಓಲಗದಂತೆ=ಇಂದ್ರನ ಒಡ್ಡೋಲಗದಂತೆ; ರಘುಕುಲ ರಾಮನು+ಐದಿರೆ=ರಘುಕುಲದ ಶ್ರೀರಾಮನು ಅಲ್ಲಿಗೆ ಬರಲು; ಬಂದು ಕಂಡರು ಸಕಲ ಮುನಿವರರು=ಎಲ್ಲಾ ಮುನಿ ಗಳು ರಾಮನ ಭೇಟಿಗಾಗಿ ಬಂದರು.

ರಾಮನೊಡನಿದ್ದ ಸೈನ್ಯ ಮಹಾ ಅರಣ್ಯದಲಿ ಬೀಡುಬಿಟ್ಟು ಅಲ್ಲಿ ಸೊಗಸಾದ ಡೇರೆಗಳನ್ನು ನಿರ್ಮಿಸಿತು. ಅದು ಇಂದ್ರನ ಒಡ್ಡೋಲಗದಂತೆ ಕಾಣುತ್ತಿತ್ತು. ರಘುವಂಶದ ರಾಮ ಅಲ್ಲಿಗೆ ಬರಲು ಎಲ್ಲ ಋಷಿಗಳು ಬಂದು ದರ್ಶನವನ್ನು ಪಡೆದರು.

ರಾಮನಿದ್ದಲ್ಲೇ ರಾಜ್ಯ ಎಂಬಂತೆ, ರಾಮ ಕಾಡಿಗೆ ಹೋಗಲಿ, ನಾಡಲ್ಲೇ ಇರಲಿ, ರಾಮನ ಸುತ್ತ ಜನ ಜಂಗುಳಿ, ಸೈನ್ಯ, ಮುನೀಶ್ವರರು ಎಲ್ಲರೂ ನೆರೆದಿರುತ್ತಾರೆ. ಕಾಡಿನಲ್ಲೂ ಸಹ ಇಂದ್ರನ ಒಡ್ಡೋಲಗದಂತಹ ವೈಭವ, ಸಂಭ್ರಮವನ್ನು ಕಾಣುತ್ತಾರೆ ಪ್ರಜೆಗಳು.

ಕೌಶಿಕನು ಜಮದಗ್ನಿ ಜಹ್ನು ಪ
ರಾಶರನು ಜಾಬಾಲಿ ಭೃಗು ದೂ
ರ್ವಾಸ ಗೌತಮನಾದಿಯಾದ ಸಮಸ್ತ ಮುನಿವರರು
ಭಾಸುರದ ತೇಜದಲಿ ತಮ್ಮ ನಿ
ವಾಸವನು ಹೊರವಂಟು ಬಂದರು
ದಾಶರಥಿಯನು ಕಂಡು ಹುಸಿದರಕ್ಷತೆಯ ತಳಿದು ೨೩

ಕೌಶಿಕನು, ಜಮದಗ್ನಿ, ಜಹ್ನು, ಪರಾಶರನು, ಜಾಬಾಲಿ, ಭೃಗು, ದುರ್ವಾಸ ಗೌತಮನಾದಿಯಾದ=ಕೌಶಿಕ, ಜಮದಗ್ನಿ, ಜಹ್ನು, ಪರಾಶರ, ಜಾಬಾಲಿ, ಭೃಗು, ದುರ್ವಾಸ, ಗೌತಮನ ಆದಿಯಾಗಿ; ಸಮಸ್ತ ಮುನಿವರರು=ಎಲ್ಲಾ ಮುನಿಶ್ರೇಷ್ಠರು; ಭಾಸುರದ ತೇಜದಲಿ=ಸೂರ್ಯನ ಕಾಂತಿಯಂತೆ ಕಂಗೊಳಿಸುತ್ತಾ; ತಮ್ಮ ನಿವಾಸವನ್ನು=ತಮ್ಮ ಆಶ್ರಮವನ್ನು; ಹೊರವಂಟು ಬಂದರು=ಬಿಟ್ಟು ಹೊರ ಬಂದರು; ದಾಶರಥಿಯನ್ನು ಕಂಡು=ದಶರಥನ ಮಗನಾದ ರಾಮನನ್ನು ಕಂಡು; ಅಕ್ಷತೆಯ ತಳಿದು=ಮಂತ್ರಾಕ್ಷತೆಯನ್ನು ಇಟ್ಟು; ಹರಸಿದರು=ಆಶೀರ್ವದಿಸಿದರು.

ಶ್ರೀರಾಮನು ತಾವಿರುವ ಅರಣ್ಯಕ್ಕೆ ಆಗಮಿಸಿದ ವಿಷಯವನ್ನು ತಿಳಿದ ಕೌಶಿಕ, ಜಮದಗ್ನಿ, ಜಹ್ನು, ಜಾಬಾಲಿ, ಭೃಗು, ದುರ್ವಾಸ ಗೌತಮ ಮೊದಲಾದ, ಸೂರ್ಯ ತೇಜಸ್ಸಿನಿಂದ ಹೊಳೆಯುವ ಮುನೀಶ್ವರರು ರಾಮನ ದರ್ಶನಕ್ಕಾಗಿ ಬಂದು ಅಕ್ಷತೆಯನ್ನು ಇಟ್ಟು ಶುಭವಾಗಲೆಂದು ಹಾರೈಸಿದರು.

ರಾಮ ಹಾಗೂ ಮುನಿಶ್ರೇಷ್ಠರ ಬಾಂಧವ್ಯ ನಮಗಿಲ್ಲಿ ಗೋಚರಿಸುತ್ತದೆ. ಹಾಗೂ ಕನಕದಾಸರು ಸಾಕಷ್ಟು ಮುನೀಶ್ವರರನ್ನು ಓದುಗರಿಗೆ ಈ ಪದ್ಯದಲ್ಲಿ ಪರಿಚಯಿಸಿದ್ದಾರೆ.

ರಾಮ ದಶರಥ ತನಯ ರಘುಕುಲ
ಸೋಮ ಸನ್ನುತ ನಾಮನಾಹವ
ಭೀಮ ಸುಜನ ಪ್ರೇಮ ಜಗದಭಿರಾಮ ನಿಸ್ಸೀಮ
ತಾಮರಸದಳ ನಯನ ದೇವ
ಪ್ರೇಮ ಸುರಕುಲ ಮೌಳಿವಂದಿತ
ಪ್ರೇಮದಿಂದಲಿ ಪಾಲಿಸೆನ್ನುತಲವರು ಪೊಗಳಿದರು ೨೪

ರಾಮ, ದಶರಥ ತನಯ, ರಘುಕುಲ ಸೋಮ=ಶ್ರೀರಾಮನು, ದಶರಥನ ಮಗ, ರಘುಕುಲದಲ್ಲಿ ಸೂರ್ಯದಂತೆ ಕಂಗೊಳಿಸಿದವನು; ಸನ್ನುತ=ಹೊಗಳಿಕೆಗೆ ಪಾತ್ರನಾದವ; ಸನಾಮನ್+ಆಹವ ಭೀಮ=ಕೀರ್ತಿಯನ್ನು ಪಡೆದಂತವನು; ಯುದ್ಧ ಹಾಗೂ ಯಾಗಗಳನ್ನು ಯಶಸ್ವಿಯಾಗಿ ನಡೆಸುವಂಥವನು; ಸುಜನ ಪ್ರೇಮ=ಸಜ್ಜನರ ಪ್ರೀತಿಗೆ ಪಾತ್ರನಾದವನು; ಜಗದಭಿರಾಮ=ಜಗತ್ತಿನಲ್ಲೇ ಸುಂದರನಾದವನು; ನಿಸ್ಸೀಮ=ಅತಿಶೂರನು ಹಾಗೂ ಎಲ್ಲೆಯಿಲ್ಲದವನು; ತಾಮರಸದಳ ನಯನ=ತಾವರೆ

ದಳದಂತೆ ಕಣ್ಣುಳ್ಳ; ದೇವ=ದೇವನು; ಪ್ರೇಮ ಸುರಕುಲ=ದೇವತಾ ಕುಲದಿಂದ ಪ್ರೀತಿಸಲ್ಪಡುವ; ಮೌಳಿವಂದಿತ=ವಂದಿಸಲ್ಪಡುವ ಕಿರೀಟವುಳ್ಳವನು; ಇಂಥ ನೀನು ನಮ್ಮೆಲ್ಲರನ್ನು ಪ್ರೇಮದಿಂದಲಿ=ಪ್ರೀತಿಯಿಂದ; ಪಾಲಿಸು+ಎನ್ನುತ=ರಕ್ಷಿಸು ಎನ್ನುತ; ಹಲವರು ಪೊಗಳಿದರು=ಹಲವರು ಹೊಗಳಿದರು.

ಶ್ರೀರಾಮ, ದಶರಥ ಕುಮಾರ, ರಘುಕುಲದ ನೇಸರ ಎಂದು ಸ್ತುತಿಸಲ್ಪಟ್ಟ, ಕೀರ್ತಿಸಲ್ಪಟ್ಟ ಹಾಗೂ ಯುದ್ಧ ಮತ್ತು ಯಾಗಗಳಿಗೆ ಪ್ರಸಿದ್ಧನಾದ, ಸುಸಂಸ್ಕೃತ ಜನರಿಂದ ಪ್ರೀತಿಸಲ್ಪಟ್ಟ, ಜಗತ್ತಿನಲ್ಲೇ ಅತಿ ಸುಂದರನಾದ, ಅತಿಶೂರನಾದ, ತಾವರೆ ದಳದಂತೆ ಕಣ್ಣುಳ್ಳ, ದೇವತೆಗಳ ಪ್ರೀತಿ ಪಾತ್ರನಾದ ಹಾಗೂ ಅವರಿಂದ ಹೊಗಳಲ್ಪಟ್ಟ ಶ್ರೀರಾಮನು ಪ್ರೀತಿಯಿಂದ ನಮ್ಮೆಲ್ಲರನ್ನು ರಕ್ಷಿಸು ಎನ್ನುತ್ತಾ ಮುನಿವರರು ಹೊಗಳಿದರು.

ಇಡೀ ಪದ್ಯವನ್ನು ರಾಮನ ಹೊಗಳಿಕೆಗೆ ಹಾಗೂ ವರ್ಣನೆಗೆ ಮೀಸಲಾಗಿಸಿದ್ದಾನೆ ಕವಿ. ಆಹವ ಹಾಗೂ ನಿಸ್ಸೀಮ ಪದಗಳನ್ನು ವಿಶೇಷ ಅರ್ಥಗಳಲ್ಲಿ ಬಳಸಲಾಗಿದೆ. ಆಹವ ಎಂದರೆ ಯುದ್ಧ ಹಾಗೂ ಯಾಗ ಎರಡೂ ಅರ್ಥದಲ್ಲಿ ಬಳಕೆಯಾಗಿದೆ. ನಿಸ್ಸೀಮ ಎಂಬ ಪದವೂ ಅತಿಶೂರ ಹಾಗೂ ಎಲ್ಲೆಕಟ್ಟುಗಳು ಇಲ್ಲದವನು ಎಂಬ ಅರ್ಥಗಳಲ್ಲಿ ಸಂದರ್ಭೋಚಿತವಾಗಿ ಬಳಕೆಯಾಗಿದೆ.

ದೇವಿ ಜಾನಕಿಸಹಿತ ವನದಲಿ
ನೀವು ಕಷ್ಟವ ಬಳಸಿ ಭಕ್ತರ
ಕಾವ ಹದನನು ನೆನೆದು ವಾನರ ಬಲಸಮೇತದಲಿ
ರಾವಣನ ಸಂಹರಿಸಿ ಲಂಕೆಯ
ನಾ ವಿಭೀಷಣಗಿತ್ತು ನಮ್ಮನು
ದೇವ ಪಾಲಿಸೆ ಬಂದೆಯೆಂದುಪಚರಿಸಿದರು ನೃಪನ ೨೫

ದೇವಿ ಜಾನಕಿ ಸಹಿತ=ರಾಣಿ ಜಾನಕಿಯೊಂದಿಗೆ; ವನದಲಿ ನೀವು ಕಷ್ಟವ ಬಳಸಿ=ಅರಣ್ಯದಲ್ಲಿ ನೀವು ಕಷ್ಟವನ್ನು ಪಟ್ಟಿರಿ; ಭಕ್ತರ ಕಾವ ಹದನನು=ಭಕ್ತರನ್ನು ಕಾಪಾಡಬೇಕಾದ ರೀತಿಯನ್ನು; ನೆನೆದು=ಸ್ಮರಿಸಿ; ವಾನರ ಬಲ ಸಮೇತದಲಿ=ಕಪಿ ಸೈನ್ಯದೊಂದಿಗೆ; ರಾವಣನ ಸಂಹರಿಸಿ=ರಾವಣನನ್ನು ಕೊಂದು; ಲಂಕೆಯನ್ನು=

ಲಂಕಾನಗರಿಯನ್ನು; ಆ ವಿಭೀಷಣಗೆ+ಇತ್ತು=ಆ ವಿಭೀಷಣನಿಗೆ ಕೊಟ್ಟು; ನಮ್ಮನ್ನು ದೇವ ಪಾಲಿಸೆ=ದೇವ ನಮ್ಮನ್ನು ಕಾಪಾಡಲು; ಬಂದೆಯ+ಎಂದು +ನೃಪನ+ ಉಪ ಚರಿಸಿದರು=ಬಂದೆಯ ಎಂದು ರಾಜ ಶ್ರೀರಾಮನನ್ನು ಉಪಚರಿಸಿದರು.

ರಾಣಿ ಜಾನಕಿಯೊಂದಿಗೆ ಅರಣ್ಯದಲ್ಲಿ ಕಷ್ಟ ಕೋಟಲೆಗಳನ್ನು ಅನುಭವಿಸಿ, ತನ್ನ ಭಕ್ತರನ್ನು ಕಾಪಾಡಬೇಕೆಂಬ ಜವಾಬ್ದಾರಿಯನ್ನು ನೆನೆದು, ವಾನರ ಸೇನೆಯ ಸಹಾಯದಿಂದ ರಾವಣನನ್ನು ಕೊಂದು, ಲಂಕಾನಗರಿಯನ್ನು ವಿಭೀಷಣನಿಗೆ ಅರ್ಪಿಸಿ, ನಮ್ಮನ್ನು ಕಾಪಾಡಲು ಬಂದೆಯಾ 'ದೇವಾ' ಎಂದು ಋಷಿಗಳು ಉಪಚರಿಸಿದರು.

ಮುನಿಗಳು ತಮ್ಮ ದೇವರು ಕೈಗೊಂಡ ಕಾರ್ಯಗಳನ್ನು, ಅನುಭವಿಸಿದ ಕಷ್ಟ ಕೋಟಲೆಗಳನ್ನು ಸ್ಮರಿಸುತ್ತಾ ಎಷ್ಟೋ ದಿನಗಳ ನಂತರ ಬಂದ ತಮ್ಮ ರಾಜನನ್ನು ಉಪಚರಿಸುತ್ತಾರೆ. ಇಲ್ಲಿ ತಮ್ಮ ರಾಜನನ್ನು ಮುನಿಗಳು 'ದೇವಾ' ಎಂದು ಕರೆಯುವುದರ ಮೂಲಕ ದೈವತ್ವದ ಮಟ್ಟಕ್ಕೇರಿಸಿದ್ದಾರೆ.

ಸಾರಹೃದಯರು ನೀವು ನಮಗುಪ
ಚಾರವೇಕಿದು ನಿಮ್ಮಡಿಯ ಕರು
ಣಾರಸವೆ ಸಲಹುವುದು ನಮ್ಮನು ಸಾಕದಂತಿರಲಿ
ಆರಿಗುಂಟಿದು ನಿಮ್ಮ ದರುಶನ
ಸೇರಿತೆಮಗಿಂದಿಸಲಿ ಯೆಂದುಪ
ಚಾರದಿಂ ಸತ್ಕರಿಸಿ ಕುಳ್ಳಿರಿಸಿದನು ಮುನಿವರರ ೨೬

ಸಾರ ಹೃದಯರು ನೀವು=ಹೃದಯ ಸಂಪನ್ನರು ನೀವು; ನಮಗುಪ ಚಾರವೇಕೆ+ಇದು=ನಮಗೇಕೆ ಉಪಚರಿಸುವಿರಿ; ನಿಮ್ಮಡಿಯ ಕರುಣಾರಸವೆ=ನಿಮ್ಮ ಕರುಣೆಯೇ; ಸಲಹುವುದು ನಮ್ಮನು=ರಕ್ಷಿಸುವುದು ನಮ್ಮನ್ನು; ಸಾಕು+ಅದಂತಿರಲಿ =ಸಾಕು ಅದು ಹಾಗೆ ಇರಲಿ; ಆರಿಗುಂಟು+ಇದು=ಯಾರಿಗೆ ಉಂಟು ಇದು; ನಿಮ್ಮ ದರುಶನ=ನಿಮ್ಮ ನೋಡುವ ಭಾಗ್ಯ; ಸೇರಿತು+ಎಮಗೆ+ಇಂದಿನಲಿ+ ಎಂದು+ ಉಪಚಾರದಿಂ=ಲಭಿಸಿತು ನನಗೆ ಈ ದಿನ ಎಂದು ಉಪಚಾರದಿಂದ; ಸತ್ಕರಿಸಿ= ಗೌರವಿಸಿ; ಕುಳ್ಳಿರಿಸಿದನು; ಮುನಿವರರ=ಮುನಿಗಳನ್ನು ಕುಳ್ಳಿರಿಸಿದನು.

ರಾಮನು ಅಲ್ಲಿಗೆ ಬಂದ ಮುನಿಗಳನ್ನು ಗೌರವಾದರಗಳಿಂದ ಕೂರಿಸಿ; ಸತ್ಕರಿಸಿ, “ಸುಸಂಸ್ಕೃತರು; ಹೃದಯ ಸಂಪನ್ನರು ನೀವುಗಳು, ನಮಗೇಕೆ ಹೀಗೆ ಉಪಚರಿಸುವಿರಿ, ನಿಮ್ಮ ಅಂತರಂಗದ ಕರುಣಾರಸವೇ ರಕ್ಷಿಸುವುದು, ನನ್ನನ್ನು, ಅಲ್ಲದೇ ನಿಮ್ಮಗಳ ದರ್ಶನ ಭಾಗ್ಯ ನನ್ನನ್ನು ಪುನೀತನನ್ನಾಗಿಸಿದೆ” ಎಂದು ಸಂತೋಷದಿಂದ ಸತ್ಕರಿಸಿದನು.

ಈ ಪದ್ಯದಲ್ಲಿ ಮೇರು ಹೃದಯಗಳ ಸಮಾಗಮದ ಸನ್ನಿವೇಶವನ್ನು ಕನಕದಾಸರು ಚಿತ್ರಿಸಿದ್ದಾರೆ. ಹಿಂದಿನ ಪದ್ಯದಲ್ಲಿ “ನಮ್ಮನ್ನು ಕಾಪಾಡಲು ಬಂದೆಯಾ ದೇವಾ” ಎಂದು ಮುನೀಶ್ವರರು ರಾಮನನ್ನು ಹೊಗಳಿದರೆ; ರಾಮನು “ನಿಮ್ಮ ದರುಶ ಭಾಗ್ಯ ನನಗೆ ಲಭಿಸಿತು. ನಿಮ್ಮ ಅಂತರಂಗ ಕರುಣೆ, ಒಲುಮೆ ನನಗೆ ದೊರೆಯಿತೆಂಬ” ಪುನೀತಭಾವದಲ್ಲಿ ಪರಸ್ಪರರು ಉಪಚರಿಸಿಕೊಳ್ಳುತ್ತಿದ್ದಾರೆ.

ಎಡದ ಕಡೆಯಲಿ ಕಪಿಕುಲೇಂದ್ರನ
ಗಡಣ ಬಲದಲಿ ರಾವಣಾನುಜ
ಸಡಗರದಿ ಮುನಿನಿಕರವಿದಿರಲಿ ಹಿಂದೆ ವಾನರರು
ಮಡದಿ ಲಕ್ಷ್ಮಣ ದೇವರಿರ್ವರು
ಬಿಡದೆ ಚಿಮ್ಮಲು ಚಾಮರಂಗಳ
ಪೊಡವಿಪತಿ ಶ್ರೀರಾಮ ಸಿಂಹಾಸನದಿ ರಂಜಿಸಿದ ೨೭

ಎಡದ ಕಡೆಯಲಿ=ರಾಮನ ಎಡಭಾಗಕ್ಕೆ; ಕಪಿಕುಲೇಂದ್ರನ ಗಡಣ=ಕಪಿ ಕುಲದ ಸುಗ್ರೀವ ಮುಂತಾದ ವಾನರ ಸೇನೆಯ ಸಮೂಹ; ಬಲದಲಿ ರಾವಣ+ ಅನುಜ=ಬಲಗಡೆ ರಾವಣನ ತಮ್ಮ ವಿಭೀಷಣ; ಸಡಗರದಿ ಮುನಿನಿಕರವು +ಇದಿ ರಲಿ= ಸಂತೋಷದಿಂದ ಮುನಿಗಳ ಸಮೂಹ ಎದುರುಗಡೆ; ಹಿಂದೆ ವಾನರರು= ಹಿಂಭಾಗದಲಿ ಕಪಿಗಳು; ಮಡದಿ ಲಕ್ಷಣ ದೇವರಿರ್ವರು=ಪಕ್ಕದಲಿ ಸತಿ ಸೀತಾಮಾತೆ ಹಾಗೂ ಸಹೋದರ ಲಕ್ಷ್ಮಣನ ಇಬ್ಬರೂ; ಬಿಡದೆ ಚಿಮ್ಮಲು=ನಿರಂತರವಾಗಿ ಬೀಸಲು; ಚಾಮರಂಗಳ=ಚಾಮರಗಳನ್ನು; ಪೊಡವಿಪತಿ ಶ್ರೀರಾಮ=ಭೂಮಿಯ ಒಡೆಯ ಶ್ರೀರಾಮ; ಸಿಂಹಾಸನದಿ ರಂಜಿಸಿದ=ಸಿಂಹಾಸನದಲ್ಲಿ ಶೋಭಿಸಿದ.

ಶ್ರೀರಾಮನು ಮುನೀಂದ್ರರ ಸಮ್ಮುಖದಲ್ಲಿ ಹಾಗೂ ತನ್ನ ಪ್ರೀತಿಯ ಸೈನ್ಯ ದೊಂದಿಗೆ ಒಡ್ಡೋಲಗದಲ್ಲಿ ಕುಳಿತ್ತಿದ್ದಾನೆ. ಎಡಕ್ಕೆ ಕಪಿ ಕುಲದ ಗುಂಪು, ಬಲಗಡೆ ವಿಭೀಷಣ ಹಾಗೂ ಅವನ ಸೈನ್ಯ, ಎದುರಿಗೆ ಋಷಿಮುನಿಗಳ ಗುಂಪು. ಅಕ್ಕಪಕ್ಕ ಸೀತಾಮಾತೆ ಹಾಗೂ ಪ್ರೀತಿಯ ತಮ್ಮ ಲಕ್ಷ್ಮಣದೇವ ಹೀಗೆ ಕುಳಿತಿರುವ ಸಂದರ್ಭದಲ್ಲಿ ಅಕ್ಕಪಕ್ಕಗಳಲ್ಲಿ ಚಾಮರಗಳನ್ನು ನಿರಂತರವಾಗಿ ಬೀಸುತ್ತಿರಲು ಸಿಂಹಾ ಸನದಲ್ಲಿ ಕುಳಿತ ಶ್ರೀರಾಮನು ವೈಭವದಿಂದ ಶೋಭಿಸಿದ.

ರಾಮನ ಜೊತೆಯವರ ಎಲ್ಲರ ವಿವರಗಳನ್ನು ಈ ಪದ್ಯದಲ್ಲಿ ಕಾಣುತ್ತೇವೆ. ರಾಮ ಬಡವರ ಬಂಧು; ಎಲ್ಲರಿಗೂ ಬೇಕಾದವನು, ಎಲ್ಲರನ್ನು ಪ್ರೀತಿಸುವವನು, ಹಾಗಾಗಿ ರಾಮನಿರುವ ಕಡೆ ಕಪಿಸೈನ್ಯ, ಮುನೀಶ್ವರರು, ಸತಿಸೀತೆ ಹಾಗೂ ಲಕ್ಷ್ಮಣ, ಪ್ರಜೆಗಳು, ಭಕ್ತರು ಇವರೆಲ್ಲಾ ಇರುತ್ತಾರೆ. ಇವರ ನಡುವೆ ಇದ್ದಾಗ ರಾಮ ಸಂತೋಷದಿಂದ ಶೋಭಿಸುತ್ತಾನೆಂದು ಕವಿ ಹೇಳುತ್ತಾನೆ.

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲ ತರಿಸಿದರಖಿಳ ವಸ್ತುವ
ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನಂಗಳಲಿ
ಭುಲ್ಲವಿಸಿ ರಚಿಸಿದ ಸುಭಕ್ಷಗ
ಳೆಲ್ಲವನು ತುಂಬಿದರು ಹೆಡಗೆಗ
ಳಲ್ಲಿ ಜೋಡಿಸಿ ಹೊರಿಸಿ ತಂದರು ರಾಮನೋಲಗಕೆ ೨೮

ಅಲ್ಲಿ ನೆರೆದ=ಅಲ್ಲಿ ಸೇರಿದ; ಮಹಾಮುನೀಶ್ವರರು+ಎಲ್ಲ=ಮುನೀಶ್ವರರೆಲ್ಲ; ತರಿಸಿದರು. ಅಖಿಲ ವಸ್ತುವ=ತರಿಸಿದರು ಎಲ್ಲಾ ವಸ್ತುಗಳನ್ನು; ಬೆಲ್ಲ, ಸಕ್ಕರೆ, ಜೇನುತುಪ್ಪ, ರಸಾಯನಂಗಳಲ್ಲಿ=ಬೆಲ್ಲ, ಸಕ್ಕರೆ, ಜೇನುತುಪ್ಪ ಇತ್ಯಾದಿ ರುಚಿಕರವಾದ ವಸ್ತುಗಳಿಂದ; ಭುಲ್ಲವಿಸಿ ರಚಿಸಿದ=ಸಂಭ್ರಮ, ಉತ್ಸಾಹದಿಂದ ತಯಾರಿಸಿದ; ಸುಭಕ್ಷ್ಯಗಳೆಲ್ಲವನ್ನು=ಒಳ್ಳೆಯ ಅಡುಗೆಗಳೆಲ್ಲವನು; ತುಂಬಿದರು ಹೆಡಗೆಗಳಲ್ಲಿ=ದೊಡ್ಡ ದೊಡ್ಡ ಮರದ ಬುಟ್ಟಿಗಳಲ್ಲಿ; ಜೋಡಿಸಿ=ಓರಣವಾಗಿ ತುಂಬಿಸಿ; ರಾಮನೋಲಗಕೆ =ರಾಮನ ಸಭೆಗೆ; ಹೊರಿಸಿ ತಂದರು=ಹೊತ್ತು ತಂದರು.

ಅಲ್ಲಿ ಸೇರಿದ ಮಹಾಮುನಿಗಳೆಲ್ಲ ಬೆಲ್ಲ, ಸಕ್ಕರೆ, ಜೇನುತುಪ್ಪ ಮೊದಲಾದ ವಸ್ತುಗಳಿಂದ, ಒಳ್ಳೆಯ ಭಕ್ಷ್ಯಗಳನ್ನು ತಯಾರಿಸಿ ದೊಡ್ಡ ದೊಡ್ಡ ಮರದ ಬುಟ್ಟಿಗಳಲ್ಲಿ ಒಪ್ಪ ಓರಣವಾಗಿ ಜೋಡಿಸಿ ರಾಮನೋಲಗಕೆ ಶಿಷ್ಯರಿಂದ ಹೊರಿಸಿ ತಂದರು.

ರಾಮನ ಮೇಲಿನ ಪ್ರೀತಿಯಿಂದಾಗಿ ಮುನೀಶ್ವರರು ತಮ್ಮ ಬಳಿ ಇದ್ದ ಬೆಲ್ಲ, ಸಕ್ಕರೆ, ಜೇನು ಇತ್ಯಾದಿ ಅಮೂಲ್ಯ ವಸ್ತುಗಳಿಂದ ಅವರ ಇಷ್ಟದ ಅಡುಗೆಗಳನ್ನು ತಯಾರಿಸಿ ರಾಮನಿಗೆ ಹಾಗೂ ಜೊತೆಯವರಿಗೆ ಕಳುಹಿಸಿಕೊಡುವುದು ಅವರ ಮೇಲಿನ ಭಕ್ತಿ ಭಾವವನ್ನು ತೋರಿಸುತ್ತದೆ.

ತಂದು ಶಿಷ್ಯರು ಭಕ್ಷ್ಯಗಳ ಮುದ
ದಿಂದ ಸುರಿಯಲು ನೋಡಿ ನಸುನಗೆ
ಯಿಂದ ರಘುಕುಲಸಾರ್ವಭೌಮನು ಕರೆಸಿ ನಿಜಬಲಕೆ
ಅಂದು ಕೊಡಿಸಲು ನೋಡಿದರು ರುಚಿ
ಯಿಂದ ಸವಿದರು ಪೂಜೆಗಳನಾ
ನಂದದಲಿ ಕೊಂಡಾಡಿದರು ವಾನರರು ಮುನಿವರರ ೨೯

ತಂದು ಶಿಷ್ಯರು ಭಕ್ಷ್ಯಗಳ=ಶಿಷ್ಯರು ಭಕ್ಷ್ಯಗಳನ್ನು ತಂದು; ಮುದದಿಂದ ಸುರಿಯಲು=ಸಂತೋಷದಿಂದ ಸುರಿಯಲು; ನೋಡಿ ನಸುನಗೆಯಿಂದ ರಘುಕುಲ ಸಾರ್ವಭೌಮನು=ರಘುಕುಲ ಸಾರ್ವಭೌಮನಾದ ಶ್ರೀರಾಮನು ಅದನ್ನು ನೋಡಿ ನಸುನಕ್ಕು; ಕರಸಿ; ನಿಜಬಲಕ್ಕೆ=ತನ್ನ ಸೈನ್ಯವನ್ನು ಕರೆಸಿ; ಅಂದು ಕೊಡಿಸಲು ನೋಡಿದನು=ಅವರಿಗೆ ಕೊಡಿಸಿದನು; ರುಚಿಯಿಂದ ಸವಿದರು=ಪ್ರೀತಿಯಿಂದ ಸವಿದರು; ಭೋಜ್ಯಗಳನ್ನು+ಆನಂದದಲ್ಲಿ=ಆಹಾರವನ್ನು ಆನಂದದಿಂದ; ವಾನರರು ಮುನಿವರರ=ವಾನರ ಸೈನ್ಯ ಮಹಾಋಷಿಗಳನ್ನು; ಕೊಂಡಾಡಿದರು=ಹೊಗಳಿದರು.

ಮುನಿಗಳ ಶಿಷ್ಯ ಸಮೂಹ ವಿವಿಧ ಬಗೆಯ ಭಕ್ಷ್ಯಗಳನ್ನು ಹಿಗ್ಗಿನಿಂದ ತಂದು ಸುರಿದದ್ದನ್ನು ನೋಡಿದ ಶ್ರೀರಾಮನು ಮುಗುಳ್ನಗೆ ನಕ್ಕು ತನ್ನ ವಾನರ ಸೈನ್ಯವನ್ನು ಕರೆದು ಕೊಡಿಸಲು ರುಚಿರುಚಿಯಾದ ಭಕ್ಷ್ಯಗಳನ್ನು ತಿಂದ ವಾನರರು ಆನಂದದಿಂದ ಮುನೀಶ್ವರರನ್ನು ಕೊಂಡಾಡಿದರು.

ಅನಿಲಸುತ ಬಾರೆಂದು ರಘುನಂ
ದನನು ಕರುಣದೊಳಿದರ ರುಚಿಯೆಂ
ತೆನಲು ಕರಗಳ ಮುಗಿದು ಬಿನ್ನೈಸಿದನು ರಘುಪತಿಗೆ
ಇನಕುಲಾನ್ವಯತಿಲಕ ಚಿತ್ತೈ
ಸೆನಗೆ ಸವಿಯಹುದಿನ್ನು ಧಾನ್ಯದ
ತನುವನೀಕ್ಷಿಸಬೇಕು ದೇವರು ತರಿಸಿ ನೀವೆಂದ ೩೦

ಅನಿಲಸುತ=ಹನುಮಂತ; ಬಾರೆಂದು=ಬಾ ಎಂದು; ರಘುನಂದನನು=ಶ್ರೀರಾಮನು; ಕರುಣದೊಳು+ಇವರ=ಕರುಣೆಯಿಂದ ಇವರ; ರುಚಿಯೆಂತು+ಎನಲು= ರುಚಿ ಹೇಗಿದೆ ಎಂದಾಗ; ಕರಗಳ ಮುಗಿದು=ಕೈ ಮುಗಿದು; ಬಿನ್ನೈಸಿದನು=ವಿಜ್ಞಾಪಿಸಿದನು;ರಘುಪತಿಗೆ=ಶ್ರೀರಾಮನಿಗೆ; ಇನ+ಕುಲ+ಅನ್ವಯ+ ತಿಲಕ=ಸೂರ್ಯವಂಶದಲ್ಲಿ ಶ್ರೇಷ್ಠನಾದ ಶ್ರೀರಾಮನೇ; ಚಿತ್ತೈಸೆ+ ಎನಗೆ= ಆಲೋಚಿಸಿದರೆ ನನಗೆ; ಸವಿಯಹುದು=ರುಚಿಯಾಗಿದೆ; ಇನ್ನು ಧಾನ್ಯದ=ಇನ್ನು ಕಾಳಿನ; ತನುವನು+ಈಕ್ಷಿಸಬೇಕು=ಸ್ವರೂಪವನ್ನು ಪರೀಕ್ಷಿಸಬೇಕು; ದೇವರು ತರಿಸಿ ನೀವೆಂದ=ಒಡೆಯರೇ ನೀವು ಅದನ್ನು ತರಿಸಿಕೊಡಿ ಎಂದ ಹನುಮ.

ಶ್ರೀರಾಮನು ಹನುಮಂತನನ್ನು ಕರೆದು "ನೀವು ಸವಿದ ಭಕ್ಷ್ಯಗಳ ರುಚಿ ಹೇಗಿದೆ" ಎಂದಾಗ ಕೈಗಳ ಮುಗಿದ ಹನುಮ, "ಸೂರ್ಯವಂಶದಲ್ಲೇ ಶ್ರೇಷ್ಠನಾದ ರಾಜನೇ, ಆಲೋಚಿಸಿ ನೋಡಿದರೆ ಎಲ್ಲ ಭಕ್ಷ್ಯಗಳೂ ಸವಿಯಾಗಿವೆ. ಆದರೆ ಇವುಗಳಲ್ಲಿ ಸಾರಭರಿತವಾದುದು, ದೀರ್ಘ ಬಾಳಿಕೆ ಬರುವಂತಹುದಾವುದೆಂದು ನಿರ್ಧರಿಸಲು ಧಾನ್ಯವನ್ನು ನೋಡಿ ಅದರ ಗುಣವನ್ನು ಪರೀಕ್ಷಿಸಬೇಕು, ಅದನ್ನು ತರಿಸಿಕೊಡಿ" ಎಂದು ಕೇಳಿದನು.

ಯಾರಾದರೂ ಆತಿಥ್ಯವನ್ನು ನೀಡಿದ ಬಳಿಕ ಅದನ್ನು ತಿಂದು ಬರುವುದು. ದೊಡ್ಡಸ್ತಿಕೆಯಲ್ಲ. ಉಂಡ ಭಕ್ಷ್ಯಗಳ ರುಚಿ; ಅದರ ಹಿಂದಿನ ಶ್ರಮವನ್ನು ಸ್ಮರಿಸಬೇಕು ಹಾಗಾಗಿ ರಾಮ ಅಡುಗೆಗಳ ರುಚಿಯ ಬಗ್ಗೆ ಹನುಮಂತನನ್ನು ಕೇಳಿದಾಗ ಹನುಮ ಒಟ್ಟಾರೆಯಾಗಿ ಎಲ್ಲಾ ಅಡುಗೆಗಳ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿದರೂ ತನ್ನ

ತೀಕ್ಷ್ಣಮತಿಯಿಂದಾಗಿ ಧಾನ್ಯಗಳ ಸ್ವರೂಪವನ್ನು ತಿಳಿಯಬೇಕೆಂದು ಬಯಸುವುದು ವಿಶೇಷವಾಗಿದೆ.

ಎನಲು ರಾಮನೃಪಾಲ ಗೌತಮ
ಮುನಿಯನೀಕ್ಷಿಸಿ ಬೇಕು ಸಲೆ ತರಿ
ಸೆನಲು ಧಾನ್ಯವನೊಡನೆ ಯಾಲೋಚಿಸಿದರೀ ಹದನ
ಮನನಲಿದು ತಂತಮ್ಮಶಿಷ್ಯರ
ವಿನಯದಿಂದಲಿ ಕರೆಸಿ ತಾರೆಂ
ದೆನಲು ಮೆರೆದರು ತಳುವದವರನು ತಂದು ಸಭೆಯೊಳಗೆ ೩೧

ಎನಲು=ಹನುಮ ಹೀಗೆಂದಾಗ; ರಾಮನೃಪಾಲ=ಶ್ರೀರಾಮನು; ಗೌತಮ ಮುನಿಯನು+ಈಕ್ಷಿಸಿ=ಗೌತಮ ಋಷಿಗಳ ಕಡೆಗೆ ತಿರುಗಿ; ಬೇಕು ಸಲೆ ತರಿಸು+ ಎನಲು=ಬೇಕು ಸ್ವಲ್ಪ ಧಾನ್ಯವನು ತರಿಸಿ ಎಂದಾಗ; ಒಡನೆಯೆ+ ಆಲೋಚಿಸಿದರು +ಈ+ಹದನ=ತಕ್ಷಣ ಆಲೋಚಿಸಿದರು ಈ ರೀತಿ; ಮನನಲಿದು= ಸಂತೋಷದಿಂದ; ತಂತಮ್ಮ ಶಿಷ್ಯರ=ತಮ್ಮ ತಮ್ಮ ಶಿಷ್ಯರನ್ನು; ವಿನಯದಿಂದಲಿ= ವಿನಯದಿಂದ; ಕರೆಸಿ=ಕರೆಸಿಕೊಂಡು; ತಾರೆಂದು+ಎನಲು=ತೆಗೆದುಕೊಂಡು ಬನ್ನಿ ಎಂದಾಗ; ತಳುವದೆ + ಅವರನ್ನು=ತಡಮಾಡದೇ ಆ ಧಾನ್ಯಗಳನ್ನು; ತಂದು ಸಭೆಯೊಳಗೆ= ರಾಮನ ಸಭೆ ಯಲ್ಲಿ; ಮೆರೆದರು=ತಂದು ಒಪ್ಪಿಸಿದರು.

ಹನುಮಂತನು ಧಾನ್ಯಗಳ ಸ್ವರೂಪವನ್ನು ಗಮನಿಸಬೇಕು ಎಂದಾಗ ರಾಮನು ಗೌತಮ ಮುನಿಗಳಿಗೆ ಧಾನ್ಯವನು ತರಿಸಿ ಎಂದು ಹೇಳಲು, ಮುನಿಯು ತಮ್ಮ ಶಿಷ್ಯರಿಗೆ ಈ ಜವಾಬ್ದಾರಿಯನ್ನು ಒಪ್ಪಿಸಿದರು. ಶಿಷ್ಯರು ತಡಮಾಡದೇ ಗುರುಗಳ ಆಜ್ಞೆಯಂತೆ ರಾಮನ ಸಭೆಗೆ ಎಲ್ಲಾ ರೀತಿಯ ಕಾಳುಗಳನ್ನು ತಂದೊಪ್ಪಿಸಿ ಸಂಭ್ರಮಿಸಿದರು.

ಮೇಲಿನ ಪದ್ಯದಲ್ಲಿ ಹನುಮ ಕಾಳುಗಳನ್ನು ತರಿಸುವಂತೆ ರಾಮನಿಗೆ ಹೇಳುವುದು, ರಾಮ ಗೌತಮ ಋಷಿಗೆ ಹೇಳುವುದು, ಗೌತಮ ಋಷಿ ತನ್ನ ಶಿಷ್ಯರಿಗೆ ಹೇಳುವುದು ಈ ನಿರಂತರ ಕ್ರಿಯೆಯಲ್ಲಿ ಹನುಮ, ರಾಮ, ಗೌತಮ ಇವರೆಲ್ಲರೂ ಸಮಾನರಾಗಿ ಕಾಣುತ್ತಾರೆ. ಶಿಷ್ಯರಿಂದ ಗೌತಮನ ಮಾತಿಗೆ ಎಷ್ಟು ಗೌರವ

ಸಿಗುತ್ತದೆಯೋ ಅಷ್ಟೇ ಗೌರವ ರಾಮನ ಮಾತಿಗೂ, ಹನುಮನ ಮಾತಿಗೂ ಇರುವುದನ್ನು ನಾವಿಲ್ಲಿ ಕಾಣುತ್ತೇವೆ.

ನರೆದಲೆಗನಿದು ನೆಲ್ಲು ಹಾರಕ
ಬರಗು ಜೋಳವು ಕಂಬು ಸಾಮೆಯು
ಉರುತರದ ನವಣೆಯಿದು ನವಧಾನ್ಯವೆಂದೆನಲು
ಮೆರೆವ ರಾಶಿಯ ಕಂಡು ಇದರೊಳು
ಪರಮಸಾರದ ಹೃದಯನಾರೆಂ
ದರಸಿ ಕೇಳಿದನಲ್ಲಿರುತಿಹ ಮಹಾಮುನೀಶ್ವರರ ೩೨

ನರೆದಲೆಗನು+ಇದು=ಈ ರಾಗಿ; ನೆಲ್ಲು, ಹಾರಕ, ಬರಗು, ಜೋಳವು, ಕಂಬು, ಸಾಮೆಯು ಉರುತರದ ನವಣೆಯಿದು=ವಿಶಿಷ್ಟವಾದ ನವಣೆಯಿದು; ನವ ಧಾನ್ಯವೆಂದು+ಎನಲು=ನವಧಾನ್ಯಗಳು ಇವು ಎಂದಾಗ; ಮೆರೆವ ರಾಶಿಯ ಕಂಡು=ಹೊಳೆಯುವ ರಾಶಿಯನ್ನು ನೋಡಿ; ಇದರೊಳು=ಇದರಲ್ಲಿ; ಪರಮ ಸಾರದ=ವಿಶೇಷವಾದ ಸಾರವನ್ನು ಹೊಂದಿದ; ಹೃದಯನು+ಆರೆಂದು+ ಅರಸಿ= ಗುಣದವನು ಯಾರೆಂದು ಹುಡುಕಿ ಎಂದು;ಕೇಳಿದನು+ಅಲ್ಲಿ+ ಇರುತಿಹ= ಕೇಳಿದನು ಅಲ್ಲಿಇದ್ದ; ಮಹಾಮುನಿ+ಈಶ್ವರರ=ಮಹಾಮುನಿಗಳನ್ನು.

ಇದು ರಾಗಿ, ಇದು ಬತ್ತ, ಹಾರಕ, ಬರಗು, ಜೋಳ, ಕಂಬು, ಸಾಮೆ, ನವಣೆ ಇವು ನವಧಾನ್ಯಗಳು ಎಂದು ಹೇಳಿದಾಗ ಹೊಳೆಯುತ್ತಿದ್ದ ರಾಶಿಗಳನ್ನು ಕಂಡು ಇದರಲ್ಲಿ ವಿಶೇಷವಾದ ಸ್ವಾದಭರಿತ ಧಾನ್ಯ ಯಾವುದೆಂದು ಹುಡುಕಿ ಎಂದು ಶ್ರೀರಾಮ ಮಹಾಋಷಿಗಳನ್ನು ಕೇಳಿದನು.

ಇಲ್ಲಿ ಕವಿ ನವಧಾನ್ಯಗಳೆಂದು ರಾಗಿ, ಬತ್ತ, ಹಾರಕ, ಬರಗು, ಜೋಳ, ಕಂಬು, ಸಾಮೆ, ನವಣೆ ಇತ್ಯಾದಿ ಎಂಟು ಧಾನ್ಯಗಳನ್ನು ಮಾತ್ರ ಹೆಸರಿಸುತ್ತಾರೆ. ನಿಘಂಟುಗಳಲ್ಲಿ ಗೋದಿ, ಬತ್ತ, ತೊಗರಿ, ಹೆಸರು, ಕಡಲೆ, ಅವರೆ, ಎಳ್ಳು, ಉದ್ದು, ಹುರುಳಿಯನ್ನು ಹೆಸರಿಸಿದ್ದಾರೆ. ಕನಕದಾಸರ ಪಟ್ಟಿಯಲ್ಲಿ ದವಸಗಳ ಹೆಸರನ್ನು ಹೇಳಿ ಧಾನ್ಯಗಳ ಹೆಸರನ್ನು ಕೈಬಿಟ್ಟಿದ್ದಾರೆ. ದವಸಗಳನ್ನು ಪರಿಗಣಿಸಿದಾಗ ಈ ಎಂಟರ ಜೊತೆಗೆ ಸಜ್ಜೆ ಅಥವಾ ಊರ್ದುಲು ಸೇರಿ ನವ ಧಾನ್ಯಗಳಾಗುವ ಸಂಭವವಿದೆ.

ಕೆಲರು ಗೋಧಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲರು ಹಾರಕನೆಂದು ಕೆಲವರು ನೆಲ್ಲನತಿಶಯವ
ಕೆಲರು ನರೆದಲಗನನು ಪತಿಕರಿ
ಸಲದ ನೋಡಿದ ನೃಪತಿಯದರೊಳು
ಹಲವು ಮತವೇಕೊಂದನೇ ಪೇಳೆನಲು ಗೌತಮನು ೩೩

ಕೆಲರು ಗೋದಿಯ ಸಾಮೆಯನು=ಕೆಲವರು ಗೋದಿ ಮತ್ತು ಸಾಮೆಯನ್ನು; ಕೆಲಕೆಲರು ನವಣೆಯ ಕಂಬು ಜೋಳವ=ಇನ್ನು ಕೆಲವರು ನವಣೆ; ಕಂಬು; ಜೋಳವನ್ನು; ಕೆಲರು ಹಾರಕವೆಂದು=ಕೆಲವರು ಹಾರಕವೆಂದು; ಕೆಲವರು ನೆಲ್ಲನು+ ಅತಿಶಯದ=ಕೆಲವರು ಬತ್ತವನ್ನು ವಿಶೇಷವಾಗಿ; ಕೆಲರು ನರೆದಲೆಗನನು=ಕೆಲವರು ರಾಗಿಯನ್ನು; ಪತಿಕರಿಸಲು+ಅದ=ಅಂಗೀಕರಿಸಲು ಅದನ್ನು; ನೋಡಿದ; ನೃಪತಿಯು+ ಅದರೊಳು=ರಾಜನು ಅದರಲ್ಲಿ; ಹಲವು=ವಿವಿಧ; ಮತವೇಕೊ+ಒಂದನೇ= ಅಭಿಪ್ರಾಯಗಳು ಏಕೆ ಒಂದನ್ನು; ಪೇಳೆನಲು=ಹೇಳಿ ಎಂದಾಗ; ಗೌತಮನು=ಗೌತಮ ಮುನಿಯು ಹೀಗೆಂದನು.

ಕೆಲವರು ಗೋದಿ, ಸಾಮೆ ಎಂದು, ಇನ್ನು ಕೆಲವರು ನವಣೆ, ಕಂಬು, ಜೋಳ ಎಂದೂ, ಮತ್ತೆ ಕೆಲವರು ಹಾರಕ, ನೆಲ್ಲು, ರಾಗಿ ಎಂದೂ ಒಬ್ಬೊಬ್ಬರೂ ಒಂದೊಂದನ್ನು ಅಂಗೀಕರಿಸಿದಾಗ ಶ್ರೀರಾಮನು ಹಲವು ಅಭಿಪ್ರಾಯಗಳು ಬೇಡ, ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆಯ್ಕೆ ಮಾಡಿ ಎಂದು ಗೌತಮ ಋಷಿಗೆ ಹೇಳುತ್ತಾರೆ.

ಜನ ಸಮ್ಮುಖದಲ್ಲಿಯೇ ಜನರಿಂದಲೇ ನ್ಯಾಯ ತೀರ್ಮಾನವನ್ನು ಮಾಡಿಸುತ್ತಿರುವುದು. ಶ್ರೀರಾಮನ ವಿಶೇಷ. ಇಲ್ಲಿ ರಾಮನು ಇದೇ ಧಾನ್ಯಶ್ರೇಷ್ಠ ಎಂದು ನಿರ್ಧಾರ ತೆಗೆದುಕೊಳ್ಳದೇ ಜನರೆಲ್ಲಾ ಗೌರವಿಸುವ ಹಾಗೂ ದವಸಧಾನ್ಯಗಳ ಬಗ್ಗೆ ತಿಳಿದಿರುವ ವ್ಯಕ್ತಿಯಾದ ಗೌತಮನನ್ನು ನ್ಯಾಯ ತೀರ್ಮಾನಕ್ಕೆ ಬಿಡುತ್ತಾರೆ.

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲೆಗನೇ
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯವೇಕೆನಲು
ಲೇಸನಾಡಿದೆ ಮುನಿಪ ಗೌತಮ
ದೋಷರಹಿತನು ಪಕ್ಷಪಾತವ
ನೀಸು ಪರಿಯಲಿ ಮಾಡುವರೆ ಶಿವಯೆಂದನಾ ವ್ರಿಹಿಗ ೩೪

ದಾಶರಥಿ=ದಶರಥನ ಪುತ್ರ ಶ್ರೀರಾಮ; ಚಿತ್ತೈಸು=ಆಲಿಸು; ನಮ್ಮಯ ದೇಶಕೆ+ಅತಿಶಯ=ನಮ್ಮ ಪ್ರದೇಶಕ್ಕೆ ವಿಶೇಷವಾಗಿ; ನರೆದಲೆಗನೇ=ರಾಗಿಯೇ; ವಾಸಿಯುಳ್ಳವನು+ಈತ=ಮೇಲಾದವನು ಈತ; ಮಿಕ್ಕಿನ=ಇತರೆ; ಧಾನ್ಯವೇಕೆ+ ಎನಲು=ಧಾನ್ಯಗಳು ಏಕೆ ಎಂದಾಗ; ಲೇಸನಾಡಿದೆ=ಒಳ್ಳೆಯ ಮಾತನಾಡಿದೆ; ಮುನಿಪ ಗೌತಮ=ಗೌತಮ ಮುನಿಯೇ; ದೋಷರಹಿತನು=ನಿಷ್ಕಳಂಕನು; ಪಕ್ಷಪಾತವನು+ ಈಸು=ಬೇಧಭಾವವನ್ನು ಇಷ್ಟು; ಪರಿಯಲಿ=ರೀತಿಯಲಿ; ಮಾಡುವರೆ= ಮಾಡುತ್ತಾರೆಯೇ; ಶಿವಯೆಂದನಾ ವ್ರಿಹಿಗ=ಶಿವಶಿವಾ ಎಂದೆನಾ ಬತ್ತ.

“ಶ್ರೀರಾಮನೇ ಕೇಳು ನಮ್ಮ ಪ್ರದೇಶದಲ್ಲಿ ವಿಶೇಷವಾದದ್ದು ಶ್ರೇಷ್ಠವಾದದ್ದು ರಾಗಿಯೇ, ಇತರ ಧಾನ್ಯಗಳ ಪ್ರಯೋಜನಗಳು ಅಷ್ಟೊಂದಿಲ್ಲ” ಎಂದಾಗ ಬತ್ತಕ್ಕೆ ಸಿಟ್ಟು ಬಂದು, “ಒಳ್ಳೆಯ ಮಾತನಾಡಿದೆ ಗೌತಮ ಮನಿಯೇ ನಿನ್ನನ್ನು ದೋಷರಹಿತ, ನಿಷ್ಪಕ್ಷಪಾತಿ ಎಂದು ತಿಳಿದಿದ್ದೆ, ಆದರೆ ಈ ರೀತಿಯಲ್ಲಿ ಪಕ್ಷಪಾತ ಮಾಡುತ್ತಿರುವೆಯಲ್ಲಾ ಶಿವ ಶಿವಾಯೆಂದು” ಶಿವನನ್ನು ಸ್ಮರಿಸಿದ ಬತ್ತ.

ಗೌತಮಮುನಿ ತನ್ನನ್ನು ಹೊಗಳುತ್ತಾನೆಂಬ ನಿರೀಕ್ಷೆಯಲ್ಲಿದ್ದ ಬತ್ತಕ್ಕೆ ಅವಮಾನವಾದಂತಾಗಿ “ಯಾವ ಮಾನದಂಡಗಳಿಂದ ನೀವು ಆಯ್ಕೆ ಮಾಡಿದಿರಿ” ಎಂದು ಸಹ ಪ್ರಶ್ನಿಸದೇ ನೀವು ಪಕ್ಷಪಾತ ಮಾಡುತ್ತಿದ್ದೀರೆಂದು ನಿಂದಿಸಲು ಆರಂಭಿಸುತ್ತದೆ ವ್ರಿಹಿಗ.

ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರರಿಯದೆ ಯೆಲ್ಲರನು ನೀ
ವಿಲ್ಲಿ ನುಡಿವ ಯುಪೇಕ್ಷೆಯುಂಟೇ ಸಾಕದಂತಿರಲಿ
ನೆಲ್ಲು ನಾನಿರೆ ಗೋಧಿ ಮೊದಲಾ
ದೆಲ್ಲ ಧಾನ್ಯಗಳಿರಲುಯಿದರಲಿ
ಬಲ್ಲಿದನು ನರೆದಲೆಗನೆಂಬುದಿದಾವ ಮತವೆಂದ ೩೫

ಎಲ್ಲ ಧರ್ಮದ ಸಾರವನು=ಎಲ್ಲ ಧರ್ಮಗಳ ತತ್ವವನ್ನು ನೀವ್=ನೀವು; ಬಲ್ಲಿರಿ+ಅರಿಯಿರೆ=ತಿಳಿದಿರುವಿರಿ; ಅರಿತಿಲ್ಲವೇ; ಎಲ್ಲರನು=ನಮ್ಮೆಲ್ಲರನ್ನು; ನೀವು+ ಇಲ್ಲಿ=ಇಲ್ಲಿ ನೀವು; ನುಡಿವ ಉಪೇಕ್ಷೆಯು+ಉಂಟೆ=ಮಾತಿನಲಿ ಕಡೆಗಣಿಸುವುದು ಸರಿಯೇ; ಸಾಕು+ಅದಂತಿರಲಿ=ನಿಲ್ಲಿಸು ನಿನ್ನ ಮಾತು; ನೆಲ್ಲು ನಾನಿರೆ=ಬತ್ತ ನಾನಿಲ್ಲಿರ ಬೇಕಾದರೆ; ಗೋದಿ ಮೊದಲಾದೆಲ್ಲ ಧಾನ್ಯಗಳಿರಲು=ಗೋದಿ ಮುಂತಾದ ಧಾನ್ಯಗಳು ಇರಬೇಕಾದರೆ; ಇದರಲಿ ಬಲ್ಲಿದನು=ಇವರೆಲ್ಲರಲ್ಲೂ ಬಲಿಷ್ಠನು; ನರೆದಲೆಗನು+ ಎಂಬುದು+ಇದಾವ=ರಾಗಿ ಎಂಬುದು ಇದೆಂಥ; ಮತವೆಂದ=ಅಭಿಪ್ರಾಯ ಎಂದನು ವ್ರೀಹಿ.

“ಎಲ್ಲ ಧರ್ಮಗಳ ತಿರುಳನ್ನು ನೀವು ಚೆನ್ನಾಗಿ ಅರಿತುಕೊಂಡಿದ್ದೀರಿ. ನಮ್ಮ ಬಗ್ಗೆಯೂ ನಿಮಗೆ ಚೆನ್ನಾಗಿ ಗೊತ್ತು, ಆದರೂ ನೀವೀಗ ನಮ್ಮೆಲ್ಲರನೂ ಕಡೆಗಣಿಸಿದ್ದೀರಿ. ಬತ್ತ, ಗೋದಿ ಮೊದಲಾದ ಧಾನ್ಯಗಳೆಲ್ಲಾ ಇಲ್ಲಿರಬೇಕಾದರೆ ನಮ್ಮೆಲ್ಲರಿಗಿಂತ ರಾಗಿ ಬಲಿಷ್ಠನೆಂಬುದು ಸರಿಯೇ? ನಿಮ್ಮ ಅಭಿಪ್ರಾಯ ಉಚಿತ ವಾದುದಲ್ಲ” ಎಂದು ಬತ್ತ ಗೌತಮ ಮುನಿಯನ್ನು ಪ್ರಶ್ನಿಸಿತು.

ಗೌತಮ ಮುನಿಯ ಮೇಲೆ ಕೆರಳಿ “ನೀನು ನಿಷ್ಪಕ್ಷಪಾತನೆಂದು ತಿಳಿದಿದ್ದೆ; ಆದರೆ ಇಂದೇಕೆ ಹೀಗೆ ತೀರ್ಮಾನ ಕೊಡುತ್ತಿರುವಿರಿ; ಬತ್ತ ಗೋದಿ ಮೊದಲಾದ ಧಾನ್ಯಗಳನೆಲ್ಲ ಕಡೆಗಣಿಸಿ ರಾಗಿಯನ್ನು ಶ್ರೇಷ್ಠವೆಂದು ಪರಿಗಣಿಸುವುದು ಸರಿಯೇ? ಎಲ್ಲ ಧರ್ಮಗಳ ಸಾರವನ್ನು ತಿಳಿದ ನೀವೇ ಹೀಗೆ ತಪ್ಪು ಅಭಿಪ್ರಾಯವನ್ನು ನೀಡುತ್ತಿದ್ದೀರೆಂದು ನಾನು ಭಾವಿಸಿರಲಿಲ್ಲ”ವೆಂದೆನ್ನುತ್ತದೆ ವ್ರಿಹಿಗ.

ಏನೆಲವೊ ನರೆದಲೆಗ ನೀನು ಸ
ಮಾನನೇ ಯೆನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕೀಪತಿಯ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಠ ಸುಡು ಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ ೩೬

ಏನೆಲವೋ ನರೆದಲೆಗ=ಎಲವೊ ರಾಗಿಯೇ; ನೀನು ಸಮಾನನೇ; ಎನಗೆ+ಇಲ್ಲಿ=ನನಗೆ ಇಲ್ಲಿ; ನಮ್ಮನು ದಾನವ+ಹಂತಕ=ನಮ್ಮನು ದಾನವರನ್ನು ಕೊಂದ ಶ್ರೀರಾಮ; ಬಲ್ಲನು+ಇಬ್ಬರ=ಅರಿತಿರುವನು ಇಬ್ಬರ; ಹೆಚ್ಚು ಕುಂದುಗಳ =ಗುಣ ಅವಗುಣಗಳ; ಜಾನಕೀಪತಿ=ಸೀತಾಪತಿ; ಸನಿಹದಲಿ=ಎದುರು; ಕುಲಹೀನ ನೀನು=ಕೀಳು ಕುಲದವ ನೀನು; ಪ್ರತಿಷ್ಠಸುಡು=ಅಹಂಕಾರವನು ಸುಟ್ಟು ಹಾಕು; ಮತಿಹೀನ=ಬುದ್ಧಿಹೀನ; ನೀನು+ಎಂದೆನುತ=ನೀನು ಎನುತ; ಖತಿಯಲಿ=ಕೋಪದಲಿ; ಬೈದು ಭಂಗಿಸಿದ=ಬೈದು ಅವಮಾನಿಸಿದ ಬತ್ತ.

ಎಲವೋ ರಾಗಿಯೇ ನೀನು ನಮಗಿಲ್ಲಿ ಸರಿಸಮಾನನೇ ನಮ್ಮಿಬ್ಬರ ಕುಂದು ಕೊರತೆಗಳ ಬಗ್ಗೆ ಶ್ರೀರಾಮ ಚೆನ್ನಾಗಿ ಬಲ್ಲ ಜಾನಕೀ ಪತಿಯ ಹತ್ತಿರ ಕೀಳು ಕುಲದವನಾದ ನೀನು, ನಿನ್ನ ಪ್ರತಿಷ್ಠೆಯನ್ನು ತೊಲಗಿಸು, ಬುದ್ಧಿಹೀನನು ನೀನು ಎಂದು ಕಡುಕೋಪದಿಂದ ಬತ್ತ ಬೈದು ಅವಮಾನಿಸಿದನು.

ರಾಗಿ ತನ್ನನ್ನು ತಾನು ಶ್ರೇಷ್ಠವೆಂದು ಹೇಳಿಕೊಳ್ಳುವುದಿಲ್ಲ, ರಾಗಿ ಶ್ರೇಷ್ಠವೆಂದು ಹೇಳಿದವರು ಗೌತಮ ಮುನಿ, ಗೌತಮಮುನಿಯನ್ನು ಬೈಯುವು ದಾಗಲೀ, ಪ್ರಶ್ನಿಸುವುದಾಗಲೀ ಸಾಧ್ಯವಾಗದ ಕಾರಣ ವ್ರೀಹಿಗನು ರಾಗಿಯನ್ನು ಹೀನಾ ಮಾನ ಬೈಯುವುದನ್ನು ಕಾಣುತ್ತೇವೆ. ಬಡವರ ಬದುಕು ಹೀಗೆಯೇ ತಪ್ಪಿತಸ್ಥ ರಲ್ಲದಿದರೂ ಬೈಸಿಕೊಳ್ಳಲು ಸಿದ್ಧರಿರಬೇಕು.

ಲೋಕದಲಧಿಕ ಭೋಜನವಿದೆಂ
ದಾಕೆವಾಳರು ಬುಧರು ಜರೆದು ನಿ
ರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ

ನಾಕನಿಳೆಯರು ಸಾಕ್ಷಿ ನಿನ್ನ ವಿ
ವೇಕಿಗಳು ಮೆಚ್ಚುವರೆ ಬಾಹಿರ
ಸಾಕು ನಡೆ ನೀನಾವ ಮಾನ್ಯನು ಕಡೆಗೆ ತೊಲಗೆಂದ ೩೭

ಲೋಕದಲಿ+ಅಧಿಕ=ಜಗತ್ತಿನಲ್ಲಿ ಅಗ್ಗದ; ಭೋಜನವು+ಇದೆಂದು=ಊಟ ಇದೆಂದು; ಆಕೆವಾಳರು=ಶೂರರು; ಬುಧರು= ಜ್ಞಾನಿಗಳು; ಜರೆದು=ನಿಂದಿಸಿ; ನಿರಾಕರಿಸಿ=ತ್ಯಜಿಸಿ; ಬಿಡಲ್+ಅಂತು=ಬಿಡಲು ಆಗ; ನೀ; ಶೂದ್ರಾನ್ನ+ಆದೆ+ ಅಲ=ಶೂದ್ರರಊಟವಾದೆ;ನಾಕನಿಳಯರು=ಸ್ವರ್ಗವಾಸಿಗಳ\ದೇವತೆಗಳ; ಸಾಕ್ಷಿ=ಸಾಕ್ಷಿಯಾಗಿ; ನಿನ್ನ ವೀವೇಕಿಗಳು=ನಿನ್ನನ್ನು ಜ್ಞಾನಿಗಳು; ಮೆಚ್ಚುವರೆ=ಮೆಚ್ಚುತ್ತಾರೆಯೇ? ಬಾಹಿರ=ಬಹಿಷ್ಕೃತನೆ; ಸಾಕು ನಡೆ=ಇಲ್ಲಿಂದ ತೊಲಗು; ನೀನಾವ=ನೀನು ಯಾವ; ಮಾನ್ಯನು=ಗೌರವಸ್ಥನು; ಕಡೆಗೆ ತೊಲಗೆಂದ=ಪಕ್ಕಕ್ಕೆ ಹೋಗು ಎಂದ.

“ಜಗತ್ತಿನಲಿ ಅಗ್ಗದ ಭೋಜನ ಇದೆಂದು ಪರಾಕ್ರಮಿಗಳು, ಜ್ಞಾನಿಗಳು ತಿರಸ್ಕರಿಸಿ ತ್ಯಜಿಸಿದಾಗ ನೀನು ಶೂದ್ರರ ಆಹಾರವಾದೆ, ದೇವರ ಸಾಕ್ಷಿಯಾಗಿ ವಿವೇಕಿಗಳು ನಿನ್ನನ್ನು ಮೆಚ್ಚುವುದಿಲ್ಲ ಇವರೆಲ್ಲರಿಂದ ಬಹಿಷ್ಕರಿಸಲ್ಪಟ್ಟ ಹೀನ ನೀನು, ನಿನ್ನನ್ನು ಯಾರೂ ಇಲ್ಲಿ ಗೌರವಿಸುವುದಿಲ್ಲ. ಇಲ್ಲಿಂದ ತೊಲಗು” ಎಂದು ವ್ರೀಹಿಗ ನರೆದಲೆಗನಿಗೆ ಬಯ್ಯುತ್ತಾನೆ.

ರಾಗಿಯು ಎಲ್ಲಾ ಕಡೆ ಹೆಚ್ಚಾಗಿ ಬೆಳೆಯುವುದರಿಂದ ಹಾಗೂ ಅದರ ಭಕ್ಷ್ಯಗಳು ಎಲ್ಲಾ ಕಡೆ ದೊರೆಯುವುದರಿಂದ(ಕಡಿಮೆ ಬೆಲೆಗೆ) ಶ್ರೀಮಂತರು, ಅಹಂಕಾರಿಗಳು ಅದನ್ನು ನಿರ್ಲಕ್ಷಿಸುತ್ತಾರೆ. ನಾಲಗೆ ರುಚಿಗೆ ಬಿದ್ದು ಆರೋಗ್ಯ ಹಾಳಾದಾಗ ರಾಗಿಯ ಪ್ರಾಧಾನ್ಯತೆ ತಿಳಿಯುತ್ತದೆ, ಆದರೆ ಅಷ್ಟರಲ್ಲಾಗಲೇ ಕಾಲ ಮೀರಿರುತ್ತದೆ. ಹಾಗಾಗಿ ಶ್ರೀಮಂತರು ಅದನ್ನು ನಿರ್ಲಕ್ಷಿಸುವುದರಿಂದ ಬತ್ತ ಮೇಲಿನಂತೆ, ಮಾತನಾಡಿ ರಾಗಿಯನ್ನು ಬಹಿಷ್ಕೃತನು ಎಂದು ಬೈಯ್ಯುತ್ತದೆ. ಆದರೆ ಹೆಚ್ಚಿನ ಜನರು ರಾಗಿಯನ್ನೇ ಉಪಯೋಗಿಸುತ್ತಿರುವುದು ಇಲ್ಲಿನ ವಿಶೇಷ.

ಕ್ಷಿತಿಯಮರರುಪನಯನದಲಿ ಸು
ವ್ರತ ಸುಭೋಜನ ಪರಮ ಮಂತ್ರಾ
ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ

ಕ್ರತುಗಳೆಡೆಯೊಳಗರಮನೆಯಲಿ
ಪ್ರತಿದಿನವು ರಂಜಿಸುತ ದೇವರಿ
ಗತಿಶಯದ ನೈವೇದ್ಯ ತಾನಹೆನೆಂದನಾ ವ್ರಿಹಿಗ ೩೮

ಕ್ಷಿತಿಯ+ಅಮರರು=ಭೂಲೋಕದ ದೇವತೆಗಳಾದಬ್ರಾಹ್ಮಣರು; ಉಪನಯನದಲಿ=ಮುಂಜಿ/ಬ್ರಹ್ಮೋಪದೇಶದ ಸಂದರ್ಭದಲ್ಲಿ; ಸುವ್ರತ=ಒಳ್ಳೆಯ ವ್ರತ; ಸುಭೋಜನ=ಒಳ್ಳೆಯ ಭೋಜನ; ಪರಮ ಮಂತ್ರಾಕ್ಷತೆಗಳಲಿ=ಶ್ರೇಷ್ಠವಾದ ಮಂತ್ರಾಕ್ಷತೆಗೆ; ಶುಭ ಶೋಭನದಲಿ+ಆರತಿಗೆ=ಮಂಗಳಕರ ಸಮಾರಂಭಗಳಲ್ಲಿ ಆರತಿ ಎತ್ತುವ ಸಂದರ್ಭದಲ್ಲಿ; ಹಿರಿಯರಲಿ=ದೊಡ್ಡ ವ್ಯಕ್ತಿಗಳಲ್ಲಿ; ಕ್ರತುಗಳೆಡೆಯೊಳಗೆ+ಅರಮನೆಯಲಿ =ಯಜ್ಞಯಾಗಗಳಲಿ; ಅರಮನೆಯಲ್ಲಿ; ಪ್ರತಿದಿನವು=ಪ್ರತಿನಿತ್ಯವೂ; ರಂಜಿಸುತ= ಸಂತೋಷದಿಂದ; ದೇವರಿಗೆ ಅತಿಶಯದ=ದೇವರಿಗೆ ವಿಶೇಷವಾದ; ನೈವೇದ್ಯ= ಪ್ರಸಾದ; ತಾನಹೆನು+ಎಂದನು+ಆ=ತಾನಾಗಿರುವೆನೆಂದನು ಆ; ವ್ರಿಹಿಗ= ನೆಲ್ಲು.

ಭೂಲೋಕದ ಅಮರರಾದ ಬ್ರಾಹ್ಮಣರು ಉಪನಯನದ ಸಂದರ್ಭದಲ್ಲಿ, ವ್ರತ, ಪೂಜೆ, ಒಳ್ಳೆಯ ಭೋಜನ, ಮಂತ್ರಾಕ್ಷತೆ, ಮಂಗಳ ಕಾರ್ಯಗಳಲ್ಲಿ ಸೇಸೆಯ ಅಕ್ಕಿಯಾಗಿ, ಆರತಿ ತಟ್ಟೆಯಲಿ, ಹಿರಿಯರ ಯಾಗ ಯಜ್ಞಗಳಲ್ಲಿ ಅರಮನೆಯಲ್ಲಿ ಪ್ರತಿನಿತ್ಯವೂ ಸಂತೋಷದಿಂದ ನನ್ನನ್ನು ಬಳಸುವರು ದೇವರಿಗೆ ವಿಶೇಷವಾದ ನೈವೇದ್ಯ ನಾನಾಗುವೆನೆಂದನು ವ್ರಿಹಿಗ.

ಬತ್ತವನ್ನು ಯಾವ ಯಾವ ವಿಶೇಷ ಸಂದರ್ಭಗಳಲ್ಲಿ ಬಳಸುತ್ತಾರೆಂಬುದನ್ನು ಪಟ್ಟಿಯ ರೂಪದಲ್ಲಿ ಕನಕದಾಸರು ಓದುಗರ ಮುಂದಿಡುತ್ತಾರೆ. ಇಲ್ಲಿ ಆರಂಭಗೊಂಡ ಪಟ್ಟಿ ಒಟ್ಟು ಆರು ಪದ್ಯಗಳಲ್ಲಿ ಅನಾವರಣಗೊಂಡಿದೆ. ತುಂಬಾ ಅರ್ಥಪೂರ್ಣವಾಗಿ ಬತ್ತವನ್ನು ಬಳಸುವ ಸನ್ನಿವೇಶಗಳನ್ನು ಪ್ರಸ್ತುತ ಪಡಿಸಿದ್ದಾನೆ ಕವಿ.

ಜನಪರಿಗೆ ಶಿಶುಗಳಿಗೆ ಬಾಂಧವ
ಜನರೆಡೆಗೆ ಬ್ರಹ್ಮರ ಸಮಾರಾ
ಧನೆಗೆ ವಿದ್ಯಾರಂಭ ಕಾಲಕೆ ಸಕಲ ಭೂಸುರರ

ಮನೆಗಳಲಿ ಹರಿದಿವಸದೌಪಾ
ಸನೆಗಳಲಿ ತಾ ಯೋಗ್ಯ ನಹುದೆಂ
ದೆನಿಸಿಕೊಂಬೆನು ನೀನಯೋಗ್ಯನು ಭ್ರಷ್ಟ ತೊಲಗೆಂದ ೩೯

ಜನಪರಿಗೆ=ರಾಜರಿಗೆ; ಶಿಶುಗಳಿಗೆ=ಮಕ್ಕಳಿಗೆ; ಬಾಂಧವ ಜನರೆಡೆಗೆ=ಬಾಂಧ ವರಿಗೆ; ಬ್ರಹ್ಮರ ಸಮಾರಾಧನೆಗೆ=ಬ್ರಾಹ್ಮಣರ ಅನ್ನ ಸಂತರ್ಪಣೆಗೆ; ವಿದ್ಯಾ ರಂಭ ಕಾಲಕ್ಕೆ=ಅಕ್ಷರಾಭ್ಯಾಸದ ಕಾಲದಲ್ಲಿ ಓಂಕಾರ ಬರೆಯಲು; ಸಕಲ ಭೂಸುರರ ಮನೆಗಳಲಿ=ಎಲ್ಲ ಬ್ರಾಹ್ಮಣರ ಮನೆಗಳಲ್ಲಿ; ಹರಿದಿವಸದ+ ಔಪಾಸನೆಗಳಲ್ಲಿ=ಹರಿಯ ಪೂಜಾ ಸೇವೆಗಳಲ್ಲಿ; ತಾ=ತಾನು; ಯೋಗ್ಯನು+ ಅಹುದು+ ಎಂದೆನಿಸಿ ಕೊಂಬೆನು =ಯೋಗ್ಯನು ಎಂದೆನಿಸಿಕೊಂಡಿದ್ದೇನೆ; ನೀನು+ಅಯೋಗ್ಯ=ನೀನು ಯೋಗ್ಯತೆ ಯಿಲ್ಲದವನು; ಭ್ರಷ್ಟನು=ಹೊರಹಾಕಲ್ಪಟ್ಟವನು; ತೊಲಗು+ಎಂದ=ಇಲ್ಲಿಂದ ಹೊರಗೆ ಹೋಗು ಎಂದ ಬತ್ತ.

ರಾಜರಿಗೆ, ಮಕ್ಕಳಿಗೆ, ಬಂಧು ಜನರಿಗೆ; ಬ್ರಾಹ್ಮಣರ ಅನ್ನಸಂತರ್ಪಣೆಗೆ, ಅಕ್ಷರಭ್ಯಾಸದ ಕಾಲಕ್ಕೆ, ಎಲ್ಲ ಬ್ರಾಹ್ಮಣರ ಮನೆಗಳಲ್ಲಿ, ಹರಿಯ ಪೂಜಾ ಕೈಂಕರ್ಯಗಳಲ್ಲಿ ತನಗೆ ಸ್ಥಾನವಿದೆ. ಹಾಗಾಗಿ ನಾನು ಯೋಗ್ಯನೆಂದೆನಿಸಿ ಕೊಂಡಿದ್ದೇನೆಂದು ನೀನು ಅಯೋಗ್ಯನು ಬಹಿಷ್ಕೃತನು ಇಲ್ಲಿಂದ ಮೊದಲು ತೊಲಗು ಎಂದು ಬತ್ತ ರಾಗಿಗೆ ಬೈದ.

ಬತ್ತ ಆ ಕಾಲಕ್ಕೆ ವಿರಳವಾದ ಧಾನ್ಯವಾಗಿದ್ದು ಶ್ರೀ ಸಾಮಾನ್ಯರಿಗೆ ದೊರಕುತ್ತಿರಲಿಲ್ಲ. ರಾಜರ, ಶ್ರೀಮಂತರ ಹಾಗೂ ಮೇಲ್ವರ್ಗದವರ ಮನೆಗಳಲ್ಲಿ ಹಾಗೂ ವೈಭವಯುತ ಸಮಾರಂಭಗಳಲ್ಲಿ ಮಾತ್ರ ಅದನ್ನು ಬಳಸುತ್ತಿದ್ದರೆಂಬುದು ಈ ಪದ್ಯಗಳಿಂದ ತಿಳಿದುಬರುತ್ತದೆ. ಬತ್ತವು ತನ್ನ ಸ್ಥಾನ ಈ ಸಮಾಜದಲ್ಲಿ ಎಂಥದೆಂಬುದನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ.

ಹೊಸ ಮನೆಯ ಪುಣ್ಯಾರ್ಚನೆಗೆ ಮಿಗೆ
ಯೆಸೆವ ಮದುಮಕ್ಕಳಿಗೆ ಸೇಸೆಗೆ
ವಸುಮತೀಶರ ಗರುಡಿಯಲಿ ಶಸ್ತ್ರಾಸ್ತ್ರದರ್ಚನೆಗೆ
ಎಸೆವ ವಿಪ್ರರ ಫಾಲದಲಿ ರಂ

ಜಿಸುವ ಗಂಧಾಕ್ಷತೆಯಹೆನು ಭಾ
ವಿಸಲು ಲೋಕದೊಳಾರು ಸರಿಯಿಂತೆಂದನಾ ವ್ರಿಹಿಗ ೪೦

ಹೊಸ ಮನೆಯ ಪುಣ್ಯಾರ್ಚನೆಗೆ=ಗೃಹ ಪ್ರವೇಶದ ಪೂಜೆಗೆ ಹಾಗೂ ಆತಿಥ್ಯಕ್ಕೆ; ಮಿಗೆ+ಎಸೆವ=ವಿಶೇಷವಾಗಿ ಶೋಭಿಸುವ; ಮದು ಮಕ್ಕಳಿಗೆ=ವಧೂವರರ; ಸೇಸೆಗೆ=ಮಂತ್ರಾಕ್ಷತೆಗೆ; ವಸುಮತೀಶರ=ರಾಜರ; ಗರುಡಿಯಲಿ=ವ್ಯಾಯಾಮ ಶಾಲೆ ಯಲ್ಲಿ; ಶಸ್ತ್ರಾಸ್ತ್ರದ+ಅರ್ಚನೆಗೆ=ಆಯುಧಗಳ ಪೂಜಿಸಲು; ಎಸೆವ= ಶೋಭಿಸುವ; ವಿಪ್ರರ=ಬ್ರಾಹ್ಮಣರ; ಫಾಲದಲಿ=ಹಣೆಯಲಿ; ರಂಜಿಸುವ=ಪ್ರಕಾಶಿಸುವ; ಗಂಧಾಕ್ಷತೆ ಯಹೆನು=ಗಂಧಾಕ್ಷತೆಯಾಗಿದ್ದೇನೆ. ಭಾವಿಸಲು=ಯೋಚಿಸಿ ನೋಡಿದರೆ; ಲೋಕ ದೊಳು+ ಆರು ಸರಿ=ಲೋಕದಲ್ಲಿ ಯಾರು ಸರಿ; ಇಂತೆಂದನು=ಹೀಗೆ ಹೇಳಿದನು; ಆ ವ್ರಿಹಿಗ=ಆ ಬತ್ತ.

"ಹೊಸ ಮನೆಯ ಪೂಜಾ ಕಾರ್ಯ ಹಾಗೂ ಜನರ ಆತಿಥ್ಯಕ್ಕೆ, ವಿಶೇಷವಾಗಿ ಶೋಭಿಸುವ ವಧೂವರರಿಗೆ ಮಂತ್ರಾಕ್ಷತೆಗೆ, ರಾಜರ ವ್ಯಾಯಾಮ ಶಾಲೆಗಳಲ್ಲಿ, ರಾಜರ ಆಯುಧಗಳ ಪೂಜಾರ್ಚನೆಗೆ, ಬ್ರಾಹ್ಮಣರ ಹಣೆಯ ಗಂಧಾಕ್ಷತೆಗೆ ಇಂಥ ಪುಣ್ಯ ಕಾರ್ಯಗಳಲ್ಲಿ ನನ್ನನ್ನು ಉಪಯೋಗಿಸುತ್ತಾರೆ. ಸ್ವಲ್ಪ ಯೋಚಿಸಿ ನೋಡು ಈ ಲೋಕದಲ್ಲಿ ಯಾರು ಮಾನ್ಯರು" ಎಂದು ಬತ್ತ ರಾಗಿಗೆ ಹೇಳಿದ.

ಗೃಹ ಪ್ರವೇಶ, ಮದುವೆ ಸಮಾರಂಭ, ಗರುಡಿ ಮನೆಗಳಲ್ಲಿ, ಶಸ್ತ್ರಾಸ್ತ್ರದ ಪೂಜೆ, ಬ್ರಾಹ್ಮಣರ ಹಣೆಯ ಗಂಧಾಕ್ಷತೆ ಇಂಥವು ವಿಶೇಷ ಸಂದರ್ಭಗಳೆಂದು ಬತ್ತ ತನ್ನ ಮಹಿಮೆಯನ್ನು ವ್ಯಕ್ತಪಡಿಸುತ್ತದೆ. ಸಣ್ಣಪುಟ್ಟ ಸನ್ನಿವೇಶ, ಸಂದರ್ಭಗಳನ್ನು ಬಿಡದೇ ಕವಿ ಕನಕದಾಸರು ವಿಸ್ತೃತವಾಗಿ ದಾಖಲಿಸಿ ಅಕ್ಕಿ ಮತ್ತು ರಾಗಿಯ ನಡುವಿನ ವಾಗ್ವಾದವನ್ನು ಅವುಗಳ ನಡುವಿನ ಸ್ಪರ್ಧೆಯನ್ನು ರೋಚಕಗೊಳಿಸಿದ್ದಾರೆ.

ಧರಣಿಯಮರರು ಮಂತ್ರ ತಂತ್ರೋ
ಚ್ಚರಣೆಯಲಿ ಹಸ್ತಾಂಬುಜದಿ ಮಿಗೆ
ಹರಸಿ ಕೊಡಲಕ್ಷತೆಯ ಮಂಡೆಯೊಳಾಂತ ಮಹಿಮರಿಗೆ
ದುರಿತ ದುಃಖ ವಿನಾಶ ಮಂಗಳ

ಕರವಹುದು ತಾನೀವೆ ಸಂತತ
ಸಿರಿಯ ಸಂಪತ್ತಾಯುವನು ಕೇಳೆಂದನಾ ವ್ರಿಹಿಗ ೪೧

ಧರಣಿಯ+ಅಮರರು=ಭೂಲೋಕದ ಸುರರಾದ ಬ್ರಾಹ್ಮಣರು; ಮಂತ್ರ ತಂತ್ರ+ಉಚ್ಚಾರಣೆಯಲಿ=ಮಂತ್ರೋಚ್ಚಾರಣೆಯ ಸಂದರ್ಭದಲ್ಲಿ; ಹಸ್ತ+ಅಂಬುಜದಿ= ಕೈ ಎಂಬ ಕಮಲದಿ; ಮಿಗೆ ಹರಸಿ=ವಿಶೇಷವಾಗಿ ಆಶೀರ್ವದಿಸಿ; ಕೊಡಲು+ ಅಕ್ಷತೆಯ=ಅಕ್ಷತೆಯನ್ನು ಹಾಕಲಾಗಿ; ಮಂಡೆಯೊಳು+ಆಂತ=ತಲೆಯಲ್ಲಿ ಅದನ್ನು ಧರಿಸಿದ; ಮಹಿಮರಿಗೆ=ಮಹಾಪುರುಷರಿಗೆ; ದುರಿತ ದುಃಖ=ಹೊಂದಿದ ಪಾಪ; ವಿನಾಶ=ನಿವಾರಣೆಯಾಗಿ; ಮಂಗಳಕರವಹುದು=ಶುಭವಾಗುವುದು; ತಾನು+ ಈವೆ= ನಾನುಕೊಡುವೆ; ಸಂತತ ಸಿರಿಯ=ಶಾಶ್ವತ ಸಿರಿಯನ್ನು; ಸಂಪತ್ತು+ಆಯುವನು =ಸಂಪತ್ತು ಮತ್ತು ಆಯುಸ್ಸನ್ನು; ಕೇಳೆಂದನಾ=ಕೇಳಿಸಿಕೋ ಎಂದನು; ವ್ರಿಹಿಗ=ಬತ್ತ.

"ಭೂಲೋಕದ ಬ್ರಾಹ್ಮಣರು ಮಂತ್ರ-ತಂತ್ರವನ್ನು ಉಚ್ಚರಿಸಿ ತಮ್ಮ ಕರಕಮಲದಿಂದ ವಿಶೇಷವಾಗಿ ಆಶೀರ್ವದಿಸಿ ಮಂತ್ರಾಕ್ಷತೆಯನ್ನು ಹಾಕಲು, ಆಶೀರ್ವದಿಸಿಕೊಂಡ ಮಹಾಪುರುಷರು ತಾವು ಹೊಂದಿದ ಪಾಪದಿಂದ ಮುಕ್ತರಾಗಿ ದುಃಖ ನಿವಾರಣೆಗೊಂಡು; ಸಂತೋಷಗೊಳ್ಳಲು, ನಾನು ಅವರಿಗೆ ಸಕಲ ಸಿರಿ; ಸಂಪತ್ತು; ಆಯುಸ್ಸನ್ನು ಶಾಶ್ವತವಾಗಿ ನೀಡುವೆನು ಕೇಳು" ಎಂದು ಬತ್ತ ರಾಗಿಗೆ ಹೇಳಿದನು.

ಮಂತ್ರಾಕ್ಷತೆ ಅಕ್ಕಿಯಿಂದ ಏನೆಲ್ಲಾ ಮಾಡಬಹುದು, ಪಾಪಗಳ ನಿವಾರಣೆ, ಸಕಲಸಿರಿ ಸಂಪತ್ತು, ಆಯುಸ್ಸು ಎಲ್ಲವನ್ನೂ ಒದಗಿಸಿ ಕೊಡುವ ಶಕ್ತಿ ಅದಕ್ಕಿದೆಯೆಂದು ವ್ರಿಹಿಗ ತನ್ನ ಬಗ್ಗೆ ತಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ.

ಪರಿಮಳದ ಚಂದನದ ತರುವಿಗೆ
ಸರಿಯೆ ಒಣಗಿದ ಕಾಷ್ಠ ಗೋವದು
ಕರೆದ ಹಾಲಿಗೆ ಕುರಿಯ ಹಾಲಂತರವೆ ಭಾವಿಸಲು
ಪರಮ ಸಾಹಸಿ ವೀರ ಹನುಮಗೆ
ಮರದ ಮೇಲಣ ಕಪಿಯು ತಾನಂ
ತರವೆ ಘಡ ನೀನೆನಗೆ ಸರಿಯೇ ಭ್ರಷ್ಟ ತೊಲಗೆಂದ ೪೨

ಪರಿಮಳದ=ಸುವಾಸನೆಯ; ಚಂದನದ ತರುವಿಗೆ=ಗಂಧದ ಮರಕ್ಕೆ; ಸರಿಯೆ=ಸರಿಸಾಟಿಯೆ; ಒಣಗಿದ ಕಾಷ್ಠ=ಒಣಗಿದ ಕಟ್ಟಿಗೆ; ಗೋವದು=ಹಸುವು; ಕರೆದ ಹಾಲಿಗೆ=ಕರೆಯುವ ಹಾಲಿಗೆ; ಕುರಿಯ ಹಾಲು+ಅಂತರವೆ=ಕುರಿಯ ಹಾಲು ಸಮಾನವೇ; ಭಾವಿಸಲು=ಗಮನಿಸಿ ನೋಡಿದರೆ; ಪರಮ ಸಾಹಸಿ=ಅತ್ಯಂತ ಶೂರನಾದ; ವೀರ ಹನುಮಗೆ=ವೀರನಾದ ಹನುಮಂತನಿಗೆ; ಮರದ ಮೇಲಣ ಕಪಿಯು=ಮರದ ಮೇಲಿರುವ ಕಪಿಯು; ತಾನು+ಅಂತರವೆ=ತಾನು ಸಮಾನವೇ; ಫಡ=ಎಲವೋ; ನೀನು+ಎನಗೆ=ನೀನು ನನಗೆ; ಸರಿಯೇ=ಸಮಾನನೇ; ಭ್ರಷ್ಟ=ಬಹಿಷ್ಕೃತನೇ; ತೊಲಗೆಂದ=ಇಲ್ಲಿಂದ ಹೋಗು ಎಂದ ವ್ರಿಹಿಗ.

"ಪರಿಮಳ ಹೊಂದಿದ ಗಂಧದ ಮರಕ್ಕೆ ಒಣಗಿದ ಸೌದೆ ಸಮಾನವೇ? ಹಸುವಿನ ಹಾಲಿಗೆ ಕುರಿಯ ಹಾಲು ಸರಿಸಾಟಿಯೇ? ಯೋಚಿಸಿ ನೋಡಿದರೆ ಸಾಹಸಿಯಾದ ವೀರ ಹನುಮನಿಗೆ ಮರದ ಮೇಲಿನ ಕೋತಿಯು ಸಾಟಿಯಾಗು ವುದೇ, ಹಾಗೆಯೇ ನೀನು ನನಗೆ ಸರಿಸಾಟಿಯೇ, ಭ್ರಷ್ಟನೇ ಮೊದಲು ಇಲ್ಲಿಂದ ತೊಲಗು" ಎಂದು ವ್ರಿಹಿಗನು ನರೆದಲೆಗನಿಗೆ ಹೇಳಿದ.

ವ್ರಿಹಿಗ ತನ್ನನ್ನು ತಾನು ತುಂಬಾ ಪ್ರಯೋಜನಕ್ಕೆ ಬರುವ ಹಾಗೂ ಶ್ರೇಷ್ಠವಾದ ಗಂಧದ ಮರ, ಹಸುವಿನ ಹಾಲು, ವೀರ ಹನುಮನಿಗೆ ಹೋಲಿಸಿ ಕೊಂಡು ರಾಗಿಯನ್ನು ಒಣಗಿದ ಕಟ್ಟಿಗೆ, ಕುರಿಯ ಹಾಲು, ಮರದ ಕೋತಿಗೆ ಹೋಲಿಸಿ "ನೀನು ಯಾವುದೇ ರೀತಿಯಲ್ಲೂ ನನಗೆ ಸಮಾನನಲ್ಲ; ಹಾಗಾಗಿ ಮೊದಲು ಇಲ್ಲಿಂದ ತೊಲಗು ಭ್ರಷ್ಟ" ಎಂದು ಬೈಯುತ್ತದೆ.

ಸುರನದಿಗೆ ತಾ ಸರಿಯೆ ಕಾಡೊಳು
ಹರಿವ ಹಳ್ಳದ ನೀರು ಗರುಡನ
ಮರಿಗೆ ಹದ್ದಂತರವೆ ಹಂಸಗೆ ಬಕನು ಹೋಲುವುದೆ
ಸರಸ ಮರಿ ಕೋಗಿಲೆಗೆ ವಾಯಸ
ನಣಕಿಸುವ ತೆರನಾಯ್ತು ಸಾಕಿ
ನ್ನರೆದಲೆಗ ನೀನಾವ ಮಾನ್ಯನು ಕಡೆಗೆ ತೊಲಗೆಂದ ೪೩

ಸುರ ನದಿಗೆ=ದೇವಗಂಗೆಗೆ; ತಾ ಸರಿಯೆ=ತಾನು ಸಾಟಿಯೇ ಕಾಡೊಳು=ಕಾಡಿನಲ್ಲಿ; ಹರಿವ ಹಳ್ಳದ ನೀರು=ಹರಿಯುವ ಹಳ್ಳದ ನೀರು; ಗರುಡನ ಮರಿಗೆ=ವಿಷ್ಣುವಿನ ವಾಹನವಾದ ಗರುಡ ಪಕ್ಷಿಯ ಮರಿಗೆ; ಹದ್ದು ಅಂತರವೆ=ಹದ್ದು ಸರಿಸಾಟಿಯೆ; ಹಂಸಗೆ ಬಕನು=ಹಂಸ ಪಕ್ಷಿಗೆ ಬಕ ಪಕ್ಷಿಯು; ಹೋಲುವುದೆ =ಹೋಲಿಕೆಯಾಗುತ್ತದೆಯೇ; ಸರಸ ಮರಿ ಕೋಗಿಲೆಗೆ=ಚುರುಕಾದ ಕೋಗಿಲೆಯ ಮರಿಯನ್ನು; ವಾಯಸನು+ಅಣಕಿಸುವ=ಕಾಗೆಯು ಅಣಕಿಸುವ; ತೆರನಾಯ್ತು=ರೀತಿಯಾಯ್ತು; ಸಾಕು+ಇನ್ನು+ನರೆದಲೆಗ=ಸಾಕು ರಾಗಿಯೇ; ನೀನಾವ= ನೀನು ಯಾವ; ಮಾನ್ಯನು=ಶ್ರೇಷ್ಠನು; ಕಡೆಗೆ ತೊಲಗೆಂದ=ಪಕ್ಕಕ್ಕೆ ಹೋಗು ಎಂದಿತು ಬತ್ತ.

ದೇವಗಂಗೆಗೆ ಕಾಡಿನಲ್ಲಿ ಹರಿಯುವ ತೊರೆಯ ನೀರು ಸರಿಸಾಟಿಯೇ? ಗರುಡ ಪಕ್ಷಿಯ ಮರಿಗೆ ಹದ್ದು ಸಾಟಿಯೇ? ಹಂಸ ಪಕ್ಷಿಗೆ ಬಕ ಪಕ್ಷಿ ಸಾಟಿಯೇ?, ಕೋಗಿಲೆಯ ಮರಿಯನ್ನು ಕಾಗೆ ಅಪಹಾಸ್ಯ ಮಾಡುವಂತಾಯ್ತು, ಸಾಕು ನರೆದಲೆಗನೇ ನೀನು ಯಾವ ರೀತಿಯಲ್ಲೂ ನನಗಿಂತ ಶ್ರೇಷ್ಠನಲ್ಲ ಪಕ್ಕಕ್ಕೆ ಹೋಗು ಎಂದು ಬತ್ತ ರಾಗಿಯನ್ನು ಹೀಯಾಳಿಸಿತು.

ಗೌತಮ ಮುನಿಗಳು ರಾಗಿಯನ್ನು ಸ್ವಾದಭರಿತ ಆಹಾರವೆಂದು ರಾಮನ ಸಭೆಯಲ್ಲಿ ಹೇಳಿದೇ ತಡ, ಬತ್ತಕೆ ಬಂದ ಸಿಟ್ಟು ಅಷ್ಟಿಷ್ಟಲ್ಲ. ರಾಗಿಯನ್ನು ನಾನಾ ಬಗೆಯಾಗಿ ಎಲ್ಲರೆದುರು ಜರಿದು ನಿಂದಿಸುತ್ತಿದೆ. ಮತ್ತೆ ಮತ್ತೆ ನೀನು ಎಲ್ಲರಿಂದ ಬಹಿಷ್ಕರಿಸಲ್ಪಟ್ಟವನು ಸಭೆಯಲ್ಲಿ ನಿಲ್ಲಲು ಅರ್ಹನಲ್ಲ. ಇಲ್ಲಿಂದ ತೊಲಗೆಂದು ಬೈಯುತ್ತದೆ. ಇದೆಲ್ಲವನ್ನು ಕೇಳಿ ಕೋಪಗೊಂಡ ರಾಗಿ ಮುಂದಿನಂತೆ ತನ್ನ ಅಭಿಪ್ರಾಯವನ್ನು ತಿಳಿಸುತ್ತದೆ. ಇಲ್ಲಿಂದ ರಾಗಿಯ ಸಂಭಾಷಣೆ ಆರಂಭವಾಗುತ್ತದೆ.

ನುಡಿಯ ಕೇಳುತ ಕನಲಿ ಕಂಗಳು
ಕಿಡಿಮಸಗಿ ಖತಿಗೊಂಡು ನುಡಿದನು
ಸಿಡಿಲ ಗರ್ಜನೆಯಂತೆ ಸಭೆಯಲಿ ಜರೆದನಾ ವ್ರಿಹಿಯ
ನುಡಿಗೆ ಹೇಸದ ಭಂಡ ನಿನ್ನೊಳು
ಕೊಡುವರೇ ಮಾರುತ್ತರವ ಕಡು
ಜಡನಲಾ ನಿನ್ನೊಡನೆ ಮಾತೇಕೆಂದ ನರೆದಲೆಗ ೪೪

ನುಡಿಯ ಕೇಳುತ=ಮಾತನ್ನು ಕೇಳಿ; ಕನಲಿ=ಕೋಪಗೊಂಡು; ಕಂಗಳು=ಕಣ್ಣುಗಳು; ಕಿಡಿ ಮಸಗಿ=ಬೆಂಕಿಯಂತೆ ಕೆಂಪಾಗಿ ಕಿಡಿ ಹರಡಿ; ಖತಿಗೊಂಡು ನುಡಿದನು=ಕೋಪಗೊಂಡು ಹೇಳಿದನು; ಸಿಡಿಲ ಗರ್ಜನೆಯಂತೆ=ಸಿಡಿಲಿನ ಅಬ್ಬರದಂತೆ; ಸಭೆಯಲಿ ಜರೆದನು=ಸಭೆಯಲ್ಲಿ ನಿಂದಿಸಿದನು; ಆ ವ್ರಿಹಿಯ=ಆ ಬತ್ತವನ್ನು; ನುಡಿಗೆ ಹೇಸದ=ಮಾತಿಗೆ ಅಸಹ್ಯ ಪಡದ; ಭಂಡ=ಹೀನನು; ನಿನ್ನೊಳು ಕೊಡುವರೇ ಮಾರುತ್ತರವ=ನಿನ್ನಂಥವರಿಗೆ ಮಾರುತ್ತರ ಕೊಡುತ್ತಾರೆಯೇ?; ಕಡು ಜಡನಲಾ=ಭಾವನಾರಹಿತನು; ನಿನ್ನೊಡನೆ ಮಾತೇಕೆ+ಎಂದ=ನಿನ್ನಂಥ ಅಯೋಗ್ಯನ ಜೊತೆಗೆ ಮಾತೇನು? ಎಂದನು; ನರೆದಲೆಗ=ರಾಗಿ.

ಬತ್ತದ ಮಾತುಗಳನ್ನು ಕೇಳಿ, ಕೋಪದಿಂದ ಕಣ್ಣುಗಳು ಕೆಂಡದಂತಾಗಿ ಸಿಡಿಲಿನಂತೆ ಅಬ್ಬರಿಸಿ ಕೆರಳಿ ನುಡಿದ ನರೆದಲೆಗ, ಸಭೆಯಲ್ಲಿ ತನ್ನನ್ನು ಅವಮಾನಿಸಿದ ಬತ್ತವನ್ನು ಕುರಿತು, “ಎಂಥ ಮಾತುಗಳನ್ನಾಡಲೂ ಹೇಸದ ಭಂಡ, ನಿನ್ನಂಥವರಿಗೆ ಪ್ರತ್ಯುತ್ತರ ಕೊಡುವರೇ? ಭಾವನಾರಹಿತನು ನೀನು, ನಿನ್ನಂಥವರೊಡನೆ ಮಾತೇಕೆ?” ಎಂದಿತು ನರೆದಲೆಗ.

ನರೆದಲೆಗನು ಬತ್ತವನ್ನು ಎದುರು ಹಾಕಿಕೊಳ್ಳುವುದಿರಲಿ, ಬೈಯುವುದಕ್ಕೂ ಇಷ್ಟಪಡುತ್ತಿಲ್ಲ, ಇಂಥ ಮೂಢರ, ಅಹಂಕಾರಿಗಳ ಜೊತೆಗೆ ಮಾತಿಗಿಳಿದರೆ ನನ್ನ ಗೌರವಕ್ಕೆ ಕುಂದು, ದುಷ್ಟರ ಸಹವಾಸ ದೂರ ಇಡು ಎಂಬಂತೆ, ಬಡವ ನೀ ಮಡಗಿದಂತಿರು ಎಂಬಂತೆ ಇಂಥವರನ್ನು ದೂರವಿಡುವುದೇ ಲೇಸೆಂದು ನಿರ್ಧರಿಸುತ್ತಾನೆ ನರೆದಲೆಗ.

ಸತ್ಯಹೀನನು ಬಡವರನು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವ ಉಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ ೪೫

ಸತ್ಯಹೀನನು=ನೀತಿ ಇಲ್ಲದವನು; ಬಡವರನು ಕಣ್+ಎತ್ತಿ ನೋಡೆ= ಬಡವರನ್ನು ಕಣ್ಣೆತ್ತಿ ನೋಡುವುದಿಲ್ಲ; ಧನ+ಆಢ್ಯರನ್ನು=ಶ್ರೀಮಂತರನ್ನು; ಬೆನ್+ಪತ್ತಿ= ಬೆನ್ನು ಹತ್ತಿ; ನಡೆವ ಅಪೇಕ್ಷೆ ನಿನ್ನದು=ಹೋಗುವ ಬಯಕೆ ನಿನ್ನದು; ಹೇಳಲೇನು+ ಅದನು=ಇದನ್ನೆಲ್ಲಾ ಹೇಳಬೇಕೆ ನಿನಗೆ; ಹೆತ್ತ ಬಾಣಂತಿಯರು ರೋಗಿಗೆ= ಬಾಣಂತಿಯರಿಗೆ ಹಾಗೂ ರೋಗಿಗಳಿಗೆ; ಪಥ್ಯ ನೀನಹೆ=ಸರಿಯಾದವನು ನೀನು; ಹೆಣದ ಬಾಯಿಗೆ ತುತ್ತು ನೀನಹೆ= ಹೆಣದ ಬಾಯಿಯ ಅಕ್ಕಿ ನೀನಾಗಿರುವೆ; ನಿನ್ನ ಜನ್ಮ ನಿರರ್ಥಕರವೆಂದ= ನಿನ್ನ ಜನ್ಮ ವ್ಯರ್ಥ ಎಂದು ರಾಗಿ ಬತ್ತಕ್ಕೆ ಹೇಳಿತು.

"ನೀತಿಯಿಲ್ಲದವನು ಬಡವರನ್ನು ಕಣ್ಣೆತ್ತಿ ನೋಡದೆ ಶ್ರೀಮಂತರನ್ನು ಮಾತ್ರ ಓಲೈಸುವವನು, ನಿನ್ನ ಬಯಕೆ ಎಂಥದೆಂಬುದನ್ನು ಬಿಡಿಸಿ ಹೇಳಬೇಕೆ? ಬಾಣಂತಿ ಯರು, ರೋಗಿಗಳು ಇಂಥವರು ಮಾತ್ರ ನಿನ್ನನ್ನು ಬಳಸುತ್ತಾರೆ. ಅಲ್ಲದೇ ಹೆಣದ ಬಾಯಿಗೂ ನಿನ್ನನ್ನು ಸುರಿಯುತ್ತಾರೆ. ಹಾಗಾಗಿ ನಿನ್ನ ಜನ್ಮ ಸಾರ್ಥಕ ವಾದುದಲ್ಲ"ವೆಂದು ರಾಗಿ ಬತ್ತವನ್ನು ಹೀಯಾಳಿಸಿತು.

ಹಿಂದಿನ ಪದ್ಯಗಳಲ್ಲಿ ಬತ್ತ ತನ್ನ ಬಗ್ಗೆ ಸಾಕಷ್ಟು ಹೊಗಳಿಕೊಂಡಿದ್ದನ್ನು ನಾವು ನೋಡಿದ್ದೇವೆ. ಆದರೆ ಈಗ ರಾಗಿಯ ಸರದಿ, "ನಿನ್ನಂಥವರಿಗೆ ಪ್ರತ್ಯುತ್ತರ ಕೊಡುವುದು ನನಗೆ ಗೌರವವಲ್ಲ." ಎಂದು ಭಾವಿಸಿದ ರಾಗಿಯು ಒಂದೊಂದೇ ಮಾತಿನಲ್ಲಿ ಬತ್ತದ ಮರ್ಯಾದೆಯನ್ನು ತೆಗೆಯುತ್ತಿದೆ. ಅದರ ಪಕ್ಷಪಾತಿತನವನ್ನು ಹಾಗೂ ಅದರ ಸೀಮಿತ ಕ್ಷೇತ್ರಗಳ ಬಗ್ಗೆ ಸವಿವರವಾಗಿ ಈ ಪದ್ಯ ಹಾಗೂ ಮುಂದಿನ ಪದ್ಯಗಳಲ್ಲಿ ತಿಳಿಸಿ ಕೊಡುತ್ತದೆ.

ಸತ್ತದಿನದಾರಭ್ಯ ಮನುಜರು
ಮತ್ತೆ ಕರ್ಮವ ಹೊತ್ತು ಪಿಂಡವ
ನಿತ್ತು ತಪ್ಪದೆ ಮತ್ತೆ ವಾಯಸಕುಲವ ಕರೆಕರೆದು
ತುತ್ತನಿಡುವರು ಎಳ್ಳು ದರ್ಭೆಗೆ
ತೆತ್ತಿಗನು ನೀನಾದೆ ಕೀರ್ತಿಯ
ಹೊತ್ತುಕೊಂಡೆ ದುರಾತ್ಮ ನಿನ್ನೊಳು ಮಾತದೇಕೆಂದ ೪೬

ಸತ್ತದಿನದ+ಆರಭ್ಯ=ಸತ್ತ ದಿನದಿಂದ ಆರಂಭಗೊಂಡು; ಮನುಜರು= ಮನುಷ್ಯರು; ಮತ್ತೆ ಕರ್ಮವ ಹೊತ್ತು=ಪಾಪ ಕರ್ಮಗಳನ್ನು ಹೊತ್ತು; ಪಿಂಡವ+ ಇತ್ತು=ಶ್ರಾದ್ಧದಲ್ಲಿ ಪಿತೃಗಳಿಗೆ ಅನ್ನದ ತುತ್ತನ್ನು ಇಟ್ಟು; ತಪ್ಪದೇ ಮತ್ತೆ=ಕಡ್ಡಾಯವಾಗಿ ಮತ್ತೆ; ವಾಯಸ ಕುಲವ=ಕಾಗೆಗಳ ಗುಂಪನ್ನು; ಕರೆ ಕರೆದು=ಒತ್ತಾಯದಿಂದ ಕರೆದು; ತುತ್ತ ನೀಡುವರು=ಪಿಂಡದ ತುತ್ತನೀಡುವರು; ಎಳ್ಳು ದರ್ಭೆಗೆ ತೆತ್ತಿಗನು=ಎಳ್ಳು ಹಾಗೂ ಹುಲ್ಲಿನ ದರ್ಭೆಯ ನಂಟ; ನೀನಾದೆ=ನೀನಾಗಿರುವೆ; ಕೀರ್ತಿಯ ಹೊತ್ತು ಕೊಂಡೆ=ಇಂಥ ಕೀರ್ತಿಯನ್ನು ಪಡೆದ; ದುರಾತ್ಮ=ನಿಕೃಷ್ಟನು; ನಿನ್ನೊಳು ಮಾತ+ ಅದೇಕೆಂದ=ಇಂಥ ನಿನ್ನಲ್ಲಿ ನನಗೇನು ಮಾತು ಎಂದಿತು ರಾಗಿ.

"ಸತ್ತದಿನ ಹೆಣದ ಬಾಯಿಗೆ ಹಾಕುವ ಅಕ್ಕಿಯಿಂದ ಹಿಡಿದು, ಮನುಷ್ಯರು ತಮ್ಮ ಪಾಪ ಕರ್ಮಗಳನ್ನು ತೀರಿಸಿಕೊಳ್ಳಲು ಶ್ರಾದ್ಧದಲ್ಲಿ ಅನ್ನದ ಪಿಂಡವನ್ನು ಇಟ್ಟು ಅದನ್ನು ತಪ್ಪದೇ ಕಾಗೆಯ ಗುಂಪಿಗೆ ಒಪ್ಪಿಸುವರು. ಹಾಗಾಗಿ ನೀನು ಎಳ್ಳು ದರ್ಭೆಯ ನಂಟನಾಗಿದ್ದೀಯ, ಇಂಥ ಅಪಕೀರ್ತಿಯನ್ನು ಹೊತ್ತ ನಿಕೃಷ್ಟನಲ್ಲಿ ನನಗೇನು ಮಾತು" ಎಂದು ರಾಗಿ ಹೇಳಿತು.

ರಾಗಿಯು ಬತ್ತದ ವಿರುದ್ಧ ತಿರುಗಿ ಬಿದ್ದು; ಬತ್ತ ಅಹಂಕಾರದಿಂದ ಏನೆಲ್ಲಾ ತನ್ನ ಬಗ್ಗೆ ಹೊಗಳಿಕೊಂಡಿತ್ತೋ ಅದೆಲ್ಲವನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ಸತ್ತ ವ್ಯಕ್ತಿಗಳಿಗೆ ಮಾಡುವ ಸಂಸ್ಕಾರಗಳಲ್ಲಿ ಬತ್ತವನ್ನು ಬಳಸಿಕೊಳ್ಳುವುದರ ಬಗ್ಗೆ ಈ ಪದ್ಯದಲ್ಲಿ ಪ್ರಸ್ತಾವಿಸಲಾಗಿದೆ.

ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವರಿಯೆ
ಎಲವೊ ನೀನೆಲ್ಲಿಹೆಯೊ ನಿನ್ನಯ
ಬಳಗವದು ತಾನೆಲ್ಲಿಹುದು ಈ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ ೪೭

ಮಳೆ+ತೆಗೆದು=ಮಳೆ ಬಾರದೆ; ಬೆಳೆಯು+ಅಡಗಿ=ಬೆಳೆ ನಾಶವಾಗಿ; ಕ್ಷಾಮದ =ಬರದ; ವಿಲಯ=ಪ್ರಳಯ; ಕಾಲದೊಳು+ಅನ್ನವಿಲ್ಲದೆ=ಕಾಲದಲ್ಲಿ ಅನ್ನವಿ

ಲ್ಲದೆ; ಅಳಿವ=ನಾಶವಾಗುವ; ಪ್ರಾಣಿಗಳ+ಆದರಿಸಿ=ಪ್ರಾಣಿಗಳನ್ನು ಪ್ರೀತಿಯಿಂದ; ಸಲಹು ವೆನು=ಕಾಪಾಡುವೆನು; ಜಗವರಿಯೆ=ಇದು ಜಗತ್ತಿಗೇ ತಿಳಿದಿದೆ; ಎಲವೋ= ಎಲೈ; ನೀನು+ಎಲ್ಲಿಹೆಯೊ=ನೀನು ಎಲ್ಲಿ ಇರುವೆಯೋ; ನಿನ್ನಯ ಬಳಗ+ ಅದು=ನಿನ್ನಯ ಗುಂಪು ಅದು; ತಾನು+ಎಲ್ಲಿಹುದು=ಎಲ್ಲಿರುವುದೋ?; ಈ ಹಲವು =ಈ ಎಲ್ಲಾ; ಹುಲುಧಾನ್ಯಗಳು+ಎನಗೆ= ಕ್ಷುದ್ರ ಧಾನ್ಯಗಳು ನನಗೆ; ಸರಿ ದೂರೆಯೆ=ಸರಿಸಮಾನವೇ; ಕೇಳು+ಎಂದ=ಕೇಳು ಎಂದಿತು ರಾಗಿ.

"ಮಳೆಬಾರದೇ ಬೆಳೆ ನಾಶವಾಗಿ, ತೀವ್ರತರ ಬರಗಾಲದಲ್ಲಿ ಅನ್ನವಿಲ್ಲದೇ ಸಾವಿಗೀಡಾಗುವ ಪ್ರಾಣಿಗಳನ್ನು ಇಡೀ ಜಗತ್ತೇ ಅರಿಯುವಂತೆ ಪ್ರೀತಿಯಿಂದ ಸಲಹುವೆನು. ಎಲವೋ ಅಂಥ ಸಂದರ್ಭದಲ್ಲಿ ನೀನೆಲ್ಲಿರುವೆ? ನಿನ್ನ ಬಂಧುಗಳು ಎಲ್ಲಿರುವರು ಈ ಎಲ್ಲ ಕ್ಷುದ್ರ ಧಾನ್ಯಗಳು ನನಗೆ ಸರಿಸಮಾನವೇ ಹೇಳು? ಎಂದಿತು ರಾಗಿ.

ಎಂಥ ವಿಷಮ ಪರಿಸ್ಥಿತಿಯಲ್ಲೂ ಅತ್ಯಂತ ಕಡಿಮೆ ನೀರಾವರಿಯಲ್ಲೂ ಬೆಳೆಯುವ ರಾಗಿ ತನ್ನ ವಿಶೇಷ ಗುಣವನ್ನು ಪ್ರಸ್ತುತ ಪಡಿಸುತ್ತದೆ. ಅನಾವೃಷ್ಟಿ-ಅತಿವೃಷ್ಟಿಗಳಾದರೂ ಜೀವರಾಶಿಗಳಿಗೆ ಜೀವನಾಧಾರಿತವಾಗಿರುವ ರಾಗಿ ಇತರ ಧಾನ್ಯಗಳಿಗೆ ಸವಾಲನ್ನು ಒಡ್ಡುತ್ತಿದೆ. ನೀವು ನನಗೆ ಸರಿ ಸಮಾನರೇ ಎಂದು ಪ್ರಶ್ನಿಸುತ್ತದೆ.

ಬಲ್ಲಿದರು ಬರೆ ಬಡವರಲಿ ನಿ
ನ್ನಲ್ಲಿಯುಂಟು ಉಪೇಕ್ಷೆ ನಮ್ಮಲಿ
ಸಲ್ಲದೀ ಪರಿ ಪಕ್ಷಪಾತವದಿಲ್ಲ ಭಾವಿಸಲು
ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೆ ನಿರ್ದಯ
ನಲ್ಲ ತಾ ನಿನ್ನಂತೆ ಎಲೆ ಕುಟಲಾತ್ಮ ಹೋಗೆಂದ ೪೮

ಬಲ್ಲಿದರು ಬರೆ= ಶ್ರೀಮಂತರು ಬಂದಾಗ; ಬಡವರಲಿ=ಬಡವರ ಬಗ್ಗೆ; ನಿನ್ನಲ್ಲಿ+ಉಂಟು=ನಿನಗೆ ಉಂಟು; ಉಪೇಕ್ಷೆ=ತಿರಸ್ಕಾರ; ನಮ್ಮಲ್ಲಿ ಸಲ್ಲದು+ಈ ಪರಿ=ನಮ್ಮಲ್ಲಿ ಈ ರೀತಿ ಇಲ್ಲ; ಪಕ್ಷಪಾತವು+ಅದಿಲ್ಲ=ಬೇಧಭಾವವಿಲ್ಲ; ಭಾವಿಸಲು=

ಗಮನಿಸಿದರೆ; ಬಲ್ಲಿದರು ಬಡವರುಗಳು+ಎನ್ನದೆ=ಶ್ರೀಮಂತರು ಬಡವರು ಎನ್ನದೇ; ಎಲ್ಲರನು ರಕ್ಷಿಸುವೆ=ಎಲ್ಲರನ್ನೂ ಪೋಷಿಸುವೆ; ನಿರ್ದಯನು+ಅಲ್ಲ=ಕಠಿಣ ಹೃದಯಿಯಲ್ಲ; ತಾ+ನಿನ್ನಂತೆ=ನಾನು ನಿನ್ನ ಹಾಗೆ; ಎಲೆ ಕುಟಿಲಾತ್ಮ=ಎಲೆ ಮೋಸಗಾರನೇ; ಹೋಗೆಂದ=ಹೋಗು ಎಂದಿತು.

ರಾಗಿಯು ಬತ್ತಕ್ಕೆ ಹೇಳುತ್ತದೆ: "ಶ್ರೀಮಂತರು ಬಂದಾಗ ಕಾಳಜಿಯನ್ನು ಮಾಡುವೆ, ಬಡವರ ಬಗ್ಗೆ ತಿರಸ್ಕಾರ ತಾಳುವೆ, ನಮ್ಮಲ್ಲಿ ಇಂಥ ಭೇದಭಾವಗಳಿಲ್ಲ ಇವರು ಶ್ರೀಮಂತರು, ಇವರು ಬಡವರೆಂದು ಯೋಚಿಸದೇ ಎಲ್ಲರನ್ನು ಪೋಷಿಸುತ್ತೇನೆ. ನಿನ್ನಂತೆ ನಿರ್ದಯನು, ಮೋಸಗಾರನು ನಾನಲ್ಲ ಹೋಗು" ಎಂದಿತು.

ಇಲ್ಲಿ ರಾಗಿಯು ತನ್ನ ಹಾಗೂ ಅಕ್ಕಿಯ ಗುಣಗಳ ಬಗ್ಗೆ ಏನನ್ನು ಹೇಳುತ್ತದೆಯೋ ಅದು ಜನರಿಗೂ ಅನ್ವಯಿಸುವುದು ನೋಡಬಹುದಾಗಿದೆ. ಕೆಲವರು ಶ್ರೀಮಂತರು ಮನೆಗೆ ಬಂದಾಗ ವಿಶೇಷವಾಗಿ ಗೌರವಿಸುವುದು ಹಾಗೂ ಅಂಥವರ ಸಾನ್ನಿಧ್ಯವನ್ನು ಬಯಸುವುದನ್ನು ಮಾಡುತ್ತಾರೆ. ಅದೇ ಬಡವರು ಬಂದರೆ ಲೆಕ್ಕಿಸುವುದೇ ಇಲ್ಲ, ಇಲ್ಲವೇ ಸಾಧ್ಯವಾದಷ್ಟು ಅವಮಾನಿಸಲು ಪ್ರಯತ್ನಿಸುತ್ತಾರೆ. ಇದು ಎಲ್ಲ ಕಾಲಕ್ಕೂ ಎಲ್ಲಾ ಪ್ರದೇಶಗಳಲ್ಲೂ ಇರುವಂಥ ಸಾಂಕ್ರಾಮಿಕ ವ್ಯಾಧಿ ಎನ್ನಬಹುದು. ಅಂಥವರನ್ನು ಕನಕದಾಸರು ನಿರ್ದಯಿಗಳು ಮೋಸಗಾರರು ಎಂದು ಕರೆಯುತ್ತಾರೆ.

ನಾನೆಲೈ ಲೋಕದಲಿ ನಿರ್ದಯನು ಬಳಿ
ಕೇನಲೈ ಸದ್ಧರ್ಮದಲಿ ಮಧು
ಪಾನವಾದೆಯಲಾ ದುರಾತ್ಮಕ ನಿನ್ನ ಸೇವಿಸಿದ
ದಾನವರು ಮಾನವ ಕಿರಾತರು
ಜ್ಞಾನವಳಿದು ವಿಕಾರದಲಿ ಮತಿ
ಹೀನರಾದರು ನಿನ್ನ ಗುಣವೇನೆಂದನಾ ವ್ರಿಹಿಗ ೪೯

ನಾನು+ಎಲೈ=ಎಲವೋ ನಾನು; ಲೋಕದಲಿ ನಿರ್ದಯನು=ಜಗತ್ತಿನಲ್ಲಿ ಕರುಣೆಯಿಲ್ಲದವನು; ಬಳಿಕೇನು+ಎಲೈ=ನಂತರ ನೀನೇನು; ಸದ್ಧರ್ಮದಲ್ಲಿ=ಒಳ್ಳೆಯ ನಡತೆಯಲಿ;ಮಧುಪಾನವ+ಆದೆಯಲಾ; ಮದ್ಯಪಾನವಾಗಿರುವೆಯಲ್ಲಾ; ದುರಾತ್ಮಕ=

ಕೆಟ್ಟ ನಡತೆಯವನೇ; ನಿನ್ನ ಸೇವಿಸಿದ=ನಿನ್ನನ್ನು ಕುಡಿದ; ದಾನವರು=ರಾಕ್ಷಸರು; ಮಾನವ=ಮನುಷ್ಯರು; ಕಿರಾತರು=ಬೇಡರು; ಜ್ಞಾನವಳಿದು=ಬುದ್ಧಿ ಕಳೆದುಕೊಂಡು; ವಿಕಾರದಲಿ=ಅಸ್ವಾಸ್ಥ್ಯಗೊಂಡು; ಮತಿಹೀನರು+ಆದರು=ಬುದ್ಧಿಹೀನರಾಗಿದ್ದಾರೆ. ನಿನ್ನ ಗುಣವೇನು+ಎಂದನು=ನಿನ್ನ ಗುಣ ಎಂಥ ಶ್ರೇಷ್ಠದ್ದು ಅರ್ಥವಾಯಿತೆ ಎಂದಿತು; ಆ ವ್ರಿಹಿಗ=ಆ ಬತ್ತ.

"ಈ ಲೋಕದಲ್ಲಿ ನಾನು ನಿರ್ದಯನೇ, ಎಲೈ ನೀನು ದಯಾಮಯನು ಒಳ್ಳೆಯ ನಡತೆಯವನು ಎಂದೆಲ್ಲಾ ಹೇಳಿಕೊಂಡು ಮದ್ಯಪಾನದ ವಸ್ತು ನೀನಾದೆಯಲಾ; ದುಷ್ಟನು ನೀನು ನಿನ್ನನ್ನು ಸೇವಿಸಿದ ರಾಕ್ಷಸರು, ಮಾನವರು, ಬೇಡರು ಬುದ್ಧಿ ಸ್ಥಿಮಿತದಲ್ಲಿ ಇಲ್ಲದೇ ವಿಕಾರವಾಗಿ ವರ್ತಿಸುತ್ತಿದ್ದಾರೆ. ಇಂಥದ್ದು ನಿನ್ನ ಸದ್ಗುಣವೆಂದು" ನಿಂದಿಸಿದ ಬತ್ತ.

ಪರಸ್ಪರ ರಾಗಿ ಮತ್ತು ಬತ್ತದ ನಡುವೆ ವಾದ ಸಂವಾದ ನಡೆಯುತ್ತಿದ್ದು ವಾದವನ್ನು ಬತ್ತ ಆರಂಭಿಸಿದರೂ ಅಷ್ಟೇ ಸ್ವಾರಸ್ಯ ಉತ್ತರಗಳನ್ನು ರಾಗಿಯೂ ನೀಡುತ್ತಿದೆ. ಈಗ ಮತ್ತೆ ಬತ್ತ ರಾಗಿಯನ್ನು ನಿಂದಿಸಲು ಆರಂಭಿಸಿದೆ. ಆ ಕಾಲದಲ್ಲಿ ಸಾರಾಯಿ ಮುಂತಾದ ಪಾನೀಯಗಳಲ್ಲಿ ರಾಗಿಯನ್ನು ಬಳಸುತ್ತಿದ್ದ ವಿವರಗಳು ಇಲ್ಲಿ ತಿಳಿದು ಬರುತ್ತವೆ.

ಆಡಬಹುದತಿಶಯವ ನೀ ಕೊಂ
ಡಾಡಿ ಕೊಂಬರೆ ಸಾಕು ಸಜ್ಜನ
ರಾಡಿದರೆ ಪತಿಕರಿಸಿ ಲಜ್ಜೆಗೆ ಸಿರವ ಬಾಗುವರು
ನೋಡಿರೈ ಸಭೆಯವರು ದುರ್ಮತಿ
ಗೇಡಿ ಇವನಾಡುವದ ನಾವಿ
ನ್ನಾಡಿದರೆ ಹುರುಳಿಲ್ಲ ಶಿವಶಿವಯೆಂದ ನರೆದಲೆಗ ೫೦

ಆಡಬಹುದು+ಅತಿಶಯವ ನೀ=ನಿನ್ನ ಬಗ್ಗೆ ನೀನು ಅತಿಯಾಗಿ ಹೇಳಬಹುದು; ಕೊಂಡಾಡಿ ಕೊಂಬರೆ=ಈ ರೀತಿ ಹೊಗಳಿಕೊಳ್ಳುವರೇ; ಸಾಕು= ನಿಲ್ಲಿಸು ನಿನ್ನ ಮಾತುಗಳನ್ನು; ಸಜ್ಜನರಾಡಿದರೆ=ಸುಸಂಸ್ಕೃತರು ನಿನ್ನಂತೆ ಒರಟು ಮಾತನಾಡಿದರೆ; ಪತಿಕರಿಸೆ=ಪಶ್ಚಾತಾಪಗೊಂಡು; ಲಜ್ಜೆಗೆ ಸಿರವ ಬಾಗುವರು=

ನಾಚಿಕೆಯಿಂದ ತಲೆ ತಗ್ಗಿಸುವರು; ನೋಡಿರೈ ಸಭೆಯವರು=ಸಭೆಯಲ್ಲಿ ನೆರೆದ ಎಲ್ಲರೂ ನೋಡಿ; ದುರ್ಮತಿಗೇಡಿ=ಕೆಟ್ಟಬುದ್ಧಿಯವನು; ಇವನು+ಆಡುವದ=ಇವನು ಹೇಳುವುದನ್ನು; ನಾವು+ಇನ್ನಾಡಿದರೆ=ನಾವೂ ಮತ್ತೆ ಮಾತನಾಡಿದರೆ; ಹುರುಳಿಲ್ಲ =ಪ್ರಯೋಜನವಿಲ್ಲ; ಶಿವಶಿವ+ಎಂದ ನರೆದಲೆಗ=ಶಿವ ಶಿವ ಎಂದು ನರೆದಲೆಗ ದೇವರನ್ನು ನೆನೆಸಿಕೊಂಡ.

'ನೀನು ನಿನ್ನ ಬಗೆ ಇಲ್ಲಸಲ್ಲದನ್ನು ಸೇರಿಸಿ ಅತಿಯಾಗಿ ಹೇಳುತ್ತಿರುವೆ' ಈ ರೀತಿ ಹೊಗಳಿ ಕೊಳ್ಳುತ್ತಾರೆಯೇ, ಸಾಕು ನಿಲ್ಲಿಸು ನಿನ್ನ ಹೊಗಳಿಕೆಗಳನ್ನು, ನಿನ್ನಂತೆ ಯಾರಾದರೂ ಸಜ್ಜನರು ಮಾತನಾಡಿದರೆ, ಅವರ ಮಾತಿಗೆ ಅವರೇ ನಾಚಿಕೆ ಪಟ್ಟು ತಲೆ ತಗ್ಗಿಸುವರು, ಪಶ್ಚಾತ್ತಾಪಗೊಳ್ಳುವರು, ಆದರೆ ನೀನು ಕೆಟ್ಟ ನಡತೆಯವನು, ನಿನ್ನ ಮಾತುಗಳ ಬಗ್ಗೆ ನಿನಗೆ ಯಾವುದೇ ಲಜ್ಜೆ ಇಲ್ಲ, ನಿನ್ನಂಥವನಿಗೆ ಪ್ರತ್ಯುತ್ತರ ಕೊಡುವುದರಲ್ಲಿ ಯಾವ ಅರ್ಥವೂ ಇಲ್ಲ, ಶಿವ ಶಿವ"ಯೆಂದು ಸಭೆಯವರಿಗೆ ಅಕ್ಕಿಯ ಬಗ್ಗೆ ರಾಗಿ ಹೇಳಿತು.

ಆಡುವ ಮಾತಿನ ಮೇಲೆ ನಿಗಾ ಇರಬೇಕು, ಮನ ಬಂದಂತೆ ಮಾತನಾಡುವುದು ಸರಿಯಲ್ಲ, ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬಂತೆ, ಕೆಲವೊಮ್ಮೆ ನಾವಾಡಿದ ಮಾತಿಗೆ ನಾವೇ ನಾಚಿಕೆ ಪಡಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಹಾಗಾಗಿ ಮಾತನ್ನಾಡುವ ಮೊದಲು ಯೋಚಿಸಿ ಮಾತನ್ನಾಡಬೇಕೆಂಬುದು ರಾಗಿಯ ನಿಲವು, ಆದರೆ ಭಂಡರು ತಾವಾಡುವ ಮಾತುಗಳಿಗೆ ಸಮರ್ಥನೆ ಕೊಡುತ್ತಾ ಲಜ್ಜೆ ಗೇಡಿಗಳಾಗಿ ವರ್ತಿಸುವುದನ್ನು ಸಮಾಜ ದಲ್ಲಿ ಕಾಣುತ್ತೇವೆ.

ಸತ್ತವರ ಪ್ರತಿಬಿಂಬರೂಪನು
ಬಿತ್ತರಿಸಿ ಪಿತೃನಾಮಗಳ ನಿನ
ಗಿತ್ತು ಮೂವರ ಪೆಸರಿನಲಿ ಕರಕರೆದು ದರ್ಭೆಯಲಿ
ನೆತ್ತಿಯನು ಬಡಿ ಬಡಿದು ಕಡೆಯಲಿ
ತುತ್ತನಿಡುವರು ಪಶುಗಳಿಗೆ ನೀ
ನೆತ್ತಿದೆಯೆಲಾ ತನುವ ಸುಡಬೇಕೆಂದ ನರೆದಲೆಗ ೫೧

ಸತ್ತವರ ಪ್ರತಿಬಿಂಬ ರೂಪನು=ಸತ್ತವರ ಪ್ರತಿಬಿಂಬ ರೂಪವನ್ನು; ಬಿತ್ತರಿಸಿ= ಸಿದ್ಧಪಡಿಸಿ; ಪಿತೃನಾಮಗಳ ನಿನಗೆ+ಇತ್ತು=ಪೂರ್ವಿಕರ ಹೆಸರುಗಳನ್ನು ಆ ಬಿಂಬಗಳಿಗೆ ಇಟ್ಟು; ಮೂವರ ಪೆಸರಿನಲಿ ಕರೆಕರೆದು=ಮೂರು ತಲೆಮಾರಿನ ಹೆಸರುಗಳನ್ನು ಅವುಗಳಿಗೆ ನೀಡಿ; ದರ್ಭೆಯಲಿ=ಹುಲ್ಲಿನ ದರ್ಭೆಯಿಂದ; ನೆತ್ತಿಯನು ಬಡಿಬಡಿದು= ಅಕ್ಕಿ ಹಿಟ್ಟಿನ ಉಂಡೆಗಳ ಅಂದರೆ ಬಿಂಬಗಳ ಮೇಲ್ಭಾಗದಲ್ಲಿ ಹೊಡೆದು; ಕಡೆಯಲ್ಲಿ=ಶ್ರಾದ್ಧ ಮುಗಿದ ಮೇಲೆ; ತುತ್ತನು+ಇಡುವರು ಪಶು ಗಳಿಗೆ=ಹಿಟ್ಟಿನ ಉಂಡೆಗಳನ್ನು ಹಸುಗಳಿಗೆ ನೀಡುವರು; ನೀನೆತ್ತಿದೆ+ಎಲಾ=ಹೀಗೆ ಸಮರ್ಪಿತ ವಾದೆಯಲ್ಲಾ; ತನುವ=ದೇಹವ; ಸುಡಬೇಕು+ಎಂದ=ನಾಶಗೊಳಿಸಬೇಕು ಎಂದ; ನರೆದಲೆಗ=ರಾಗಿ.

“ಸತ್ತವರ ಬಿಂಬದ ಸಂಕೇತವಾಗಿ ಸಿದ್ಧಪಡಿಸಿದ ಅಕ್ಕಿ ಹಿಟ್ಟಿನ ಅಥವಾ ಅನ್ನದ ಉಂಡೆಗಳಿಗೆ ಪೂರ್ವಿಕರ ಹೆಸರುಗಳನ್ನು ಅದರಲ್ಲೂ ಮೂರು ತಲೆಮಾರಿನವರ ಹೆಸರುಗಳನ್ನು ಇಟ್ಟು, ಹುಲ್ಲಿನ ದರ್ಭೆಯಿಂದ ಉಂಡೆಗಳ ಮೇಲ್ಭಾಗದಲ್ಲಿ ಮಂತ್ರೋಚ್ಚಾರಣೆಯೊಂದಿಗೆ ಬಡಿದು, ಶ್ರಾದ್ಧದ ಶಾಸ್ತ್ರ ಮುಗಿದ ಮೇಲೆ ಹಸುಗಳಿಗೆ ಅದನ್ನು ನೀಡುವರು ಇಂಥ ದುರ್ಗತಿ ನಿನಗೆ ಬಂದಿದೆಯಲ್ಲಾ, ನಿನ್ನ ಜನ್ಮವನ್ನು ಸುಡಬೇಕೆಂದು” ರಾಗಿ ಹೇಳಿತು.

ಬ್ರಾಹ್ಮಣರ ಮನೆ, ಶ್ರೀಮಂತರ ಮನೆ, ಅರಮನೆಗಳು, ಶುಭ ಸಮಾರಂಭಗಳಲ್ಲಿ ನನ್ನದೇ ಕಾರುಬಾರು ಎಂದು ಬೀಗುತ್ತಿದ್ದ ಬತ್ತಕ್ಕೆ ಶ್ರೀಮಂತರ ಹಾಗೂ ಬ್ರಾಹ್ಮಣರ ಮನೆಗಳಲ್ಲಿ ಎಂಥೆಂಥ ಕಾರ್ಯಗಳಲ್ಲಿ ನಿನ್ನನ್ನು ಬಳಸಿಕೊಳ್ಳು ತ್ತಾರೆಂದು ರಾಗಿ ಬತ್ತವನ್ನು ಹೀಯಾಳಿಸುವ ಸಂದರ್ಭ.

ಏನಿಹಿರಿ ಹಿರಿ ಕಿರಿದ ನುಡಿಯದೆ
ಮೌನದೀಕ್ಷಿತರಾದಿರಲ ಕಂ
ಡೇನು ಮುರಿದಾಡುವಿರಸಾಧ್ಯವೊ ಸಾಧ್ಯವೋ ನಿಮಗೆ
ಈ ನಪುಂಸಕನಲಿ ನಿರಂತರ
ವೇನು ಕಾರಣ ವಾದವಿದು ನಮ
ಗೇನು ಬುದ್ಧಿಯನರುಹುವಿರಿ ಪೇಳೆಂದ ನರೆದಲೆಗ ೫೨

ಏನು+ಇಹಿರಿ=ಏಕೆ ಸುಮ್ಮನಿರುವಿರಿ; ಹಿರಿ ಕಿರಿದ ನುಡಿಯದೆ=ಏನೊಂದೂ ಮಾತನಾಡದೇ; ಮೌನ ದೀಕ್ಷಿತರು+ಆದಿರಲ=ಮೌನವ್ರತ ಕೈಗೊಂಡಿರಲ್ಲ; ಕಂಡೆನು= ನೋಡಿದೆನು; ಮುರಿದಾಡುವಿರ+ಅಸಾಧ್ಯವೊ=ಮಾತನ್ನು ಮುರಿಯುವುದು ಅಸಾ ಧ್ಯವೋ; ಸಾಧ್ಯವೋ; ನಿಮಗೆ; ಈ ನಪುಂಸಕನಲಿ=ಈ ಷಂಡನಲಿ; ನಿರಂತ ರವು+ಏನು=ಸದಾ ಯಾವ; ಕಾರಣ=ಕಾರಣದಿಂದ; ವಾದವಿದು=ವಾಗ್ವಾದ ನಡೆ ಯುವುದು; ನಮಗೇನು; ಬುದ್ಧಿಯನು+ಅರಹುವಿರಿ=ಬುದ್ಧಿಯನ್ನು ಹೇಳುವಿರಿ; ಪೇಳೆಂದ=ಹೇಳು ಎಂದ; ನರೆದಲೆಗ=ರಾಗಿ.

"ಏಕೆ ಮೌನದೀಕ್ಷೆಯನ್ನು ಪಡೆದಿರುವಿರಿ; ಏನೊಂದೂ ಮಾತನಾಡದೇ? ನಾನು ಕಾಯುತ್ತಿದ್ದೇನೆ ನನ್ನ ಮಾತನ್ನು ಮುರಿಯುವುದು ನಿಮಗೆ ಸಾಧ್ಯವೇ ಅಸಾಧ್ಯವೇ? ನಪುಂಸಕನಾದ ನಿನ್ನಲ್ಲಿ ಸದಾ ವಾದಕ್ಕೆ ನಿಲ್ಲುವುದು ಸರಿಯಲ್ಲ, ಕೆಟ್ಟ ಮನಸ್ಸಿನ ಹಾಗೂ ನಡೆವಳಿಕೆಯ ನೀವು ನನಗೇನು ಬುದ್ಧಿಯನು ಹೇಳಲು ಸಾಧ್ಯ?" ಎಂದು ರಾಗಿ ಪ್ರಶ್ನಿಸಿತು.

ರಾಗಿ ಮತ್ತು ಬತ್ತದ ನಡುವೆ ವಾಗ್ವಾದ ಪರಾಕಾಷ್ಠೆಯನ್ನು ಮುಟ್ಟಿದೆ; ರಾಗಿಯು ಸಹ ಬತ್ತವನ್ನು ಅತ್ಯಂತ ತೀಕ್ಷ್ಣವಾಗಿ ನಿಂದಿಸಿ ಕೆರಳಿಸುತ್ತಿದೆ.

ಮಸೆದುದಿತ್ತಂಡಕ್ಕೆ ಮತ್ಸರ
ಪಿಸುಣ ಬಲರತಿ ನಿಷ್ಠುರರು ವಾ
ದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ
ಹಿಸುಣರಿನದಿರ ಮತ್ಸರವ ಮಾ
ಣಿಸುವ ಹದನೇನೆನುತ ಯೋಚಿಸಿ
ದಸುರಮುನಿಪರ ನೋಡೆ ಗೌತಮ ಮುನಿಪನಿಂತೆಂದ ೫೩

ಮಸೆದುದು=ತೀವ್ರಗೊಂಡಿತು; ಇತ್ತಂಡಕ್ಕೆ=ಎರಡೂ ತಂಡದಲ್ಲೂ; ಮತ್ಸರ= ದ್ವೇಷ; ಪಿಸುಣ ಬಲರು=ಅತಿಯಾದ ಚಾಡಿಕೋರರು; ಅತಿ ನಿಷ್ಠುರರು=ಕಠಿಣ ಮನಸ್ಥಿತಿಯವರು; ವಾದಿಸಲು ಕಂಡನು=ವಾಗ್ವಾದವನು ನೋಡಿದನು; ನೃಪತಿ=ಅರಸ ಶ್ರೀರಾಮನು; ಮನದಲಿ=ಮನಸ್ಸಿನಲ್ಲಿ; ನೋಡಿ ನಸುನಗುತ= ವಾಗ್ವಾದವನ್ನು ನೋಡಿ ನಗುತ್ತಾ; ಹಿಸುಣರು+ಇವದಿರ =ಚಾಡಿಕೋರರು

ಇವರುಗಳ; ಮತ್ಸರವ= ಹೊಟ್ಟೆಕಿಚ್ಚನ್ನು; ಮಾಣಿಸುವ= ಹೋಗಲಾಡಿಸುವ; ಹದನೇನು+ಎನುತ=ಕ್ರಮ ಯಾವುದು; ಎಂದೆನ್ನುತ; ಯೋಚಿಸಿದ; ಸುರ=ದೇವತೆಗಳು; ಮುನಿಪರ= ಋಷಿಮುನಿಗಳನ್ನು; ನೋಡೆ=ನೋಡಿ; ಗೌತಮ ಮುನಿಪಗೆ+ಇಂತೆಂದ=ಶ್ರೇಷ್ಠ ಮುನಿ ಯಾದ ಗೌತಮರಿಗೆ ರಾಮ ಹೀಗೆಂದ.

ಶ್ರೀರಾಮನು ಇವರ ವಾಗ್ವಾದವನ್ನು ನೋಡಿ ನಸುನಗುತ್ತಾ 'ಎರಡೂ ತಂಡಗಳಲ್ಲೂ ದ್ವೇಷ ಉಲ್ಬಣಗೊಂಡಿದೆ. ಅತಿಯಾದ ಚಾಡಿಕೋರರು, ಅತ್ಯಂತ ಕಠಿಣ ಮನಸ್ಥಿತಿಯವರು, ಇವರ ಮತ್ಸರವನ್ನು ಸರಿಪಡಿಸುವ ಉಪಾಯವೇನು' ಎಂದು ಯೋಚಿಸುತ್ತಾ ದೇವತೆಗಳನ್ನು ಶ್ರೇಷ್ಠಮುನಿಗಳನ್ನು ನೋಡುತ್ತಾ ಗೌತಮ ಮುನಿಯೊಡನೆ ಶ್ರೀರಾಮ ಹೀಗೆಂದ.

ನ್ಯಾಯ ಪರಿಪಾಲನೆ ಹಾಗೂ ಸತ್ಯಕ್ಕೆ ಹೆಸರಾದ ಶ್ರೀರಾಮನು ರಾಗಿ ಮತ್ತು ಬತ್ತದ ಆರೋಪ; ಪ್ರತ್ಯಾರೋಪಗಳಿಂದ ಬೇಸತ್ತು ಈ ನ್ಯಾಯ ತೀರ್ಮಾನಕ್ಕೆ ಅರಸರಾದ ನಾವು ಹಾಗೂ ಋಷಿ ಮುನಿಗಳಿಂದ ಸಾಧ್ಯವಿಲ್ಲ. ಇದಕ್ಕೆ ಬ್ರಹ್ಮ ವಿಷ್ಣು ಮುಂತಾದವರನ್ನು ಕರೆಸಬೇಕೆಂದು ನಿರ್ಧರಿಸುತ್ತಾರೆ.

ಅರಸುಗಳು ನಾವೆಲ್ಲ ಭೂಮೀ
ಸುರರು ನೆರದಿಹ ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ
ಕರೆಸುವೆವು ಹರಿಹರವಿರಿಂಚಾ
ದ್ಯರನಯೋಧ್ಯೆಗೆ ಅವರ ಗುಣವಾ
ಧರಿಸಿ ಪೇಳ್ವರು ನಯದೊಳೆಂದನು ರಾಮ ನಸುನಗುತ ೫೪

ಅರಸುಗಳು=ರಾಜರು; ನಾವೆಲ್ಲ; ಭೂಮೀಸುರರು=ಬ್ರಾಹ್ಮಣರು; ನೆರದಿಹ= ಸೇರಿರುವ; ದಾನವರು=ರಾಕ್ಷಸರು; ವಾನರರು=ಕಪಿಗಳು; ನಮಗೆ+ಈ= ನಮಗೆ ಈ; ನ್ಯಾಯವನು; ಪರಿಹರಿಸಲು+ಅಳವಲ್ಲ=ತೀರ್ಮಾನಿಸಲು ಸಾಧ್ಯವಿಲ್ಲ; ಕರಸುವೆವು; ಹರಿ=ವಿಷ್ಣು; ಹರ=ಶಿವ; ವಿರಿಂಚಿ+ಆದ್ಯರನು+ಅಯೋಧ್ಯೆಗೆ=ಬ್ರಹ್ಮ ವಿಷ್ಣು ಮೊದಲಾದ ಪೂರ್ವಿಕರನ್ನು ಅಯೋಧ್ಯೆಗೆ; ಅವರ; ಗುಣವ+ ಆಧರಿಸಿ= ಯೋಗ್ಯತೆ

ಯನ್ನುಆಧರಿಸಿ; ಪೇಳ್ವರು=ಹೇಳುವರು; ರಾಮ ನಸುನಗುತ= ಶ್ರೀರಾಮನು ಮುಗುಳ್ನಗೆ ಬೀರುತ್ತಾ; ನಯದೊಳು+ಎಂದನು=ನಯವಾಗಿ ಹೇಳಿದನು;

"ಅರಸರಾದ ನಾವೆಲ್ಲ, ಬ್ರಾಹ್ಮಣರು, ರಾಕ್ಷಸರು, ವಾನರರು ಎಲ್ಲಾ ಇಲ್ಲಿ ನೆರೆದಿರುವೆವು, ಆದರೆ ನಿಮ್ಮ ನ್ಯಾಯವನ್ನು ತೀರ್ಮಾನಿಸಲು ನಾವು ಶಕ್ತರಲ್ಲ, ಹಾಗಾಗಿ ನಮ್ಮ ಹಿರಿಯರಾದಂತಹ ವಿಷ್ಣು, ಬ್ರಹ್ಮ, ಶಿವ ಇವರನ್ನು ಅಯೋಧ್ಯೆಗೆ ಕರೆಸುತ್ತೇವೆ. ಅವರು ನಿಮ್ಮ ಯೋಗ್ಯತೆಯನ್ನು ಆಧರಿಸಿ ನ್ಯಾಯ ತೀರ್ಮಾನಿಸುವರು" ಎಂದ ರಾಮ.

ಯಾವುದೇ ಸಮಸ್ಯೆ ಎದುರಾದಾಗ ರಾಜನಾದ ತನಗೆ ಸಂಪೂರ್ಣ ಅಧಿಕಾರವಿದೆ ಎಂದು ಭಾವಿಸಿ, ತೋಚಿದ ತೀರ್ಮಾನಗಳನ್ನು ತೆಗೆದುಕೊಳ್ಳದೇ ತಾಳ್ಮೆಯಿಂದ ಹಸನ್ಮುಖಿಯಾದ ರಾಮ ತನ್ನ ಹಿರಿಯರನ್ನು ಕರೆಸಿ ನ್ಯಾಯವನ್ನು ತೀರ್ಮಾನಿಸುವುದು ರಾಮನ ವಿಶೇಷ ಗುಣವಾಗಿದೆ. ಹಾಗೂ ಆಪಾದಿತರಿಗೂ ಸರಿಯಾದ ನ್ಯಾಯ ಸಿಗುತ್ತದೆ.

ಪರಮ ಧಾನ್ಯದೊಳಿಬ್ಬರೇ ಇವ
ರಿರಲಿ ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯ ಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರೆಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣಗೆ ॥೫೫॥

ಪರಮ=ಶ್ರೇಷ್ಠ; ಧಾನ್ಯದೊಳು+ಇಬ್ಬರೇ=ಧಾನ್ಯದಲ್ಲಿ ಇಬ್ಬರೇ; ಇವರು+ ಇರಲಿ=ಇವರಿರಲಿ; ಸೆರೆಯೊಳಗೆ+ಆರು=ಸೆರೆಮನೆಯಲ್ಲಿ ಆರು; ತಿಂಗಳು; ಹಿರಿದು ಕಿರಿದು+ಎಂಬಿವರ=ತಾನು ಮೇಲು; ನೀನು ಕೀಳು ಎಂಬ ಇವರ; ಪೌರುಷವ+ ಅರಿಯಬಹುದು+ಇನ್ನು=ಶೌರ್ಯವನ್ನು ನಾವು ತಿಳಿಯಬಹುದು; ಪುರಕೆ=ನಗರಕ್ಕೆ; ಗಮನಿಸಿ=ಹೋದ ಮೇಲೆ; ನಾವು ನಿಮ್ಮನ್ನು; ಕರೆಸುವೆವು=ಕರೆಸಿ ಕೊಳ್ಳುತ್ತೇವೆ; ಕೇಳು+ಎನುತ+ಅಯೋಧ್ಯಾಪುರಿಗೆ=ಕೇಳು ಎಂದೆನುತ್ತಾ ಅಯೋಧ್ಯಾ ಪಟ್ಟಣಕ್ಕೆ;

ಪಯಣವ=ಪ್ರಯಾಣವನ್ನು; ಆ ವಿಭೀಷಣಗೆ=ವಿಭೀಷಣನಿಗೆ; ಮಾಡ ಹೇಳಿದನು= ಮಾಡಲು ಹೇಳಿದನು.

"ತಾನು ಶ್ರೇಷ್ಠ, ತಾನು ಶ್ರೇಷ್ಠ ಎಂದು ನರೆದಲೆಗ ಮತ್ತು ವ್ರೀಹಿರು ಇಬ್ಬರೇ ಕೂಗಾಡುತ್ತಿರುವರು. ಉಳಿದ ಧಾನ್ಯಗಳು ಹೀಗೆ ವರ್ತಿಸುತ್ತಿಲ್ಲ. ಇವರಿಬ್ಬರನ್ನು ಆರು ತಿಂಗಳು ಸೆರೆಮನೆಯಲ್ಲಿ ಇಟ್ಟರೆ ತಾನು ಮೇಲು ನೀನು ಕೀಳು ಎಂದೆನ್ನುವವರ ಶೌರ್ಯಪ್ರತಾಪಗಳನ್ನು ಹಾಗೂ ಇವರಲ್ಲಿ ಯಾರು ಶ್ರೇಷ್ಠರೆಂಬ ಸತ್ಯವನ್ನು ನಾವು ಅರಿಯಬಹುದು, ಅಯೋಧ್ಯಾನಗರಕ್ಕೆ ಹೋದ ಮೇಲೆ ನಿಮ್ಮನ್ನು ಕರೆಸಿಕೊಳ್ಳುತ್ತೇವೆ" ಎನ್ನುತ್ತಾ "ಅಯೋಧ್ಯೆಗೆ ಪ್ರಯಾಣವ ಮಾಡು" ಎಂದು ವಿಭೀಷಣನಿಗೆ ಹೇಳಿದನು.

ತಾನು ಶ್ರೇಷ್ಠ, ತಾನು ಶ್ರೇಷ್ಠ ಎಂಬ ಅಹಮಿಕೆ ಇದ್ದ ರಾಗಿ ಮತ್ತು ಬತ್ತವನ್ನು ಆರು ತಿಂಗಳು ಸೆರೆಮನೆಗೆ ಹಾಕುವುದಲ್ಲದೇ ಆರು ತಿಂಗಳ ನಂತರ ಬ್ರಹ್ಮ, ವಿಷ್ಣು, ಮಹೇಶ್ವರರ ಸಮ್ಮುಖದಲ್ಲಿ ನ್ಯಾಯ ತೀರ್ಮಾನಿಸುವುದಾಗಿ ರಾಮ ಹೇಳುತ್ತಾನೆ.

ಸೆರೆಗೆ ನಮ್ಮನು ನೂಕಿ ದೇವರು
ಸಿರಿಯ ಮದದಲಿ ಕಳೆದರೆಮ್ಮನು
ಮರದು ಸಲಹುವರಾರು ನಿಮ್ಮಯ ಕರುಣ ಹೊರತಾಗಿ
ಧರೆಯೊಳಿನ್ನಪಕೀರ್ತಿ ನಾರಿಯ
ಸೆರಗ ಹಿಡಿವುದೆ ಲೇಸೆನುತತವೆ
ಕರಮುಗಿದು ತಲೆಗುತ್ತಿ ಪೇಳಿದನಾಗ ನರೆದಲೆಗ ೫೬

ಸೆರೆಗೆ ನಮ್ಮನ್ನು ನೂಕಿ=ಸೆರೆಮನೆಗೆ ನಮ್ಮನ್ನು ತಳ್ಳಿ; ದೇವರು=ಶ್ರೀರಾಮ; ಸಿರಿಯ ಮದದಲಿ=ರಾಜ ವೈಭವದ ಅಹಂಕಾರದಲಿ; ಕಳೆದರೆ+ಎಮ್ಮನು= ಕಾಲಕಳೆದರೆ ನಮ್ಮನ್ನು; ಮರದು=ಮರೆತರೆ; ಸಲಹುವರಾರು=ಕಾಪಾಡುವವರಾರು; ನಿಮ್ಮಯ ಕರುಣ ಹೊರತಾಗಿ=ನಿಮ್ಮ ಕರುಣೆಯನ್ನು ಬಿಟ್ಟರೆ; ಧರೆಯೊಳು+ ಇನ್ನು+ಅಪಕೀರ್ತಿ=ಭೂಮಿಯ ಮೇಲೆ ನಮಗೆ ಕೆಟ್ಟ ಹೆಸರು ನಾರಿಯ=ಸ್ತ್ರೀಯ; ಸೆರಗ ಹಿಡಿವುದೆ=ಸೀರೆಯ ಸೆರಗನ್ನು ಹಿಡಿಯುವದೇ; ಲೇಸು+ಎನುತ=ಒಳ್ಳೆಯದು ಎಂದುಕೊಂಡು; ತವೆ=ಚೆನ್ನಾಗಿ; ಕರ ಮುಗಿದನು=ಕೈಮುಗಿದನು; ತಲೆಗುತ್ತಿ= ತಲೆತಗ್ಗಿಸಿ; ನರೆದಲಗ=ರಾಗಿ; ಪೇಳಿದನು+ ಆಗ=ಹೇಳಳಿದನು ಆಗ.

ಸೆರೆಮನೆಗೆ ನಮ್ಮನ್ನು ಹಾಕಿ ರಾಜ್ಯಾಡಳಿತದಲ್ಲಿ ನೀವು ಮೈ ಮರೆತರೆ ಗತಿಯೇನು? ನಮ್ಮನ್ನು ಯಾರು ಕಾಪಾಡುತ್ತಾರೆ, ನಿಮ್ಮಯ ಕರುಣೆಯೇ ನಮ್ಮನ್ನು ಕಾಪಾಡಬೇಕು ಕರುಣಾ ಸಾಗರನೇ ನಮ್ಮನ್ನು ಕಾಪಾಡು ಎನ್ನುತ್ತಾನೆ ರಾಗಿ. ನಾರಿಯ ಸೆರಗ ಹಿಡಿಯುವುದು ಲೇಸು ಅಂದರೆ ಕಾರ್ಯಸಿದ್ಧಿಯಾಗಬೇಕಾದರೆ ಮಹಿಳೆ ಎಂಬುದನ್ನು ಲೆಕ್ಕಿಸದೇ ಅವಳಿಗೂ ಗೌರವ ಕೊಟ್ಟು ಕಾರ್ಯಸಿದ್ಧಿಸಿಕೊಳ್ಳಬೇಕು ಎಂಬಂತೆ ಸೀತೆ ಹಾಗೂ ರಾಮನನ್ನು ಅತಿಯಾಗಿ ಹೊಗಳುತ್ತಾ, ಅತ್ಯಂತ ಗೌರವ ತೋರಿ ತಲೆತಗ್ಗಿಸಿ, ಕೈ ಮುಗಿದ ನರೆದಲೆಗ.

ಕಾರ್ಯಸಿದ್ಧಿಗೆ ಅಧಿಕಾರಿಗಳ ಹೆಂಡತಿಯ ಕಡೆಯಿಂದ ಅಧಿಕಾರಿಗೆ ಹೇಳಿಸಿ ತಮ್ಮ ಕಾರ್ಯವನ್ನು ಈಡೇರಿಸಿಕೊಳ್ಳುವ ಪರಿಪಾಟವನ್ನು ಈಗಲೂ ಕಾಣುತ್ತೇವೆ. ಇದು ಆ ಕಾಲದಲ್ಲೂ ಇತ್ತೆಂದು ಕನಕದಾಸರು ಹೇಳಿದ್ದಾರೆ.

ಆಗಲದಕೇನೆಂದು ಕರುಣಾ
ಸಾಗರನು ಬೀಳ್ಕೊಟ್ಟ ನವರನು
ಯೋಗಿಗಳ ವಶಮಾಡಿ ಗೌತಮಮುನಿಯನುಪಚರಿಸಿ
ರಾಗ ಮಿಗೆ ಮುನಿವರರನಲ್ಲಿ ಸ
ರಾಗದಿಂದಲೆ ಕಳುಹಿ ಬಳಿಕಾ
ಯಾಗ ಸಂರಕ್ಷಕನು ವೀಳೆಯವಿತ್ತನನಿಬರಿಗೆ ೫೭

ಆಗಲಿ+ಅದಕೇನು+ಎಂದು= ಆಗಲಿ ಅದಕೇನು ಎಂದು; ಕರುಣಾ ಸಾಗರನು=ಸಾಗರದಷ್ಟು ಕರುಣೆಯನ್ನು ಹೊಂದಿದ ರಾಮನು; ಬೀಳ್ಕೊಟ್ಟನು+ ಅವರನು=ಕಳುಹಿಸಿ ಕೊಟ್ಟ ಅವರನ್ನು (ರಾಗಿ ಮತ್ತು ಬತ್ತವನ್ನು); ಯೋಗಿಗಳ= ಋಷಿಮುನಿಗಳ; ವಶಮಾಡಿ=ವಶಕ್ಕೆ ಬಿಟ್ಟು; ಗೌತಮ ಮುನಿಯನು+ ಉಪಚರಿಸಿ =ಗೌತಮ ಮುನಿಯನ್ನು ಸತ್ಕರಿಸಿ; ರಾಗ ಮಿಗೆ=ಅತ್ಯಂತ ಪ್ರೀತಿಯಿಂದ; ಮುನಿ ವರರನ್ನು+ಅಲ್ಲಿ=ಋಷಿಮುನಿಗಳನ್ನು ಅಲ್ಲಿ; ಸರಾಗದಿಂದಲೆ= ಅನುರಾಗದಿಂದ; ಕಳುಹಿ=ಕಳುಹಿಸಿ; ಬಳಿಕ+ಆ+ಯಾಗ ಸಂರಕ್ಷಕನು=ಅನಂತರ ಯಾಗಗಳನ್ನು ರಕ್ಷಿಸುವ ಶ್ರೀರಾಮ; ವೀಳೆಯವನು+ಇತ್ತನು+ ಅನಿಬರಿಗೆ =ಅಲ್ಲಿದ್ದವರಿಗೆಲ್ಲಾ ತಾಂಬೂಲವನ್ನು ಕೊಟ್ಟನು.

ನರೆದಲೆಗನ ಮಾತಿಗೆ "ಆಗಲಿ ಅದಕೇನಂತೆ ಎಂದು ಕರುಣೆ ದೋರಿ ಅವರನ್ನು ಋಷಿಮುನಿಗಳ ವಶಕ್ಕೆ ಒಪ್ಪಿಸಿ, ಗೌತಮಮುನಿಯನ್ನು ಉಪಚರಿಸಿ, ಅತ್ಯಂತ ಪ್ರೀತಿಯಿಂದ ಇತರ ಋಷಿಮುನಿಗಳನ್ನೆಲ್ಲಾ ಬೀಳ್ಕೊಟ್ಟು, ಅವರ ಯಜ್ಞಯಾಗಗಳ ಸಂರಕ್ಷಕನಾಗಿದ್ದ ಶ್ರೀರಾಮನು ವೀಳೆಯವನ್ನು ಕೊಟ್ಟು ತನ್ನೂರಿಗೆ ಹೊರಟನು.

ಅರಣ್ಯವಾಸದಲ್ಲಿದ್ದಾಗ ಶ್ರೀರಾಮನು ಋಷಿಮುನಿಗಳ ಸಹವಾಸದಲ್ಲಿದ್ದು ತಮಗೆ ಆಶ್ರಯ ನೀಡಿದ್ದ ಋಷಿಮುನಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ ಅವರನ್ನು ಸತ್ಕರಿಸಿ ಸಂತೋಷದಿಂದ ತನ್ನೂರಿಗೆ ಮರಳುತ್ತಾನೆ.

ಹರದುದಾಕ್ಷಣದಲ್ಲಿ ವ್ಯೋಮದಿ
ಸುರರು ಮಿಗೆ ಕೊಂಡಾಡೆ ಭೂಸುರ
ವರರು ಕಳುಹಿಸಿಕೊಂಡು ಹೊಕ್ಕರು ತಮ್ಮ ಮಂದಿರವ
ಹರುಷ ತಗ್ಗಿತು ತಾವರೆಗೆ ಮುಖ
ವರಳಿದುವು ನೈದಿಲೆಗೆ ತಾರಕೆ
ನೆರದುವಾಕಾಶದಲಿ ಅಸ್ತಾಂಬುಧಿಗೆ ಇನನಿಳಿದ ೫೮

ಹರದುದು+ಆಕ್ಷಣದಲ್ಲಿ=ಆ ಕ್ಷಣವೇ ರಾಮನ ಸೈನ್ಯ ಪ್ರಯಾಣ ಬೆಳೆಸಿತು; ವ್ಯೋಮದಿ=ಗಗನದಲ್ಲಿ; ಸುರರು=ದೇವತೆಗಳು; ಮಿಗೆ ಕೊಂಡಾಡೆ=ಅತಿಯಾಗಿ ಹೊಗಳುತ್ತಿರಲು; ಭೂಸುರವರರು=ಬ್ರಾಹ್ಮಣರು; ಕಳುಹಿಸಿಕೊಂಡು=ರಾಮನನ್ನು ಕಳು ಹಿಸಿಕೊಟ್ಟು; ಹೊಕ್ಕರು=ಪ್ರವೇಶಿಸಿದರು; ತಮ್ಮ ಮಂದಿರವ=ತಮ್ಮ ತಮ್ಮ ಮನೆ ಗಳನ್ನು; ಹರುಷ=ಸಂತೋಷ; ತಗ್ಗಿತು=ಕಡಿಮೆಯಾಯಿತು; ತಾವರೆಗೆ; ಮುಖವು+ ಅರಳಿದವು=ಮುಖ ಅರಳಿತು; ನೈದಿಲೆ ಹೂವಿಗೆ; ತಾರಕೆ=ನಕ್ಷತ್ರಗಳು; ನೆರೆದುವು+ ಆಕಾಶದಲಿ=ಆಕಾಶದಲ್ಲಿ ಮೂಡಿದುವು; ಅಸ್ತ+ಅಂಬುಧಿಗೆ=ಪಶ್ಚಿಮ ಸಮುದ್ರದಲ್ಲಿ; ಇನನು+ಇಳಿದ=ಸೂರ್ಯನು ಇಳಿದ.

ತಕ್ಷಣವೇ ರಾಮನ ಸೈನ್ಯ ಅಲ್ಲಿಂದ ಪ್ರಯಾಣವನ್ನು ಬೆಳೆಸಿತು, ಸ್ವರ್ಗ ವಾಸಿಗಳಾದ ದೇವತೆಗಳು ರಾಮನನ್ನು ಹೊಗಳಿ ಕೊಂಡಾಡಿದರು, ಋಷಿಮುನಿಗಳು ಶ್ರೀರಾಮನನ್ನು ಬೀಳ್ಕೊಟ್ಟು ತಮ್ಮ ತಮ್ಮ ಮನೆಗಳನ್ನು ಹೊಕ್ಕರು, ಆಗ

ಸಂಜೆಯಾದುದರಿಂದ ತಾವರೆಗೆ ಹರ್ಷ ತಗ್ಗಿ ಮುದುಡಲಾರಂಭಿಸಿದರೆ, ನೈದಿಲೆಯು ಸಂತೋಷದಿಂದ ಅರಳಲಾರಂಭಿಸುತ್ತದೆ. ಗಗನದಲೆಲ್ಲಾ ತಾರೆಗಳು ಮೂಡಲಾ ರಂಭಿಸಿದಾಗ ಸೂರ್ಯ ಪಶ್ಚಿಮ ದಿಕ್ಕಿನ ಸಮುದ್ರದಲ್ಲಿ ಮುಳುಗಿದ.

ರಾಮನ ಪ್ರಯಾಣದ ಸಮಯ ಹಾಗೂ ಸನ್ನಿವೇಶಗಳನ್ನು ಪ್ರಕೃತಿಯ ಸೌಂದರ್ಯವನ್ನು ಕವಿ ಕನಕದಾಸರು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ.

ನೆಗಳಿದುವು ಬೊಂಬಾಳದೀವಿಗೆ
ಝುಗಝುಗಿಪ ನವರತ್ನದೊಡುಗೆಯ
ಹೊಗರೊಗುವ ಕೈದುಗಳ ಸುಭಟರು ಮುಂದೆ ಸಂದಣಿಸೆ
ನೆಗಹಿ ಕರಗಳ ಪಾಠಕರು ಬಿರು
ದುಗಳ ಹೊಗಳಲು ಚೀರಿದುವು ಕಹ
ಳೆಗಳು ರಭಸದಿ ಬಂದು ಹೊಕ್ಕನು ನೃಪತಿಯರಮನೆಯ ೫೯

ನೆಗಳಿದವು=ಒದಗಿ ಬಂದವು; ಬೊಂಬಾಳ ದೀವಿಗೆ=ಪ್ರಕಾಶಮಾನವಾದ ದೀವಟಿಗೆಗಳು; ಝುಗಝುಗಿಪ=ಝುಗಝುಗನೆ ಹೊಳೆಯುವ; ನವರತ್ನದ+ ಉಡುಗೆಯ =ನವರತ್ನಗಳಿಂದ ಮಾಡಿದ ವಸ್ತ್ರಗಳು; ಹೊಗರೊಗುವ=ಹೊಳೆ ಹೊಳೆವ; ಕೈದುಗಳ=ಆಯುಧಗಳ; ಸುಭಟರು=ಸೈನಿಕರು; ಮುಂದೆ ಸಂದಣಿಸೆ= ಮುಂದೆ ಗುಂಪು ಗೂಡಿ; ನೆಗಹಿ ಕರಗಳ=ಕೈಗಳನ್ನು ಮೇಲೆತ್ತಿ; ಪಾಠಕರು=ಹೊಗಳು ಭಟ್ಟರು; ಬಿರುದುಗಳ ಹೊಗಳಲು=ತಮ್ಮ ರಾಜನ ಬಿರುದುಗಳನ್ನು ಹೊಗಳಿದಾಗ; ಚೀರಿದವು ಕಹಳೆಗಳು=ಕೊಂಬು ತುತ್ತೂರಿ ಇತ್ಯಾದಿ ವಾದ್ಯಗಳು ಸದ್ದನ್ನು ಮಾಡಿದುವು; ರಭಸದಿ=ವೇಗವಾಗಿ; ಬಂದು ಹೊಕ್ಕನು=ಬಂದು; ಪ್ರವೇಶಿಸಿದನು; ನೃಪತಿಯು+ ಅರಮನೆಯ=ರಾಜ ಶ್ರೀರಾಮ ಅರಮನೆಯನ್ನು.

ಪ್ರಕಾಶಮಾನವಾದ ದೀವಟಿಗೆಗಳು ಒದಗಿ ಬಂದುವು, ಝುಗಝುಗಿಸುವ ನವರತ್ನ ಖಚಿತ ಉಡುಪುಗಳು, ಹೊಳೆಯುವ ಆಯುಧಗಳನ್ನು ಹಿಡಿದ ಸೈನಿಕರು ಗುಂಪುಗೂಡಿ ಮುಂದೆ ಸಾಗಲು, ಅವರ ಹಿಂದೆ ಕೈಗಳನ್ನು ಮೇಲೆತ್ತಿ ರಾಜರ ಬಿರುದಾವಳಿಗಳನ್ನು ಕೂಗುವ ಹೊಗಳುಭಟ್ಟರು, ಹೀಗೆ ಕಹಳೆ ಕೊಂಬುಗಳ ಸದ್ದಿನೊಂದಿಗೆ ಶ್ರೀರಾಮನು ಬಿಡಾರದ ಅರಮನೆಯನ್ನು ಪ್ರವೇಶಿಸಿದನು.

ರಾತ್ರಿಯ ಪಯಣದಲ್ಲಿ ದೀವಟಿಗೆಗಳ ಬೆಳಕಿಗೆ ಹೊಳೆಯುವ ಉಡುಗೆಗಳು; ಆಯುಧಗಳ ವರ್ಣನೆ ಸೊಗಸಾಗಿ ಬಂದಿದೆ.

ಗಗನಮಣಿ ದಿಗುತಟವ ಸಾರಲು
ಹೊಗರೊಗುವ ಬಲು ಕಾಳಗವು ಸಲೆ
ಜಗವ ಮುಸುಕಲು ಜನರು ನಿದ್ರಾಂಗನೆಯ ಕೇಳಿಯಲಿ
ದೃಗುಯುಗಳನೆವೆ ಬಿಗಿದಿರಲು ಮನ
ವಿಗತಿವಡೆದಿರೆ ಧರೆಗೆ ದಿನಮಣಿ
ಮೊಗವ ತೋರುವೆನೆನುತ ಪೂರ್ವಾಚಲಕೆ ನಡೆತಂದ ೬೦

ಗಗನಮಣಿ=ಸೂರ್ಯ; ದಿಗುತಟವ=ದಿಗಂತವ; ಸಾರಲು=ಸೇರಲು; ಹೊಗರೊಗುವ=ದಟ್ಟವಾಗುತ್ತಿರುವ; ಬಲು ಕಾವಳವು=ಹೆಚ್ಚಿನ ಕತ್ತಲೆ; ಸಲೆ ಜಗವ ಮುಸುಕಲು=ಚೆನ್ನಾಗಿ ಜಗತ್ತನ್ನು ಆವರಿಸಲು; ಜನರು; ನಿದ್ರ+ಅಂಗನೆಯ=ನಿದ್ದೆಎಂಬ ಸ್ತ್ರೀಯೊಡನೆ; ಕೇಳಿಯಲಿ=ಆಟದಲಿ ಮೈಮರೆತು; ದೃಗುಯುಗಳನ+ಎವೆ=ಕಣ್ಣುಗಳ ರೆಪ್ಪೆ; ಬಿಗಿದಿರಲು=ಮುಚ್ಚಿರಲು; ಮನ=ಮನಸ್ಸು; ವಿಗತಿ+ಪಡೆದಿರೆ=ಬೇರ್ಪಟ್ಟಂತೆ ಇರಲು; ಧರೆಗೆ=ಭೂಮಿಗೆ; ದಿನಮಣಿ=ಸೂರ್ಯ; ಮೊಗವ=ಮುಖವನ್ನು; ತೋರುವೆನು+ಎನುತ=ತೋರಿಸುವೆನೆಂದು; ಪೂರ್ವಾ+ಅಚಲಕ್ಕೆ=ಪೂರ್ವದ ಬೆಟ್ಟಕ್ಕೆ; ನಡೆ ತಂದ=ನಡೆದು ಬಂದ.

ಗಗನಮಣಿಯಾದ ಸೂರ್ಯ, ಅಸ್ತಮಿಸಿ ದಿಗಂತದೆಡೆಗೆ ಬರಲು; ಕತ್ತಲು ಹೆಪ್ಪುಗಟ್ಟಿ ಜಗತ್ತೆಲ್ಲ ಆವರಿಸಿದಾಗ ಜನರು ಕಣ್ಣುಗಳನ್ನು ಮುಚ್ಚಿ, ಮೈಮರೆತು ನಿದ್ದೆಗೆ ಜಾರಿ ನಿದ್ದೆ ಎಂಬ ಆಟದಲ್ಲಿ ಮುಳುಗಿರುವಾಗ ಮನಸ್ಸು ವೈರಾಗ್ಯ ಪಡೆದು ಬೇರ್ಪಟ್ಟಂತೆ ಇರಲು, ಸೂರ್ಯನು ಭೂಮಿಗೆ ಮುಖವನ್ನು ತೋರಿಸಬೇಕೆಂದು ಪೂರ್ವಾದ್ರಿಗೆ ಬಂದು ಸೇರಿದ.

ಸೂರ್ಯಾಸ್ತ ಮತ್ತು ಸೂರ್ಯೋದಯದ ನಡುವಿನ ದಿನಚರಿಯ ಸಂಕ್ಷಿಪ್ತ ನೋಟ ಈ ಪದ್ಯದಲ್ಲಿದೆ.

ಅರಸನುಪ್ಪವಡಿಸಿದ ಪೂರ್ವದ
ತರಣಿಗರ್ಘ್ಯವ ಕೊಟ್ಟು ಭೂಸುರ

ವರರ ಮಂತ್ರಾಕ್ಷತೆಯ ಕೈಗೊಂಡನನುಜನೊಡಗೂಡಿ
ಹರುಷ ಮಿಗೆ ಪಾಠಕರ ಸಂದಣಿ
ನೆರೆಯೆ ಮುನಿಕುಲದೊಡನೆ ನಿಜಮಂ
ದಿರವ ಹೊರವಂಟವನಿಪತಿಯೋಲಗಕೆ ನಡೆತಂದ ೬೧

ಅರಸನು+ಉಪ್ಪವಡಿಸಿದ=ಅರಸನು ಎದ್ದು; ಪೂರ್ವದ ತರಣಿಗೆ+ ಅರ್ಘ್ಯವ=ಪೂರ್ವ ದಿಕ್ಕಿನಲ್ಲಿರುವ ಸೂರ್ಯನಿಗೆ ಅರ್ಘ್ಯವನ್ನು; ಕೊಟ್ಟು=ನೀಡಿ; ಭೂಸುರವರರ=ಶ್ರೇಷ್ಠ ಬ್ರಾಹ್ಮಣರ; ಮಂತ್ರಾಕ್ಷತೆಯ =ಗಂಧಾಕ್ಷತೆಯನ್ನು ಕೈಕೊಂಡನು+ ಅನುಜನು+ಒಡಗೂಡಿ=ತೆಗೆದುಕೊಂಡನು ತಮ್ಮಂದಿರೊಂದಿಗೆ; ಹರುಷಮಿಗೆ= ಸಂತೋಷ ಹೆಚ್ಚಾಗಿ; ಪಾಠಕರ ಸಂದಣಿ=ಹೊಗಳು ಭಟ್ಟರ ಗುಂಪು; ನೆರೆಯೆ= ಸೇರಲು; ಮುನಿಕುಲದೊಡನೆ=ಋಷಿಮುನಿಗಳೊಡನೆ; ನಿಜ ಮಂದಿರವ= ತನ್ನ ಮನೆಯ; ಬಿಟ್ಟು ಹೊರವಂಟ=ಬಿಟ್ಟು ಹೊರಬಂದ; ಅವನಿಪತಿಯು+ ಓಲಗಕ್ಕೆ= ಶ್ರೀರಾಮನು ಒಡ್ಡೋಲಗಕ್ಕೆ; ನಡೆತಂದ=ಬಂದ.

ರಾಜ ಶ್ರೀರಾಮನು ಬೆಳಗ್ಗೆ ಎದ್ದು ಪೂರ್ವದ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು, ಪುರೋಹಿತನಿಂದ ತಮ್ಮಂದಿರೊಡಗೂಡಿ ಮಂತ್ರಾಕ್ಷತೆಯನ್ನು ಪಡೆದರು. ಹೊಗಳುಭಟ್ಟರು ಅರಸನ ಬಿರುದು ಬಾವಲಿಗಳನ್ನು ಸಂತೋಷದಿಂದ ಹೊಗಳಲು, ಋಷಿಮುನಿಗಳೊಡನೆ ರಾಮ ತನ್ನ ಮನೆಯಿಂದ ಒಡ್ಡೋಲಗಕೆ ನಡೆದುಬಂದನು.

ಸೂರ್ಯೋದಯದ ಅನಂತರ ಎಂದಿನಂತೆ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು ಪ್ರಜಾಪಾಲಕನಾದ ಶ್ರೀರಾಮನು ರಾಜಕಾರ್ಯದ ನಿಮಿತ್ತ ಒಡ್ಡೋಲಗಕ್ಕೆ ಹೋಗುತ್ತಾನೆ.

ಕರೆಸಿದನು ರಾವಣನ ತಮ್ಮನ
ತರಣಿಸುತ ನಳನೀಲ ಜಾಂಬವ
ಶರಭ ಶತಬಲಿಯಾದಿ ಮುಖ್ಯ ಸಮಸ್ತ ವಾನರರ
ಹರುಷ ಮಿಗೆ ಸತ್ಕರಿಸಿ ಮುಂದಕೆ
ತೆರಳಬೇಕೆನೆ ವೀರಸುಭಟರು
ನೆರೆದುರುಬಿ ಕೈದುಗಳ ಜಡಿದಗ್ಗಳೆಯರೈದಿದರು ೬೨

ಕರೆಸಿದನು ರಾವಣನ ತಮ್ಮನ=ವಿಭೀಷಣನನ್ನು ಕರೆಸಿದನು; ತರಣಿಸುತ= ಸೂರ್ಯನ ಮಗನಾದ ಸುಗ್ರೀವ; ನಳ; ನೀಲ; ಜಾಂಬವಂತ; ಶರಭ; ಶತಬಲಿ ಮುಂತಾದ; ಮುಖ್ಯ=ಪ್ರಮುಖ; ಸಮಸ್ತ=ಎಲ್ಲಾ; ವಾನರರ=ಕಪಿ ಸೈನ್ಯವನ್ನು; ಹರುಷಮಿಗೆ ಸತ್ಕರಿಸಿ=ಹೆಚ್ಚಿನ ಸಂತೋಷದಿಂದ ಸತ್ಕಾರ ಮಾಡಿ; ಮುಂದಕೆ; ತೆರಳಬೇಕು+ಎನೆ=ಹೊಗಬೇಕೆಂದಾಗ; ವೀರ ಸುಭಟರು=ವೀರ ಯೋಧರು; ನೆರೆದು =ಒಟ್ಟುಗೂಡಿ; ಉರುಬಿ=ಪರಾಕ್ರಮದಿಂದ; ಕೈದುಗಳ=ಆಯುಧಗಳ; ಜಡಿದು+ ಅಗ್ಗಳೆಯರು+ಐದಿದರು+ಝಳಪಿಸಿ=ಶ್ರೇಷ್ಠ ವೀರರು ಆಯುಧಗಳನ್ನು ಝಳಪಿಸಿ ಅಲ್ಲಿಂದ ಹೊರಟರು.

ಶ್ರೀರಾಮನು ರಾವಣನ ತಮ್ಮ ವಿಭೀಷಣನನ್ನು ಕರೆಸಿದನು. ಸೂರ್ಯ ಪುತ್ರನಾದ ಸುಗ್ರೀವ ನಳ, ನೀಲ, ಜಾಂಬವ, ಶರಭ, ಶತಬಲಿ ಮೊದಲಾದ ಎಲ್ಲ ವಾನರ ಸೈನ್ಯವನ್ನು ಸಂತೃಪ್ತರಾಗುವಂತೆ ಸತ್ಕರಿಸಿ ಮುಂದೆ ಹೋಗಲು ಸಿದ್ಧರಾದಾಗ, ವೀರಯೋಧರೆಲ್ಲಾ ಒಗ್ಗೂಡಿ ಆಯುಧಗಳನ್ನು ಝಳಪಿಸಿ ಅಲ್ಲಿಂದ ಹೊರಟರು.

ರಾಮನ ಪ್ರಯಾಣವು ತನ್ನ ಪ್ರೀತಿ ಪಾತ್ರರಾದ ವಿಭೀಷಣ, ಸುಗ್ರೀವ, ನಳ, ನೀಲ, ಜಾಂಬವಂತ ಮೊದಲಾದವರೊಡನೆ ಸಾಗುತ್ತಿದೆ. ಅಂಗರಕ್ಷಕರು ಹಾಗೂ ವೀರಯೋಧರು ರಾಮನೊಡನಿದ್ದಾರೆ.

ಹೊಡೆವ ತಮ್ಮಟೆ ಭೇರಿ ಡಮರುಗ
ಗಿಡಿಬಿಡಿ ಡೌಡೆ, ಡಿಂಡಿಮ ಢಕ್ಕೆ
ನುಡಿವ ಶಂಖ ಮೃದಂಗ ಘನಸನಿಸ್ಸಾಳ ಮೊದಲಾದ
ಬಡಿವ ನಾನಾ ವಾದ್ಯರವ ಭೋ
ರಿಡಲು ಜಯರವದೊಡನೆ ರಘುನೃಪ
ಮಡದಿ ಸಹಿತೇರಿದನು ಧನಪನ ದಿವ್ಯಮಣಿರಥವ ೬೩

ಹೊಡೆವ=ಬಾರಿಸುವ; ತಮ್ಮಟೆ; ಭೇರಿ; ಡಮರುಗ; ಗಿಡಿಗಿಡಿ; ಡೌಡೆ; ಡಿಂಡಿಮ; ಢಕ್ಕೆ ಮೊದಲಾದ ಚರ್ಮವಾದ್ಯಗಳು; ನುಡಿವ ಶಂಖ=ಊದುವ ಶಂಖ; ನುಡಿಸುವ ಮೃದಂಗ; ಘನ ನಿಸ್ಸಾಳ=ದೊಡ್ಡದಾದ ಚರ್ಮವಾದ್ಯ ಮೊದಲಾದವು. ಬಡಿವ=ಬಾರಿಸುವ; ನಾನಾ=ವಿವಿಧ ಬಗೆಯ; ವಾದ್ಯರವ=ವಾದ್ಯಗಳ ಸದ್ದು;

ಭೋರಿಡಲು=ಜೋರಾಗಿ ಆರ್ಭಟಿಸಲು; ಜಯರವದೊಡನೆ=ಜಯಕಾರದ ಸದ್ದಿನೊಡನೆ; ರಘುನೃಪ=ಶ್ರೀರಾಮನು; ಮಡದಿ ಸಹಿತ=ಸೀತೆಯೊಂದಿಗೆ; ಧನ ಪನ=ಕುಬೇರನ; ದಿವ್ಯ ಮಣಿರಥವ=ಮುತ್ತು ರತ್ನದಿಂದ ಮಾಡಿದ ದಿವ್ಯವಾದ ರಥವನ್ನು; ಏರಿದನು=ಹತ್ತಿದನು.

ವೀರ ಸೈನಿಕರು ನಾನಾ ಬಗೆಯ ಆಯುಧಗಳನ್ನು ಹಿಡಿದು ತಮಟೆ, ಭೇರಿ, ಡಮರುಗ, ಗಿಡಿಗಿಡಿ, ಡೌಡೆ ಮೊದಲಾದ ವಿವಿಧ ಬಗೆಯ ಚರ್ಮವಾದ್ಯಗಳನ್ನು ಬಾರಿಸುತ್ತಾ, ಶಂಖ, ಮೃದಂಗ ಮೊದಲಾದವನ್ನು ನುಡಿಸುತ್ತಾ ಜಯಕಾರಗಳನ್ನು ಹಾಕುತ್ತಿರಲು, ಶ್ರೀರಾಮನು ಮಡದಿ ಸೀತೆಯೊಂದಿಗೆ ಕುಬೇರನಿಂದ ದೊರೆತ ದಿವ್ಯವಾದ, ರತ್ನ ಖಚಿತವಾದ ರಥವನ್ನೇರಿದನು.

ತಮಟೆ, ಭೇರಿ, ಡಮರುಗ, ಗಿಡಿಗಿಡಿ, ಡೌಡೆ, ಡಿಂಡಿಮ, ಢಕ್ಕೆ, ನಿಸ್ಸಾಳ ಮುಂತಾದ ವಿಶೇಷ ಹಾಗೂ ಅಪರೂಪದ ಚರ್ಮವಾದ್ಯಗಳನ್ನು ಕವಿ ಕನಕದಾಸರು ಈ ಕಾವ್ಯದಲ್ಲಿ ಪರಿಚಯಿಸಿದ್ದಾರೆ.

ಒಡನೆ ಏರಿದನೂರ್ಮಿಳಾಪತಿ
ಬಿಡದೆ ಚಿಮ್ಮುವ ಚಾಮರವ ಸಾ
ಲಿಡುತ ನಡೆದುದು ಸಕಲದಳ ಸುಗ್ರೀವನಾಜ್ಞೆಯಲಿ
ಕಡುಮನದ ರಕ್ಕಸರು ಏರಿದ
ರೊಡನೆ ಕರಿರಥತುರಗವನು ಪಡೆ
ಕಡಲ ಜಲ ಮೊರೆವಂತೆ ಮೊರೆದುದು ನೃಪನ ಬಲಜಲಧಿ ೬೪

ಒಡನೆ=ತಕ್ಷಣ; ಏರಿದನು+ಊರ್ಮಿಳಾಪತಿ=ಊರ್ಮಿಳೆಯ ಪತಿಯಾದ ಲಕ್ಷ್ಮಣ ಹತ್ತಿದನು; ಬಿಡದೆ=ನಿರಂತರವಾಗಿ; ಚಿಮ್ಮುವ ಚಾಮರವ=ಬೀಸುವ ಬೀಸಣಿಗೆ; ಸಾಲಿಡುವ=ಸಾಲಾಗಿ; ನಡೆದುದು=ಸಾಗಿತು; ಸಕಲದಳ=ಎಲ್ಲ ಸೈನ್ಯ; ಸುಗ್ರೀವನ+ಆಜ್ಞೆಯಲಿ=ಸುಗ್ರೀವನ ಆಣತಿಯಂತೆ; ಕಡುಮನದ=ದೃಢಮನಸ್ಸಿನ; ರಕ್ಕಸರು=ರಾಕ್ಷಸರು; ಏರಿದರು+ಒಡನೆ =ಹತ್ತಿದರು ತಕ್ಷಣ; ಕರಿ=ಆನೆ; ರಥ; ತುರಗ=ಕುದುರೆಯನ್ನು; ಪಡೆ=ಸೈನ್ಯವು; ಕಡಲ ಜಲ=ಸಮುದ್ರದ ನೀರು; ಮೊರೆ

ವಂತೆ=ಅರ್ಭಟಿಸುವಂತೆ; ನೃಪನ=ರಾಜನ; ಬಲ ಜಲಧಿ=ಸೇನಾ ಸಮುದ್ರ; ಮೊರೆದುದು=ಆರ್ಭಟಿಸಿತು.

ಲಕ್ಷ್ಮಣನು ತಕ್ಷಣ ರಥವನ್ನೇರಿದನು. ಚಾಮರಗಳು ನಿರಂತರವಾಗಿ ಬೀಸುತ್ತಿರಲು ಸಮಸ್ತ ಸೈನ್ಯ ಸುಗ್ರೀವನ ಆಜ್ಞೆಯಂತೆ ಸಾಲಾಗಿ ಸಾಗುತ್ತಿತ್ತು. ದೃಢ ಮನಸ್ಸಿನ ರಾಕ್ಷಸರು ಆನೆ ಕುದುರೆ ರಥಗಳನ್ನು ಏರಿ ಹೊರಟರು. ರಾಮನ ಸೈನ್ಯ ಸಮುದ್ರದ ಅಲೆ ಆರ್ಭಟಿಸುವಂತೆ ಆರ್ಭಟಿಸುತ್ತಾ ಮುಂದೆ ಸಾಗಿತು.

ಈ ಪದ್ಯದಲ್ಲಿ ಸುಗ್ರೀವಾಜ್ಞೆ ಪದ ವಿಶೇಷವಾಗಿ ಕಂಡುಬರುತ್ತದೆ. “ಪಾಲಿಸಲೇ ಬೇಕಾದ ಕಟ್ಟಾಜ್ಞೆ” ಎಂಬ ಅರ್ಥವನ್ನು ಇದು ಒಳಗೊಂಡಿದ್ದು ಪ್ರಸ್ತುತದಲ್ಲೂ ಈ ಪದ ಬಳಕೆಯಾಗುತ್ತಿದೆ.

ಕಳೆದು ಬಂದರು ಪಂಚನಂದಿಯ
ಬಳಿಯಲೊಪ್ಪುವ ಪಂಚನದಿಗಳ
ಹೊಳೆಯ ದಾಂಟುತ ಕಂಡು ಕಿಷ್ಕಿಂಧಾದ್ರಿಗೈತಂದು
ಲಲನೆ ಸೀತಾದೇವಿ ರವಿಜನ
ಲಲನೆಯರ ತಾ ಕರೆಸಿ ತನ್ನೊಡ
ನೊಲಿದು ಬರಬೇಕೆನಲು ಬಂದರು ದೇವಿಯರನೈದಿ ೬೫

ಕಳೆದುಬಂದರು=ದಾಟಿ ಬಂದರು; ಪಂಚನಂದಿಯ= ಪಂಚನಂದಿ ಎಂಬ ಸ್ಥಳದ; ಬಳಿಯಲಿ+ಒಪ್ಪುವ=ಹತ್ತಿರದಲ್ಲಿರುವ; ಪಂಚನದಿಗಳ=ಐದು ನದಿಗಳ; ಹೊಳೆಯ ದಾಂಟುತ=ಹೊಳೆಯನ್ನು ದಾಟುತ್ತಾ; ಕಂಡು; ಕಿಷ್ಕಿಂಧಾ+ಅದ್ರಿಗೆ ಐತಂದು=ಕಿಷ್ಕಿಂಧಾಪರ್ವತಕ್ಕೆ ಬಂದು; ಲಲನೆ=ಸ್ತ್ರೀ; ಸೀತಾದೇವಿಯು; ರವಿಜನ= ಸುಗ್ರೀವನ; ಲಲನೆಯರ=ಸ್ತ್ರೀಯರನ್ನು; ತಾ ಕರಸಿ=ತಾನು ಕರೆಸಿ; ತನ್ನೊಡನೆ+ ಒಲಿದು=ತನ್ನೊಂದಿಗೆ ಪ್ರೀತಿಯಿಂದ; ಬರಬೇಕು+ಎನಲು=ಬರಬೇಕು ಎಂದಾಗ; ದೇವಿಯರನು+ಐದಿ=ಸೀತೆಯೊಂದಿಗೆ ಬಂದರು.

ಪಂಚನಂದಿ ಎಂಬ ಸ್ಥಳದಲ್ಲಿರುವ ಪಂಚನದಿಗಳನ್ನು ದಾಟಿಬಂದರು. ಕಿಷ್ಕಿಂಧಾ ಪರ್ವತಕ್ಕೆ ಬಂದಾಗ ಸೀತಾದೇವಿಯು ಸುಗ್ರೀವನ ನಾರೀ ಬಳಗವನ್ನು ಕರೆಸಿ ತನ್ನೊಡನೆ ಬರಬೇಕೆಂದು ಪ್ರೀತಿಯಿಂದ ಹೇಳಲು ಅವರು ಒಪ್ಪಿಕೊಂಡರು.

ರಾಮನಂತೆಯೇ ಸೀತೆಯೂ ಜನಾನುರಾಗಿಯಾಗಿದ್ದು; ತಮ್ಮೊಡನಿರುವ ವ್ಯಕ್ತಿಗಳನ್ನು ಹಾಗೂ ಅವರ ಸ್ತ್ರೀಯರನ್ನು ಪ್ರೀತಿಯಿಂದ ನಡೆಸಿಕೊಳ್ಳುವುದು ಹಾಗೂ ಅವರನ್ನು ಜೋಪಾನ ಮಾಡುವುದನ್ನು ಕಾಣುತ್ತೇವೆ.

ಹೊಲಬುದಪ್ಪದೆ ಸಕಲ ನಾಯಕ.
ದಳಸಹಿತ ಮುಂಬಟ್ಟೆಯಲಿ ಮುನಿ
ಕುಲದ ದರುಶನವಾಗಲಾಶೀರ್ವಾದವನು ಕೊಂಡು
ಬಳಿವಿಡಿದು ಬರೆ ಜನರ ಪಾಪವ
ಕಳೆದು ಸಲಹುವ ತುಂಗಭದ್ರೆಯ
ಕಳೆದುಬಂದರು ಮುಂದೆ ಭಾರದ್ವಾಜನಾಶ್ರಮಕೆ ೬೬

ಹೊಲಬು+ತಪ್ಪದೆ=ದಾರಿ ತಪ್ಪದೆ; ಸಕಲ=ಎಲ್ಲ; ನಾಯಕ ದಳ ಸಹಿತ=ಸೈನ್ಯ ಹಾಗೂ ಸೇನಾಧಿಪತಿಗಳ ಸಹಿತ; ಮುಂಬಟ್ಟೆಯಲಿ=ಮುಂದಿನ ದಾರಿಯಲಿ; ಮುನಿಕುಲದ=ಮುನಿಗಳ; ದರುಶನವಾಗಲು+ಆಶೀರ್ವಾದವನ್ನು =ಭೇಟಿಯಾದಾಗ ಆಶೀರ್ವಾದವನು; ಕೊಂಡು=ಪಡೆದು; ಬಳಿವಿಡಿದು=ಅನುಸರಿಸಿ; ಬರೆ=ಬರುತ್ತಿರಬೇಕಾದರೆ; ಜನರ; ಪಾಪವ ಕಳೆದು= ಪಾಪವನ್ನು ಹೋಗಲಾಡಿಸಿ; ಸಲಹುವ=ಕಾಪಾಡುವ; ತುಂಗಭದ್ರೆಯ=ತುಂಗಭದ್ರಾನದಿಯನ್ನು ಕಳೆದು ಬಂದರು= ದಾಟಿ ಬಂದರು; ಮುಂದೆ; ಭಾರದ್ವಾಜನ+ಆಶ್ರಮಕೆ=ಭಾರದ್ವಾಜ ಮುನಿಯ ಆಶ್ರಮಕೆ ಬಂದರು.

ದಾರಿ ತಪ್ಪದೆ ಎಲ್ಲಾ ಸೇನಾಧಿಪತಿಗಳ ಸೈನ್ಯದೊಂದಿಗೆ ಬರುತ್ತಿರಬೇಕಾದರೆ, ಮುನಿಗಳ ಭೇಟಿಯಾಗಿ ಅವರಿಂದ ಆಶೀರ್ವಾದವನ್ನು ಪಡೆದುಕೊಂಡು ಮುಂದೆ ಮುಂದೆ ಬರಲು ಜನರ ಪಾಪಗಳನ್ನು ತೊಳೆಯುವ ಹಾಗೂ ಅವರನ್ನು ರಕ್ಷಿಸುವ ತುಂಗಭದ್ರಾನದಿಗಳನ್ನು ದಾಟಿ ಭಾರದ್ವಾಜ ಮುನಿಯ ಆಶ್ರಮಕ್ಕೆ ಬಂದರು.

ರಾಮನು ವನವಾಸದಿಂದ ಹಿಂದಿರುಗಿ ಬರುವಾಗ ಮುನಿಗಳ ದರ್ಶನ ಹಾಗೂ ಆಶೀರ್ವಾದವನ್ನು ಪಡೆದುಕೊಂಡು ತುಂಗಭದ್ರಾ ನದಿಯನ್ನು ದಾಟಿ ಭಾರದ್ವಾಜರ ಆಶ್ರಮಕ್ಕೆ ಬರುವ ಸಂದರ್ಭ.

ಇಳಿದುದಾ ಬನದೊಳಗೆ ಪಾಳಯ
ಬಳಸಿಬಿಟ್ಟುದು ಮೂರು ಯೋಜನ
ದಳತೆಯಲಿ ಕಪಿಸೇನೆಯಾ ಮಧ್ಯದಲಿ ನೃಪಭವನ
ಹಳದಿ ಕೆಂಪಿನ ನೀಲವರ್ಣದ
ಚಳೆಯ ಪಟ್ಟೆಯ ಗುಡಿ ಗುಡಾರದಿ
ಹೊಳೆವ ರತ್ನಗಳಿಂದ ಕಲಶದ ಸಾಲು ರಂಜಿಸಿತು ೬೭

ಇಳಿದುದು=ಬೀಡುಬಿಟ್ಟಿತು; ಆ ಬನದೊಳಗೆ=ಅರಣ್ಯದೊಳಗೆ; ಪಾಳಯ= ಸೈನ್ಯ; ಬಳಸಿ ಬಿಟ್ಟುದು=ಬಳಸಿಕೊಂಡಿತು; ಮೂರು ಯೋಜನದ+ ಅಳತೆಯಲಿ= ಸುಮಾರು ಮೂವತ್ತಾರು ಮೈಲಿಗಳ ದೂರದ ಅಳತೆಯಷ್ಟು; ಕಪಿಸೇನೆ= ಕಪಿಸೈನ್ಯ; ಆ ಮಧ್ಯದಲಿ=ನಡು ಮಧ್ಯೆ; ನೃಪಭವನ=ರಾಜಭವನ; ಹಳದಿ ಕೆಂಪಿನ ನೀಲ ವರ್ಣದ=ಹಳದಿ ಕೆಂಪು ಮತ್ತು ನೀಲಿ ಬಣ್ಣದ; ಚಳೆಯ ಪಟ್ಟೆಯ =ಸಿಂಪಡಿಸಿದ ಬಟ್ಟೆಯ; ಗುಡಿ ಗುಡಾರದಿ=ಗುಡಿ ಗೋಪುರಗಳಿಂದ; ಹೊಳೆಯವ ರತ್ನಗಳಿಂದ =ಹೊಳೆಯುವ ರತ್ನಗಳಿಂದ; ಕಲಶದ ಸಾಲು=ಗೋಪುರದ ಸಾಲು; ರಂಜಿಸಿತು= ಶೋಭಿಸಿತು.

ಸೇನೆಯು ಆ ಅರಣ್ಯದೊಳಗೆ ಬೀಡು ಬಿಟ್ಟಿತು. ಮೂರು ಯೋಜನ ಅಂದರೆ ಸುಮಾರು ಮೂವತ್ತಾರು ಮೈಲುಗಳ ಅಳತೆಯಲ್ಲಿ ಕಪಿಸೇನೆಯು ಡೇರೆ ಗಳನ್ನು ನಿರ್ಮಿಸಿತು. ಮಧ್ಯದಲ್ಲಿ ರಾಜಭವನವನ್ನು ನಿರ್ಮಿಸಿ ಹಳದಿ, ಕೆಂಪು ಮತ್ತು ನೀಲಿ ಬಣ್ಣಗಳನ್ನು ಸಿಂಪಡಿಸಿದ ಬಟ್ಟೆಗಳಿಂದ ಗುಡಿ ಗುಡಾರಗಳನ್ನು ನಿರ್ಮಿಸಿ, ಹೊಳೆಯುವ ರತ್ನಗಳಿಂದ ಗೋಪುರಗಳನ್ನು ಸಾಲು ಸಾಲಾಗಿ ನಿರ್ಮಿಸಿದರು.

ಮುವ್ವತ್ತಾರು ಮೈಲಿಗಳ ಅಳತೆಯಲ್ಲಿ ಗುಡಿ ಗುಡಾರಗಳ ನಿರ್ಮಾಣ ವೆಂದಾಗ ರಾಮನ ಬಳಗದ ಪ್ರಮಾಣವು ನಮಗೆ ಅರಿವಾಗುತ್ತದೆ. ಅಲ್ಲದೆ ಗುಡಾರಗಳನ್ನು ನಿರ್ಮಿಸಲು ಬಳಸುತ್ತಿದ್ದ ವಸ್ತುಗಳ ಬಗೆಗೂ ಕನಕದಾಸರು ಮಾಹಿತಿಯನ್ನು ನೀಡಿದ್ದಾರೆ. 'ಯೋಜನ' ಪದ ಪ್ರಸ್ತುತದಲ್ಲಿ ನಮಗೆ ವಿಶೇಷವಾಗಿ ಕಾಣುತ್ತದೆ. ಒಂದು ಯೋಜನಕ್ಕೆ ಸುಮಾರು ಹನ್ನೆರಡು ಮೈಲಿಗಳು.

ಅರಮನೆಯ ಬಲವಂಕದಲಿ ನಿಜ
ಶರಣನರಮನೆ ವಾಮಭಾಗದಿ
ತರಣಿಸುತ ಸುಗ್ರೀವನಂಗದ ಜಾಂಬವಾದಿಗಳ
ವರ ಭವನವೆಸೆದಿರಲು ಮೇಲು
ಪ್ಪರಿಗೆಗಳ ರಂಜಿಸಿ ಕವಾಟದಿ
ಮೆರೆದುದಗ್ಗದ ನೀರ ರಾಮನ ಪಾಳ್ಯ ಬನದೊಳಗೆ ೬೮

ಅರಮನೆಯ ಬಲವಂಕದಲಿ=ಅರಮನೆಯ ಬಲಗಡೆಗೆ; ನಿಜ ಶರಣನ+ಅರಮನೆ=ಭಕ್ತರ ಮನೆಗಳು; ವಾಮಭಾಗದಿ=ಎಡಭಾಗಕ್ಕೆ; ತರಣಿಸುತ ಸುಗ್ರೀವ=ಸೂರ್ಯಪುತ್ರನಾದ ಸುಗ್ರೀವ; ಅಂಗದ; ಜಾಂಬವ+ಆದಿಗಳ=ಜಾಂಬವ ಮುಂತಾದವರ; ವರ=ಶ್ರೇಷ್ಠವಾದ, ಭವನವು+ಎಸೆದಿರಲು=ಮನೆಗಳು ಕಂಗೊಳಿಸು ತ್ತಿರಲು; ಮೇಲು+ಉಪ್ಪರಿಗೆಗಳ=ಮೇಲು ಮಹಡಿಗಳು; ರಂಜಿಸಿ=ಶೋಭಿಸುತ್ತಿರಲು; ಕವಾಟದಿ = ಬಾಗಿಲು; ಕಪಾಟಗಳಿಂದ; ಅಗ್ಗದ=ಶ್ರೇಷ್ಠ; ವೀರ ರಾಮನ ಪಾಳ್ಯ= ಪರಾಕ್ರಮಿ ರಾಮನ ಸೈನ್ಯದ ಶಿಬಿರ; ಬನದೊಳಗೆ=ಅರಣ್ಯದಲ್ಲಿ; ಮೆರೆದುದು= ಮೆರೆಯುತ್ತಿತ್ತು.

ಅರಮನೆಯ ಬಲಗಡೆಗೆ ಭಕ್ತರ ಮನೆಗಳು, ಎಡಭಾಗದಲ್ಲಿ ಸುಗ್ರೀವ, ಅಂಗದ, ಜಾಂಬವಂತ ಮೊದಲಾದವರ ಮನೆಗಳು, ಮಹಡಿ ಮನೆಗಳು, ಕಿಟಕಿ ಬಾಗಿಲುಗಳು ಮುಂತಾದವುಗಳಿಂದ ವೀರ ರಾಮನ ಪಾಳ್ಯದ ಶಿಬಿರವು ಅರಣ್ಯದಲ್ಲಿ ಮನೋಹರವಾಗಿ ಶೋಭಿಸುತ್ತಿತ್ತು.

ತಾತ್ಕಾಲಿಕ ಶಿಬಿರವನ್ನು ಸೈನಿಕರು ನಿರ್ಮಿಸುತ್ತಿದ್ದ ಬಗೆಯನ್ನು ಕೆಲವೇ ಮಾತುಗಳಲ್ಲಿ ವಿವರವಾಗಿ ಕಟ್ಟಿಕೊಟ್ಟಿದ್ದಾನೆ ಕವಿ. ಊರುಗಳಲ್ಲಿರುವಂತೆ ಒಂದೊಂದು ವೃತ್ತಿಯವರ ಮನೆ ಒಂದೊಂದು ಕಡೆ ಇರುವಂತೆ ಶಿಬಿರದಲ್ಲಿಯೂ ಅದನ್ನು ಅನುಸರಿಸಿರುವುದನ್ನು ಕಾಣುತ್ತೇವೆ.

ಹೊರವಳಯದಲಿ ದಾನವರ ಬಲ
ಶರಧಿ ಬಿಟ್ಟುದು ಬಳಸಿ ಸುತ್ತಲು
ಕರಿತುರಗ ರಥ ಪಾಯ್ದಳವು ಸಂದಣಿಸಿ ನಿಂದಿರಲು
ಮೊರೆವ ರಭಸವ ಕಂಡು ಸುರಮುನಿ

ವರರಿದೇನೋಯೆನುತ ನಿಜಮಂ
ದಿರವ ಹೊರವಂಟಲ್ಲಿ ಕೇಳ್ದರು ರಾಮನತಿಶಯವ ೬೯

ಹೊರವಳಯದಲಿ=ಹೊರ ಭಾಗದಲ್ಲಿ; ದಾನವರ=ಅಸುರರ; ಬಲ ಶರಧಿ=ಸೇನಾ ಸಮುದ್ರ; ಬಿಟ್ಟುದು=ಬೀಡು ಬಿಟ್ಟಿತು; ಬಳಸಿ ಸುತ್ತಲು=ಸುತ್ತಲು ಸುತ್ತುವರೆದು; ಕರಿ=ಆನೆ; ತುರಗ=ಕುದುರೆ; ರಥ; ಪಾಯ್ದಳ=ಪದಾತಿ ಸೈನ್ಯ; ಸಂದಣಿಸಿ=ಒಟ್ಟಾಗಿ; ನಿಂದಿರಲು=ನಿಂತಾಗ; ಮೊರೆವ ರಭಸವ ಕಂಡು=ಆರ್ಭಟಿಸುವ ಸದ್ದನ್ನು ನೋಡಿ; ಸುರ ಮುನಿವರರು+ ಇದೇನೋ+ಎನುತ=ಋಷಿಮುನಿಗಳು; ಇದೇನೆಂದು; ನಿಜಮಂದಿರವ=ತಮ್ಮ ಮನೆಗಳನ್ನು; ಹೊರವಂಟು+ಅಲ್ಲಿ=ಬಿಟ್ಟು ಹೊರಗೆ ಬಂದು; ರಾಮನ=ಶ್ರೀರಾಮನ; ಅತಿಶಯವ=ವಿಶೇಷತೆಯನ್ನು; ಕೇಳ್ದರು=ಕೇಳಿದರು.

ಅರಣ್ಯದಲ್ಲಿ ರಾಮನ ಸೈನ್ಯ ಬೀಡು ಬಿಟ್ಟಾಗ, ದಾನವರ ಸೈನ್ಯವು ಬಿಡಾರದ ಹೊರಭಾಗದಲ್ಲಿ ಬೀಡುಬಿಟ್ಟಿತು. ಸುತ್ತಲೂ ಆನೆ, ಕುದುರೆ, ರಥ ಪಾದಾತಿ ದಳಗಳೂ ಆರ್ಭಟಿಸುತ್ತಿರಬೇಕಾದರೆ ಆ ಸದ್ದಿಗೆ ಋಷಿಮುನಿಗಳು ಬೆಚ್ಚಿ, ಇದೇನು ಎಂದು ಗಾಬರಿಯಿಂದ ತಮ್ಮ ಮನೆಗಳಿಂದ ಹೊರಗೆ ಬಂದು ರಾಮನ ಕೀರ್ತಿಯ ಅತಿಶಯವನ್ನು ಕೇಳಿದರು.

ರಾಜಪ್ರಭುತ್ವದ ಕಾಲಘಟ್ಟದಲ್ಲಿ ರಾಜರಾದಂತಹವರು ಈ ರೀತಿ ತಮ್ಮ ಸೈನ್ಯದೊಂದಿಗೆ ಬೀಡು ಬಿಡುವ, ಗುಡಿ ಗುಡಾರಗಳನ್ನು ನಿರ್ಮಿಸುವ, ಮಾರ್ಗ ಮಧ್ಯದಿ ಋಷಿಮುನಿಗಳನ್ನು ಭೇಟಿಯಾಗಿ ಕುಶಲೋಪರಿ ವಿಚಾರಿಸುವ ಸಂದರ್ಭಗಳು ಸರ್ವೇ ಸಾಮಾನ್ಯ, ಅಂದರೆ ಪ್ರಜಾಪ್ರಭುತ್ವ ಕಾಲದಲ್ಲಿ ಇಂಥ ಸನ್ನಿವೇಶಗಳು ಇಲ್ಲವೇ ಇಲ್ಲ. ಈ ಕಾವ್ಯವನ್ನು ಓದುತ್ತಿದ್ದರೆ ಓದುಗರೂ ಸಹ ರಾಜಪ್ರಭುತ್ವದ ಕಾಲದಲ್ಲೇ ಇದ್ದಂತೆ ಭಾಸವಾಗುತ್ತದೆ.

ಉರಗಮಾಲಿ ಮತಂಗ ಗಾರ್ಗ್ಯಾಂ
ಗಿರಸ ಗಾಲವ ಕಣ್ವ ಜಯಮುನಿ
ಪರಶುರಾಮ ಪರಾಶ ಕೌಶಿಕ ದಾಲ್ಭ್ಯ ಮೊದಲಾದ
ವರಮುನಿಗಳೊಡನೈದಿ ಬಂದನು

ಭರದಿ ಭಾರದ್ವಾಜ ಮುನಿ ರಘು
ವರನ ಕಾಣಿಸಿಕೊಂಡು ಹರಸಿದರತುಳ ವಿಭವದಲಿ ೭೦

ಉರಗಮಾಲಿ, ಮತಂಗ, ಗಾರ್ಗ್ಯ+ಅಂಗಿರಸ; ಗಾಲವ, ಕಣ್ವ, ಜಯಮುನಿ, ಪರಶುರಾಮ, ಪರಾಶ; ಕೌಶಿಕ, ದಾಲ್ಭ್ಯ ಮೊದಲಾದ; ವರಮುನಿಗಳ+ ಒಡನೈದಿ= ಶ್ರೇಷ್ಠಮುನಿಗಳೊಂದಿಗೆ ಬಂದನು; ಭರದಿ=ವೇಗವಾಗಿ; ಭಾರದ್ವಾಜ ಮುನಿ; ರಘುವರನ=ಶ್ರೀರಾಮನಿಗೆ; ಕಾಣಿಸಿಕೊಂಡು; ಅತುಳ ವಿಭವದಲಿ=ವಿಶೇಷ ವೈಭವದಲ್ಲಿ; ಹರಸಿದರು=ಆಶೀರ್ವದಿಸಿದರು.

ಉರಗಮಾಲಿ; ಮತಂಗ; ಗಾರ್ಗ್ಯ, ಅಂಗಿರಸ, ಗಾಲವ, ಕಣ್ವ, ಜಯಮುನಿ, ಪರಶುರಾಮ, ಪರಾಶ, ಕೌಶಿಕ, ದಾಲ್ಭ್ಯ ಮೊದಲಾದ ಶ್ರೇಷ್ಠ ಮುನಿಗಳನ್ನು ಒಟ್ಟುಗೂಡಿಸಿಕೊಂಡು ಕಾತರದಿಂದ ಭಾರದ್ವಾಜ ಮುನಿಯು ಬಂದು ಶ್ರೀರಾಮನನ್ನು ವಿಶೇಷವಾಗಿ ಹರಸಿ ಆಶೀರ್ವದಿಸಿದರು. ರಾಮನ ಆಗಮನ ಎಲ್ಲ ಋಷಿಗಳಿಗೂ ಸಂತೋಷವನ್ನುಂಟುಮಾಡಿದೆ.

ಈ ಪದ್ಯದಲ್ಲಿ ನಾವು ಈವರೆಗೆ ಕೇಳಿರದ ಅನೇಕ ಋಷಿಮುನಿಗಳ ಹೆಸರುಗಳನ್ನು ತಿಳಿಸಿಕೊಟ್ಟಿದ್ದಾರೆ ಕವಿ ಕನಕದಾಸರು.

ಬಂದ ಮುನಿಗವನೀಶ ವಂದಿಸಿ
ನಿಂದು ಕರಗಳ ಮುಗಿದು ವಿನಯದೊ
ಳೆಂದ ನಿಮ್ಮ ಸದಾಗ್ನಿ ಹೋತ್ರ ಸುಯಾಗ ಕರ್ಮಗಳು
ಸಂದ ಜಪತಪಗಳು ಸುರಕ್ಷಿತ
ದಿಂದ ಮೆರೆವುದೆ ದಾನವರ ಭಯ
ದಿಂದ ದುರ್ಘಟವಿಲ್ಲಲಾ ಮುನಿನಾಥ ಕೇಳೆಂದ ೭೧

ಬಂದ ಮುನಿಗೆ+ಅವನೀಶ=ಬಂದ ಋಷಿಮುನಿಗಳಿಗೆ ರಾಜ ಶ್ರೀರಾಮನು; ವಂದಿಸಿ=ನಮಸ್ಕರಿಸಿ; ನಿಂದು=ನಿಂತು; ಕರಗಳ ಮುಗಿದು=ಕೈ ಮುಗಿದು; ವಿನಯದೊಳು+ಎಂದ=ವಿನಯದಿಂದ ಹೇಳಿದ; ನಿಮ್ಮ ಸತ್+ಅಗ್ನಿ=ನಿಮ್ಮ ಸದಗ್ನಿ; ಹೋತ್ರ=ಹೋಮ; ಸುಯಾಗ=ಒಳ್ಳೆಯ ಯಾಗದ; ಕರ್ಮಗಳು=ಕೆಲಸಗಳು; ಸಂದ

ಜಪತಪಗಳು=ಮಾಡಿದ ಜಪತಪಸ್ಸುಗಳು; ಸುರಕ್ಷಿತದಿಂದ=ಸುರಕ್ಷಿತವಾಗಿ; ಮೆರೆವುದೆ= ಈಡೇರಿದುವೆ; ದಾನವರ ಭಯದಿಂದ=ರಾಕ್ಷಸರ ಭಯದಿಂದ; ದುರ್ಘಟವು+ ಇಲ್ಲಲಾ=ತೊಂದರೆಯಾಗಲಿಲ್ಲವಲ್ಲಾ; ಮುನಿನಾಥ ಹೇಳೆಂದ= ಭಾರದ್ವಾಜ ಮುನಿಗಳೇ ಹೇಳಿ ಎಂದ ಶ್ರೀರಾಮ.

ತನ್ನ ಬಳಿಗೆ ಬಂದ ಮುನಿಗಳಿಗೆ ಶ್ರೀರಾಮನು ವಂದಿಸಿ; ಕೈ ಮುಗಿದು, ವಿನಯದಿಂದ ಕೇಳಿದ. ನೀವು ಅಗ್ನಿಯನ್ನು ಉದ್ದೇಶಿಸಿ ಮಾಡುವ ಸದಾಗ್ನಿ ಹೋಮ, ಯಜ್ಞಯಾಗ, ಆಚರಿಸುತ್ತಿರುವ ಜಪ-ತಪಗಳು ಸುರಕ್ಷಿತವಾಗಿ ನಡೆಯುತ್ತಿವೆಯಲ್ಲವೇ ಮುನಿನಾಥ, ರಾಕ್ಷಸರಿಂದ ಯಾವ ರೀತಿಯ ತೊಡಕುಗಳು ಇಲ್ಲವಲ್ಲಾ ಋಷಿ ವರ್ಯರೇ ಅಂತಹ ತೊಡಕುಗಳೇನಾದರೂ ಇದ್ದರೆ ತಿಳಿಸಿ ಎಂದು ಭಾರದ್ವಾಜ ನಲ್ಲಿ ಶ್ರೀರಾಮ ಕೇಳಿದ.

ರಾಮ ಮತ್ತು ಋಷಿಮುನಿಗಳ ವಂದನೆ, ಹಾರೈಕೆಗಳ ಅನಂತರ ಮುನಿಗಳ ಕ್ಷೇಮ ಸಮಾಚಾರವನ್ನು ವಿಚಾರಿಸುವುದು ರಾಜನ ಆದ್ಯ ಕರ್ತವ್ಯ ಇದನ್ನು ಶ್ರೀರಾಮ ಇಲ್ಲಿ ಪಾಲಿಸಿದ.

ದಶರಥಾತ್ಮಜ ನೀನು ಲಂಕೆಯೊ
ಳಸುರ ವೀರರು ಕುಂಭಕರ್ಣನು
ದಶಶಿರನು ಮೊದಲಾದ ದುರ್ಜನರೆಲ್ಲರನು ಮಡುಹಿ
ಅಸುರನನುಜಗೆಯಚಲ ಪದವಿಯ
ನೊಸೆದು ಸಲಹಿದೆ ನಮ್ಮ ಕರುಣಾ
ರಸದಿ ಪಾಲಿಸೆ ಬಂದೆಯೆಂದುಪಚರಿಸಿದನು ನೃಪನ ೭೨

ದಶರಥ+ಆತ್ಮಜ ನೀನು= ದಶರಥನ ಮಗ ನೀನು; ಲಂಕೆಯೊಳು+ಅಸುರ ವೀರರು=ಲಂಕೆಯಲ್ಲಿ ರಾಕ್ಷಸ ವೀರರಾದ; ಕುಂಭಕರ್ಣನು; ದಶಶಿರನು=ಹತ್ತು ತಲೆಯ ರಾವಣನು; ಮೊದಲಾದ; ದುರ್ಜನರು+ ಎಲ್ಲರನು=ಕೆಟ್ಟವರೆಲ್ಲರನು; ಮಡುಹಿ=ಕೊಂದು; ಅಸುರರ=ರಾಕ್ಷಸರ; ಅನುಜಗೆ+ಅಚಲ=ತಮ್ಮನಿಗೆ ಶ್ರೇಷ್ಠವಾದ; ಪದವಿಯನು+ಒಸೆದು=ಅಧಿಕಾರವನ್ನು ಕೊಟ್ಟು; ಸಲಹಿದೆ=ಕಾಪಾಡಿದೆ; ನಮ್ಮ ಕರುಣಾರಸದಿ=ನಮ್ಮನ್ನು ಕರುಣೆಯಿಂದ; ಪಾಲಿಸೆ+ಬಂದೆ+ಎಂದು + ಉಪಚರಿ

ಸಿದನು=ರಕ್ಷಿಸಲು ಬಂದಿದ್ದೀರಿ ಎಂದು ಭಾರದ್ವಾಜ ಮುನಿ ನೃಪನ=ರಾಮನಿಗೆ ಉಪಚಾರದ ಮಾತುಗಳನ್ನಾಡಿದರು.

ದಶರಥನ ಪುತ್ರನಾದ ನೀನು, ಲಂಕೆಯ ದಾನವ ವೀರರಾದ ಕುಂಭಕರ್ಣ; ರಾವಣ ಮೊದಲಾದ ದುಷ್ಟರನ್ನೆಲ್ಲ ಕೊಂದು ಅವರ ತಮ್ಮನಾದ ವಿಭೀಷಣನಿಗೆ ಶ್ರೇಷ್ಠವಾದ ರಾಜ ಪದವಿಯನ್ನು ಪ್ರೀತಿಯಿಂದ ಕೊಟ್ಟಿರುವೆ; ನಮಗೂ ಸಹ ಕರುಣೆದೋರಿ ಸದಾ ಕಾಪಾಡುತ್ತಾ ಬಂದಿರುವೆ ಎಂದು ಭಾರದ್ವಾಜ ಮುನಿ ರಾಮನ ಬಗ್ಗೆ ಮೆಚ್ಚುಗೆಯ ಮಾತಗಳನ್ನಾಡಿದನು.

ರಾಮನ ವ್ಯಕ್ತಿತ್ವವನ್ನು ಶೌರ್ಯವನ್ನು ತಿಳಿಸುವ ವಿಶೇಷ ಸಂದರ್ಭಗಳಿವು. ಗೆದ್ದ ಲಂಕೆಯನ್ನು ರಾವಣನ ತಮ್ಮ ವಿಭೀಷಣನಿಗೆ ಒಪ್ಪಿಸುವುದು ಒಂದಾದರೆ, ಋಷಿಗಳಿಗೆ ಸದಾ ಬೆಂಗಾವಲಾಗಿ ನಿಲ್ಲುವುದು ಇನ್ನೊಂದು ಸನ್ನಿವೇಶವಾಗಿದೆ.

ಕಮಲಸಂಭವನಿತ್ತ ವರದಲಿ
ಕುಮತಿ ದಾನವರತುಳ ಬಲದಿಂ
ದುರುಳ ಕಂಟಕರಾಗಿ ಮಡಿದರು ನಿನ್ನ ಬಾಣದಲಿ
ತಮದ ಗಂಟಲನೊಡದು ಮೂಡುವ
ದ್ಯುಮಣಿಯಂದದಿ ನೀವು ಜನಿಸಿರ
ಲೆಮಗೆ ದನುಜಾಧಮರ ಭಯವೇನೆಂದನಾ ಮುನಿಪ ೭೩

ಕಮಲಸಂಭವನು+ಇತ್ತ=ಬ್ರಹ್ಮನು ಕೊಟ್ಟ; ವರದಲಿ=ವರದಿಂದ; ಕುಮತಿ= ಕೆಟ್ಟಬುದ್ಧಿಯ; ದಾನವರು=ರಾಕ್ಷಸರು; ಅತುಳ ಬಲದಿಂ=ಅಸಾಮಾನ್ಯ ಬಲದಿಂದ; ದುರುಳ ಕಂಟಕರಾಗಿ=ಲೋಕ ಕಂಟಕರಾಗಿ; ಮಡಿದರು=ಸತ್ತರು; ನಿನ್ನ ಬಾಣದಲಿ; ತಮದ=ಕತ್ತಲ; ಗಂಟಲನೊಡೆದು; ಮೂಡುವ=ಉದಯಿಸುವ; ದ್ಯುಮಣಿಯಂದದಿ = ಸೂರ್ಯನಂತೆ; ನೀವು ಜನಿಸಿರಲು+ ಎಮಗೆ=ನಮಗಾಗಿ ಜನ್ಮಪಡೆದಿರುವಿರಿ; ದನುಜ+ಅಧಮರ=ಕೀಳು ರಾಕ್ಷಸರ; ಭಯವೇನು+ಎಂದನು=ಭಯವೇನು ನಮಗೆ ಎಂದನು; ಆ ಮುನಿಪ=ಭಾರದ್ವಾಜ ಮುನಿ.

ಬ್ರಹ್ಮನು ಕೊಟ್ಟ ವರದಿಂದ ಕೆಟ್ಟ ಬುದ್ಧಿಯ ರಾಕ್ಷಸರು, ಅಸಾಮಾನ್ಯ ಸಾಮರ್ಥ್ಯವನ್ನು ಪಡೆದು ಲೋಕ ಕಂಟಕರಾಗಿ ಕೊನೆಗೆ ನಿನ್ನ ಬಾಣಗಳಿಂದ ಮಡಿದರು. ಅಂಧಕಾರದ ಗಂಟಲ ಮೆಟ್ಟಿ ಮೂಡಿ ಬರುವ ಸೂರ್ಯನ ಹಾಗೆ ನಮಗಾಗಿ ನೀವು ಜನಿಸಿರುವಿರಿ; ಇನ್ನು ಕೀಳು ರಾಕ್ಷಸರ ಭಯವೇಕೆ ನಮಗೆ? ಎಂದನು ಭಾರದ್ವಾಜ ಮುನಿ.

ಶ್ರೀರಾಮನ ಜನ್ಮ ತಾಳುವಿಕೆಯನ್ನು ಕವಿ ಸೂರ್ಯನ ಉದಯಕ್ಕೆ ಹೋಲಿಸಿದ್ದಾನೆ. ಸೂರ್ಯನ ಉದಯ ಅಂಧಕಾರವನ್ನು ಹೋಗಲಾಡಿಸಿದಂತೆ, ರಾಮ ದುಷ್ಟರನ್ನು ನಿಗ್ರಹಿಸುವನು ಎಂಬ ಉಪಮೆ ಇಲ್ಲಿದೆ.

ಅರಸ ಕೇಳ್ದಾ ಮುನಿಯ ವಚನದ
ಕರುಣರಸಧಾರೆಯಲಿ ಯಂತಃ
ಕರಣ ನನದುಪಚರಿಸಿ ಕುಳ್ಳಿರಿಸಿದನು ಮುನಿವರರ
ಮರುತಸುತನನು ಕರೆದು ತವಕದಿ
ಭರತನನು ಸಂತೈಸು ಹೋಗೆಂ
ದುರುತರದ ಪ್ರೇಮದಲಿ ಕಳುಹಿಸಲೆರಗಿ ಹೊರವಂಟ ೭೪

ಅರಸ=ಶ್ರೀರಾಮ; ಕೇಳ್ದು+ಆ=ಕೇಳಿ ಆ; ಮುನಿಯ=ಋಷಿಯ; ವಚನದ= ಮಾತಿನ; ಕರುಣ ರಸ ಧಾರೆಯಲಿ=ಕರುಣ ರಸದ ಧಾರೆಯಿಂದ; ಅಂತಃಕರಣ= ಮನಸ್ಸು; ನನೆದು=ಆರ್ದ್ರಗೊಂಡು; ಉಪಚರಿಸಿ=ಉಪಚಾರ ಮಾಡಿ; ಕುಳ್ಳಿರಿಸಿದನು= ಕೂರಿಸಿದನು; ಮುನಿವರರ=ಮುನಿ ಶ್ರೇಷ್ಠರನ್ನು; ಮರುತಸುತನನ್ನು= ವಾಯು ಪುತ್ರನಾದ ಹನುಮನನ್ನು; ಕರೆದು; ತವಕದಿ=ಬೇಗನೇ; ಭರತನನು; ಸಂತೈಸು= ಸಮಾಧಾನ ಪಡಿಸು; ಹೋಗು+ಎಂದು+ಉರುತರದ=ಹೋಗೆಂದು; ಅತಿಯಾದ ಪ್ರೇಮದಲಿ= ಪ್ರೀತಿಯಿಂದ; ಕಳುಹಿಸಲು+ಎರಗಿ=ಕಳುಹಿಸಿದಾಗ ನಮಸ್ಕರಿಸಿ; ಹೊರವಂಟ=ಹೊರ ಹೋದ.

ಭಾರದ್ವಾಜ ಮುನಿಯ ಮಾತಿನಿಂದ ಹರಿದ, ಧಾರಾಕಾರವಾದ ಕರುಣಾ ರಸದಿಂದ ರಾಮನ ಅಂತಃಕರಣ ಒದ್ದೆಗೊಂಡು; ಅವರನ್ನು ಕೂರಿಸಿ ಉಪ ಚರಿಸಿದನು. ವಾಯುಪುತ್ರನಾದ ಹನುಮನನ್ನು ಕರೆದು “ಶೀಘ್ರದಲ್ಲಿ ಹೋಗಿ

ಭರತನನ್ನು ಸಾಂತ್ವನಗೊಳಿಸು," ಎಂದು ಉತ್ಕಟ ಪ್ರೀತಿಯಿಂದ ಕಳುಹಿಸಲು, ಹನುಮ ರಾಮನಿಗೆ ನಮಸ್ಕರಿಸಿ ಹೊರಟ.

ವನವಾಸದ ಸಂದರ್ಭದಲ್ಲೂ ಸೈನಿಕರು, ಋಷಿಗಳು, ಸೇವಕರ ನಡುವೆಯೂ ತಮ್ಮನಾದ ಭರತನನ್ನು ಸ್ಮರಿಸುತ್ತಾನೆ. ಇವರಿಬ್ಬರ ಸೋದರ ವಾತ್ಸಲ್ಯ; ಅನುಕರಣೀಯ ಅನನ್ಯ.

ಹರಿವ ಗಂಗಾನದಿಯ ದಾಂಟುತ
ಭರದಿ ಕಂಡನು ಶೃಂಗಬೇರೀ
ಪುರವ ಹೊಕ್ಕನು ಗುಹನ ಕಾಣಿಸಿಕೊಂಡನುಚಿತದಲಿ
ಮರುತ ಬಿನ್ನೈಸಿದನು ರಘುನೃಪ
ವರನು ಪೇಳಿದ ಬುದ್ಧಿಯನು ವಿ
ಸ್ತರಿಸೆ ನಿಷಧಾಧಿಪತಿ ಕೇಳ್ದತಿಶಯದ ಹರುಷದಲಿ ೭೫

ಹರಿವ ಗಂಗಾನದಿಯ; ದಾಂಟುತ=ದಾಟುತ್ತಾ; ಭರದಿ=ವೇಗವಾಗಿ; ಕಂಡನು=ನೋಡಿದನು; ಶೃಂಗಬೇರೀಪುರವ; ಹೊಕ್ಕನು=ಪ್ರವೇಶಿಸಿದನು; ಗುಹನ ಕಾಣಿಸಿಕೊಂಡನು+ಉಚಿತದಲಿ=ಅದೇ ಸಮಯಕ್ಕೆ ಗುಹನು ಕಾಣಿಸಿಕೊಂಡನು; ಮರುತ=ವಾಯುಪುತ್ರ ಹನುಮನು; ಬಿನ್ನೈಸಿದನು=ಹೇಳಿಕೊಂಡನು; ರಘುನೃಪ ವರನು=ರಘುಕುಲಶ್ರೇಷ್ಠನಾದ ರಾಮನು; ಪೇಳಿದ=ಹೇಳಿದ; ಬುದ್ಧಿಯನು ವಿಸ್ತರಿಸೆ= ವಿಚಾರಗಳನ್ನು ವಿವರಿಸಲಾಗಿ; ನಿಷಧ+ಅಧಿಪತಿ=ಬೇಡರ ಒಡೆಯ; ಕೇಳ್ದು=ಕೇಳಿ; ಅತಿಶಯದ ಹರುಷದಲಿ=ಅತಿಶಯವಾದ ಸಂತೋಷದಿಂದ.

ಹರಿಯುವ ಗಂಗಾನದಿಯನ್ನು ವೇಗವಾಗಿ ದಾಟುತ್ತಾ, ಅಲ್ಲಿ ಕಂಡ ಶೃಂಗಬೇರೀಪುರವನ್ನು ಹನುಮ ಪ್ರವೇಶಿಸಿದ. ಅದೇ ಸಮಯಕ್ಕೆ ಗುಹನು ಕಾಣಿಸಿಕೊಳ್ಳಲು, ಹನುಮನು ರಾಮ ತನಗೆ ಹೇಳಿ ಕಳುಹಿಸಿದ ವಿಷಯವನ್ನೆಲ್ಲಾ ವಿವರಿಸಿದಾಗ, ಕೇಳಿದ ಬೇಡರ ನಾಯಕ ಹರ್ಷ ಚಿತ್ತನಾದ.

ಗುಹನ ಪಾತ್ರ ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಬೇಡರ ಅರಸನಾದ ಈತ ದಶರಥನ ಆಪ್ತಮಿತ್ರನೂ ಹೌದು, ರಾಮ ಶೃಂಗಬೇರೀಪುರಕ್ಕೆ ಬಂದ

ಸಂದರ್ಭದಲ್ಲಿ ಅಷ್ಟೂ ಜನರಿಗೂ ದೋಣಿಗಳನ್ನು ತರಿಸಿ ಗಂಗೆಯ ದಕ್ಷಿಣತೀರಕ್ಕೆ ದಾಟಿಸಿದ.

ಅನಿಲಸುತ ಬಾ ಮಗನೆ ರಘುನಂ
ದನಗೆ ನಿನ್ನವೊಲಾಪ್ತರಾರೀ
ದನುಜ ಮನುಜ ಭುಜಂಗರೊಳುಂಟೆ ನಿನ್ನ ಹೋಲುವರು
ಹನುಮ ನಂದೀಗ್ರಾಮದಲಿ ಭರ
ತನಿಹನಗ್ರಜನಗಲ್ದ ಖೇದದ
ಮನದ ಪರಿತಾಪವನು ಮಾಣಿಸು ಬೇಗ ಹೋಗೆಂದ ೭೬

ಅನಿಲಸುತ=ಹನುಮಂತ; ಬಾ ಮಗನೆ; ರಘುನಂದನಗೆ=ಶ್ರೀರಾಮನಿಗೆ; ನಿನ್ನ ವೊಲು+ಆಪ್ತರು+ಆರು=ನಿನ್ನ ಹಾಗೆ ಹತ್ತಿರವಾದಂತವರು ಯಾರು; ಈ ದನುಜ=ರಾಕ್ಷಸ; ಮನುಜ=ಮನುಷ್ಯ; ಭುಜಂಗರೊಳುಂಟೆ=ಹಾವುಗಳಲ್ಲಿ ಇದ್ದಾ ರೆಯೇ; ನಿನ್ನ ಹೋಲುವರು=ನಿನ್ನ ಹೋಲುವಂತವರು; ಹನುಮ; ನಂದೀ ಗ್ರಾಮ ದಲ್ಲಿ; ಭರತನು+ಇಹನು=ಭರತನಿರುವನು; ಅಗ್ರಜನಗಲ್ದ= ಹಿರಿಯಣ್ಣನಿಂದ ಅಗಲಿದ; ಖೇದದ=ಬೇಸರದ; ಮನದ ಪರಿತಾಪವನು=ಮನಸ್ಸಿನ ದುಃಖವನು; ಮಾಣಿಸು= ಹೋಗಲಾಡಿಸು; ಬೇಗ; ಹೋಗು+ಎಂದ=ಹೋಗಲು ಹೇಳಿದ.

ಗುಹನು ''ಅನಿಲಸುತನೇ ಬಾ ಮಗನೆ'' ಎಂದು ಹತ್ತಿರ ಕರೆದು ''ರಾಮನಿಗೆ ನಿನ್ನ ಹಾಗೆ ಆಪ್ತರಾದವರು ಅಸುರ, ಮನುಷ್ಯ, ನಾಗಲೋಕಗಳಲ್ಲಿ ಯಾರಿದ್ದಾರೆ, ನಂದೀ ಗ್ರಾಮದಲ್ಲಿರುವ ಅವರ ಸಹೋದರ ಭರತ ರಾಮನಿಂದ ದೂರವಾಗಿ ಅಧಿಕ ಬೇಸರ, ದುಃಖದಲ್ಲಿರುವನು ನೀನು ಬೇಗ ಹೋಗಿ ಅವನ ಮನದ ಬೇಸರವನ್ನು ಹೋಗಲಾಡಿಸು'' ಎಂದು ಗುಹ ಹನುಮನಿಗೆ ತಿಳಿಸಿದ.

ಈಗಿನಂತೆ ಆಧುನಿಕ ಸಾರಿಗೆ ಸೌಲಭ್ಯಗಳು ಇಲ್ಲದ ಆ ಕಾಲದಲ್ಲಿ ಯಾವುದೇ ಸುದ್ದಿಯನ್ನು ಮುಟ್ಟಿಸಬೇಕಾದರೆ ಹನುಮನಂಥವರ ಆವಶ್ಯಕತೆ ಅನಿವಾರ್ಯವಾಗಿತ್ತು.

ಹರುಷಮಿಗೆ ಜನಪದದ ಪರಿಯಂ
ತರದಿ ಬಂದನಿಲಜನ ಕಳುಹಿಸಿ

ಮರಳಿದನು ಗುಹಸಿತ್ತ ಮಾರುತಿ ಮುಂದೆ ಪಥವಿಡಿದು
ಬರುತ ಮಾರ್ಗಾಂತರದಿ ಕಾನನ
ಗಿರಿ ಶಿಖರಗಳ ಕಳೆದು ಬರೆ ವಿ
ಸ್ತರದ ನಂದೀಗ್ರಾಮವನು(ಕಂಡಲ್ಲಿ) ಮನನಲಿದು ೭೭

ಹರುಷಮಿಗೆ=ಸಂತೋಷ ಹೆಚ್ಚಾಗಿ; ಜನಪದದ=ಜನರೆಲ್ಲಾ; ಪರಿಯಂತರದಿ= ಆ ಪ್ರದೇಶದ ಗಡಿತನಕ; ಬಂದು+ಅನಿಲಜನ=ಬಂದು ಹನುಮಂತನನ್ನು; ಕಳುಹಿಸಿ; ಮರಳಿದನು=ಹಿಂದಿರುಗಿದನು; ಗುಹನು+ಇತ್ತ=ಗುಹನ ಈ ಕಡೆ; ಮಾರುತಿ =ಹನುಮನು; ಮುಂದೆ; ಪಥವಿಡಿದು=ದಾರಿ ಸಾಗುತ್ತಾ; ಬರುತ= ಬರುತ್ತಿರಲು; ಮಾರ್ಗ+ಅಂತರದಿ=ಮಾರ್ಗ ಮಧ್ಯೆ; ಕಾನನ=ಕಾಡು; ಗಿರಿಶಿಖರ= ಪರ್ವತಶಿಖರ; ಕಳೆದು ಬರೆ=ದಾಟಿ ಬರಲು; ವಿಸ್ತರದ=ವಿಸ್ತಾರವಾದ; ನಂದೀಗ್ರಾಮವನು; ಕಂಡು+ಅಲ್ಲಿ=ನೋಡಿ ಅಲ್ಲಿ; ಮನನಲಿದು=ಸಂತೋಷಪಟ್ಟು.

ಶೃಂಗಬೇರೀಪುರದ ಜನರೆಲ್ಲಾ ಗುಹನೊಂದಿಗೆ ಗಡಿ ತನಕ ಬಂದು, ಹನುಮನನು ಸಂತೋಷದಿಂದ ಬೀಳ್ಕೊಟ್ಟು ಮರಳಿದರು, ಇತ್ತ ಹನುಮ ದಾರಿ ಹಿಡಿದು ಮುಂದೆ ಸಾಗಲು, ಮಾರ್ಗದ ಮಧ್ಯೆ ಸಿಕ್ಕ ಅರಣ್ಯ, ಬೆಟ್ಟದ ಶಿಖರಗಳನ್ನು ದಾಟಿ ವಿಸ್ತಾರವಾದ ನಂದಿ ಗ್ರಾಮವನ್ನು ಕಂಡು ಸಂತಸಗೊಂಡ.

ಗುಹ ಮೊದಲಾದ ಬೇಡರ ಬಳಗದ ಆತಿಥ್ಯದಿಂದ ಸಂತಸಗೊಂಡು, ಮಾರ್ಗಾಯಾಸವನ್ನು ಮರೆತು ನಂತರ ಕಾಡು ಬೆಟ್ಟ ಗುಡ್ಡಗಳ ದಾಟಿ ಹನುಮ ನಂದಿಗ್ರಾಮಕ್ಕೆ ಬಂದ.

ಬಂದು ಭರತನ ಕಂಡು ನಮಿಸಿದ
ಡೆಂದ ನೀನಾರಿಲ್ಲಿಗಿಂದ್ಯೆ
ತಂದ ಕಾರಣವೇನು ನಿನ್ನಭಿಧಾನವೇನೆನಲು
ನಿಂದು ಕೈಗಳ ಮುಗಿದು ನಸುನಗೆ
ಯಿಂದ ನುಡಿದನು ಹನುಮ ತಾ ರಘು
ನಂದನನ ಸೇವಕನು ಕಳುಹಿದ ದೇವ ನಿಮ್ಮಡಿಗೆ ೭೮

ಬಂದು ಭರತನ ಕಂಡು=ನಂದಿಗ್ರಾಮಕ್ಕೆ ಬಂದು ಭರತನನ್ನು ಕಂಡು; ನಮಿಸಿದಡೆ+ಎಂದ=ನಮಸ್ಕರಿಸಿದಾಗ ಎಂದನು: ಭರತ; ನೀನಾರು+ಇಲ್ಲಿಗೆ+ ಇಂದು+ಐತಂದ=ನೀನು ಯಾರು ಇಲ್ಲಿಗೆ ಇಂದು ಬಂದ; ಕಾರಣವೇನು; ನಿನ್ನ ಅಭಿಧಾನ ವೇನು+ಎನಲು=ನಿನ್ನ ಹೆಸರೇನು ಎಂದಾಗ; ನಿಂದು=ಎದ್ದು ನಿಂತು; ಕೈಗಳ ಮುಗಿದು; ನಸುನಗೆಯಿಂದ=ಮುಗುಳ್ನಗೆಯಿಂದ; ನುಡಿದನು=ಹೇಳಿದನು; ಹನುಮ; ತಾ=ತಾನು; ರಘುನಂದನನ=ಶ್ರೀರಾಮನ; ಸೇವಕನು; ಕಳುಹಿದ=ಕಳುಹಿಸಿದ; ದೇವ ನಿಮ್ಮಡಿಗೆ=ದೇವನಾದ ಶ್ರೀರಾಮನು ನಿಮ್ಮ ಬಳಿಗೆ.

ನಂದೀಗ್ರಾಮಕ್ಕೆ ಬಂದು ಭರತನನ್ನು ಕಂಡು ನಮಸ್ಕರಿಸಿದಾಗ ಭರತನು ನೀನಾರು ಇಲ್ಲಿಗೆ ಬಂದ ಕಾರಣವೇನು? ನಿನ್ನ ಹೆಸರೇನು? ಎಂದೆಲ್ಲಾ ಕೇಳಿದಾಗ ಹನುಮನು ಗೌರವದಿಂದ ನಿಂತು ಕೈ ಮುಗಿದು, ಮುಗುಳ್ನಗುತ್ತಾ ಹೇಳುತ್ತಾನೆ. ನಾನು ರಘುವಂಶದ ಶ್ರೀರಾಮನ ಸೇವಕನು; ದೇವ ಶ್ರೀರಾಮನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ ಎಂದು ಪರಿಚಯಿಸಿಕೊಂಡ.

ವಿಚಿತ್ರ ರೂಪದ ಹನುಮನ ಅನಿರೀಕ್ಷಿತ ಆಗಮನದಿಂದ ಅವಾಕ್ಕಾದ ಭರತನು "ನೀನು ಯಾರು ನಿನ್ನ ಹೆಸರೇನು" ಎಂದೆಲ್ಲಾ ಕೇಳುವುದು ಸಹಜವೇ ಆಗಿದೆ.

ರಾವಣನ ಸಂಹರಿಸಿ ಲಂಕೆಯ
ನಾ ವಿಭೀಷಣಗಿತ್ತು ಸೀತಾ
ದೇವಿ ಲಕ್ಷ್ಮಣಸಹಿತ ಭಾರದ್ವಾಜನಾಶ್ರಮಕೆ
ದೇವ ಬಂದನು ಸಕಲ ವಿಭವದಿ
ನೀವು ಚಿತ್ತದೊಳವಧರಿಸಿಯೆನೆ
ಪಾವಮಾನಿಯ ನುತಿಸಿ ತಕ್ಕೈಸಿದನು ಭರತೇಂದ್ರ ೭೯

ರಾವಣನ ಸಂಹರಿಸಿ=ರಾವಣನನ್ನು ಕೊಂದು; ಲಂಕೆಯನು+ಆ=ಲಂಕಾ ದೇಶವನ್ನು ಆ; ವಿಭೀಷಣನಿಗೆ+ಇತ್ತು=ವಿಭೀಷಣನಿಗೆ ಕೊಟ್ಟು; ಸೀತಾದೇವಿ ಲಕ್ಷ್ಮಣ ಸಹಿತ=ಸೀತೆ ಮತ್ತು ಲಕ್ಷ್ಮಣರೊಂದಿಗೆ; ಭಾರದ್ವಾಜನ+ಆಶ್ರಮಕೆ=ಭಾರದ್ವಾಜ ಋಷಿಯ ಆಶ್ರಮಕ್ಕೆ; ದೇವ ಬಂದನು=ಶ್ರೀರಾಮ ಬಂದನು; ಸಕಲ ವಿಭವದಿ=ಸಕಲ

ವೈಭವದೊಂದಿಗೆ; ನೀವು ಚಿತ್ತದೊಳು+ ಅವಧರಿಸು+ಎನೆ=ಮನಸಿಟ್ಟುಕೇಳು ಎಂದಾಗ ;ಪಾವಮಾನಿಯ=ಹನುಮನನ್ನು; ನುತಿಸಿ=ಸ್ತುತಿಸಿ; ತಕ್ಕೈಸಿದನು= ಆಲಿಂ ಗಿಸಿ ಕೊಂಡನು; ಭರತೇಂದ್ರ=ರಾಜ ಭರತನು.

ರಾವಣನನ್ನು ಸಂಹರಿಸಿ, ಲಂಕೆಯ ಪಟ್ಟವನ್ನು ವಿಭೀಷಣನಿಗೆ ಕಟ್ಟಿ, ಸೀತಾಮಾತೆ ಮತ್ತು ಲಕ್ಷ್ಮಣರೊಂದಿಗೆ ಭಾರದ್ವಾಜನ ಆಶ್ರಮಕ್ಕೆ ಸಕಲ ವೈಭವದೊಂದಿಗೆ ಶ್ರೀರಾಮನು ಬಂದಿರುವನು, ನೀವು ಗಮನವಿಟ್ಟು ಕೇಳಿಸಿಕೊಳ್ಳಿ ಎಂದು ಹನುಮಂತ ಹೇಳಿದಾಗ ಭರತನು ಪ್ರೀತಿಯಿಂದ ಆಲಿಂಗಿಸಿಕೊಂಡ.

ವನವಾಸದಿಂದ ಹಿಂದಿರುಗಿ ಬರುವಾಗ ರಾಮ ಮಾಡಿದ ಕಾರ್ಯಗಳ ವರದಿಯನ್ನು ಕೆಲವೇ ಸಾಲುಗಳಲ್ಲಿ ಭರತನಿಗೆ ಹೇಳುವುದರ ಮೂಲಕ ಹನುಮ ತನ್ನ ಪರಿಚಯವನ್ನು ಮಾಡಿಕೊಂಡು ಮೆಚ್ಚುಗೆಯನ್ನು ಗಳಿಸಿದ.

ಹರುಷ ಹೆಚ್ಚಿದ ಮನದಿ ತಮ್ಮನ
ಕರೆದು ಶತ್ರುಘ್ನನನಯೋಧ್ಯಾ
ಪುರಿಗೆ ಕಳುಹಿದ ಜನನಿಯರಿಗೀ ವಾರ್ತೆಯೆಲ್ಲವನು
ಅರುಹಿ ಬಾಯೆನಲಗ್ರಜನ ಸಿರಿ
ಚರಣಕಭಿಮುಖನಾಗಿ ವಂದಿಸಿ
ಹರುಷ ಮಿಗೆ ಹೊರವಂಟು ಹೊಕ್ಕನಯೋಧ್ಯ ಪುರವರವ ೮೦

ಹರುಷ ಹೆಚ್ಚಿದ ಮನದಿ=ಮನದಲ್ಲಿ ಸಂತಸ ಹೆಚ್ಚಾಗಿ; ತಮ್ಮನ ಕರೆದು; ಶತ್ರುಘ್ನನನ್ನು+ಅಯೋಧ್ಯಾಪುರಿಗೆ=ಶತ್ರುಘ್ನನನ್ನು ಅಯೋಧ್ಯಾನಗರಕ್ಕೆ; ಕಳುಹಿದ= ಕಳುಹಿಸಿದ; ಜನನಿಯರಿಗೆ+ಈ=ಮಾತೆಯರಿಗೆ ಈ; ವಾರ್ತೆ+ಎಲ್ಲವನು=ಎಲ್ಲ ಸುದ್ದಿಯನು; ಅರುಹಿ=ತಿಳಿಸಿ; ಬಾ+ಎನಲು=ಬಾ ಎಂದಾಗ; ಅಗ್ರಜನ=ಅಣ್ಣನ; ಸಿರಿಚರಣಕೆ+ಅಭಿಮುಖನಾಗಿ=ಪವಿತ್ರ ಪಾದಗಳಿಗೆ ಎದುರು ನಿಂತು; ವಂದಿಸಿ= ನಮಸ್ಕರಿಸಿ; ಹರುಷಮಿಗೆ=ಅತೀವ ಸಂತೋಷದಿಂದ; ಹೊರವಂಟು= ಹೊರಟು; ಹೊಕ್ಕನು+ಅಯೋಧ್ಯ ಪುರವರವ=ಶ್ರೇಷ್ಠವಾದ ಅಯೋಧ್ಯಾನಗರಿಯನ್ನು ಹೊಕ್ಕನು.

ಶ್ರೀರಾಮನ ಆಗಮನದ ಸುದ್ದಿಯಿಂದ ಭರತ ಸಂತೋಷಭರಿತನಾಗಿ ತಮ್ಮ ಶತ್ರುಘ್ನನನ್ನು ಕರೆದು, ಅಯೋಧ್ಯಾನಗರಿಗೆ ಹೋಗಿ ಮಾತೆಯರಿಗೆ ಈ ಸುದ್ದಿಯನು ಮುಟ್ಟಿಸಿ ಬಾ ಎನಲು, ಶತ್ರುಘ್ನನು ಭರತನ ಪಾದಗಳಿಗೆ ನಮಸ್ಕರಿಸಿ ಉತ್ಸಾಹದಿಂದ ಅಯೋಧ್ಯಾನಗರಕ್ಕೆ ಹೋದನು.

ರಾಮನ ಬರುವಿಕೆ ಭರತ ಶತ್ರುಘ್ನರಲ್ಲಿ ಹೊಸ ಚೈತನ್ಯವನ್ನು ತಂದಿದೆ, ರಾಮ ಕಾಡಿಗೆ ಹೋದಾಗ ಸೋದರ ಲಕ್ಷ್ಮಣನೂ ಜೊತೆಯಲ್ಲಿ ಹೋಗುವುದು, ಸೋದರ ಸಂಬಂಧಕ್ಕೆ ಒಳ್ಳೆಯ ನಿರ್ದಶನವಾದರೆ, ರಾಮನ ಪಾದುಕೆಗಳನ್ನಿಟ್ಟು ರಾಜ್ಯಭಾರ ಮಾಡುವ ಭರತ ಮತ್ತೊಂದು ನಿದರ್ಶನ, ಭರತ ತನ್ನ ಅಣ್ಣನ ಆಗಮನದ ಸುದ್ದಿಯನ್ನು ಮಾತೆಯರಿಗೆ ಮುಟ್ಟಿಸು ಎಂದು ಶತ್ರುಘ್ನನಿಗೆ ಹೇಳಿದಾಗ ಶತ್ರುಘ್ನ ವಿಧೇಯನಾಗಿ ಭರತನ ಪಾದಗಳಿಗೆ ವಂದಿಸಿ, ಅಣ್ಣನ ಆಜ್ಞೆಯನ್ನು ಪಾಲಿಸುವುದು ಮತ್ತೊಂದು ನಿದರ್ಶನ. ನಾಲ್ಕು ಜನ ಸಹೋದರರೂ ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ, ಗೌರವಗಳನ್ನು ಹೊಂದಿರುವುದು ಪ್ರಸ್ತುತಕ್ಕೆ ಅಗತ್ಯವಿದೆ.

ಚೀರಿದವು ಕಹಳೆಗಳು ತಮ್ಮಟೆ
ಭೇರಿ ಶಂಖ ನಿನಾದ ಹಬ್ಬಿತು
ಸಾರಿ ತಂದಿನ ದಿವಸದಲಿ ಶತ್ರುಘ್ನ ಬಂದನೆನೆ
ಆರತಿಯ ತಳಿಗೆಗಳ ಸಂದಣಿ
ಕೇರಿ ಕೇರಿಯೊಳೈದಿದವು ಕೈ
ವಾರಿಗಳ ಗಡಣದಲಿ ಹೊಕ್ಕನು ರಾಜ ಮಂದಿರವ ೮೧

ಚೀರಿದವು ಕಹಳೆಗಳು=ಕೂಗಿದವು ಕಹಳೆಗಳು; ತಮ್ಮಟೆ ಭೇರಿ ಶಂಖ ನಿನಾದ ಹಬ್ಬಿತು=ತಮಟೆ ಭೇರಿ ಶಂಖಗಳ ಸದ್ದು ಎಲ್ಲಾ ಕಡೆ ಹಬ್ಬಿತು; ಸಾರಿತು+ಅಂದಿನ=ಘೋಷಿಸಿತು ಅಂದಿನ; ದಿವಸದಲಿ=ದಿನ; ಶತ್ರುಘ್ನ ಬಂದನು+ ಎನೆ=ಶತ್ರುಘ್ನ ಬಂದನು ಎಂದಾಗ; ಆರತಿಯ; ತಳಿಗೆಗಳ=ತಟ್ಟೆಗಳ; ಸಂದಣಿ= ಗುಂಪು; ಕೇರಿ ಕೇರಿಯೊಳು=ಬೀದಿ ಬೀದಿಗಳಲ್ಲಿ; ಐದಿದವು=ಸೇರಿದವು; ಕೈವಾರಿಗಳ= ಹೊಗಳುಭಟ್ಟರ; ಗಡಣದಲಿ=ಸಮೂಹದೊಂದಿಗೆ; ಹೊಕ್ಕನು ರಾಜಮಂದಿರವ= ರಾಜಮಂದಿರವನ್ನು ಪ್ರವೇಶಿಸಿದ.

ಕಹಳೆಗಳು ಕೂಗಿಕೊಂಡವು; ತಮಟೆ ಭೇರಿ ಶಂಖದ ಧ್ವನಿ ಎಲ್ಲಾ ಕಡೆಗೂ ಹಬ್ಬಿತು. ಶತ್ರುಘ್ನ ಈ ದಿನ ಬರುವನು ಎಂದು ಎಲ್ಲಾ ಕಡೆ ಘೋಷಿಸಿದರು, ಬೀದಿ ಬೀದಿಗಳಲ್ಲಿ ಆರತಿಯ ತಟ್ಟೆಗಳ ಹಿಡಿದು ಹೆಂಗಳೆಯರು ಸಿದ್ಧರಾದರು. ಹೊಗಳು ಭಟ್ಟರ ಗುಂಪಿನ ನಡುವೆ ಅರಮನೆಯನ್ನು ಶತ್ರುಘ್ನ ಪ್ರವೇಶಿಸಿದ.

ರಾಜರ ಆಗಮನವನ್ನು ಕಹಳೆ, ತಮಟೆ, ಭೇರಿ, ಶಂಖ ಮೊದಲಾದವು ಸೂಚಿಸಿದರೆ, ಹೊಗಳುಭಟ್ಟರು ಮತ್ತು ಆರತಿ ಹಿಡಿದ ಹೆಂಗಳೆಯರು ರಾಜನನ್ನು ಸ್ವಾಗತಿಸಿ ಹಾಡಿ ಹೊಗಳಿ ಶುಭ ಕೋರಿದರು.

ಜನನಿಯರು ಮೂವರಿಗೆ ನಮಿಸಿದ
ತನುಜನನು ತಕ್ಕೈಸಿ ಪೇಳಿದ
ನಿನಕುಲಾನ್ವಯ ಬಂದ ಭಾರದ್ವಾಜನಾಶ್ರಮಕೆ
ಎನಲು ಹರುಷಾನಂದಮಯರಸ
ಹೊನಲಿನೊಳಗೋಲಾಡಿದರು ಮುಖ
ವನಜವರಳಿತು ಜನನಿಯರಿಗವನೀಶ ಕೇಳೆಂದ ೮೨

ಜನನಿಯರು ಮೂವರಿಗೆ=ಮೂವರು ತಾಯಂದಿರಿಗೆ; ನಮಿಸಿದ=ಭರತ ನಮಸ್ಕರಿಸಿದ; ತನುಜನನು=ಮಗನನ್ನು; ತಕ್ಕೈಸಿ=ಆಲಿಂಗಿಸಿದರು; ಪೇಳಿದ=ಹೇಳಿದ; ಇನಕುಲ+ಅನ್ವಯ=ನಿನ್ನ ಕುಲೋದ್ಧಾರಕ ರಾಮ; ಬಂದ; ಭಾರದ್ವಾಜನ+ ಆಶ್ರಮಕೆ=ಭಾರದ್ವಾಜ ಮುನಿಯ ಆಶ್ರಮಕೆ; ಎನಲು=ಎಂದಾಗ; ಹರುಷ+ ಆನಂದ ಮಯ+ರಸ=ಆನಂದ ರಸದ; ಹೊನಲಿನೊಳಗೆ+ಓಲಾಡಿದರು=ಪ್ರವಾಹದಲ್ಲಿ ಕುಣಿ ದಾಡಿದರು; ಮುಖ ವನಜವು+ಅರಳಿತು=ಮುಖವೆಂಬ ಕಮಲವು ಅರಳಿತು. ಜನನಿ ಯರಿಗೆ+ಅವನೀಶ ಕೇಳೆಂದ=ತಾಯಿಯರಿಗೆ; ಅವನಿಪತಿಯಾದ ಯುಧಿಷ್ಠಿರನೇ ಕೇಳು ಎಂದರು ಶಾಂಡಿಲ್ಯಮುನಿ.

ರಾಜಮಂದಿರವನ್ನು ಪ್ರವೇಶಿಸಿದ ಶತ್ರುಘ್ನನು ಮೂವರು ತಾಯಂದಿರಿಗೆ ನಮಸ್ಕರಿಸಿದ, ತಾಯಿಯಂದಿರು ಮಗನನ್ನು ಆಲಿಂಗಿಸಿಕೊಂಡರು ಶತ್ರುಘ್ನನು "ಕುಲೋದ್ಧಾರಕನಾದ ಶ್ರೀರಾಮ ಭಾರದ್ವಾಜನಾಶ್ರಮಕ್ಕೆ ಬಂದ" ಎಂದಾಗ ಅದನ್ನು

ಕೇಳಿದ ಮಾತೆಯರು ಆನಂದ ಸಾಗರದಲ್ಲಿ ಕುಣಿದಾಡಿದರು. ಎಲ್ಲರ ಮುಖ ಕಮಲಗಳು ಅರಳಿದವು ಎಂದು ಶಾಂಡಿಲ್ಯಮುನಿ ಯುಧಿಷ್ಠಿರನಿಗೆ ಹೇಳಿದನು.

ಮಗನ ಆಗಮನದ ಸುದ್ದಿಯನ್ನು ಕೇಳಿ ತಾಯಂದಿರ ಮಾತೃವಾತ್ಸಲ್ಯ ಇಮ್ಮಡಿಯಾಯಿತು. ಅವರ ಮುಖ ಕಮಲಗಳು ಅರಳಿ ಆನಂದ ಸಾಗರದಲ್ಲಿ ತೇಲಾಡಿದರು.

ಕರೆಸಿದನು ಶತ್ರುಘ್ನ ಮಂತ್ರೀ
ಶ್ವರ ಸುಮಂತನ ಕೂಡೆ ನುಡಿದನು
ತರಣಿಕುಲ ರಾಜೇಂದ್ರನಣ್ಣನ ಬರವ ಕೇಳಿದೆವು
ಪುರವ ಶೃಂಗರಿಸಲ್ಲಿ ಕರಿರಥ
ತುರಗ ಮೇಳೈಸಿರಲಿ ಮೋದದ
ತರುಣಿಯರು ಸಂದಣಿಸಿ ನಡೆಯಲಿ ನೃಪನ ದರುಶನಕೆ ೮೨

ಕರೆಸಿದನು ಶತ್ರುಘ್ನ; ಮಂತ್ರೀಶ್ವರ ಸುಮಂತನ=ಮಂತ್ರಿಯಾದ ಸುಮಂತನ; ಕೂಡೆ ನುಡಿದನು=ಜೊತೆ ಮಾತನಾಡಿದನು; ತರಣಿಕುಲ=ಸೂರ್ಯವಂಶದ; ರಾಜೇಂದ್ರನ+ಅಣ್ಣನ=ರಾಜೇಂದ್ರನಾದ ಅಣ್ಣ ಶ್ರೀರಾಮನ; ಬರವ ಕೇಳಿದೆವು= ಆಗಮನ ಸುದ್ದಿ ಕೇಳಿದೆವು; ಪುರವ ಶೃಂಗರಿಸಲಿ=ನಗರವನ್ನು ಶೃಂಗಾರ ಮಾಡಿಸಿ; ಕರಿ ರಥ ತುರಗ ಮೇಳೈಸಿರಲಿ=ಆನೆ; ರಥ; ಕುದುರೆ ಸಿದ್ಧವಿರಲಿ; ಮೋದದ ತರುಣಿಯರು=ಸಂತೋಷದಿಂದ ಹೆಂಗಳೆಯರೆಲ್ಲಾ; ಸಂದಣಿಸಿ ನಡೆಯಲಿ=ಒಟ್ಟಾಗಿ ನಡೆಯಲಿ; ನೃಪನ ದರುಶನಕೆ=ರಾಜನ ಸ್ವಾಗತಕ್ಕೆ.

ಅಯೋಧ್ಯೆಗೆ ಬಂದ ಶತ್ರುಘ್ನ ಮಂತ್ರಿ ಸುಮಂತನನ್ನು ಕರೆದು, ಸೂರ್ಯವಂಶದ ರಾಜ, ಹಿರಿಯ ಸಹೋದರ ಶ್ರೀರಾಮನು ಅಯೋಧ್ಯೆಗೆ ಬರುತ್ತಿರುವ ಸುದ್ದಿಯನ್ನು ಕೇಳಿದೆ. ನಗರವನ್ನೆಲ್ಲಾ ಚೆನ್ನಾಗಿ ಶೃಂಗರಿಸಿ, ಆನೆ, ರಥ, ಕುದುರೆ, ಪಲ್ಲಕ್ಕಿ ಎಲ್ಲವನ್ನು ಸಿದ್ಧಪಡಿಸಿ, ರಾಜನ ಸ್ವಾಗತಕ್ಕೆ ಉತ್ಸಾಹಿ ತರುಣಿಯರನ್ನು ಸೇರಿಸಿ ಎಂದನು.

ರಾಮನ ಸ್ವಾಗತಕ್ಕಾಗಿ ಶತ್ರುಘ್ನ ಹಂಬಲಿಸುತ್ತಾನೆ. ಅಲ್ಲದೇ ರಾಜನಾದ ರಾಮನನ್ನು ವಿಶೇಷ ಗೌರವದಿಂದ ಸ್ವಾಗತಿಸಬೇಕೆಂಬುದು ಅವನ ಉದ್ದೇಶವಾಗಿದೆ.

ಎಂದು ಮಂತ್ರಿಯೊಳರುಹಿ ತಾ ನಿಜ
ಮಂದಿರಕೆ ನಡೆತಂದು ಪಯಣವ
ನಂದು ಮಾಡಿದ ಜನನಿ ಕೌಸಲದೇವಿ ಮೊದಲಾದ
ಇಂದುವದನೆಯರೇರುತಿರ್ದರು
ಅಂದಣವ ಸೊಸೆಯರು ವರೂಥದಿ
ಹಿಂದುಮುಂದಿಟ್ಟಣಿಸಿ ನಡೆದುದು ಸತಿಯರೊಗ್ಗಿನಲಿ ಅಳ

ಎಂದು ಮಂತ್ರಿಯೊಳು+ಅರುಹಿ=ಎಂದು ಮಂತ್ರಿಗೆ ಹೇಳಿ; ತಾ ನಿಜ ಮಂದಿರಕೆ ನಡೆ ತಂದು=ತಾನು ತನ್ನ ಮನೆಗೆ ಬಂದು; ಪಯಣವನು+ಅಂದು ಮಾಡಿದ=ಅಂದೇ ಪ್ರಯಾಣ ಮಾಡಿದ; ಜನನಿ=ತಾಯಿ; ಕೌಸಲದೇವಿ ಮೊದಲಾದ; ಇಂದುವದನೆಯರು=ಚಂದ್ರಮುಖಿಯರು;ಏರುತಿರ್ದರು=ಹತ್ತುತ್ತಿದ್ದರು; ಅಂದಣವ= ಮೇನೆಯನ್ನು; ಸೊಸೆಯರು; ವರೂಥದಿ=ರಥದಲ್ಲಿ; ಹಿಂದು ಮುಂದು+ ಇಟ್ಟಣಿಸಿ=ಹಿಂದೆ ಮುಂದೆ; ಸತಿಯರು+ಒಗ್ಗಿನಲಿ=ಹೆಂಗಳೆಯರು ಸಂತೋಷದಿಂದ ಒತ್ತೊತ್ತಾಗಿ; ನಡೆದುದು=ನಡೆದರು.

ಪಟ್ಟಣವನ್ನು ಶೃಂಗರಿಸಲು ಮಂತ್ರಿಗೆ ಹೇಳಿ, ತನ್ನ ಊರಿಗೆ ಹೋಗಲು ಅಂದು ಪ್ರಯಾಣ ಬೆಳೆಸಿದ, ತಾಯಿ ಕೌಸಲ್ಯದೇವಿ ಮೊದಲಾದ ಚಂದ್ರಮುಖಿಯರು ಮೇನೆಯನ್ನು, ಸೊಸೆಯರು ರಥವನ್ನು ಹತ್ತಿದ್ದರು ಹಾಗೂ ಹಿಂದು ಮುಂದು ಹೆಂಗಳೆಯರು ಸಂತೋಷದದಿಂದ ಗುಂಪು ಗುಂಪಾಗಿ ನಡೆದರು.

ಶತ್ರುಘ್ನನೊಂದಿಗೆ ನಂದಿಗ್ರಾಮಕ್ಕೆ ರಾಜಮಾತೆಯರು, ಸೊಸೆಯರು, ಹಾಗೂ ನಗರದ ಸ್ತ್ರೀಯರು ರಾಮನನ್ನು ಭೇಟಿಯಾಗಲು ಉತ್ಸಾಹದಿಂದ ಪ್ರಯಾಣ ವನ್ನು ಬೆಳೆಸಿದರು.

ಪುರಜನವ ಸಂತೈಸಿ ಭೂಸುರ
ವರರ ಮಂತ್ರಾಕ್ಷತೆಯ ಕೈಕೊಂ
ಡರಸ ರಾಮ ಶ್ರೀ ಪದಾಬ್ಜವ ನೆನೆದು ಮನದೊಳಗೆ
ತರಿಸಿ ಮಾಲ್ಯಾಂಬರ ಸುಗಂಧವ

ಕರೆಸಿಕೊಟ್ಟನು ರಾಜವರ್ಗಕೆ
ಹರುಷದಲಿ ಶತ್ರುಘ್ನನೇರಿದ ದಿವ್ಯಮಣಿ ರಥವ ೮೫

ಪುರಜನವ ಸಂತೈಸಿ=ಅಯೋಧ್ಯೆಯ ಜನರನ್ನು ಸಮಾಧಾನ ಪಡಿಸಿ; ಭೂಸುರವರರ=ಬ್ರಾಹ್ಮಣ ಶ್ರೇಷ್ಠರಿಂದ; ಮಂತ್ರಾಕ್ಷತೆಯ ಕೈಕೊಂಡ+ಅರಸ= ಮಂಗಳಾಕ್ಷತೆಯನ್ನು ರಾಜ ಪಡೆದುಕೊಂಡನು; ಶ್ರೀರಾಮನ; ಶ್ರೀ ಪದಾಜ್ಜವ=ಪವಿತ್ರ ಚರಣ ಕಮಲಗಳ; ನೆನೆದು=ಸ್ಮರಿಸಿ; ಮನದೊಳಗೆ=ಮನಸ್ಸಿನಲ್ಲಿ; ತರಿಸಿ ಮಾಲ್ಯಾಂಬರ ಸುಗಂಧ=ಮಾಲೆ ಸುಗಂಧ ಮತ್ತು ಬಟ್ಟೆಯನ್ನು ತರಿಸಿ; ಕರೆಸಿಕೊಟ್ಟನು; ರಾಜವರ್ಗಕ್ಕೆ=ಅರಮನೆಯ ಪರಿವಾರಕ್ಕೆ; ಹರುಷದಲಿ=ಸಂತೋಷದಿಂದ; ಶತ್ರುಘ್ನನು +ಏರಿದ=ಶತ್ರುಘ್ನನು ಹತ್ತಿದ; ದಿವ್ಯಮಣಿ ರಥವ=ವಿಶೇಷವಾದ ಮಣಿಗಳಿಂದ ತಯಾರಿಸಿದ ರಥವನ್ನು.

ಶ್ರೀರಾಮನ ಸ್ವಾಗತಕ್ಕೆ ಅಯೋಧ್ಯೆಯಲ್ಲಿ ಸಕಲ ಸಿದ್ಧತೆಗಳು ನಡೆಯಲಿ ಎಂದು ಮಂತ್ರಿ ಸುಮಂತನಿಗೆ ಹೇಳಿ, ಸ್ವಕುಟುಂಬದವರೊಂದಿಗೆ ಪ್ರಯಾಣವನ್ನು ಬೆಳೆಸುವ ಮೊದಲು ಭೂಸುರರಿಂದ ಮಂತ್ರಾಕ್ಷತೆ ಪಡೆದು, ಮಾಲೆ, ವಸ್ತ್ರ, ಸುಗಂಧ ದ್ರವ್ಯ ಇತ್ಯಾದಿಗಳನ್ನು ತರಿಸಿ ರಾಜವರ್ಗಕ್ಕೆ ನೀಡಿ, ಮನದಲ್ಲಿ ರಾಮನ ಪಾದವನ್ನು ಸ್ಮರಿಸಿ, ದಿವ್ಯವಾದ ಕನಕಮಣಿ ರಥವನ್ನು ಶತ್ರುಘ್ನನು ಏರುವನು.

ರಾಮನ ಆಗಮನದ ಸುದ್ದಿಯಿಂದ ಸಂತಸಗೊಂಡು ರಾಜವರ್ಗದವ ರಿಗೆಲ್ಲಾ ಶುಭದ ಸಂಕೇತವಾದ ಮಾಲೆ, ರೇಶಿಮ ವಸ್ತ್ರ, ಸುಗಂಧ ದ್ರವ್ಯಗಳನ್ನು ಉಡುಗೊರೆಯಾಗಿ ಶತ್ರುಘ್ನ ನೀಡಿದ.

ವಿವಿಧವಾದ್ಯ ಧ್ವನಿಯ ಕಹಳಾ
ರವದ ಸನ್ನೆ ಯೊಳೈದಿ ಬಹ ನೃಪ
ನಿವಹದಲಿ ಚತುರಂಗ ಸೇನೆಯ ಪದದ ಕೆಂಧೂಳಿ
ಭುವನವಾಕಾಶವನು ಮುಸುಕಿದ
ಡವನಿ ನೆಗ್ಗಲು ಬಲವು ಬಲುಭಾ
ರವಣೆಯಲಿ ಹೊರವಂಟನಾ ಶತ್ರುಘ್ನನೊಲವಿನಲಿ ೮೬

ವಿವಿಧ ವಾದ್ಯ ಧ್ವನಿ=ಬಗೆಯ ಬಗೆಯ ವಾದ್ಯಗಳ ಸದ್ದು; ಕಹಳಾರವದ= ಕಹಳೆಯ ಶಬ್ದದ; ಸನ್ನೆಯೊಳು+ಐದಿಬಹ=ಸೂಚನೆಯಂತೆ ಬರುತ್ತಿರುವ; ನೃಪ ನಿವಹದಲಿ=ರಾಜನ ಗುಂಪಿನಲಿ; ಚತುರಂಗ ಸೇನೆಯ=ಚತುರಂಗ ಬಲದ; ಪದದ ಕೆಂಧೂಳಿ= ಪಾದದಿಂದ ಎದ್ದ ಕೆಂಪಾದ ಧೂಳು; ಭುವನದ+ಆಕಾಶವನು=ಭೂಮಿ ಮತ್ತು ಆಕಾಶವನ್ನು; ಮುಸುಕಿದಡೆ+ಅವನಿ=ಆವರಿಸಿದಾಗ ಭೂಮಿ; ನೆಗ್ಗಲು= ಜಜ್ಜಿದಂತಾಗಲು; ಬಲವು=ಸೈನ್ಯವು; ಬಲು ಭಾರವಣೆಯಲ್ಲಿ=ಹೆಚ್ಚಿನ ಹಿರಿಮೆಯಿಂದ; ಶತ್ರುಘ್ನನು+ಒಲವಿನಲಿ=ಶತ್ರುಘ್ನನು ಪ್ರೀತಿಯಿಂದ; ಹೊರವಂಟನಾ=ಹೊರಟನು.

ವಿವಿಧ ಬಗೆಯ ವಾದ್ಯಗಳು ಹಾಗೂ ಕಹಳೆಯ ಧ್ವನಿಯು ಬರುತ್ತಿರುವ ಕಡೆಯಿಂದ, ರಾಜನ ಗುಂಪಿನ ಚತುರಂಗ ಸೇನೆಯ ಪಾದದ ಧೂಳು ಭೂಮಿ ಮತ್ತು ಆಕಾಶವನ್ನು ಆವರಿಸಿತು. ಸೇನೆಯ ಬಲದಿಂದ ಭೂಮಿ ಕುಸಿಯುವಂತಾಯ್ತು, ಅಪಾರ ಸೇನೆಯ ಹಿರಿಮೆಯಿಂದ ಶತ್ರುಘ್ನನು ನಂದಿಗ್ರಾಮದೆಡೆಗೆ ಹೊರಟನು.

ಶತ್ರುಘ್ನನ ಸೇನಾಬಲದ ಹಿರಿಮೆಯನ್ನು ತಿಳಿಸುವುದರ ಜೊತೆಗೆ ರಾಜರು ಪ್ರಯಾಣ ಬೆಳೆಸುವಾಗ ಬಳಸುವ ವಾದ್ಯಗಳ ಬಗೆಗೂ ಕವಿ ತಿಳಿಸಿದ್ದಾನೆ.

ಸತ್ತಿಗೆಯ ಸಾಲುಗಳ ಬೀಸುವ
ಬಿತ್ತರದ ಚೌರಿಗಳ ರಥದಲಿ
ತೆತ್ತಿಸಿದ ಸೂನಗಿಯ ಸೀಗುರಿ ಗುಡಿ ಪತಾಕೆಗಳ
ಮತ್ತೆ ಗಜಘಟ ತುರಗ ಕಾಲಾ
ಳೊತ್ತರಿಸಿ ಬರೆ ಕಮಠ ಕೂರ್ಮರ
ನೆತ್ತಿ ನೆಗ್ಗಲು ನಡೆದುದಗಣಿತ ಸೇನೆ ವಹಿಲದಲಿ ೮೭

ಸತ್ತಿಗೆಯ ಸಾಲುಗಳ=ಛತ್ರಿಗಳ ಸಾಲುಗಳು; ಬೀಸುವ; ಬಿತ್ತರದ ಚೌರಿಗಳ= ವಿಸ್ತಾರವಾದ ಚಾಮರಗಳು; ರಥದಲಿ ತೆತ್ತಿಸಿದ=ರಥದಲ್ಲಿ ಜೋಡಿಸಿದ; ಸೂನಗಿಯ ಸೀಗುರಿ=ಒಂದು ಬಗೆಯ ಚಾಮರ; ಗುಡಿ=ಧ್ವಜ; ಪತಾಕೆ=ಬಾವುಟ; ಮತ್ತೆ ಗಜಘಟೆ=ಆನೆಗಳ ಗುಂಪು; ತುರಗ=ಕುದುರೆ; ಕಾಲಾಳು+ಒತ್ತರಿಸಿ=ಕಾಲಾಳುಗಳು ನುಗ್ಗಿ ಬರಲು; ಕಮಠ ಕೂರ್ಮರ=ಭೂಮಂಡಲವನ್ನು ಹೊತ್ತ ಆದಿಕೂರ್ಮದ; ನೆತ್ತಿ

ನೆಗ್ಗಲು=ನೆತ್ತಿ ಕುಸಿಯುವಂತೆ; ನಡೆದುದು+ಅಗಣಿತ ಸೇನೆ=ನಡೆಯಿತು ಅಸಂಖ್ಯಾತ ಸೇನೆ; ವಹಿಲದಲಿ=ವೇಗವಾಗಿ;

ಛತ್ರಿಯ ಸಾಲುಗಳು, ಬೀಸುವ ವಿಸ್ತಾರವಾದ ಚಾಮರಗಳು, ರಥದಲ್ಲಿ ಜೋಡಿಸಿದ ಬಗೆ ಬಗೆಯ ಚಾಮರಗಳು ಹಾಗೂ ಬಾವುಟಗಳು ಇವಲ್ಲದೇ ಗಜಪಡೆ, ಕುದುರೆ, ಕಾಲ್ದಳಗಳು ಮುನ್ನುಗ್ಗಿ ಬರಲು ಭೂಮಂಡಲವನ್ನು ಹೊತ್ತ ಆದಿಶೇಷ ಕೂರ್ಮರ ನೆತ್ತಿ ಕುಸಿಯುವಂತೆ ವೇಗವಾಗಿ ಶತ್ರುಘ್ನನ ಅಸಂಖ್ಯಾತ ಸೇನೆ ಮುನ್ನಡೆಯಿತು.

ಅಂದಿನ ಕಾಲದ ಪ್ರಯಾಣದ ವೈಖರಿ ಇಲ್ಲಿದೆ. ಹಾದಿಯಲ್ಲೂ ಛತ್ರ ಚಾಮರಗಳ ಬಳಕೆ, ರಥಗಳಲ್ಲೂ ಚಾಮರಗಳ ಬಳಕೆ, ಬಾವುಟ ಮುಂತಾದವನ್ನು ಬಳಸುವುದು ಹಾಗೂ ರಾಜರು ತಮ್ಮೊಂದಿಗೆ ಪ್ರಯಾಣದ ಸಂದರ್ಭದಲ್ಲೂ ಎಲ್ಲಾ ರೀತಿಯ ಪಡೆಗಳನ್ನು ಹೊಂದಿರುವುದನ್ನು ಕಾಣುತ್ತೇವೆ.

ಪುರವ ಕಳೆದರು ಮುಂದೆ ಯಮುನಾ
ವರನದಿಯನುತ್ತರಿಸೆ ಪಯಣದಿ
ಮೆರೆವ ನಂದೀಗ್ರಾಮವನು ಕಂಡಲ್ಲಿಗೈತಂದು
ಭರತನೊಡಗೊಂಡಲ್ಲಿ ಹನುಮನ
ಕರುಣದಲಿ ಸತ್ಕರಿಸಿ ಮುಂದಕೆ
ತೆರಳಿದರು ಕೌಸಲ್ಯ ರಾಮನ ಕಾಣ್ಬ ತವಕದಲಿ ೮೮

ಪುರವ ಕಳೆದರು=ಅಯೋಧ್ಯಾಪುರವನ್ನು ಬಿಟ್ಟು; ಮುಂದೆ; ಯಮುನಾ ವರ ನದಿಯನು+ಉತ್ತರಿಸೆ=ಯಮುನಾ ನದಿಯನ್ನು ಸಮೀಪಿಸಿ; ಪಯಣದಿ= ಪ್ರಯಾಣದಿ; ಮೆರೆವ=ಶೋಭಿಸುವ; ನಂದೀಗ್ರಾಮವನು; ಕಂಡು+ಅಲ್ಲಿಗೆ+ ಐತೆಂದು=ನೋಡಿ ಅಲ್ಲಿಗೆ ಬಂದು; ಭರತನ+ಒಡಗೊಂಡು+ಅಲ್ಲಿ=ಭರತನೊಡನೆ ಸೇರಿ ಅಲ್ಲಿ; ಹನುಮನ ಕರುಣದಲಿ ಸತ್ಕರಿಸಿ=ಹನುಮಂತನನ್ನು ಪ್ರೀತಿಯಿಂದ ಸತ್ಕಾರ ಮಾಡಿ; ಕೌಸಲ್ಯರಾಮನ=ಕೌಸಲ್ಯೆಯ ಮಗ ರಾಮನನ್ನು; ಕಾಣ್ಬ ತವಕದಲಿ=ಕಾಣುವ ಆತುರದಿಂದ; ಮುಂದಕ್ಕೆ ತೆರಳಿದರು=ಮುಂದೆ ಹೋದರು.

ಅಯೋಧ್ಯಾನಗರವನ್ನು ದಾಟಿ ಯಮುನಾ ನದಿಯನ್ನು ಸಮೀಪಿಸಿ ಮುಂದೆ ನಂದೀಗ್ರಾಮವನು ಕಂಡು ಅಲ್ಲಿ ಭರತನನ್ನು ಕೂಡಿಕೊಂಡು, ಹನುಮನನ್ನು ಪ್ರೀತಿ ಯಿಂದ ಸತ್ಕರಿಸಿ ಕೌಸಲ್ಯಪುತ್ರ ಶ್ರೀರಾಮನನ್ನು ಕಾಣುವ ತವಕದಿಂದ ಮುಂದೆ ಪ್ರಯಾಣವನ್ನು ಬೆಳೆಸುತ್ತಾರೆ.

ಶತ್ರುಘ್ನನ ಸುದೀರ್ಘ ಪ್ರಯಾಣದ ವಿವರಗಳು ಈ ಪದ್ಯಗಳಲ್ಲಿ ಮೂಡಿಬಂದಿವೆ. ಅಯೋಧ್ಯೆಯಿಂದ ನಂದೀಗ್ರಾಮ ಅಲ್ಲಿಂದ ಭಾರದ್ವಾಜರ ಆಶ್ರಮ ಹೀಗೆ ಪ್ರಯಾಣ ಬೆಳೆದಿದೆ.

ಇತ್ತ ಕೇಳ್ಳೈ ಪಾಂಡವಾಗ್ರಜ
ಸತ್ವಗುಣನಿಧಿ ರಾಮಚಂದ್ರನು
ವತ್ತರಿಸಿಬರೆ ಕಂಡು ನಲಿಯುತ ಜಾನಕಿಯ ಕರೆದು
ಇತ್ತ ನೋಡೆಲೆ ದೇವಿ ಭರತನ
ಶತ್ರುಹರ ಶತ್ರುಘ್ನರಿವರು ಸ
ಮಸ್ತ ಬಲಸಹಿತಿದಿರು ಬರುತಿದೆ ನೋಡು ನೀನೆಂದ ೮೯

ಇತ್ತ ಕೇಳ್ಳೈ=ಇಲ್ಲಿ ಕೇಳು; ಪಾಂಡವ+ಅಗ್ರಜ=ಪಾಂಡವರಲ್ಲಿ ಹಿರಿಯ ಮಗ; ಸತ್ವಗುಣ ನಿಧಿ=ಒಳ್ಳೆಯ ಗುಣಗಳ ಸಾರಸಂಗ್ರಹವಾಗಿರುವ ರಾಮಚಂದ್ರನು; ವತ್ತರಿಸಿ ಬರೆ=ಧಾವಿಸಿ ಬರುವವರ; ಕಂಡು=ನೋಡಿ; ನಲಿಯುತ=ಸಂತಸಪಟ್ಟು; ಜಾನಕಿಯ ಕರೆದು; ಇತ್ತ ನೋಡು+ಎಲೆ ದೇವಿ=ಈ ಕಡೆಗೆ ನೋಡು ದೇವಿ; ಭರತನು ಶತ್ರುಹರ ಶತ್ರುಘ್ನರು+ಇವರು=ಭರತ ಮತ್ತು ಶತ್ರುಗಳ ನಾಶಮಾಡುವ ಶತ್ರುಘ್ನರು; ಸಮಸ್ತ ಬಲ ಸಹಿತ+ಇದಿರು=ಎಲ್ಲ ರೀತಿಯ ಸೇನಾ ಬಲದೊಂದಿಗೆ ಎದುರು; ಬರುತಿದೆ ನೋಡು; ನೀನು+ಎಂದ=ನೀನು ಎಂದ.

“ಯುಧಿಷ್ಠಿರನೇ ಕೇಳು ಒಳ್ಳೆಯ ಗುಣಗಳ ನಿಧಿಯಾದಂತಹ ರಾಮ ಚಂದ್ರನು ಧಾವಿಸಿ ಬರುವ ಸೈನ್ಯವನ್ನು ನೋಡಿ ಸಂತೋಷದಿಂದ ಸೀತೆಯನ್ನು ಕರೆದು

ಎಲೆ ದೇವಿ ಸಹೋದರರಾದ ಭರತ, ಶತ್ರುಘ್ನರು ಸಮಸ್ತ ಸೇನಾ ಬಲದೊಂದಿಗೆ ಬರುತ್ತಿದ್ದಾರೆ ನೋಡು" ಎಂದನು.

ಅಣ್ಣ ರಾಮನ ಬರುವಿಕೆಯ ಸುದ್ದಿ ಭರತ ಶತ್ರುಘ್ನರಿಗೆ ಎಷ್ಟು ಆಹ್ಲಾದ ವನ್ನುಂಟು ಮಾಡಿತೋ; ಅದಕ್ಕಿಂತ ಹೆಚ್ಚಿನ ಸಂತಸ ಅವರ ಬರುವಿಕೆಯಿಂದ ರಾಮನಿಗೆ ಆಗುತ್ತಿದೆ.

ಎಂದು ತೋರಿಸಿ ಮನದ ಹರುಷದಿ
ಮಿಂದು ಲಕ್ಷ್ಮಣನೊಡನೆ ಸತಿಸಹಿ
ತಂದು ರಥವೇರಿದನು ರಾಮನೃಪಾಲನಾಕ್ಷಣಕೆ
ಮುಂದೆ ನೆರೆದುದು ಬನದೊಳಗೆ ಮುದ
ದಿಂದ ಪಾಠಕರುಗ್ಘಡಿಸೆ ನಲ
ವಿಂದ ಮುನಿಕುಲದೊಡನೆ ತೆರಳಿದನಾ ಮಹೀಪಾಲ ೯೦

ಎಂದು ತೋರಿಸಿ=ಎಂದು ಭರತ ಶತ್ರುಘ್ನ ಬರುವ ದಿಕ್ಕನ್ನು ರಾಮ ತೋರಿಸಿ; ಮನದ ಹರುಷದಿ ಮಿಂದು=ಮನಸ್ಸು ಸಂತೋಷದಲ್ಲಿ ಮುಳುಗಿ; ಲಕ್ಷ್ಮಣನೊಡನೆ=ತಮ್ಮ ಲಕ್ಷ್ಮಣನ ಜೊತೆಗೆ; ಸತಿ ಸಹಿತ+ಅಂದು=ಹೆಂಡತಿ ಸೀತೆಯೊಂದಿಗೆ ಅಂದು ರಥವೇರಿದನು=ರಥವನ್ನು ಹತ್ತಿದನು; ರಾಮ ನೃಪಾಲನು+ಆ ಕ್ಷಣಕ್ಕೆ=ರಾಜನಾದ ಶ್ರೀರಾಮನು ಆ ಗಳಿಗೆಯಲ್ಲಿ; ಮುಂದೆ ನೆರೆದುದು=ಮುಂದೆ ಸೇರಿತು; ಬನದೊಳಗೆ=ಅರಣ್ಯದಲ್ಲಿ;ಮುದದಿಂದ=ಪ್ರೀತಿಯಿಂದ; ಪಾಠಕರು+ ಉಗ್ಘಡಿಸೆ= ಹೊಗಳುಭಟ್ಟರು ಬಿರುದಾವಳಿಗಳನ್ನು ಜೋರಾಗಿ ಕೂಗಲು; ನಲವಿಂದ=ಸಂತೋಷದಿಂದ; ಮುನಿಕುಲದೊಡನೆ=ಮುನಿಗಳ ಸಮೂಹದೊಂದಿಗೆ; ಮಹೀಪಾಲ=ಭೂಪಾಲನಾದ ಶ್ರೀರಾಮ; ತೆರಳಿದನು=ಮುನ್ನಡೆದನು.

ಭರತ ಶತ್ರುಘ್ನರು ಬರುವ ದಿಕ್ಕನ್ನು ಸೀತೆಗೆ ತೋರಿಸಿ ಮನಸ್ಸು ಆನಂದದಲ್ಲಿ ಮುಳುಗಿ, ಸಹೋದರ ಲಕ್ಷ್ಮಣ ಹಾಗೂ ಸತಿ ಸೀತಾದೇವಿಯೊಂದಿಗೆ, ರಥವನ್ನೇರಿದನು; ಸೈನ್ಯ ಬನದೊಳಗೆ ಸೇರಲು, ಪ್ರೀತಿಯಿಂದ ಹೊಗಳುಭಟ್ಟರು ಬಿರುದಾವಳಿಗಳನ್ನು ಜೋರಾಗಿ ಕೂಗಿದರು, ರಾಮನು ಸಂತಸದಿಂದ ಋಷಿಮುನಿ ಗಳೊಂದಿಗೆ ಮುಂದೆ ತೆರಳಿದನು.

ಭಾರದ್ವಾಜರ ಆಶ್ರಮವಿರುವ ಅರಣ್ಯದಲ್ಲಿ ಸಹೋದರರ ಅಪೂರ್ವ ಸಮಾಗಮ ಹದಿನಾಲ್ಕು ವರ್ಷಗಳ ನಂತರ ಪರಸ್ಪರ ಭೇಟಿಯ ಸಂತಸಕ್ಕೆ ಸಿದ್ಧತೆ.

ತಲ್ಲಣಿಸಿ ದಶದಿಕ್ಕುಗಳ ಬಲ
ವೆಲ್ಲ ನೆರೆದುದು ವಾನರಾಧಿಪ
ರಲ್ಲಿ ಸುಗ್ರೀವನ ವರೂಥದ ಬಳಿಯೆ ಸಂದಣಿಸೆ
ನಿಲ್ಲದೈದಿದರಾ ವಿಭೀಷಣ
ನಲ್ಲಿ ದಾನವಸೇನೆ ಕೈದುಗ
ಳಲ್ಲಿ ಹೊರವಂಟನು ವನಾಲಯದಿಂದಲಿದಿರಾಗಿ ೯೧

ತಲ್ಲಣಿಸಿ=ತವಕದಿಂದ; ದಶದಿಕ್ಕುಗಳ=ಹತ್ತು ದಿಕ್ಕುಗಳ; ಬಲವೆಲ್ಲ= ಸೈನ್ಯವೆಲ್ಲಾ; ನೆರೆದುದು=ಒಟ್ಟುಗೂಡಿತು; ವಾನರ+ಅಧಿಪರಲ್ಲಿ=ವಾನರರ ಒಡೆಯರಲ್ಲಿ; ಸುಗ್ರೀವನ ವರೂಥದ ಬಳಿಯೆ=ಸುಗ್ರೀವನ ರಥದ ಹತ್ತಿರ; ಸಂದಣಿಸೆ=ಒಟ್ಟುಗೂಡಲು ನಿಲ್ಲದೆ+ಐದಿದರು+ಆ=ನಿಲ್ಲಲು ಸಾಧ್ಯವಾಗದೇ ಹೋದರು ಆ; ವಿಭೀಷಣನಲ್ಲಿ; ದಾನವ ಸೇನೆ=ರಾಕ್ಷಸರ ಸೇನೆ; ಕೈದು ಗಳಲ್ಲಿ=ಆಯುಧಗಳೊಂದಿಗೆ; ವನಾಲಯ ದಿಂದಲಿ ಇದಿರಾಗಿ=ಅರಣ್ಯಕ್ಕೆ ಅಭಿಮುಖನಾಗಿ; ಹೊರವಂಟನು= ಹೊರಟನು.

ತವಕದಿಂದ ಹತ್ತು ದಿಕ್ಕುಗಳ ಸೈನ್ಯವೆಲ್ಲಾ, ವಾನರ ಒಡೆಯನಾದ ಸುಗ್ರೀವನ ರಥದ ಬಳಿ ಸೇರಿತು. ಅಲ್ಲಿ ನಿಲ್ಲಲು ಸಾಧ್ಯವಾಗದೇ ದಾನವ ಸೇನೆ ವಿಭೀಷಣನ ಬಳಿ ಬಂದಿತು, ಎಲ್ಲಾ ಸೈನ್ಯ ಆಯುಧಗಳನ್ನು ಹಿಡಿದು, ಋಷ್ಯಾಶ್ರಮದಿಂದ ಶ್ರೀರಾಮನು ಅನುಸರಿಸಿತು ಅರಣ್ಯಕ್ಕೆ ಇದಿರಾಗಿ ಹೊರಟ.

ಭರತ ಶತ್ರುಘ್ನರು ಎಷ್ಟು ಪ್ರೀತ್ಯಾದರದಿಂದ ಶ್ರೀರಾಮನನ್ನು ಭೇಟಿಯಾಗಲು ಬರುತ್ತಾರೆಯೋ ಅಷ್ಟೇ ಆತುರ ಸಂಭ್ರಮದಿಂದ ರಾಮ ಮತ್ತು ರಾಮನ ಸೈನ್ಯ, ಸುಗ್ರೀವ, ವಿಭೀಷಣಾದಿಗಳ ಸೈನ್ಯಗಳು ತವಕದಿಂದ ನುಗ್ಗಿ ಬರುತ್ತವೆ.

ದೂರದಲಿ ಮಣಿರಥದೊಳಗೆ ರಘು
ವೀರರಿಬ್ಬರು ಕಂಡು ಬರೆ ಹೊಂ

ದೇರನಿಳಿದರು ಭರತ ಶತ್ರುಘ್ನರು ಸರಾಗದಲಿ
ಧಾರುಣಿಗೆ ಮೈಯಿಕ್ಕಿದರು ಪರಿ
ವಾರವೆಲ್ಲವು ನೊಸಲಕೈಗಳ
ಭೂರಿ ಸಂತೋಷದ ಸಮುದ್ರದೊಳಾಳಿತಂದಿನಲಿ ೯೨

ದೂರದಲಿ ಮಣಿರಥದೊಳಗೆ=ರತ್ನ ಖಚಿತವಾದ ರಥದೊಳಗೆ; ವೀರರಿಬ್ಬರು; ಕಂಡುಬರೆ=ಕಾಣಿಸಿಕೊಂಡಾಗ; ಹೊಂದೇರ+ಇಳಿದರು=ಹೊನ್ನಿನ ತೇರಿನಿಂದ ಇಳಿದರು; ಭರತ ಶತ್ರುಘ್ನರು; ಸರಾಗದಲಿ=ಸಲೀಸಾಗಿ; ಧಾರುಣಿಗೆ= ಭೂಮಿಗೆ; ಮೆಯ್+ಇಕ್ಕಿದರು=ನಮಸ್ಕರಿಸಿದರು ಪರಿವಾರವೆಲ್ಲವು=ಕುಟುಂಬವೆಲ್ಲ; ನೊಸಲ ಕೈಗಳ=ನಮಸ್ಕರಿಸಿ; ಭೂರಿ=ಅಧಿಕ; ಸಂತೋಷದ=ಸಂತಸದ; ಸಮುದ್ರ ದೊಳು+ ಆಳಿತು+ಅಂದಿನಲಿ=ಸಮುದ್ರದಲ್ಲಿ ಮುಳುಗಿತು ಆ ದಿನ.

ರತ್ನಖಚಿತವಾದ ಮಣಿರಥದಲ್ಲಿ ವೀರರಾದ ರಾಮಲಕ್ಷ್ಮಣರಿಬ್ಬರೂ ದೂರದಲ್ಲಿ ಕಾಣಿಸಿಕೊಂಡಾಗ ಭರತ ಶತ್ರುಘ್ನರು ಹೊನ್ನಿನ ತೇರಿನಿಂದಿಳಿದು ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು. ಅಣ್ಣಂದಿರಿಗೆ ಇಡೀ ಕುಟುಂಬವೆಲ್ಲಾ ಅವರಿಗೆ ನಮಸ್ಕರಿಸಿ ಅಂದು ಅಮಿತಾನಂದದಲ್ಲಿ ಮುಳುಗಿದರು.

ವನವಾಸದ ನಂತರ ಸೋದರರ ಮೊದಲ ಭೇಟಿ ಇದಾಗಿದ್ದು; ಪರಸ್ಪರ ಸೋದರರು ಹಾಗೂ ಕುಟುಂಬದವರು ಅವರ್ಣನೀಯ ಆನಂದವನ್ನು ಅನುಭವಿಸಿದರು.

ಇಳಿದು ರಥವನು ನೃಪತಿ ಸೀತಾ
ಲಲನೆ ಲಕ್ಷ್ಮಣಸಹಿತ ತಾ ಕೌ
ಸಲೆ ಸುಮಿತ್ರಾದೇವಿ ಕೈಕೆಯ ಚರಣಕಭಿನಮಿಸಿ
ತೊಲಗಿದಸು ಬಂದಂತೆ ತನಯರ
ಚೆಲುವನೀಕ್ಷಿಸಿ ಜನನಿಯರು ಕಂ
ಗಳಲಿ ಜಲತುಂಬಿ ನೆರೆ ಬಿಗಿಯಪ್ಪಿದರು ನಂದನರ ೯೩

ಇಳಿದು ರಥವನು ನೃಪತಿ=ರಾಜ ಶ್ರೀರಾಮನು ರಥದಿಂದ ಇಳಿದು; ಸೀತಾಲಲನೆ ಲಕ್ಷ್ಮಣ ಸಹಿತ=ಸತಿಸೀತೆ ಮತ್ತು ಲಕ್ಷ್ಮಣರೊಡನೆ; ತಾ=ತಾನು; ಕೌಸಲೆ;

ಸುಮಿತ್ರಾದೇವಿ; ಕೈಕೆಯ; ಚರಣಕ್ಕೆ+ಅಭಿನಮಿಸಿ=ಪಾದಗಳಿಗೆ ನಮಸ್ಕರಿಸಿ ತೊಲಗಿದ+ಅಸು=ಹೋದ ಪ್ರಾಣ; ಬಂದಂತೆ; ತನಯರ=ಮಕ್ಕಳ; ಚೆಲುವನು+ಈಕ್ಷಿಸಿ=ಸೌಂದರ್ಯವನ್ನು ನೋಡಿ; ಜನನಿಯರು=ತಾಯಿಯರು; ಕಂಗಳಲಿ ಜಲ ತುಂಬಿ=ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿಕೊಂಡು; ನೆರೆ=ಸಮೀಪಿಸಿ; ಬಿಗಿ ಯಪ್ಪಿದರು+ನಂದನರ= ಮಕ್ಕಳನು ಬಿಗಿದು ಅಪ್ಪಿದರು.

ರಥದಿಂದ ಸೀತಾಲಕ್ಷ್ಮಣರೊಡನೆ ಕೆಳಗಿಳಿದ ಶ್ರೀರಾಮನು ಕೌಸಲ್ಯೆ, ಸುಮಿತ್ರೆ, ಕೈಕೆಯರ ಪಾದಗಳಿಗೆ ನಮಸ್ಕರಿಸಲು, ಅವರಿಗೆ ಹೋದ ಪ್ರಾಣ ಬಂದಂತಾಗಿ ತಮ್ಮ ಮಕ್ಕಳ ರೂಪವನ್ನು ಕಂಡು, ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿಕೊಂಡು ಅವರನ್ನು ಸಮೀಪಿಸಿ ಬಿಗಿದು ಅಪ್ಪಿದ.

ತಾಯಿಯರು ಹಾಗೂ ಮಕ್ಕಳ ಅಪರೂಪದ ಸಮಾಗಮ. ಎಷ್ಟೋ ವರ್ಷಗಳ ನಂತರದ ಪರಸ್ಪರರ ಭೇಟಿಯಿಂದ ಆನಂದಬಾಷ್ಪ ಹಾಗೂ ಆಲಿಂಗನಗಳು ಆಗುತ್ತಿವೆ.

ವಿಮಲಮತಿ ಶತ್ರುಘ್ನ ಭರತರು
ನಮಿಸಿದರು ರಘುಪತಿಗೆ ಲಕ್ಷ್ಮಣ
ನಮಿಸಿದನು ಭರತಂಗೆ ಭರತಾನುಜನ ಸಂತೈಸಿ
ಸಮತೆಯಲಿ ಸುಗ್ರೀವ ಜಾಂಬವ
ರಮಿತ ಬಲವನು ಜನನಿಯ ಚರಣ
ಕಮಲವನು ಕಾಣಿಸಿದ ಸುಕರಹೊಳೂರ್ಮಿಳಾರಮಣ ೯೪

ವಿಮಲಮತಿ=ಶುಭ್ರಮನಸ್ಸಿನ; ಶತ್ರುಘ್ನ ಭರತರು; ನಮಿಸಿದರು= ನಮಸ್ಕರಿಸಿದರು; ರಘುಪತಿಗೆ=ಶ್ರೀರಾಮನಿಗೆ; ಲಕ್ಷ್ಮಣ ನಮಿಸಿದನು ಭರತಂಗೆ=ಲಕ್ಷ್ಮಣ ಭರತನಿಗೆ ನಮಸ್ಕರಿಸಿದನು; ಭರತ+ಅನುಜನ=ಸಹೋದರ ಭರತನನ್ನು; ಸಂತೈಸಿ= ಸಮಾಧಾನ ಪಡಿಸಿ; ಸಮತೆಯಲಿ=ಅದೇ ಸಮಾನ ಭಾವನೆಯಿಂದ; ಸುಗ್ರೀವ; ಜಾಂಬವರ+ಅಮಿತ ಬಲವನು=ಜಾಂಬವಂತರ ದೊಡ್ಡ ಸೈನ್ಯವನು; ಜನನಿಯ= ತಾಯಿಯ; ಚರಣ ಕಮಲವನು ಕಾಣಿಸಿದ=ಕಮಲದಂತ ಪಾದವನ್ನು ತೋರಿಸಿದ; ಸುಕರದೊಳು+ಊರ್ಮಿಳಾರಮಣ=ಸರಾಗವಾಗಿ ಊರ್ಮಿಳಾ ಪತಿಯಾದ ಲಕ್ಷ್ಮಣ.

ಶುಭ್ರ ಮನಸ್ಸಿನ ಭರತ ಶತ್ರುಘ್ನರು ಅಗ್ರಜನಾದ ರಾಮನಿಗೆ ನಮಸ್ಕರಿಸಿದರು, ಲಕ್ಷ್ಮಣ ಭರತನಿಗೆ ನಮಸ್ಕರಿಸಿ ಅವನನ್ನು ಸಂತೈಸಿ, ಅದೇ ಸಮಾನ ಭಾವನೆಯಿಂದ ಸುಗ್ರೀವ, ಜಾಂಬವಂತರನ್ನು ಅವರ ಅಪಾರ ಸೈನ್ಯವನ್ನು ಕರೆದು ತಾಯಿಯರನ್ನು ಆತ್ಮೀಯವಾಗಿ ಪರಿಚಯಿಸಿದ. ಅವರು ತಾಯಿಯರ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದರು.

ಇದು ಸಹೋದರರ ಮತ್ತು ತಾಯಿ ಮಕ್ಕಳ ಅಪೂರ್ವ ಮಿಲನ ಮಾತ್ರವಲ್ಲ; ರಾಮನೊಡನಿದ್ದ ವಿಭೀಷಣ; ಸುಗ್ರೀವ; ಹನುಮ; ಜಾಂಬವಂತ ಎಲ್ಲರ ಮಹಾ ಮಿಲನ.

ವರವಿಭೀಷಣ ದೇವ ಬಂದನು
ಭರತ ಶತ್ರುಘ್ನರಿಗೆ ವಂದಿಸಿ
ಕರದ ಪುಷ್ಪಾಂಜಲಿಯ ಬಿನ್ನೈಸಿದನು ವಿನಯದಲಿ
ಅರಸನನುಜರು ನೀವು ನಿಮ್ಮಯ
ಚರಣ ದರುಶನವಾಯ್ತು ನಮಗೇ
ನರಿದು ಲೋಕದೊಳೆಂದು ಕೊಂಡಾಡಿದನು ಮನದಣಿಯೆ ೯೫

ವರ ವಿಭೀಷಣದೇವ ಬಂದನು=ಶ್ರೇಷ್ಠ ವಿಭೀಷಣನು ಬಂದನು; ಭರತ ಶತ್ರುಘ್ನರಿಗೆ; ವಂದಿಸಿ=ನಮಸ್ಕರಿಸಿ; ಕರದ=ಕೈಯ; ಪುಷ್ಪಾಂಜಲಿ=ಪುಷ್ಪದಂತಹ ಕೈಗಳನ್ನು ಜೋಡಿಸಿ; ಬಿನ್ನೈಸಿದನು=ಅರಿಕೆ ಮಾಡಿಕೊಂಡರು; ವಿನಯದಲಿ; ಅರಸನ+ಅನುಜರು ನೀವು=ಶ್ರೀರಾಮನ ಸಹೋದರರು ನೀವು; ನಿಮ್ಮಯ=ನಿಮ್ಮ; ಚರಣ ದರುಶನವಾಯ್ತು=ಪಾದ ದರ್ಶನವಾಯ್ತು; ನಮಗೆ+ಏನ್+ಅರಿದು=ನಮಗೆ ಏನು ತಾನೆ ಅಸಾಧ್ಯ; ಲೋಕದೊಳು+ಎಂದು=ಲೋಕದಲ್ಲಿ ಎಂದು ಕೊಂಡಾಡಿದನು=ಹೊಗಳಿದನು; ಮನದಣಿಯೆ=ಮನಸಾರೆ.

ಸರ್ವೋತ್ತಮನಾದ ವಿಭೀಷಣನು ಬಂದು ಭರತ ಶತ್ರುಘ್ನರಿಗೆ ವಂದಿಸಿ, ಅವರ ಕೈಗಳನ್ನು ಹಿಡಿದು ವಿನಯದಿಂದ ಅರಿಕೆ ಮಾಡಿಕೊಂಡ, ಶ್ರೀರಾಮನ ಸಹೋದರರು ನೀವು, ನಿಮ್ಮ ದರ್ಶನ ನನಗಾಯಿತು, ಇನ್ನು ಈ ಲೋಕದಲ್ಲಿ ನನಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂದು ಮನಸಾರೆ ಅವರನ್ನು ಹೊಗಳಿದ.

ವಿಭೀಷಣನಿಗೆ ಶ್ರೀರಾಮನ ಭೇಟಿಯೇ ಆನೆ ಬಲ ಬಂದಂತಾಗಿತ್ತು. ಇನ್ನು ಅವರ ಸಹೋದರರಾದ ಭರತ ಶತ್ರುಘ್ನರು ದೊರೆತದ್ದು ಅವರಿಗೆ ಮತ್ತಷ್ಟು ಬೆಂಬಲ ದೊರೆತಂತಾಗಿ ಈ ಲೋಕದಲ್ಲಿ ನನಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂದು ಪರಿಭಾವಿಸುವನು ಹಾಗೂ ಅವರ ಭೇಟಿಯಿಂದ ಅತ್ಯಂತ ಸಂತಸಗೊಂಡನು.

ಜನಕಸುತೆ ಹರುಷದಲಿ ಸುಗ್ರೀ
ವನ ಸತಿಯರೊಡನಿರ್ದು ಮಾವನ
ವನಿತೆಯರಿಗಭಿನಮಿಸೆ ಸೊಸೆಯಳ ತೆಗೆದು ತಕ್ಕೈಸಿ
ಬನದೊಳಗೆ ಬಲುನೊಂದಲಾ ಮಾ
ನಿನಿಯೆ ಬಾರೌ ತಾಯೆ ಬಾರೆಂ
ದೆನುತ ಕಂಬನಿದೊಡೆದು ಲಾಲಿಸಿದರು ಮಹಾಸತಿಯ ೯೬

ಜನಕ ಸುತೆ=ಜನಕ ಮಹಾರಾಜರ ಮಗಳು ಸೀತೆ; ಹರುಷದಲಿ= ಸಂತೋಷದಿಂದ; ಸುಗ್ರೀವನ; ಸತಿಯರೊಡನೆ +ಇರ್ದು=ಸತಿಯರೊಂದಿಗೆ ಇದ್ದು; ಮಾವನ ವನಿತೆಯರಿಗೆ=ಅತ್ತೆಯರಿಗೆ; ಅಭಿನಮಿಸೆ=ನಮಸ್ಕರಿಸಿದಾಗ; ಸೊಸೆಯಳ =ಸೀತೆಯನ್ನು; ತೆಗೆದು ತಕ್ಕೈ+ಆಲಿಂಗಿಸಿಕೊಂಡು; ಬನದೊಳಗೆ=ಅರಣ್ಯದಲ್ಲಿ; ಬಲು ನೊಂದಳು+ಆ+ಮಾನಿನಿ=ಅರಣ್ಯದಲ್ಲಿ ತುಂಬಾ ನೊಂದಂತಹ ಹೆಣ್ಣೇ; ಬಾರೌ ತಾಯೆ=ಬಾರವ್ವ ತಾಯಿ; ಬಾರ+ಎಂದೆನುತ=ಬಾರೆ ಎನುತ; ಕಂಬನಿ+ತೊಡೆದು= ಕಣ್ಣೀರನ್ನು ಒರಸಿ; ಲಾಲಿಸಿದರು ಮಹಾಸತಿಯ=ಮುದ್ದಿಸಿದರು ಪತಿವ್ರತೆಯ.

ಜನಕರಾಯನ ಮಗಳಾದ ಸೀತೆ, ಸಂತೋಷದಿಂದ ಸುಗ್ರೀವನ ಸತಿಯ ರೊಡನೆ, ತನ್ನ ಅತ್ತೆಯರಿಗೆ ನಮಸ್ಕರಿಸಿದಾಗ ಅವರು ಸೊಸೆಯನ್ನು ಆಲಿಂ ಗಿಸಿಕೊಂಡು ಅರಣ್ಯವಾಸದಲ್ಲಿ ತುಂಬಾ ಕಷ್ಟಗಳನ್ನು ಅನುಭವಿಸಿರುವೆ, ಬಾರವ್ವ ತಾಯಿ ಎಂದು ಕರೆದು ಕಣ್ಣೀರ್ಗರೆಯುತ್ತಾ ಮಹಾಸತಿಯಾದ ಸೀತೆಯನ್ನು ಮುದ್ದಿಸಿದರು.

ಶ್ರೀರಾಮ ಭರತ ಮುಂತಾದ ಸಹೋದರರ ಸಮಾಗಮದ ನಂತರ ಸ್ತ್ರೀಯರ ಸಮಾಗಮದ ಚಿತ್ರಣವನ್ನು ಕನಕದಾಸರು ನೀಡಿದ್ದಾರೆ. ಸೀತೆ ಕಾಡಿನಿಂದ ಹಿಂತಿರುಗಿ ಬಂದ ನಂತರದ ಮೊದಲ ಭೇಟಿಯಲ್ಲಿ ಅತ್ತೆಯರಾದ ಕೌಸಲ್ಯೆ, ಸುಮಿತ್ರೆ,

ಕೈಕೆಯರು ತಮ್ಮ ತಳಮಳವನ್ನು ನಿವಾರಿಸಿಕೊಂಡು ಸೀತೆಯನ್ನು ಪ್ರೀತಿಯಿಂದ ಮುದ್ದಿಸಿದರು.

ತರಿಸಿ ಮಣಿಭೂಷಣ ದುಕೂಲವ
ಧರಣಿ ತನುಜೆಗೆ ತೊಡಿಸಿ ಭರತನು
ತರಣಿಸುತ ಜಾಂಬವ ವಿಭೀಷಣರುಗಳ ಸತ್ಕರಿಸಿ
ಪುರಕೆ ಪಯಣವ ಮಾಡಿದನು ಡಂ
ಗುರದ ಸನ್ನೆಯೊಳಂದು ಹೊರವಂ
ಟರು ಮಹಾಂಬುಧಿ ತೆರಳುವಂತೆ ಸಮುದ್ರ ಘೋಷದಲಿ ೯೭

ತರಿಸಿ, ಮಣಿ ಭೂಷಣ ದುಕೂಲವ=ಮುತ್ತು ರತ್ನಗಳಿಂದ ಅಲಂಕೃತ ಗೊಂಡ ವಸ್ತ್ರವನ್ನು ತರಿಸಿ; ಧರಣಿ ತನುಜೆಗೆ ತೊಡಿಸಿ=ಭೂಮಿಯ ಮಗಳಾದ ಸೀತೆಗೆ ತೊಡಿಸಿ; ಭರತನು, ತರಣಿಸುತ=ಸುಗ್ರೀವ; ಜಾಂಬವ; ವಿಭೀಷಣರುಗಳ; ಸತ್ಕರಿಸಿ=ಸತ್ಕಾರ ಮಾಡಿ; ಪುರಕೆ ಪಯಣವ ಮಾಡಿದನು= ಅಯೋಧ್ಯಾ ನಗರಕ್ಕೆ ಪ್ರಯಾಣವನ್ನು ಬೆಳೆಸಿದನು; ಡಂಗುರದ=ತಮಟೆಯ; ಸನ್ನೆಯೊಳು+ ಅಂದು= ಸಂಜ್ಞೆಯೊಂದಿಗೆ ಅಂದು; ಮಹಾ+ಅಂಬುಧಿ=ಮಹಾಸಾಗರ; ತೆರಳುವಂತೆ= ಸಾಗು ವಂತೆ; ಸಮುದ್ರ ಘೋಷದಲ್ಲಿ=ದೊಡ್ಡ ಸದ್ದಿನೊಂದಿಗೆ; ಹೊರವಂಟರು= ಹೊರ ಟರು.

ಈವರೆಗೆ ನಾರುಮಡಿಯಲ್ಲಿದ್ದ ಸೀತೆಗೆ ಮುತ್ತು ರತ್ನ ಖಚಿತವಾದ ವಸ್ತ್ರಗಳನ್ನು ತರಿಸಿ ತೊಡಿಸಿದರು. ಭರತನು ಸುಗ್ರೀವ, ಜಾಂಬವಂತ, ವಿಭೀಷಣರುಗಳನ್ನು ಸತ್ಕರಿಸಿ ಅಯೋಧ್ಯಾನಗರಕ್ಕೆ ಪ್ರಯಾಣವನ್ನು ಬೆಳೆಸಿದನು. ತಮಟೆಯ ಸದ್ದು ಹಾಗೂ ಇತರೆ ವಾದ್ಯಗಳ ಸದ್ದಿನೊಂದಿಗೆ ಅಂದು ಮಹಾಸಾಗರ ತೆರಳುವಂತೆ ದೊಡ್ಡ ಗರ್ಜನೆ ಯೊಂದಿಗೆ ಹೊರಟಿತು ಸೇನೆ.

ವನವಾಸದಿಂದ ಬಳಲಿ ಬಂದಂಥವರನ್ನು ಸಮಾಧಾನ ಪಡಿಸಿ, ಇದು ವರೆಗೂ ನಾರುಮಡಿಯಲ್ಲಿದ್ದ ಸೀತೆಗೆ ಅರಮನೆಗೆ ತಕ್ಕಂತ ಉಡುಪುಗಳನ್ನು ತರಿಸಿಕೊಟ್ಟು, ಅವರೊಂದಿಗೆ ಬಂದಂಥ ಸುಗ್ರೀವ, ಜಾಂಬವ, ವಿಭೀಷಣರುಗಳನ್ನು ಅತಿಥಿಗಳಂತೆ ಸತ್ಕರಿಸಿ ನಂತರ ಅಯೋಧ್ಯೆಯೆಡೆಗೆ ತೆರಳಿದರು.

ಮಸಗಿದುದು ಕೆಂಧೂಳಿ ಗಗನವ
ಮುಸುಕಿದರೆ ರವಿ ಧಾತುಗುಂದಿದ
ಪಸರಿಸಿತುದೆಣ್ದೆಸೆಯ ನೀಂಟಿತು ಸಪ್ತ ಸಾಗರವ
ಉಸುರು ತೆಗೆಬಗೆಯಾಯ್ತು ಕೂರುಮ
ನಸಿದನಹಿಪತಿ ಬಲದ ಭಾರದಿ
ಬೆಸುಗೆಬಿಡೆ ಗಿರಿವಾದ್ಯತತಿ ಗರ್ಜಿಸಿತು ಮೂಜಗವ ೯೮

ಮಸಗಿದುದು=ಹರಡಿತು; ಕೆಂಧೂಳಿ=ಕೆಂಪಾದ ಧೂಳು; ಗಗನವ=ಆಕಾಶವನ್ನು ಮುಸುಕಿದರೆ=ಆವರಿಸಿದಾಗ; ರವಿ ಧಾತುಗುಂದಿದ= ಸೂರ್ಯಶಕ್ತಿಗುಂದಿದ; ಪಸರಿಸಿತು+ ಅದು=ಹರಡಿತು ಅದು; ಎಣ್+ದೆಸೆಯನು+ ಈಂಟಿತು=ಎಂಟು ದಿಕ್ಕುಗಳನ್ನು ಆವರಿಸಿ; ಸಪ್ತ ಸಾಗರವ=ಏಳು ಸಮುದ್ರಗಳ; ಉಸುರು=ಉಸಿರಾಟ; ತೆಗೆಬಗೆಯಾಯ್ತು= ಏರುಪೇರಾಯ್ತು; ಕೂರುಮನು+ ಅಸಿದನು+ಅಹಿಪತಿ=ಆಮೆ; ಸಣ್ಣಗಾದನು ಆದಿಶೇಷ; ಬಲದ ಭಾರದಿ=ಸೇನಾಬಲದ ಭಾರದಿಂದ; ಬೆಸುಗೆ ಬಿಡೆ=ಜೋಡಣೆ ಬಿಟ್ಟು ಹೋಗಲಾಗಿ; ಗಿರಿ ವಾದ್ಯತತಿ=ಗಿರಿಗಳು ವಾದ್ಯಗಳಂತೆ; ಮೂಜಗವ=ಮೂರು ಲೋಕಗಳಲ್ಲಿ ಗರ್ಜಿಸಿದವು.

ಸೈನ್ಯದ ನಡಿಗೆಯಿಂದ ಎದ್ದ ಕೆಂಪಾದ ಧೂಳು ಎಲ್ಲಾ ಕಡೆ ಹರಡಿತು, ಗಗನವನ್ನು ಧೂಳು ಆವರಿಸಿದಾಗ ಸೂರ್ಯ ತನ್ನ ಶಕ್ತಿಯನ್ನು ಕಳೆದುಕೊಂಡಿತು, ಎಂಟು ದಿಕ್ಕುಗಳಲ್ಲಿ ಹಾಗೂ ಏಳು ಸಮುದ್ರಗಳನ್ನು ಧೂಳು ಆವರಿಸಿಕೊಂಡಿತು. ಭೂಮಂಡಲವನ್ನು ಹೊತ್ತಂತ ಆಮೆಯ ಉಸಿರಾಟದಲ್ಲಿ ಏರುಪೇರಾದರೆ, ಆದಿಶೇಷನು ಸಣ್ಣಗಾದನು. ರಾಮನ ಸೇನಾ ಬಲದ ಭಾರವನ್ನು ತಡೆಯಲಾಗದೆ ಜೋಡಣೆ ಬಿಟ್ಟಂತಾಗಿ, ಭೂಮಿಯ ಮೇಲಿನ ಗಿರಿಗಳು ಉರುಳಲಾರಂಭಿಸಿದುವು. ಅವುಗಳಿಂದ ಉಂಟಾದ ಸದ್ದು ವಾದ್ಯಗಳ ಸಮೂಹದ ಗರ್ಜನೆಯಂತೆ ಮೂರು ಲೋಕಕ್ಕೂ ಹರಡಿತು.

ರಾಮನ ಸೇನಾ ಪಡೆ ಅಧಿಕ ಪ್ರಮಾಣದಲ್ಲಿತ್ತು ಎಂದು ಹೇಳುವುದಕ್ಕೆ ಕನಕದಾಸರು ಕೊಡುವ ನಿದರ್ಶನಗಳು ಅರ್ಥಪೂರ್ಣವಾಗಿವೆ. ಇಡೀ ವಿಶ್ವದ ಮೇಲೆ ರಾಮನ ಸೈನ್ಯದ ನಡಿಗೆ ಪರಿಣಾಮ ಬೀರುವುದನ್ನು ಕಾಣುತ್ತೇವೆ. ಆಕಾಶ, ರವಿ,

ಎಂಟು ದಿಕ್ಕುಗಳು, ಸಪ್ತ ಸಾಗರಗಳು, ಕೂರ್ಮ, ಆದಿಶೇಷ, ಗಿರಿಗಳು ಎಲ್ಲವನ್ನು ಸಂದರ್ಭೋಚಿತ ಉದಾಹರಣೆಗಳಾಗಿ ಬಳಸಿಕೊಂಡಿದ್ದಾರೆ.

ಅರಸ ಕೇಳಲ್ಲಿಂದಯೋಧ್ಯಾ
ಪುರಿಗೆ ಬಂದನು ರಾಮ ನೃಪ ತ
ನ್ನರಸಿ ಲಕ್ಷ್ಮಣ ಭರತ ಶತ್ರುಘ್ನಾದಿ ಬಾಂಧವರ
ಪರುಠವಣೆಯಲಿ ರಾಜತೇಜದಿ
ಸುರರು ದುಂದುಭಿ ಮೊಳಗೆ ನಿಜಮಂ
ದಿರದ ಬಾಗಿಲ ಬಳಿಯ ನಿಂದನು ಮುನಿಪರೊಗ್ಗಿನಲಿ ೯೯

ಅರಸ ಕೇಳು+ಅಲ್ಲಿಂದ=ಯುಧಿಷ್ಠರನೇ ಕೇಳು ಅಲ್ಲಿಂದ; ಅಯೋಧ್ಯಾ ಪುರಿಗೆ=ಅಯೋಧ್ಯಾಪಟ್ಟಣಕ್ಕೆ; ಬಂದನು; ರಾಮನೃಪ; ತನ್ನರಸಿ=ತನ್ನ ರಾಣಿ ಸೀತೆ; ಲಕ್ಷ್ಮಣ; ಭರತ; ಶತ್ರುಘ್ನಾದಿ=ಶತ್ರುಘ್ನನು ಸೇರಿದಂತೆ; ಬಾಂಧವರ=ಬಂಧು ಬಾಂಧವರ; ಪರುಠವಣೆಯಲಿ=ಒಳಗೊಂಡಂತೆ; ರಾಜ ತೇಜದಿ=ರಾಜ ತೇಜಸ್ಸಿನಿಂದ; ಸುರರು=ದೇವತೆಗಳು ದುಂದುಭಿ ಮೊಳಗೆ=ನಗಾರಿ ಬಾರಿಸಲು; ನಿಜಮಂದಿರದ= ತಮ್ಮ ಅರಮನೆಯ; ಬಾಗಿಲ ಬಳಿ ಮುನಿಪರ+ ಒಗ್ಗಿನಲಿ= ಮುನಿಗಳ ಸಮೂಹ ದೊಂದಿಗೆ ನಿಂದನು.

ರಾಜ ಯುಧಿಷ್ಠಿರನೇ ಕೇಳು, ರಾಮನು ಅಯೋಧ್ಯಾನಗರಕ್ಕೆ ರಾಜ ತೇಜದಿಂದ, ಸೀತೆ, ಲಕ್ಷ್ಮಣ, ಭರತ, ಶತ್ರುಘ್ನ ಮುಂತಾದ ಬಾಂಧವರ ಕೂಡಿಕೊಂಡು ಬಂದನು. ದೇವತೆಗಳು ನಗಾರಿಯನ್ನು ಮೊಳಗಿಸಿ ಸಂತಸ ವ್ಯಕ್ತಪಡಿಸಿದರು. ರಾಮನು ಋಷಿಮುನಿಗಳ ಜೊತೆಗೆ ಬಂದು ಅರಮನೆಯ ಬಾಗಿಲ ಬಳಿ ರಥವನ್ನು ನಿಲ್ಲಿಸಿದ.

ರಾಮ ಎಲ್ಲೇ ಹೋದರೂ ಸದಾ ತನ್ನದೇ ಅದ ಮಿತ್ರ ಮಂಡಲಿ ಹಾಗೂ ಋಷಿಗಳನ್ನು ಹೊಂದಿರುವುದನ್ನು ಗಮನಿಸಬಹುದು ಸದಾ ಒಳ್ಳೆಯವರ ಸಹ ವಾಸದಲ್ಲಿರುವ ಸಾತ್ವಿಕ ಮೂರ್ತಿ ಶ್ರೀರಾಮ.

ಅನಿಮಿಷರು ಸಂದಣಿಸೆ ಅಭ್ರದಿ
ಹನುಮನಾಕ್ಷಣ ಬಂದು ಕೈಲಾ
ಗಿನಲಿ ಪಾಯವಧಾನ ಚಿತ್ತವಧಾನವೆಚ್ಚರಿಕೆ

ಎನಲು ರಥದಿಂದಿಳಿದು ರಘು ನಂ
ದನನು ಹೊಕ್ಕನು ರಾಜಭವನವ
ತನತನಗೆ ಪುರಜನರು ಕಾಣಿಕೆಗೊಟ್ಟು ನಮಿಸಿದರು ೧೦೦

ಅನಿಮಿಷರು=ಕಣ್ಣಿನ ರೆಪ್ಪೆ ಹೊಂದಿಲ್ಲದ ದೇವತೆಗಳು; ಸಂದಣಿಸೆ= ನೆರೆಯಲು; ಅಭ್ರದಿ=ಗಗನದಲಿ; ಹನುಮನು+ಆ ಕ್ಷಣ=ಹನುಮಂತ ತಕ್ಷಣ; ಬಂದು; ಕೈ+ಲಾಗಿನಲಿ=ಹಸ್ತಲಾಗದಿಂದ ಪಾಯ+ಅವಧಾನ=ಪಾದ ಗಮನಿಸಿ; ಚಿತ್ತ+ ಅವ ಧಾನ+ ಎಚ್ಚರಿಕೆ=ಮನಸ್ಸನ್ನು ಗಮನಿಸಿ; ಎಚ್ಚರಿಕೆ; ಎನಲು=ಎಂದು ಹೇಳಲು; ರಥ ದಿಂದ+ಇಳಿದು=ರಥದದಿಂದ ಇಳಿದು; ರಘುನಂದನನು=ರಘುವಂಶಜನಾದ ಶ್ರೀ ರಾಮ; ಹೊಕ್ಕನ್ನು=ಪ್ರವೇಶಿಸಿದನು; ರಾಜಭವನವ=ಅರಮನೆಯನ್ನು; ತನತನಗೆ= ತಮ್ಮಷ್ಟಕ್ಕೇ ತಾವು; ಪುರಜನರು=ಅಯೋಧ್ಯಾ ನಗರದ ಜನರು; ಕಾಣಿಕೆ+ ಕೊಟ್ಟು= ಉಡುಗೊರೆಗಳನ್ನು ನೀಡಿ; ನಮಿಸಿದರು=ವಂದಿಸಿದರು.

ಶ್ರೀರಾಮ ರಥದಲ್ಲಿ ಅಯೋಧ್ಯೆಗೆ ಹಿಂದಿರುಗಿ ಅರಮನೆ ಬಳಿ ಬಂದಾಗ ಸಂತಸಗೊಂಡ ದೇವತೆಗಳು ಗಗನದಲ್ಲಿ ನೆರೆದರೆ, ಹನುಮನು ಉತ್ಸಾಹದಿಂದ ಹಸ್ತಲಾಗ ಹಾಕುತ್ತಾ ರಾಮನೆಡೆಗೆ ಬಂದು ರಾಮನ ಪಾದಗಳು ಹಾಗೂ ಮನಸ್ಸನ್ನು ಗಮನಿಸಿ, ಎಚ್ಚರದಿಂದ ಇಳಿಯಿರಿ ಎಂದ. ರಥದಿಂದಿಳಿದ ಶ್ರೀರಾಮನು ರಾಜಭವನವನು ಪ್ರವೇಶಿಸಿದಾಗ ಅಯೋಧ್ಯೆಯ ಜನ ತಾವಾಗಿಯೇ ಬಂದು ಕಾಣಿಕೆಗಳನ್ನು ಕೊಟ್ಟು ರಾಮನಿಗೆ ವಂದಿಸಿದರು.

ಶ್ರೀರಾಮನ ಆಗಮನ ದೇವತೆಗಳಿಗಷ್ಟೇ ಅಲ್ಲ; ಪುರಜನರಿಗೂ ಭಕ್ತ ಹನುಮನಿಗೂ ಸಂತಸವನ್ನುಂಟುಮಾಡಿದೆ. ಜನ ಸ್ವಯಂಸ್ಫೂರ್ತಿಯಿಂದ ರಾಜನಿಗೆ ಉಡುಗೊರೆಗಳನ್ನು ನೀಡುತ್ತಿರುವುದು ಹಾಗೂ ಹನುಮಂತ ರಾಮನನ್ನು ಎಚ್ಚರಿಕೆಯಿಂದ ರಥದಿಂದ ಇಳಿಸುವುದು ಇಲ್ಲಿನ ವಿಶೇಷ.

ಗುರು ವಸಿಷ್ಠನ ಮತದಿ ತಮ್ಮಂ
ದಿರು ಸಹಿತ ಮಜ್ಜನವ ಮಾಡಿದ
ನರಸ ದಿವ್ಯಸುಗಂಧ ಮಾಲ್ಯಾಂಬರ ಸುಭೂಷಣವ
ಧರಿಸಿದರು ನಾಲ್ವರು ಕುಮಾರರು

ಹರುಷಮಿಗೆ ನಿಜಜನನಿಯರು ಮೂ
ವರಿಗೆ ವಂದಿಸಿ ಮೆರೆದರಗ್ಗದ ರಾಜತೇಜದಲಿ ೧೦೧

ಗುರು ವಸಿಷ್ಠನ=ರಾಜಗುರುಗಳಾದ ವಸಿಷ್ಠ ಮಹರ್ಷಿಯ; ಮತದಿಂ=ಅಭಿಪ್ರಾಯದಂತೆ; ತಮ್ಮಂದಿರು ಸಹಿತ= ತಮ್ಮಂದಿರೊಂದಿಗೆ; ಮಜ್ಜನವ=ಸ್ನಾನವನ್ನು; ಮಾಡಿದನು+ಅರಸ=ಮಾಡಿಕೊಂಡನು ಶ್ರೀರಾಮ; ದಿವ್ಯ ಸುಗಂಧ=ಒಳ್ಳೆಯ ಪರಿಮಳ; ಮಾಲೆ+ಅಂಬರ=ಹಾರ ಮತ್ತು ವಸ್ತ್ರ; ಸುಭೂಷಣವ=ಆಭರಣಗಳನ್ನು ಧರಿಸಿದರು; ನಾಲ್ವರು ಕುಮಾರರು=ನಾಲ್ಕು ಜನ ರಾಜಕುಮಾರರು; ಹರುಷಮಿಗೆ=ಹೆಚ್ಚಿನ ಸಂತೋಷದಿಂದ; ನಿಜ ಜನನಿಯರು=ತಾಯಂದಿರು ಮೂವರಿಗೆ; ವಂದಿಸಿ= ನಮ ಸ್ಕರಿಸಿ; ಅಗ್ಗದ=ಶ್ರೇಷ್ಠ; ರಾಜ ತೇಜದಲಿ=ರಾಜ ತೇಜಸ್ಸಿನಿಂದ; ಮೆರೆದರು= ಶೋಭಿ ಸಿದರು.

ರಾಜ ಗುರುಗಳಾದ ವಸಿಷ್ಠರ ಮಾತಿನಂತೆ, ತಮ್ಮಂದಿರೊಡನೆ ಶ್ರೀರಾಮನು ಸ್ನಾನವನ್ನು ಮಾಡಿ; ಒಳ್ಳೆಯ ಸುಗಂಧ, ವಸ್ತ್ರ, ಆಭರಣ, ಹಾರಗಳನ್ನು ಧರಿಸಿದರು. ರಾಮ; ಲಕ್ಷ್ಮಣ; ಭರತ, ಶತ್ರುಘ್ನ ನಾಲ್ಕು ಜನರೂ ಸಂತೋಷದಿಂದ ತಮ್ಮ ಮೂವರು ಅಮ್ಮಂದಿರಿಗೆ ನಮಸ್ಕರಿಸಿ ರಾಜ ತೇಜಸ್ಸಿನಲ್ಲಿ ಆನಂದದಿಂದ ಮೆರೆದರು.

ಎಷ್ಟೋ ವರ್ಷಗಳ ಅಗಲಿಕೆಯ ನೋವನ್ನು ನೀಗಿಸಿ ಸಂಭ್ರಮ ಪಡುವ ಕ್ಷಣ; ನಾಲ್ಕು ಜನ ಮಕ್ಕಳು ಮೂವರು ತಾಯಂದಿರು ಹಾಗೂ ಸೀತೆ ಸಂತೋಷ ಸಂಭ್ರಮದಲ್ಲಿ ತೇಲಾಡಿದರು.

ಓಲಗಕೆ ನಡೆತಂದು ರಾಮನೃ
ಪಾಲನನುಜರು ಸಹಿತ ಮಂತ್ರೀ
ಜಾಲ ಬಾಂಧವ ಸಹಿತ ತಿರೆಯ ಸಮಸ್ತ ದುಣಿಪರು
ಓಲಗದಿ ಮುನಿ ಮುಖ್ಯರೆಲ್ಲರು
ಲೀಲೆಯಿಂ ಕುಳ್ಳಿರೆ ಸುಮಂತ್ರನು
ಕೋಲ ಗುರುವಿಗೆ ನಮಿಸಿ ಯಾಳೋಚಿಸಸಿದನೀ ಹದನ ೧೦೨

ಓಲಗಕೆ=ಒಡ್ಡೋಲಗಕ್ಕೆ; ನಡೆ ತಂದು=ಬಂದು; ರಾಮನೃಪಾಲನು+ಅನುಜರು ಸಹಿತ=ಶ್ರೀರಾಮನು ಸಹೋದರರೊಂದಿಗೆ; ಮಂತ್ರೀಜಾಲ=ಮಂತ್ರಿಗಳ

ಸಮೂಹ; ಬಾಂಧವ ಸಹಿತ=ಬಂಧುಗಳ ಸಹಿತ; ತಿರೆಯ=ಭೂಮಂಡಲದ; ಸಮಸ್ತ ಧರಣಿಪರು=ಎಲ್ಲಾ ರಾಜರು; ಓಲಗದಿ=ಒಡ್ಡೋಲಗದಲ್ಲಿ; ಮುನಿಮುಖ್ಯರು+ ಎಲ್ಲರು=ಮುನಿಗಳು ಹಾಗೂ ಪ್ರಮುಖ ವ್ಯಕ್ತಿಗಳೆಲ್ಲ; ಲೀಲೆಯಿಂ=ಸಂತೋಷದಿಂದ; ಕುಳ್ಳಿರೆ=ಕುಳಿತಿರುವಾಗ; ಸುಮಂತ್ರನು=ಮಂತ್ರಿಯು; ಕುಲಗುರುವಿಗೆ=ವಸಿಷ್ಠರಿಗೆ; ನಮಿಸಿ+ಆಳೋಚಿಸಿದನು+ಈ=ನಮಸ್ಕರಿಸಿ ಯೋಚಿಸಿದನು ಈ; ಹದನ=ರೀತಿ.

ರಾಮ ಮತ್ತು ಸಹೋದರರು ಒಡ್ಡೋಲಗಕ್ಕೆ ಬಂದಾಗ ಮಂತ್ರಿಗಳು, ಬಂಧುಬಾಂಧವರು, ಭೂಮಂಡಲದ ಎಲ್ಲಾ ರಾಜರು. ಋಷಿಮುನಿಗಳು, ಪ್ರಮುಖ ವ್ಯಕ್ತಿಗಳೆಲ್ಲರು ಸಂತೋಷದಿಂದ ಕುಳಿತಿರಲು, ದಶರಥ ರಾಜನ ಮಂತ್ರಿಯಾದ ಸುಮಂತ್ರನು ಕುಲಗುರುಗಳಾದ ವಸಿಷ್ಠರಿಗೆ ವಂದಿಸಿ ಈ ರೀತಿ ಆಲೋಚಿಸಿದ.

ರಾಮ ಅಯೋಧ್ಯೆಗೆ ಹಿಂತಿರುಗಿದ ಶುಭ ಸಂದರ್ಭವನ್ನು ಸಂಭ್ರಮಿಸಲು ಅಂದು ಒಡ್ಡೋಲಗವನ್ನು ಏರ್ಪಡಿಸಿ ಮಂತ್ರಿಗಳು, ಬಂಧುಮಿತ್ರರು, ಇತರ ರಾಜರು, ಋಷಿಮುನಿಗಳು ಮುಂತಾದ ಪ್ರಮುಖರೆಲ್ಲಾ ಸೇರಿದ ಸುಸಂದರ್ಭವನ್ನು ನೋಡಿ ದಶರಥನ ಮಂತ್ರಿಯಾದ ಸುಮಂತ್ರನು ರಾಮನಿಗೆ ಪಟ್ಟ ಕಟ್ಟುವ ವಿಷಯವನ್ನು ಪ್ರಸ್ತಾಪಿಸಲು ಆಲೋಚಿಸಿದನು.

ವರನೃಪಾಲಗೆ ರಾಜಪಟ್ಟವ  
ಧರಿಸಬಹುದೇ ಜೀಯಯೆನೆ ಭೂ  
ಸುರರ ಬರಹೇಳೆನುತ ತರಿಸಿದರಖಿಳ ವಸ್ತುಗಳ  
ತರಿಸಿ ಕವಳವನುಭಯರಿಗೆ ಕರ  
ಕರೆಸಿ ಕೊಡಿಸಿದನಾ ಸುಮಂತನು  
ಪುರವ ಸಲೆ ಶೃಂಗರಿಸೆ ಪರಿಚಾರರಿಗೆ ನೇಮಿಸಿದ ೧೦೩

ವರ ನೃಪಾಲಗೆ=ಶ್ರೇಷ್ಠ ರಾಜ ಶ್ರೀರಾಮನಿಗೆ; ರಾಜಪಟ್ಟವ= ರಾಜ್ಯಾಭಿಷೇಕವನ್ನು; ಧರಿಸಬಹುದೇ=ನೆರವೇರಿಸಬಹುದೇ; ಜೀಯಯೆನೆ=ಸ್ವಾಮಿಯೇ ಎನಲು; ಭೂಸುರರ=ಬ್ರಾಹ್ಮಣರನ್ನು; ಬರ ಹೇಳು+ಎನುತ=ಬರಲು ಹೇಳು ಎನ್ನುತ್ತಾ; ತರಿಸಿದರು+ಅಖಿಳ ವಸ್ತುಗಳ=ಪಟ್ಟಾಭಿಷೇಕಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ತರಿಸಿದರು. ತರಿಸಿ ಕವಳವನು+ಉಭಯರಿಗೆ=ತರಿಸಿದನು ತಾಂಬೂಲವನು ಎಲ್ಲ

ರಿಗೂ; ಕರ ಕರೆಸಿ ಕೊಡಿಸಿದನು=ವಿಶೇಷವಾಗಿ ಕರೆದು ಕೊಡಿಸಿದನು; ಆ ಸುಮಂತ್ರನು; ಪುರವ ಸಲೆ ಶೃಂಗರಿಸೆ=ಅಯೋಧ್ಯ ನಗರವನ್ನು ಚೆನ್ನಾಗಿ ಶೃಂಗರಿಸಲು; ಪರಿಚಾರರಿಗೆ=ಸೇವಕರಿಗೆ; ನೇಮಿಸಿದ=ನಿಯಮಿಸಿದ.

ಶ್ರೇಷ್ಠ ರಾಜನಾದ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ನೆರವೇರಿಸಬಹುದೇ ಪ್ರಭುವೇ ಎಂದಾಗ, ತಕ್ಷಣ ವಸಿಷ್ಠರು ಪುರೋಹಿತರನ್ನು ಬರಲು ಹೇಳು, ಎನುತ ಅದಕ್ಕೆ ಬೇಕಾದ ಸಕಲ ರೀತಿಯ ವಸ್ತುಗಳನ್ನು ತರಿಸಿಕೊಂಡು, ತಾಂಬೂಲವನ್ನು ಎಲ್ಲರಿಗೂ ನೀಡಿ ಆಮಂತ್ರಿಸಿದರು. ಮಂತ್ರಿ ಸುಮಂತ್ರನು ಅಯೋಧ್ಯಾನಗರವನ್ನು ಚೆನ್ನಾಗಿ ಶೃಂಗರಿಸಲು ಸೇವಕರನ್ನು ನೇಮಿಸಿದನು.

ವನವಾಸಕ್ಕಿಂತ ಮೊದಲು ಶ್ರೀರಾಮನಿಗೆ ಪಟ್ಟಾಭಿಷೇಕ ನೆರವೇರಬೇಕಿತ್ತು ಆದರೆ ಮಂಥರೆ ಹಾಗೂ ಕೈಕೆಯರಿಂದಾಗಿ ನಿಂತು ಹೋಗಿದ್ದ ಪಟ್ಟಾಭಿಷೇಕ, ವನವಾಸದ ನಂತರ ಯಾವುದೇ ಅಡೆತಡೆಗಳಿಲ್ಲದೇ ಎಲ್ಲರ ಸಮ್ಮುಖದಲ್ಲಿ ನೆರವೇರಲು ಒಪ್ಪಿಗೆ ದೊರೆಯಿತು.

ವಾರಣದ ಬೀದಿಗಳ ಘನ ಶೃಂ
ಗಾರದಿಂ ನವರತ್ನ ಜಲ್ಲಿಯ
ತೋರಣದ ಮಂಟಪದ ಸಿರಿಯಲಿ ಮೇಲು ಕಟ್ಟುಗಳ
ಕಾರಳಿಯ ಕುಂಕುಮದ ನವ ಪ
ನ್ನೀರ ಚಳೆಯದ ಕತ್ತುರಿಯ ಮತ
ಸಾರಳಿಯ ರಚನೆಯಲಿ ಶೃಂಗರಿಸಿದರು ಪಟ್ಟಣವ ೧೦೪

ವಾರಣದ ಬೀದಿಗಳ=ಆನೆ ಒಂಟೆಗಳಿಂದ ಕೂಡಿದ ಬೀದಿಗಳು; ಘನ ಶೃಂಗಾರದಿಂ=ಹೆಚ್ಚಿನ ಶೃಂಗಾರದಿಂದ; ನವರತ್ನ ಜಲ್ಲಿಯ=ಒಂಬತ್ತು ರೀತಿಯ ಮುತ್ತು ರತ್ನ ಹರಳುಗಳ ಸಣ್ಣ ಚೂರುಗಳಿಂದ ಮಾಡಿದ; ತೋರಣದ; ಮಂಟಪದ; ಸಿರಿಯಲಿ=ಸಂಪತ್ತಿನಲ್ಲಿ; ಮೇಲು ಕಟ್ಟುಗಳಕಾರಳಿಯ=ಚಿನ್ನ ಬೆಳ್ಳಿಯ ಕಟ್ಟುಗಳಿಂದ ತಯಾರಿಸಿದ್ದ; ಕುಂಕುಮದ ನವ ಪನ್ನೀರ ಚಳೆಯದ=ಕೇಸರಿ ಬಣ್ಣದ ಹೊಸ ಪನ್ನೀರ ಚಿಮುಕಿಸಲು; ಕತ್ತುರಿಯ=ಕಸ್ತೂರಿಯ; ಮತಸಾರಳಿಯ=ಸುಗಂಧದ ನೀರು; ರಚನೆಯಲ್ಲಿ ಶೃಂಗರಿಸಿದರು ಪಟ್ಟಣವ=ನಗರವನ್ನು ಅಲಂಕರಿಸಿದರು.

ಆನೆ, ಕುದುರೆಗಳಿಂದ ಕೂಡಿದ ಬೀದಿಗಳು, ಮುತ್ತು, ರತ್ನ, ಪಚ್ಚೆ, ಕೆಂಪು ಇತ್ಯಾದಿ ನವರತ್ನದ ಹರಳುಗಳಿಂದ ತಯಾರಿಸಿದ ತೋರಣಗಳು, ಮಂಟಪಗಳು, ಎಲ್ಲೆಡೆ ಕುಂಕುಮದ ಪನ್ನೀರು, ಕಸ್ತೂರಿ ಬೆರೆಸಿದ ಸುಗಂಧದ ನೀರನ್ನು ಚಿಮುಕಿಸಿ ಅಯೋಧ್ಯಾನಗರವನ್ನು ಶೃಂಗರಿಸಿದರು.

ಪಟ್ಟಾಭಿಷೇಕಕ್ಕೆ ನಗರವನ್ನು ಹೇಗೆ ಸಿದ್ಧಗೊಳಿಸುತ್ತಿದ್ದರು ಎಂಬುದರ ಚಿತ್ರಣ ವನ್ನು ಇಲ್ಲಿ ಕಾಣುತ್ತೇವೆ.

ಬರಸಿದರು ವಾಲೆಗಳ ದಿಕ್ಕಿನ
ಅರಸುಗಳ ಬರಹೇಳಿ ಮುನಿ ಮು
ಖ್ಯರನು ಬಂದರು ಅವನಿಪಾಲಕರತುಳ ಬಲಸಹಿತ
ತರುಣಿಯರು ಶೃಂಗರಿಸಿದರು ಪರಿ
ಪರಿಯ ದಿವ್ಯದುಕೂಲ ವಸ್ತ್ರಾ
ಭರಣ ಭೂಷಿತರಾಗಿ ಪಿಡಿದರು ಕಲಶಕನ್ನಡಿಯ ೧೦೫

ಬರೆಸಿದರು ವಾಲೆಗಳ=ಓಲೆಗಳನ್ನು ಬರೆಸಿದರು; ದಿಕ್ಕಿನ ಅರಸುಗಳ=ಎಲ್ಲ ದಿಕ್ಕುಗಳ; ರಾಜರಿಗೆ; ಬರ ಹೇಳಿ=ಬರಲು ಹೇಳಿ; ಮುನಿ ಮುಖ್ಯರನು=ಪ್ರಮುಖ ಋಷಿಮುನಿಗಳನ್ನು; ಬಂದರು ಅವನಿ ಪಾಲಕರು+ಅತುಳ=ಬಂದರು ಅಸಾಮಾನ್ಯ ರಾಜರು;ಬಲಸಹಿತ=ಸೇನೆಯೊಂದಿಗೆ; ತರುಣಿಯರು=ನವಯೌವನೆಯರು; ಶೃಂಗರಿಸಿದರು=ಶೃಂಗಾರ ಮಾಡಿಕೊಂಡರು; ಪರಿಪರಿಯ=ಬಗೆ ಬಗೆಯ; ದಿವ್ಯದುಕೂಲ= ಅಮೂಲ್ಯ ರೇಷ್ಮೆವಸ್ತ್ರ; ವಸ್ತ್ರಾಭರಣ=ಬಟ್ಟೆಆಭರಣಗಳಿಂದ; ಭೂಷಿತರಾಗಿ= ಅಲಂಕರಿಸಿಕೊಂಡು; ಕಲಶ ಕನ್ನಡಿಯ=ಕಳಶ ಮತ್ತು ಕನ್ನಡಿಯನ್ನು; ಪಿಡಿದರು= ಹಿಡಿದರು.

ಶ್ರೀರಾಮನ ಪಟ್ಟಾಭಿಷೇಕದ ಸಲುವಾಗಿ ಎಲ್ಲ ದಿಕ್ಕಿನ ರಾಜರುಗಳಿಗೆ ಆಮಂತ್ರಣ ಪತ್ರಗಳನ್ನು ಬರೆಸಿದರು, ಪ್ರಸಿದ್ಧ ಋಷಿಮುನಿಗಳನ್ನು ಬರಲು ಹೇಳಿದರು, ರಾಜರೆಲ್ಲಾ ಅಪಾರ ಸೈನ್ಯದೊಂದಿಗೆ ಬಂದು ಸೇರಿದರು, ನವ ಯೌವನೆಯರು ಬಗೆ ಬಗೆಯ ರೇಶಿಮೆ ವಸ್ತ್ರ, ಆಭರಣಗಳಿಂದ ಅಲಂಕರಿಸಿಕೊಂಡು ಪಟ್ಟಾಭಿಷೇಕಕ್ಕೆ ಕಳಶ ಕನ್ನಡಿಗಳನ್ನು ಹಿಡಿಯಲು ಸಿದ್ಧರಾದರು.

ರಾಮನ ಪಟ್ಟಾಭಿಷೇಕದ ಸಿದ್ಧತೆಗಳ ಚಿತ್ರಣ ಓದುಗರ ಕಣ್ಮುಂದೆ ಬರುವಂತೆ ಚಿತ್ರಿಸಿದ್ದಾರೆ ಕವಿ.

ಹರುಷದಲಿ ತಂತಮ್ಮ ಕೈಯಲಿ
ಪರಮ ಪುಣ್ಯಸುವಸ್ತುಗಳ ತಂ
ದಿರಿಸಿದರು ಹರುಷದಲಿ ನೆರೆದುದು ಬಹುಳ ಸಂಖ್ಯೆಯಲಿ
ಶರಧಿ ಮೇರುದಿಗಂತದವನೀ
ಶ್ವರರು ಯಾಚಕ ಪಂಡಿತರು ಕವಿ
ವರರು ಗಾಯಕ ಮಲ್ಲ ದೈವಜ್ಞರು ಸುನರ್ತಕರು ೧೦೬

ಹರುಷದಲಿ=ಸಂತೋಷದಿಂದ; ತಂತಮ್ಮ ಕೈಯಲಿ=ತಮ್ಮೊಂದಿಗೆ; ಪರಮ ಪುಣ್ಯ ಸುವಸ್ತುಗಳ=ಶ್ರೇಷ್ಠವಾದ ಅಮೂಲ್ಯ ವಸ್ತುಗಳನ್ನು; ತಂದು+ಇರಿಸಿದರು =ತಂದರು; ಹರುಷದಲಿ=ಸಂತೋಷದಿಂದ; ನೆರೆದುದು=ಸೇರಿತು; ಬಹುಳ ಸಂಖ್ಯೆ ಯಲಿ=ಹೆಚ್ಚಿನ ಸಂಖ್ಯೆಯಲಿ; ಶರಧಿ, ಮೇರು ದಿಗಂತದ+ಅವನೀಶ್ವರರು= ಸಮುದ್ರ ರಾಜ; ಪರ್ವತರಾಜ; ದಿಕ್ಪಾಲಕರು; ಭೂಪಾಲಕರು; ಯಾಚಕ ಪಂಡಿತರು= ಪ್ರಾರ್ಥಿ ಸುವ ಪಂಡಿತರು; ಕವಿವರರು=ಕವಿಶ್ರೇಷ್ಠರು; ಗಾಯಕ=ಹಾಡುಗಾರ; ಮಲ್ಲಜಟ್ಟಿಗಳು; ದೈವಜ್ಞರು=ಜ್ಯೋತಿಷಿಗಳು; ಸುನರ್ತಕರು=ಪರಿಣತ ನಾಟ್ಯದವರು.

ಎಲ್ಲರೂ ಸಂತೋಷದಿಂದ ತಮ್ಮೊಂದಿಗೆ ಅತ್ಯಮೂಲ್ಯ ವಸ್ತುಗಳನ್ನು ತಂದರು. ಉತ್ಸಾಹದಿಂದ ಹೆಚ್ಚಿನ ಸಂಖ್ಯೆಯಲಿ ಸೇರಿದರು, ಸಮುದ್ರ, ಪರ್ವತ ಮುಂತಾದ ರಾಜರು; ದಿಕ್ಪಾಲಕರು; ಭೂಪಾಲಕರು, ಪ್ರಾರ್ಥಿಸುವ ಪಂಡಿತರು, ಕವಿವರೇಣ್ಯರು, ಗಾಯಕರು, ಜಟ್ಟಿಗಳು, ಜ್ಯೋತಿಷ್ಯರು, ನುರಿತ ನಾಟ್ಯದವರು ಮುಂತಾದವರೆಲ್ಲಾ ಅಯೋಧ್ಯೆಯಲ್ಲಿ ನೆರೆದರು.

ರಾಜನ ಪಟ್ಟಾಭಿಷೇಕ ಎಂದರೆ ಅಲ್ಲಿ ಎಂಥವರೆಲ್ಲಾ ಸೇರುತ್ತಾರೆ. ಹಾಗೂ ಪಟ್ಟಾಭಿಷೇಕಕ್ಕೆ ಯಾರ ಯಾರ ಅಗತ್ಯವಿರುತ್ತದೆ; ಯಾರ್ಯಾರಿಗೆ ಆಹ್ವಾನವಿರುತ್ತದೆ. ಎಂಬುದರ ಪಟ್ಟಿಯನ್ನು ಕನಕದಾಸರು ಈ ಪದ್ಯದಲ್ಲಿ ಪ್ರಸ್ತಾಪಿಸಿದ್ದಾರೆ.

ಬಂದರತಿ ಬೇಗದಲಿ ವರತೃಣ
ಬಿಂದು ಮುನಿ ದಮನಾಖ್ಯ ಸನಕಸ

ನಂದ ಶೌನಕ ಸೂತ ಶತಮುಖ ಸುಮತಿ ಜಾಬಾಲಿ
ಸಂದ ದಾಲ್ಭ್ಯಮರೀಚಿ ಲೋಗಾ
ನಂದ ಸುರಗುರು ರೋಮಜನು ಮುಚು
ಕುಂದ ನಾರದರಖಿಳ ತಪಸಿಗಳೈದಿ ತೊಗ್ಗಿನಲಿ ೧೦೭

ಬಂದರು+ಅತಿ ಬೇಗದಲಿ=ಬೇಗನೆ ಬಂದರು; ವರತೃಣ ಬಿಂದು ಮುನಿ=ಶ್ರೇಷ್ಠರಾದ ತೃಣ ಬಿಂದು ಮುನಿ; ದಮನಾಖ್ಯ; ಸನಕ; ಸನಂದ; ಶೌನಕ; ಸೂತ; ಶತಮುಖ; ಸುಮತಿ; ಜಾಬಾಲಿ; ಸಂದ; ದಾಲ್ಭ್ಯ; ಮರೀಚಿ; ಲೋಗಾನಂದ; ಸುರುಗುರು; ರೋಮಜನು; ಮುಚುಕುಂದ; ನಾರದರು+ಅಖಿಳ=ನಾರದರು ಎಲ್ಲಾ; ತಪಸಿಗಳು+ಐದಿತು=ಒಗ್ಗಿನಲಿ=ತಪಸ್ವಿಗಳು ಬಂದರು ಒಂದಾಗಿ;

ಶ್ರೀರಾಮನ ಪಟ್ಟಾಭಿಷೇಕಕ್ಕೆ ಉತ್ಸಾಹದಿಂದ ತೃಣಬಿಂದು ಮುನಿ, ದಮನಾಖ್ಯ, ಸನಕ, ಸನಂದ. ಶೌನಕ, ಸೂತ, ಶತಮುಖ, ಸುಮತಿ, ಜಾಬಾಲಿ, ಸಂದ; ದಾಲ್ಭ್ಯ, ಮರೀಚ, ಲೋಗಾನಂದ, ಸುರುಗುರು, ರೋಮಜ, ಮುಚುಕುಂದ, ನಾರದ ಮೊದಲಾದ ತಪಸ್ವಿಗಳೆಲ್ಲರೂ ಬಂದರು.

ಕನಕದಾಸರು ಸಾಧ್ಯವಾದಷ್ಟು ಎಲ್ಲಾ ಋಷಿಮುನಿಗಳನ್ನು ರಾಮನ ಪಟ್ಟಾಭಿಷೇಕಕ್ಕೆ ಕರೆಸುವ ಪ್ರಯತ್ನ ಮಾಡಿದ್ದಾರೆ. ೧೦೭, ೧೦೮, ೧೦೯ನೇ ಪದ್ಯಗಳಲ್ಲಿ ತಪಸ್ವಿಗಳ ದೊಡ್ಡ ಪಟ್ಟಿಯನ್ನು ನೀಡಿರುವರು.

ಅತ್ರಿ ಭಾರದ್ವಾಜ ವಿಶ್ವಾ
ಮಿತ್ರ ಗೌತಮ ವಾಮದೇವನ
ಗಸ್ತ್ಯ ಕಣ್ವಾಂಗಿರಸ ಮಾರ್ಕಂಡೇಯ ಮೈತ್ರೇಯ
ಸತ್ಯತಪ ಕೌಂಡಿನ್ಯ ಕೌಶಿಕ
ಪುತ್ರ ಶುಕ ವಾಲ್ಮೀಕಿಯಾ ಮುನಿ
ಪೋತ್ತಮರು ಸಂದಣಿಸಿದರು ರಘುನೃಪನ ಸಭೆಯೊಳಗೆ ೧೦೮

ಅತ್ರಿ; ಭಾರದ್ವಾಜ; ವಿಶ್ವಾಮಿತ್ರ; ಗೌತಮ; ವಾಮದೇವನು+ಅಗಸ್ತ್ಯ; ಕಣ್ವ+ಅಂಗಿರಸ; ಮಾರ್ಕಂಡೇಯ; ಮೈತ್ರೇಯ; ಸತ್ಯತಪ; ಕೌಂಡಿನ್ಯ; ಕೌಶಿಕಪುತ್ರ;

ಶುಕ; ವಾಲ್ಮೀಕಿ+ಆ=ವಾಲ್ಮೀಕಿಯ; ಮುನಿಪ+ಉತ್ತಮರು=ಉತ್ತಮ ಮುನಿಗಳು; ಸಂದಣಿಸಿದರು= ಸೇರಿದರು; ರಘುನೃಪನ=ರಘುವಂಶದ ರಾಜನಾದ ಶ್ರೀರಾಮನ ಸಭೆಯೊಳಗೆ.

ಅತ್ರಿಮುನಿ, ಭಾರದ್ವಾಜ, ವಿಶ್ವಾಮಿತ್ರ, ಗೌತಮ, ವಾಮದೇವ, ಅಗಸ್ತ್ಯ, ಕಣ್ವ, ಅಂಗೀರಸ, ಮಾರ್ಕಂಡೇಯ, ಮೈತ್ರೇಯ, ಸತ್ಯತಪ, ಕೌಂಡಿನ್ಯ, ಕೌಶಿಕನ ಮಗ, ಶುಕ, ವಾಲ್ಮೀಕಿ ಈ ಎಲ್ಲಾ ಶ್ರೇಷ್ಠ ಮುನಿಗಳು ಶ್ರೀರಾಮನ ಪಟ್ಟಾಭಿಷೇಕದ ಸಭಾಮಂದಿರದಲ್ಲಿ ಒಗ್ಗೂಡಿದರು.

ಚ್ಯವನ ಜನ್ಹು ಮೃಕಂಡು ಮುನಿಗಾ
ಲವ ಶತಾನಂದೈಕ ನಾರದ
ಶ್ರವತಿ ಕಶ್ಯಪ ಕಪಿಲ ಶೌನಕ ಸನಕ ಜಮದಗ್ನಿ
ಪವನ ಭಕ್ಷಣ ಗಾರ್ಗ್ಯಋಷಿ ಭಾ
ರ್ಗವ ಸನತ್ಸುತ ನಂದ ಜಯಮುನಿ
ನಿವಹದೊಡನೈತಂದನಾ ದೂರ್ವಾಸನೊಲವಿನಲಿ ೧೧೯

ಚ್ಯವನ; ಜಹ್ನು; ಮೃಕಂಡುಮುನಿ; ಗಾಲವ; ಶತನಂದೈಕ; ನಾರದ; ಶ್ರವತಿ; ಕಶ್ಯಪ; ಕಪಿಲ; ಶೌನಕ; ಶನಕ; ಜಮದಗ್ನಿ; ಪವನ ಭಕ್ಷಣ; ಗಾರ್ಗ್ಯಋಷಿ; ಭಾರ್ಗವ; ಸನತ್ಸುತ; ನಂದ; ಜಯಮುನಿ; ನಿವಹದೊಡನೆ+ಐತಂದನು+ಆ=ಸಮೂಹದೊಡನೆ ಆ; ದುರ್ವಾಸನು+ಒಲವಿನಲಿ=ದುರ್ವಾಸಮುನಿಯು ಪ್ರೀತಿಯಿಂದ ಬಂದನು.

ಚ್ಯವನ, ಜಹ್ನು, ಮೃಕಂಡುಮುನಿ, ಗಾಲವ, ಶತಾನಂದ, ಕಶ್ಯಪ, ಕಪಿಲ, ಜಮದಗ್ನಿ, ಭಾರ್ಗವ ಇತ್ಯಾದಿ ಪ್ರಮುಖ ಮುನಿಗಳೊಡನೆ ಅಯೋಧ್ಯೆಗೆ ದುರ್ವಾಸ ಮುನಿಯ ಆಗಮನವೂ ಆಗುತ್ತದೆ.

ಚೋಳ ಗುಜ್ಜರ ದ್ರವಿಡ ವಂಗ ವ
ರಾಳ ಚೋಟಕ ಸಿಂಧು ಶಿಬ ನೇ
ಪಾಳ ಪಾಂಡ್ಯ ಮರಾಟ ಸಿಂಹಳ ಹೂಣ ಸವ್ವೀರ
ಲಾಳ ಮಗಧ ವಿದರ್ಭ ರುತು ಮಲೆ

ಯಾಳ ನಿಷಧ ಕಳಿಂಗ ವರಪಾಂ
ಚಾಳ ಬಹುದೇಶಾಧಿಪತಿಗಳು ಬಂದರೊಗ್ಗಿನಲಿ ೧೧೦

ಚೋಳ; ಗುಜ್ಜರ; ದ್ರವಿಡ; ವಂಗ; ವರಾಳ; ಚೋಟಕ; ಸಿಂಧು; ಶಿಬ, ನೇಪಾಳ; ಪಾಂಡ್ಯ; ಮರಾಟ; ಸಿಂಹಳ; ಹೂಣ; ಸವ್ವೀರ; ಲಾಳ; ಮಗಧ; ವಿದರ್ಭ; ರುತು; ಮಲೆಯಾಳ; ನಿಷಧ; ಕಳಿಂಗ; ವರ ಪಾಂಚಾಳ; ಬಹುದೇಶ+ ಅಧಿಪತಿಗಳು=ಅನೇಕ ದೇಶದ ರಾಜರು; ಬಂದರು+ಒಗ್ಗಿನಲಿ= ಒಂದಾಗಿ ಬಂದರು.

ಚೋಳ, ಗುಜ್ಜರ, ದ್ರವಿಡ, ವಂಗ, ವರಾಳ, ಚೋಟಕ, ಸಿಂದು, ಶಿಬಿ, ನೇಪಾಳ, ಪಾಂಡ್ಯ ಇತ್ಯಾದಿ ಅನೇಕ ದೇಶದ ರಾಜರು ಶ್ರೀರಾಮನ ಪಟ್ಟಾಭಿಷೇಕವನ್ನು ನೆರವೇರಿಸಲು ಒಂದಾಗಿ ಬಂದರು.

ಮಾಳವಾಂಧ್ರಾಕರುಷವರ ನೇ
ಪಾಳ ಬರ್ಬರ ಮತ್ಸ್ಯನೃಪ ಬಂ
ಗಾಳಮಾಂಧ್ರ ಮರಾಟ ಕೋಸಲ ಕೊಡಗ ಕರ್ನಾಟ
ಗೌಳ ಕುಂತಳ ಕೃಕರಪತಿ ಬ
ಲ್ಲಾಳ ಕೊಂಕಣ ಚೀನ ಕೈಕೆಯ
ರಾಳ ಮೇಳದಿ ಬಂದು ಹೊಕ್ಕರು ನೃಪನ ವರಸಭೆಯ ೧೧೧

ಮಾಳವ+ಆಂಧ್ರಾಕ+ರುಷವರ=ಮಾಳವರು; ಆಂಧ್ರಕರು; ರುಷವರರು; ನೇಪಾಳ; ಬರ್ಬರ; ಮತ್ಸ್ಯನೃಪ=ಮತ್ಸ್ಯ ರಾಜ; ಬಂಗಾಳಮ್+ಆಂಧ್ರ=ಬಂಗಾಳ ಮತ್ತು ಆಂಧ್ರ; ಮರಾಟ; ಕೋಸಲ; ಕೊಡಗ; ಕರ್ನಾಟ; ಗೌಳ; ಕುಂತಳ; ಕೃಕರಪತಿ; ಬಲ್ಲಾಳ; ಕೊಂಕಣ; ಚೀನ; ಕೈಕಯರು; ರಾಳ ಮೊದಲಾದವರು; ಮೇಳದಿ= ಗುಂಪುಗೂಡಿ; ಬಂದು ಹೊಕ್ಕರು=ಪ್ರವೇಶಿಸಿದರು; ನೃಪನ ವರಸಭೆಯ=ರಾಜನ ಘನ ಸಭೆಯನ್ನು.

ಮಾಳವರು, ಆಂಧ್ರಕರು, ರುಷವರರು, ನೇಪಾಳ, ಬಂಗಾಳ, ಮರಾಟ, ಕೋಸಲ, ಕೊಡಗ, ಕರ್ನಾಟ, ಚೀನ ಇತ್ಯಾದಿ ದೇಶಗಳವರು ಶ್ರೀರಾಮನ ಘನಸಭೆ ಯನ್ನು ಬಂದು ಸೇರಿದರು.

ಕೇರಳಾಧಿಪ ಬಾಹ್ಲಿಕನು ಹ
ಮ್ಮೀರ ಚೈದ್ಯ ಕುರುಶ್ವಪತಿ ಗಾಂ
ಧಾರ ಸಂಬಳ ತುಳುವ ನೃಪ ಕಾಶ್ಮೀರ ಸೌರಾಷ್ಟ್ರ
ಶೂರಸೇನ ನವ ಪ್ರಚೇನ ಸು
ಪಾರಿಯಾತ್ರ ಕರೂಷಚಿಥ ವರ
ಭೂರಮಣರೈತಂದರತುಳ ಮನೋನುರಾಗದಲಿ ೧೧೨

ಕೇರಳಾಧಿಪ ಬಾಹ್ಲಿಕನು=ಕೇರಳದ ರಾಜ ಬಾಹ್ಲಿಕನು; ಹಮ್ಮೀರ ಚೈದ್ಯ= ಚೇದಿದೇಶದ ರಾಜ; ಕುರುವಂಶದ ಅಶ್ವಪತಿ ಗಾಂಧಾರ; ಸಂಬಳ; ತುಳುವ ನೃಪ; ಕಾಶ್ಮೀರ ಸೂರಸೇನ; ಸೌರಾಷ್ಟ್ರದ ನವ ಪ್ರಚೇನ; ಸುಪಾರಿಯಾತ್ರ ಕರೂಷಚಿಥ; ವರ=ಶ್ರೇಷ್ಠ; ಭೂರಮಣರು=ಭೂಮಿಯ ಒಡೆಯರಾದ ರಾಜರು ಅತುಳ= ಅಸಾಮಾನ್ಯವಾದ; ಮನೋ+ಅನುರಾಗದಲ್ಲಿ=ಮನಃ ಸಂತೋಷದಿಂದ ಐತಂದರು= ಬಂದರು.

ಶ್ರೀರಾಮನ ಪಟ್ಟಾಭಿಷೇಕಕ್ಕೆ ನಾಡಿನ ಎಲ್ಲ ಕಡೆಗಳಿಂದಲೂ ರಾಜ ಮಹಾರಾಜರು ಆಗಮಿಸಿದರೆಂದು ಹೇಳುವಾಗ ಕೇರಳದ ಬಾಹ್ಲಿಕ, ಕುರುವಂಶದ ಅಶ್ವಪತಿ ಹಮ್ಮೀರ, ಕೇರಳ, ಚೇದಿ, ಗಾಂಧಾರ, ತುಳುವ ದೇಶಗಳ ರಾಜರು, ಕಾಶ್ಮೀರದ ಶೂರಸೇನ; ಸೌರಾಷ್ಟ್ರದ ನವ ಪ್ರಚೇನ, ಸುಪಾರಿಯಾತ್ರ, ಕರೂಷಚಿಥ ಮುಂತಾದ ರಾಜವಂಶದ ಅರಸರು ರಾಮನ ಮೇಲಿನ ಪ್ರೀತಿಯಿಂದ ಅಯೋಧ್ಯಾ ನಗರಕ್ಕೆ ಬಂದರು.

ಈ ಪದ್ಯದಲ್ಲಿ ಸುಮಾರು ೧೫ ಬಗೆಯ ರಾಜವಂಶಗಳ ಪಟ್ಟಿಯನ್ನು ಕನಕದಾಸರು ನೀಡಿದ್ದಾರೆ. ಕೆಲವೇ ರಾಜವಂಶಗಳ ಹೆಸರುಗಳನ್ನು ಕೇಳಿದ್ದ ಓದುಗರಿಗೆ ಅನೇಕ ರಾಜವಂಶಗಳ ವಿವರಗಳು ಇಲ್ಲಿ ದೊರಕುತ್ತವೆ.

ಅಕುಟಿಲನೆ ಕೇಳ್ ಪಾಂಡವಾಗ್ರಜ
ಮುಕುರವದನೆಯರುತ್ಸವದಿ ಜಾ
ನಕಿಯಲಂಕರಿಸಿದರು ಮಾಲ್ಯಾಂಬರದಿ ಸಿರಿಮುಡಿಯ

ಸಕಲ ವೈಭವದಿಂದ ವೈಮಾ
ನಿಕರು ಕೈವಾರಿಸಲು ಗಗನ
ಸಖಿಯರ ನಡುವೆ ಮೃಗಾಕ್ಷಿ ಬಂದಳು ನೃಪನ ಗದ್ದುಗೆಗೆ ౧౧೩

ಅಕುಟಿಲನೆ ಕೇಳ್=ಶುದ್ಧಾತ್ಮನೆ; ಕೇಳು; ಪಾಂಡವ+ಅಗ್ರಜ=ಪಾಂಡವರಲ್ಲಿ ಹಿರಿಯ; ಮುಕುರವದನೆಯರು=ಮೂಗುತಿ ಸುಂದರಿಯರು; ಉತ್ಸವದಿ= ಸಡಗರದಿಂದ; ಜಾನಕಿಯ+ಅಲಂಕರಿಸಿದರು=ಸೀತೆಯನ್ನು ಶೃಂಗರಿಸಿದರು; ಮಾಲೆ+ ಅಂಬರದಿ= ಹೂವಿನ ಮಾಲೆಗಳು ಹಾಗೂ ರೇಶಿಮೆ ವಸ್ತ್ರದಿಂದ; ಸಿರಿ ಮುಡಿಯ= ಶ್ರೇಷ್ಠ ಮುಡಿಯನ್ನು; ಸಕಲ ವೈಭವದಿಂದೆ=ಎಲ್ಲ ರೀತಿಯ ಆಡಂಬರದಿಂದ; ವೈಮಾನಿಕರು =ದೇವತೆಗಳು ಕೈವಾರಿಸಲು=ಹೊಗಳಲು; ಗಗನಸಖಿಯರ ನಡುವೆ= ಸೇವಕಿಯರ ನಡುವೆ; ಮೃಗಾಕ್ಷಿ=ಜಿಂಕೆಯಂತೆ ಕಣ್ಣುಗಳುಳ್ಳ ಸೀತೆ ನೃಪನ ಗದ್ದುಗೆಗೆ=ರಾಜನ ಸಿಂಹಾಸನಕ್ಕೆ ಬಂದಳು.

ಶುದ್ಧವಾದ ಮನಸ್ಸುಳ್ಳವನೆ, ಪಾಂಡವರಲ್ಲಿ ಹಿರಿಯನೆ ಕೇಳು, ಮೂಗುತಿ ತೊಟ್ಟ ಸುಂದರಿಯರು ಸಡಗರದಿಂದ ಸೀತೆಯನ್ನು ಶೃಂಗರಿಸಿದರು. ಮಾಲೆ ರೇಶಿಮೆ ವಸ್ತ್ರ ಇತ್ಯಾದಿಗಳಿಂದ ಶೃಂಗರಿಸಿ, ಕೇಶಾಲಂಕಾರವನ್ನು ಮಾಡಿದರು. ದೇವತೆಗಳು ಹೊಗಳಿದರು, ಗಗನ ಸಖಿಯರೊಂದಿಗೆ ಜಿಂಕೆ ಕಣ್ಣಿನ ಸುಂದರಿ ಸೀತೆ ರಾಜನ ಸಿಂಹಾಸನಕ್ಕೆ ಬಂದಳು.

ಕನಕದಾಸರು ರಾಮನ ಪಟ್ಟಾಭಿಷೇಕಕ್ಕೆ ಸಕಲ ರೀತಿಯ ಸಿದ್ಧತೆಗಳ ಬಗ್ಗೆ ಮಾತನಾಡುವಾಗ ಸೀತೆಯ ಅಲಂಕಾರದ ಬಗೆಗೂ ಈ ಪದ್ಯದಲ್ಲಿ ವರ್ಣಿಸಿದ್ದಾರೆ. ಒಂದು ಕಾರ್ಯಕ್ರಮದಲ್ಲಿ ಎಲ್ಲ ರೀತಿಯ ಸಿದ್ಧತೆಗಳು ಎಷ್ಟು ಮುಖ್ಯವಾಗುವವೋ ಪೀಠದ ಮೇಲೆ ಕೂರುವವರ ಅಲಂಕಾರವೂ ಅಷ್ಟೇ ಮುಖ್ಯವಾಗುತ್ತದೆ. ಇಲ್ಲಿ ಶ್ರೀರಾಮನ ಅಲಂಕಾರ ಎಷ್ಟು ಮುಖ್ಯವೋ, ಸೀತಾರಾಂ ಎಂದು ಕರೆಸಿಕೊಳ್ಳಲು ಕಾರಣಳಾಗಿರುವ ಸೀತೆಯೂ ಅಷ್ಟೇ ಮುಖ್ಯಳಾಗುತ್ತಾಳೆ.

ಭರತ ಭಾರಿಯ ಸತ್ತಿಗೆಯ ಚಾ
ಮರವ ಲಕ್ಷ್ಮಣ ದೇವ ಚಿಮ್ಮಲು
ಧರಿಸಿದನು ಶತ್ರುಘ್ನ ಗಿಂಡಿಯ ಹೆಗಲ ಹಡಪದಲಿ

ಮರುತಸುತ ಸೇವಿಸಲು ಚರಣದಿ
ಗುರು ವಸಿಷ್ಠನ ಸಮ್ಮುಖದಿ ರಘು
ವರನು ನಿಜಸತಿಸಹಿತ ಸಿಂಹಾಸನದಿ ರಂಜಿಸಿದ ೧೧೪

ಭರತ; ಭಾರಿಯ=ಬೆಲೆ ಬಾಳುವ; ಸತ್ತಿಗೆಯ=ಬೆಳ್ಗೊಡೆಯನ್ನು; ಚಾಮರ ವನ್ನು; ಲಕ್ಷ್ಮಣದೇವ; ಚಿಮ್ಮಲು=ಬೀಸಲು; ಧರಿಸಿದನು=ತೊಟ್ಟನು; ಶತ್ರುಘ್ನ; ಗಿಂಡಿಯ=ಕಿರಿದಾದ ಬಾಯುಳ ಪಾತ್ರೆ; ಹೆಗಲ ಹಡಪದಲಿ=ಕೈಚೀಲದಲ್ಲಿ ಮರುತ ಸುತ=ಹನುಮಂತ; ಸೇವಿಸಲು ಚರಣದಿ=ಪಾದಗಳಿಗೆ; ಪೂಜೆ ಮಾಡಲು; ಗುರು ವಸಿಷ್ಠನ; ಸಮ್ಮುಖದಿ=ನೇತೃತ್ವದಲ್ಲಿ; ರಘುವರನ=ಶ್ರೀರಾಮನ; ನಿಜಸತಿ ಸಹಿತ=ಸತಿ ಸೀತೆಯೊಂದಿಗೆ; ಸಿಂಹಾಸನದಿ ರಂಜಿಸಿದ=ಸಿಂಹಾಸನದಲ್ಲಿ ಶೋಭಿಸಿದ.

ಭರತನು ಬೆಳ್ಗೊಡೆಯನ್ನು, ಲಕ್ಷ್ಮಣನು ಚಾಮರವನ್ನು ಹಿಡಿಯಲು, ಶತ್ರು ಘ್ನನು ಕಿರಿದಾದ ಬಾಯುಳ್ಳ ಗಿಂಡಿಪಾತ್ರೆಯನ್ನು ಕೈಚೀಲದಲ್ಲಿ ತುಂಬಿ ಹೆಗಲಲ್ಲಿ ಹಾಕಿರಲು, ಹನುಮಂತನು ರಾಮನಪಾದಪೂಜೆಯನ್ನು ನೆರವೇರಿಸಲು, ರಾಜಗುರು ಗಳಾದ ವಸಿಷ್ಠರ ಸಮ್ಮುಖದಲ್ಲಿ ಶ್ರೀರಾಮ ಸತಿ ಸೀತೆಯೊಂದಿಗೆ ಸಿಂಹಾಸನದಲ್ಲಿ ಶೋಭಿಸಿದ.

ದೇವಲೋಕ, ಭೂಲೋಕ, ಪಾತಾಳಲೋಕ, ದಿಕ್ಪಾಲಕರು ಎಲ್ಲರ ಸಮ್ಮುಖದಲ್ಲಿ, ಸಹೋದರರಾದ ಭರತ, ಶತ್ರುಘ್ನ, ಲಕ್ಷ್ಮಣನ ಸೇವೆಯೊಂದಿಗೆ; ಹನುಮನ ಪಾದ ಪೂಜೆಯೊಂದಿಗೆ, ಗುರು ವಸಿಷ್ಠನ ನೇತೃತ್ವದಲ್ಲಿ ಶ್ರೀರಾಮನು ಸೀತೆಯೊಂದಿಗೆ ಸಿಂಹಾಸನವನ್ನೇರಿದ.

ವರ ವಿಭೀಷಣ ಜಾಂಬವಂತರು
ತರಣಿಸುತ ನಳ ನೀಲನಂಗದ
ಶರಭ ಶತಬಲಿ ಗವಯ ವೀರಗವಾಕ್ಷ ಮೊದಲಾದ
ಧುರವಿಜಯರೆಡವಂಕದಲಿ ನಿಂ
ದಿರಲು ಬಲದಲಿ ಸಿದ್ಧವಿದ್ಯಾ
ಧರರು ನೆರೆದರನೇಕ ವಿದ್ವಾಂಸರು ಕವೀಶ್ವರರು ೧೧೫

ವರವಿಭೀಷಣ=ಶ್ರೇಷ್ಠನಾದ ವಿಭೀಷಣನು; ಜಾಂಬವಂತರು; ತರಣಿಸುತ= ಸುಗ್ರೀವ; ನಳ; ನೀಲನು+ಅಂಗದ=ನೀಲ ಅಂಗದ; ಶರಭ; ಶತಬಲಿ; ಗವಯ; ವೀರಗವಾಕ್ಷ ಮೊದಲಾದ; ಧುರ ವಿಜಯರ+ಎಡವಂಕದಲಿ =ಯುದ್ಧವೀರರು ಎಡಗಡೆ; ನಿಂದಿರಲು=ನಿಂತಿರಲು; ಬಲದಲಿ=ಬಲಗಡೆ; ಸಿದ್ಧ=ದೇವತೆಗಳಲ್ಲಿ ಒಂದು ವರ್ಗ; ವಿದ್ಯಾಧರರು=ವಿದ್ಯಾಧರರೆಂಬ ವರ್ಗ; ಅನೇಕ ವಿದ್ವಾಂಸರು, ಕವೀಶ್ವರರು, ನೆರೆದರು=ಸೇರಿದರು.

ಶ್ರೇಷ್ಠ ವಿಭೀಷಣ, ಜಾಂಬವಂತ, ಸುಗ್ರೀವ, ನಳ, ನೀಲ, ಅಂಗದ, ಶರಭ, ಶತಬಲಿ, ಗವಯ, ವೀರಗವಾಕ್ಷ ಮುಂತಾದ ಯುದ್ಧವೀರರು ಎಡಭಾಗದಲ್ಲಿ ನಿಂತಿರಲು; ಬಲಗಡೆ ಸಿದ್ಧಿಪಡೆದಂಥವರು (ದೇವತೆಗಳ ಒಂದು ವರ್ಗ) ಪಂಡಿತರು, ಕವಿಗಳು ಹೀಗೆ ಅನೇಕ ಮಂದಿ ಸೇರಿದರು.

ಶ್ರೀರಾಮನ ಪಟ್ಟಾಭಿಷೇಕಕ್ಕೆ ಸ್ನೇಹಿತರು, ಸೇವಕರು, ಬಂಧುಮಿತ್ರರ ಜೊತೆಗೆ ಇತರ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ, ಸಾಧಕರು, ಸಿದ್ಧರು, ಪಂಡಿತರು, ಕವಿಗಳು ಮುಂತಾದವರೆಲ್ಲ ನೆರೆದಿರುವುದು ಇಲ್ಲಿನ ವಿಶೇಷ.

ಮೇಲು ಮಣಿಗಳ ರತ್ನಕಾಂತಿಯ
ಮೌಳಿಗಳ ಮನ್ನೆಯರು ಮಂತ್ರೀ
ಜಾಲ ಸಹಿತಿದಿರಿನಲಿ ನಿಂದುದು ಮಕುಟವರ್ಧನರು
ಓಲಗದಿ ಮಿಗೆ ವಾರಸತಿಯರು
ಓಲಗಿಸೆ ರಘುನೃಪನನಾಗಳೆ
ತಾಳಮದ್ದಳೆ ಭೇರಿ ಡೆಂಕ ನಿನಾದ ರಂಜಿಸಿತು ೧೧೬

ಮೇಲು ಮಣಿಗಳ=ಅಮೂಲ್ಯ ಮಣಿಗಳ; ರತ್ನಕಾಂತಿಯ=ಮುತ್ತು ರತ್ನಗಳ ಹೊಳಪಿನ; ಮೌಳಿಗಳ=ಕಿರೀಟ ಧರಿಸಿದ; ಮನ್ನೆಯರು=ಮುಖಂಡರು; ಮಂತ್ರೀ ಜಾಲ=ಮಂತ್ರಿಗಳ ಗುಂಪು; ಸಹಿತ+ಎದುರಿನಲಿ=ಅವರೊಂದಿಗೆ ಎದುರಾಗಿ; ನಿಂದುದು=ನಿಂತಿತು; ಮಕುಟವರ್ಧನರು=ರಾಜರು; ಓಲಗದಿ=ಒಡ್ಡೋಲಗದಲ್ಲಿ; ಮಿಗೆ=ಅಧಿಕವಾಗಿ; ವಾರಸತಿಯರು= ವೇಶ್ಯೆಯರು; ಓಲಗಿಸೆ=ಸೇವೆ ಮಾಡುತ್ತಿರಲು;

ರಘುನೃಪನನು+ಆಗಳೆ=ಶ್ರೀರಾಮನನ್ನು ಆಗಲೇ; ತಾಳೆ; ಮದ್ದಳೆ; ಭೇರಿ; ಡೆಂಕ ಮುಂತಾದ ವಾದ್ಯಗಳ; ನಿನಾದ=ಧ್ವನಿಯೊಂದಿಗೆ; ರಂಜಿಸಿತು=ಶೋಭಿಸಿತು.

ಮುತ್ತುರತ್ನ ಮುಂತಾದ ಅಮೂಲ್ಯ ಕಾಂತಿಯ ಮಣಿಗಳನ್ನು ಧರಿಸಿದ ಮುಖಂಡರು ಹಾಗೂ ಮಂತ್ರಿಗಳು, ಕಿರೀಟಧಾರಿಗಳಾದ ರಾಜರು ಎದುರಿನಲಿ ನಿಂತರು. ಒಡ್ಡೋಲಗದಲ್ಲಿ ವಿಶೇಷವಾಗಿ ವೇಶ್ಯೆಯರು ರಾಮನ ಸೇವೆ ಮಾಡುತ್ತಿರುವಾಗ ತಾಳ, ಮದ್ದಲೆ, ಭೇರಿ, ಡೆಂಕ ಮುಂತಾದ ವಾದ್ಯಗಳ ಧ್ವನಿ ಆರಂಭವಾಯಿತು.

ಪಟ್ಟಾಭಿಷೇಕಕ್ಕೆ ಮಾನ್ಯರು, ಮುಖಂಡರು, ರಾಜರು, ಮಂತ್ರಿಗಳು, ವೇಶ್ಯೆಯರು ಹೀಗೆ ಎಲ್ಲ ವರ್ಗದವರು ಸೇರಿದ್ದಾರೆ.

ಅಲ್ಲಿ ನೆರೆದ ಮುನೀಶರೆಲ್ಲರು
ಬಲ್ಲ-ಭೂಸುರನಿವಹ ಮಂತ್ರಿಗ
ಳಲ್ಲಿ ಸುಮುಹೂರ್ತದಲಿ ಪಟ್ಟವ ಕಟ್ಟಿದರು ನೃಪಗೆ
ಸಲ್ಲಲಿತ ಸತ್ಕೀರ್ತಿ ವಧು ವರ
ನಲ್ಲಿ ನಿಲ್ಲದೆ ಬಂದು ಸೀತಾ
ವಲ್ಲಭನ ಪೊಂದಿದಳು ಕುಂತೀ ಸೂನು ಕೇಳೆಂದ ೧೧೭

ಅಲ್ಲಿ ನೆರೆದ=ಅಲ್ಲಿ ಸೇರಿದ; ಮುನೀಶರು+ಎಲ್ಲರೂ=ಎಲ್ಲ ಮುನಿಗಳೂ; ಬಲ್ಲ ಭೂಸುರ ನಿವಹ=ವೇದಶಾಸ್ತ್ರಗಳನ್ನು ಚೆನ್ನಾಗಿ ತಿಳಿದಿರುವ ಪುರೋಹಿತರ ಗುಂಪು; ಮಂತ್ರಿಗಳಲ್ಲಿ=ಮಂತ್ರಿಗಳೊಡಗೂಡಿ; ಸುಮುಹೂರ್ತದಲಿ=ಒಳ್ಳೆಯ ಮುಹೂರ್ತದಲ್ಲಿ; ಪಟ್ಟವ ಕಟ್ಟಿದರು ನೃಪಗೆ=ರಾಮನಿಗೆ ಪಟ್ಟಾಭಿಷೇಕವನ್ನು ನೆರವೇರಿಸಿದರು; ಸಲ್ಲಲಿತ=ಚೆಲುವಿನ; ಸತ್ಕೀರ್ತಿವಧು= ವಿಜಯಲಕ್ಷ್ಮಿಯು; ವರನಲ್ಲಿನಿಲ್ಲದೇ= ಬೇರೆಯವರಲ್ಲಿ ನಿಲ್ಲದೇ; ಬಂದು; ಸೀತಾವಲ್ಲಭನ= ಸೀತಾಪತಿಯಾದ ರಾಮನ; ಪೊಂದಿದಳು=ಸೇರಿದಳು; ಕುಂತೀಸೂನು ಕೇಳೆಂದ= ಕುಂತಿಯ ಮಗನಾದ ಯುಧಿಷ್ಠಿರನೇ ಕೇಳು ಎಂದು ಶಾಂಡಿಲ್ಯ ಮುನಿ ಹೇಳಿದರು.

ಅಲ್ಲಿ ಸೇರಿದಂತಹ ಋಷಿಮುನಿಗಳು, ವೇದಶಾಸ್ತ್ರ ಪಾರಂಗತರಾದ ಪುರೋಹಿತರ ಗುಂಪು ಹಾಗೂ ಮಂತ್ರಿಗಳು ಕೂಡಿಕೊಂಡು ಶುಭಲಗ್ನದಲ್ಲಿ

ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಿದರು, ಅಂದದ ಕೀರ್ತಿವಧು ವಿಜಯ ಲಕ್ಷ್ಮಿಯು ಬೇರೆಯವರಲ್ಲಿ ನಿಲ್ಲಲು ಬಯಸದೇ ತಕ್ಷಣ ಬಂದು ಸೀತಾಪತಿಯಾದ ಶ್ರೀರಾಮನಲ್ಲಿ ನೆಲೆಸಿದಳು ಎಂದು ಶಾಂಡಿಲ್ಯಮುನಿಯು ಶ್ರೀರಾಮನ ಕಥೆಯನ್ನು ಧರ್ಮರಾಯನಿಗೆ ಹೇಳಿದನು.

ಕೀರ್ತಿವಧು ಶ್ರೀರಾಮನಲ್ಲಿ ಬಂದು ನೆಲೆಸುವುದು ಇಲ್ಲಿನ ವಿಶೇಷ. ರಾಜನಾದವನಿಗೆ ಸೋಲು, ಸಾವು ಎರಡೂ ಒಂದೇ, ಅಂಥ ರಾಜರು ಬದುಕಿ ಪ್ರಯೋಜನವಿಲ್ಲ, ಹಾಗಾಗಿ ದಕ್ಷ ರಾಜನೆನಿಸಿಕೊಳ್ಳ ಬೇಕಾದರೆ ಜಯಲಕ್ಷ್ಮಿ ಸದಾ ಅವನ ಬೆಂಗಾವಲಾಗಿರಬೇಕು.

ಗುರು ವಸಿಷ್ಠ ಮುನೀಂದ್ರ ಭೂಮೀ
ಸುರರೊಡನೆ ತಾ ಬಂದು ರಾಮನ
ಹರಸಿ ಮಂತ್ರಾಕ್ಷತೆಯ ತಳಿದರು ದೇವನಂಗದಲಿ
ಸುರರು ದುಂದುಭಿ ಮೊಳಗೆ ಹೂವಿನ
ಸರಿಯ ಸುರಿದರು ನಿರ್ಜರರು ಧರೆ
ಯರಸುಗಳು ಕೈಮುಗಿದು ಮುಯಿಗಳನಿತ್ತರವನಿಪಗೆ ೧೧೮

ಗುರುವಸಿಷ್ಠ ಮುನೀಂದ್ರ=ರಾಜಗುರುಗಳಾದ ವಸಿಷ್ಠ, ಮುನಿಗಳು; ಭೂಸುರ ರೊಡನೆ=ಪುರೋಹಿತರೊಡನೆ; ತಾ ಬಂದು; ರಾಮನ ಹರಸಿ=ಶ್ರೀರಾಮನನ್ನು ಆಶೀರ್ವದಿಸಿ; ಮಂತ್ರಾಕ್ಷತೆಯ ತಳಿದರು=ಅಕ್ಷತೆ ಕಾಳನ್ನು ಹಾಕಿದರು; ದೇವನ+ಅಂಗದಲಿ=ಶ್ರೀರಾಮರ ಮೇಲೆ; ಸುರರು=ದೇವತೆಗಳು; ದುಂದುಭಿ ಮೊಳಗೆ=ನಗಾರಿ ಬಾರಿಸಿದಾಗ; ಹೂವಿನ ಸರಿಯ ಸುರಿದರು=ಹೂಮಳೆಯನ್ನು ಸುರಿಸಿದರು; ನಿರ್+ಜರರು=ಮುಪ್ಪಿಲ್ಲದ ದೇವತೆಗಳು; ಧರೆಯ+ ಅರಸುಗಳು =ಭೂಲೋಕದ ರಾಜರುಗಳು; ಕೈಮುಗಿದು; ಮುಯಿಗಳನ್ನು+ಇತ್ತರು+ ಅವನಿಪಗೆ= ಉಡುಗೊರೆಗಳನ್ನು ಕೊಟ್ಟರು ರಾಜ.

ರಾಜ ಗುರುಗಳಾದ ವಸಿಷ್ಠ ಮುನಿಗಳು, ಬ್ರಾಹ್ಮಣ ಪುರೋಹಿತರೊಡನೆ ಬಂದು ಹರಸಿ ಅಶೀರ್ವದಿಸಿ, ಅಕ್ಷತೆಕಾಳನ್ನು ಶ್ರೀರಾಮ ದೇವನ ಮೇಲೆ ಹಾಕಿದರು, ದೇವತೆಗಳು ದುಂದುಭಿಯನ್ನು ಮೊಳಗಿಸಿ ಹೂವಿನ ಮಳೆಯನ್ನು ಸುರಿಸಿದರು,

ಭೂಲೋಕದ ರಾಜರುಗಳು ರಾಮನಿಗೆ ನಮಸ್ಕರಿಸಿ ಸಂತೋಷದಿಂದ ಉಡುಗೊರೆಗಳನ್ನು ನೀಡಿದರು.

ಶ್ರೀರಾಮನ ಪಟ್ಟಾಭಿಷೇಕವನ್ನು ಕನಕದಾಸರು ಶಾಸ್ತ್ರೋಕ್ತವಾಗಿ ಕಾವ್ಯದಲ್ಲಿ ನೆರವೇರಿಸಿದ್ದಾರೆ. ರಾಮನ ಮೇಲೆ ಕವಿಗೆ ಇರುವ ಗೌರವ ಹಾಗೂ ಭಕ್ತಿಯು ಓದುಗರಿಗೆ ಗೋಚರಿಸುವುದಲ್ಲದೇ ಸಹೃದಯ ಓದುಗನ ಮನಸ್ಸು ಪಟ್ಟಾಭಿಷೇಕದಲ್ಲಿ ಪಾಲ್ಗೊಂಡಂತೆ ಭಾಸವಾಗುವ ಹಾಗೆ ವರ್ಣಿಸಿದ್ದಾರೆ. ಸರಳ ಸುಂದರ ಭಾಷೆ ಈ ಕಾವ್ಯಕ್ಕೆ ಹೆಚ್ಚು ಮೆರಗನ್ನು ನೀಡಿದೆ.

ಮುನಿಸತಿಯರೊಡನೈದಿ ಭೂಸುರ
ವನಿತೆಯರು ಶೋಭನದ ಧವಳವ
ವಿನಯದಲಿ ಪಾಡಿದರು ಜಯಜಯರವನಿನಾದದಲಿ
ಕನಕರತ್ನದ ನೂಪುರದ ಕಾ
ಮಿನಿಯರೊಯ್ಯಾರದಲಿ ರಘುನಂ
ದನನ ಹರಸುತಲೆತ್ತಿದರು ನವರತ್ನ ದಾರತಿಯ ೧೧೯

ಮುನಿಸತಿಯರು+ಒಡನೆ+ಐದಿ=ಋಷಿಮುನಿಗಳ ಪತ್ನಿಯರು ಅವರೊಡನೆ ಬಂದು; ಭೂಸುರ ವನಿತೆಯರು=ಬ್ರಾಹ್ಮಣರು ಹಾಗೂ ಅವರ ಪತ್ನಿಯರು; ಶೋಭನದ=ಮಂಗಳಕರವಾದ ಧವಳವ=ಧವಳವೆಂಬ ಛಂದೋಬಂಧ; ವಿನಯ ದಲಿ ಪಾಡಿದರು=ನುಣ್ದನಿಯಲ್ಲಿ ಇಂಪಾಗಿ ಹಾಡಿದರು; ಜಯಜಯರವ ನಿನಾದ ದಲಿ=ಜಯಕಾರದ ಧ್ವನಿಯ ಸಂಭ್ರಮದಲ್ಲಿ; ಕನಕರತ್ನದ ನೂಪುರದ=ಚಿನ್ನ; ರತ್ನ ಮುಂತಾದ ಕಾಲ್ಗೆಜ್ಜೆಯ ತೊಟ್ಟ; ಕಾಮಿನಿಯರು=ಸುಂದರಿಯರು; ಒಯ್ಯಾರ ದಲಿ= ಬೆಡಗಿನಿಂದ; ರಘುನಂದನನ=ಶ್ರೀರಾಮನ; ಹರಸುತಲಿ+ ಎತ್ತಿದರು= ಆಶೀರ್ವ ದಿಸುತ್ತಾ; ನವರತ್ನದ+ಆರತಿಯ=ನವರತ್ನಗಳ ಆರತಿಯನ್ನು ಎತ್ತಿದರು.

ಮುನಿಗಳೊಡನೆ ಬಂದಿದ್ದ ಅವರ ಪತ್ನಿಯರು ಹಾಗೂ ಬ್ರಾಹ್ಮಣ ವನಿತೆಯರು, ಮಂಗಳದ ಶುಭಸೂಚಕವಾದ ಹಾಡುಗಳನ್ನು ನುಣ್ದನಿಯಲ್ಲಿ ಹಾಡುತ್ತಾ, ಜಯಕಾರದ ಘೋಷಣೆಗಳ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾ, ಚಿನ್ನ ರತ್ನ ಮುಂತಾದ ಕಾಲ್ಗೆಜ್ಜೆಯನ್ನು ತೊಟ್ಟಂತಹ ಸುರ ಸುಂದರಿಯರು ಒಯ್ಯಾರದಿಂದ

ಶ್ರೀರಾಮನಿಗೆ ಆಶೀರ್ವದಿಸುತ್ತಾ, ಮುತ್ತು, ಮಾಣಿಕ್ಯ, ವಜ್ರ, ವೈಡೂರ್ಯ, ಗೋಮೇಧ, ವಿದ್ರುಮ, ಪದ್ಮರಾಗ, ಮರಕತ, ನೀಲ ಇತ್ಯಾದಿ ಆರತಿಯನ್ನು ಎತ್ತಿ ಸಂಭ್ರಮಿಸಿದರು.

ಮುನಿಗಳ ಆಶೀರ್ವಾದದಷ್ಟೇ ಸುಮಂಗಳೆಯರ ಆಶೀರ್ವಾದವೂ ಇಲ್ಲಿ ಮುಖ್ಯವಾಗುತ್ತದೆ. ಮಂಗಳಕರ ಹಾಡುಗಳನ್ನು ಹಾಡುವ, ಆರತಿಯನ್ನು ಎತ್ತುವ ಸತ್ಸಂಪ್ರದಾಯವನ್ನು ಈಗಲೂ ನಾವು ಅಲ್ಲಲ್ಲಿ ಕಾಣುತ್ತೇವೆ.

ಆರು ಹೊಗಳುವಡರಿದು ಸಭೆಯಲಿ
ಸಾರ ಸಂಗೀತದ ವಿನೋದದಿ
ವಾರಕಾಂತಾಜನದಲೊಪ್ಪುವ ಕೇಳಮೇಳವನು
ಚಾರು ಗೀತನೃತ್ಯಗಳ ಸೇವಾ
ಗಾರಿಕೆಯನೇನೆಂಬೆನೈ ಜಂ
ಭಾರಿವೋಲಗದಂತೆ ಮೆರೆದುದು ನೃಪತಿಯಾಸ್ಥಾನ ೧೨೦

ಆರು ಹೊಗಳುವಡೆ+ಅರಿದು=ಯುಕ್ತವಾಗಿ ಹೊಗಳಿದಾಗ ಅದನ್ನು ಅರಿತು; ಸಭೆಯಲಿ; ಸಾರ ಸಂಗೀತದ+ಎಲ್ಲ ಸಂಗೀತಗಳ; ವಿನೋದದಿ=ಸಂತೋಷದಲ್ಲಿ; ವಾರಕಾಂತಾ=ವೇಶ್ಯೆಯರು; ಜನದಲಿ+ಒಪ್ಪುವ=ಜನರಿಗೆ ಮೆಚ್ಚುಗೆಯಾಗುವ; ಕೇಳ ಮೇಳವನು= ಕಲಾಪ್ರದರ್ಶನಗಳನ್ನು; ಚಾರುಗೀತ=ಮನೋಹರವಾದ ಸಂಗೀತ; ನೃತ್ಯಗೋಷ್ಠಿಗಳ; ಸೇವಾಗಾರಿಕೆಯನು+ ಏನೆಂಬೆನೈ =ಸೇವೆ ಗಳನ್ನು ಏನೆಂದು ಹೊಗ ಳಲಿ; ಜಂಭಾರಿಯ+ಓಲಗದಂತೆ=ಇಂದ್ರನ ಒಡ್ಡೋಲಗದಂತೆ; ನೃಪತಿಯ ಆಸ್ಥಾನ= ರಾಜ ಶ್ರೀರಾಮನ ಆಸ್ಥಾನ; ಮೆರೆದುದು=ಶೋಭಿಸಿತು.

ಯಾರಾದರೂ ಹೊಗಳಿದಾಗ ರಾಮ ಅದನ್ನು ಯುಕ್ತ ರೀತಿಯಲ್ಲಿ ಗ್ರಹಿಸುತ್ತಿದ್ದ, ಎಲ್ಲ ಕಡೆ ಸಂಭ್ರಮ, ಸಂಗೀತ, ನೃತ್ಯ, ವಾದನ ಮುಂತಾದ ಸಾಮೂಹಿಕ ಕಲಾಪ್ರದರ್ಶನಗಳು, ಗೋಷ್ಠಿಗಳು, ಜನರಿಗೆ ಮೆಚ್ಚುಗೆಯಾಗುವಂತಹ ಮನೋಹರವಾದ ನೃತ್ಯ, ಗೀತೆಗಳ ಸೇವೆಯನ್ನು ವೇಶ್ಯೆಯರು ನಡೆಸಿಕೊಡುತ್ತಿದ್ದರು. ಇದೆಲ್ಲವುಗಳಿಂದಾಗಿ ಶ್ರೀರಾಮನ ಅರಮನೆ ಇಂದ್ರನ ಓಲಗದಂತೆ ಕಾಣುತ್ತಿತ್ತು.

ಪಟ್ಟಾಭಿಷೇಕದಿಂದ ರಾಮನಿಗೆಷ್ಟು ಸಂತೋಷವಾಯಿತೋ ಅದಕ್ಕಿಂತ ಹೆಚ್ಚಿನ ಸಂತೋಷ, ಸಂಭ್ರಮವನ್ನು ಜನರು ಅನುಭವಿಸುತ್ತಿದ್ದರು, ಅವರವರಿಗೆ ಗೊತ್ತಿರುವ ಕಲಾ ಪ್ರದರ್ಶನಗಳನ್ನು, ಸಂಗೀತ, ನೃತ್ಯಗೋಷ್ಠಿಗಳನ್ನು ಉಚಿತವಾಗಿ ಏರ್ಪಡಿಸಿ ತಮ್ಮ ಕೈಲಾದ ಸೇವೆಯನ್ನು ರಾಜನಿಗಾಗಿ ಮಾಡಿದರು.

ಕರೆದು ಯಾಚಕ ಪಂಡಿತರ ಭೂ
ಸುರರ ಗಾಯಕಮಲ್ಲರನು ಕವಿ
ವರರಿಗಿತ್ತನು ಧೇನು ಕನಕಾಂಬರ ಸುವಸ್ತುಗಳ
ಅರಸುಗಳಿಗಾದರಿಸಿ ಕೊಟ್ಟನು
ಕರಿತುರಗ ರಥ ದಿವ್ಯಹೇಮಾಂ
ಬರ ಸುವಸ್ತುಗಳಿಂದ ಕಳುಹಿದನಾ ವಸಿಷ್ಠಮುನಿ ೧೨೧

ಕರೆದು ಯಾಚಕ ಪಂಡಿತರ=ಕರೆದು ಪ್ರಾರ್ಥಿಸುವ ಪಂಡಿತರ; ಭೂಸುರರ= ಬ್ರಾಹ್ಮಣರ; ಗಾಯಕರ=ಹಾಡುಗಾರರ; ಮಲ್ಲರನು=ಜಟ್ಟಿಗಳನ್ನು ಕವಿವರರಿಗೆ+ ಇತ್ತನು=ಕವಿಗಳಿಗೆ ಕೊಟ್ಟನು; ಧೇನು=ಕಾಮಧೇನು; ಕನಕ+ಅಂಬರ=ಚಿನ್ನ ಮತ್ತು ರೇಶಿಮ ವಸ್ತ್ರ; ಸುವಸ್ತುಗಳ=ಒಳ್ಳೆಯ ವಸ್ತುಗಳನ್ನು; ಅರಸುಗಳಿಗೆ+ಆದರಿಸಿ=ರಾಜರಿಗೆ ಪ್ರೀತಿಯಿಂದ; ಕೊಟ್ಟನು; ಕರಿ ತುರಗ= ಆನೆ ಕುದುರೆ; ರಥ; ದಿವ್ಯ ಹೇಮ+ ಅಂಬರ=ಅಮೂಲ್ಯವಾದ ಚಿನ್ನ ಮತ್ತು ಬಟ್ಟೆ; ಸುವಸ್ತುಗಳಿಂದ=ಅಮೂಲ್ಯ ವಸ್ತುಗಳಿಂದ; ಕಳುಹಿಸಿದನು+ಆ ವಸಿಷ್ಠ ಮುನಿ= ಶ್ರೀರಾಮ ಆ ವಸಿಷ್ಠ ಮುನಿಯನ್ನು ಕಳುಹಿಸಿಕೊಟ್ಟನು.

ಪ್ರಾರ್ಥಿಸುವ ಪಂಡಿತರು, ಬ್ರಾಹ್ಮಣರು, ಗಾಯಕರು, ಜಟ್ಟಿಗಳು, ಕವಿಗಳು ಇವರನ್ನೆಲ್ಲಾ ಕರೆದು ಆಧರಿಸಿ ಹಸು, ಚಿನ್ನ, ರೇಶಿಮೆ ವಸ್ತ್ರ ಇತ್ಯಾದಿ ಅಮೂಲ್ಯ ವಸ್ತುಗಳನ್ನು ನೀಡಿದನು. ರಾಜರನ್ನು ಗೌರವಿಸಿ ಆನೆ, ಕುದುರೆ, ರಥ ಮುಂತಾದವನ್ನು ನೀಡಿದರೆ. ಚಿನ್ನ, ರೇಶಿಮೆ ವಸ್ತ್ರ ಮುಂತಾದ ಬೆಲೆಬಾಳುವ ವಸ್ತುಗಳನ್ನು ನೀಡಿ ವಸಿಷ್ಠ ಮುನಿಯನ್ನು ಗೌರವಿಸಿದನು.

ಪಟ್ಟಾಭಿಷೇಕಕ್ಕೆ ಬಂದಂತಹ ಜನರು ತಮ್ಮ ಕೈಲಾದಷ್ಟು ಉಡುಗೊರೆಗಳನ್ನು ನೀಡಿ ರಾಜನನ್ನು ಸಂತಸಗೊಳಿಸಿದರೆ, ರಾಜನೂ ಬಂದವರನ್ನು ಬರಿಗೈಯಲ್ಲಿ

ಕಳುಹಿಸದೇ ಅಮೂಲ್ಯ ವಸ್ತುಗಳನ್ನು ನೀಡುವ ಉದಾತ್ತ ಭಾವನೆಯನ್ನು ಹೊಂದಿದ್ದಾನೆ.

ಕೊಟ್ಟ ಸುಮುಹೂರ್ತದೊಳಗಾಗ ವ
ಶಿಷ್ಠಗುರುವಿಂಗೆರಗಿ ರಘುವರ
ನೆಟ್ಟನೈತಂದಲ್ಲಿ ಹೊಕ್ಕನು ರಾಜಮಂದಿರವ
ಸೃಷ್ಟಿಗಧಿಪನ ಕೀರ್ತಿವಧು ಘನ
ನಿಷ್ಠೆಯಲಿ ಧಾವಳ್ಯ ವಸನವ
ನುಟ್ಟು ನಲಿದಾಡಿದಳು ತ್ರಿಜಗದ ಜನದ ಜಿಹ್ವೆಯಲಿ ೧೨೨

ಕೊಟ್ಟ ಸುಮುಹೂರ್ತದೊಳಗೆ+ಆಗ=ವಸಿಷ್ಠ ಮುನಿ ಕೊಟ್ಟಂತಹ ಶುಭ ಗಳಿಗೆಯೊಳಗೆ; ಆಗ ವಸಿಷ್ಠ ಗುರುವಿಂಗೆ+ ಎರಗಿ=ಗುರು ವಸಿಷ್ಠರಿಗೆ ನಮಸ್ಕರಿಸಿ; ರಘುವರ=ಶ್ರೀರಾಮ; ನೆಟ್ಟನೆ+ಐತಂದು+ಅಲ್ಲಿ=ನೇರವಾಗಿ ಬಂದು ಅಲ್ಲಿ; ಹೊಕ್ಕನು= ಪ್ರವೇಶಿಸಿದನು; ರಾಜಮಂದಿರವ; ಸೃಷ್ಟಿಗೆ+ಅಧಿಪನ=ಸೃಷ್ಟಿಯ ಅಧಿನಾಯಕನಾದ ಬ್ರಹ್ಮನ; ಕೀತಿವಧು=ಪತ್ನಿಯಾದ ಸರಸ್ವತಿ; ಘನ ನಿಷ್ಠೆಯಲ್ಲಿ=ಅತ್ಯಂತ ನಿಷ್ಠೆಯಿಂದ; ಧಾವಳ್ಯ ವಸನವನುಟ್ಟು=ಶುಭ್ರ ಬಿಳುಪಿನ ವಸ್ತ್ರವನ್ನುಟ್ಟು; ನಲಿದಾಡಿದಳು= ಕುಣಿದಾಡಿದಳು; ತ್ರಿಜಗದ=ಮೂರುಲೋಕದ; ಜನದ ಜಿಹ್ವೆಯಲ್ಲಿ=ಜನರ ನಾಲಿಗೆ ಮೇಲೆ.

ವಸಿಷ್ಠ ಮುನಿಯು ಕೊಟ್ಟಂತಹ ಶುಭಗಳಿಗೆಯೊಳಗೆ ಶ್ರೀರಾಮನು ಗುರುಗಳಾದ ವಸಿಷ್ಠರಿಗೆ ನಮಸ್ಕರಿಸಿ ನೇರವಾಗಿ ರಾಜಮಂದಿರವನ್ನು ಪ್ರವೇಶಿಸುವನು. ಸೃಷ್ಟಿಯ ಒಡೆಯನಾದ ಬ್ರಹ್ಮನ ರಾಣಿ ಸರಸ್ವತಿಯು ರಾಮನ ಶುಭ್ರ ಕೀರ್ತಿಯನ್ನು ಕೊಂಡಾಡಲು ಮೂರು ಲೋಕದ ಜನರ ನಾಲಿಗೆಯ ಮೇಲೆ ನಲಿದಾಡಿದಳು.

ಶ್ರೀರಾಮನ ಶುಭ್ರಗುಣ, ಶೌರ್ಯ ಪ್ರತಾಪವನ್ನು ಅಯೋಧ್ಯೆಯ ಜನ ಕೊಂಡಾಡಿದ ವಿಚಾರವನ್ನು ಕವಿ ಸರಸ್ವತಿ ಉಪಮೆಯ ಮೂಲಕ ವರ್ಣನಾತ್ಮಕವಾಗಿ ವಿವರಿಸಿದ್ದಾರೆ.

ಅರಸ ಕೇಳ್ಮರುದಿವಸದಲಿ ರಘು
ವರನು ತನ್ನೋಲಗಕೆ ನೃಪರನು
ಕರೆಸಿದನು ನಿಜಮಂತ್ರಿ ಬಾಂಧವಜಾಲವರ್ಗವನು
ತರಣಿಸುತ ಜಾಂಬವ ವಿಭೀಷಣ
ರಿರದೆ ಬಂದರು ಕೈಮುಗಿದು ಕು
ಳ್ಳಿರಲು ಪರಿತೋಷದಲಿ ನುಡಿದನು ರಾಮ ನಸುನಗುತ ೧೨೩

ಅರಸ ಕೇಳು ಮರುದಿವಸದಲಿ=ರಾಜ ಯುಧಿಷ್ಠಿರ ಕೇಳು ಮಾರನೆಯ ದಿನ; ರಘುವರನು=ಶ್ರೀರಾಮನು; ತನ್ನ+ಓಲಗಕೆ=ತನ್ನ ಒಡ್ಡೋಲಗಕ್ಕೆ; ನೃಪರನು= ರಾಜರನ್ನು; ಕರೆಸಿದನು; ನಿಜಮಂತ್ರಿ; ಬಾಂಧವ ಜಾಲ ವರ್ಗವನು= ಬಂಧುಗಳ ಸಮೂಹವನ್ನು; ತರಣಿಸುತ=ಸುಗ್ರೀವ; ಜಾಂಬವ=ಜಾಂಬವಂತ; ವಿಭೀಷಣರು+ ಇರದೆ=ವಿಭೀಷಣ ಮುಂತಾದವರು ಇರದೆ; ಬಂದರು; ಕೈ ಮುಗಿದು; ಕುಳ್ಳಿರಲು= ಕುಳಿತಿರಲು; ಪರಿತೋಷದಲಿ=ಆನಂದದಲಿ; ರಾಮ ನಸುನಗುತ=ರಾಮನು ಮುಗುಳ್ನ ಗೆಯಿಂದ; ನುಡಿದನು=ಹೇಳಿದನು.

ರಾಜ ಯುಧಿಷ್ಠಿರನೇ ಕೇಳು ಪಟ್ಟಾಭಿಷೇಕದ ಮರುದಿನ ರಾಜ ಶ್ರೀರಾಮನು ತನ್ನ ಒಡ್ಡೋಲಗಕ್ಕೆ ಬಂದು ಇತರ ರಾಜರನು, ತಮ್ಮಂದಿರನ್ನು, ಮಂತ್ರಿಗಳನ್ನು, ಬಂಧು ಬಾಂಧವರೆಲ್ಲರನ್ನೂ ಕರೆಸಿದನು, ಸುಗ್ರೀವ, ಜಾಂಬವಂತ, ವಿಭೀಷಣರೂ ಸಹ ಬಂದು, ರಾಮನಿಗೆ ಕೈ ಮುಗಿದು ಕುಳಿತರು. ಆಗ ರಾಮನು ಆನಂದದಿಂದ ಮುಗುಳ್ನಗುತ್ತಾ ಹೀಗೆ ಹೇಳಿದ.

ಪಟ್ಟಾಭಿಷೇಕದ ಮಾರನೇ ದಿನವೇ ಒಡ್ಡೋಲಗಕ್ಕೆ ಬರುವುದು ರಾಮನ ಕಾರ್ಯತತ್ಪರತೆಯನ್ನು, ಕಾಯಕ ನಿಷ್ಠೆಯನ್ನು ಸೂಚಿಸಿದರೆ, ಓಲಗಕೆ ಬಂಧು ಬಾಂಧವರನ್ನು ಸ್ನೇಹಿತರನ್ನು ಕರೆಸುವುದು ರಾಮನ ಇನ್ನೊಂದು ವಿಶೇಷ, ಯಾರನ್ನು ತಿರಸ್ಕರಿಸದೇ ತಾನಿರುವೆಡೆ ತನ್ನವರೆಲ್ಲ ಇರಬೇಕೆಂದು ರಾಮ ಬಯಸುತ್ತಾನೆ.

ಕೇಳು ಲಕ್ಷ್ಮಣ ಕೇಳು ಜಾಂಬವ
ಕೇಳು ನಳ ನೀಲಾದಿ ಸುಭಟರರೆ
ಕೇಳಿರೈ ನರೆದಲಗವ್ರಿಹಿಯರು ಸೆರೆಯೊಳಿರ್ದವರ

ಕಾಲ ಸವೆದುದು ದಿವಸವಿಂದಿಗೆ
ಏಳು ತಿಂಗಳು ಕಳೆದವವದಿರ
ಪಾಲಿಸಲು ಬೇಕನಿಲಸುತ ನೀ ಕರೆದು ತಾರೆಂದ ೧೨೪

ಕೇಳು ಲಕ್ಷ್ಮಣ; ಕೇಳು ಜಾಂಬವ; ಕೇಳು ನಳ; ನೀಲಾದಿ=ನೀಲ ಮುಂತಾದ; ಸುಭಟರೆ=ವೀರರೇ; ಕೇಳಿರೈ=ಕೇಳಿರಿ; ನರೆದಲಗ=ರಾಗಿ; ವ್ರಿಹಿಯರು= ಬತ್ತವು; ಸೆರೆಯೊಳು+ಇರ್ದ+ಅವರ=ಬಂಧನದಲ್ಲಿ ಇರುವ ಅವರ; ಕಾಲ=ಅವಧಿ; ಸವೆದುದು=ಮುಗಿದಿದೆ; ದಿವಸವು+ಇಂದಿಗೆ=ಇಂದಿನ ದಿನಕ್ಕೆ; ಏಳು ತಿಂಗಳು; ಕಳೆದವ+ಅವದಿರ=ಕಳೆದವು ಅವರ; ಪಾಲಿಸಲು ಬೇಕು=ರಕ್ಷಿಸಬೇಕು; ಅನಿಲಸುತ= ಹನುಮ; ನೀ ಕರೆದು ತಾ+ಎಂದ=ನೀ ಕರೆದುಕೊಂಡು ಬಾ ಎಂದ.

"ಕೇಳು ಲಕ್ಷ್ಮಣ, ಜಾಂಬವಂತ, ನಳ, ನೀಲಾ ಇತ್ಯಾದಿ ವೀರರೇ ಕೇಳಿರಿ. ನಾವು ಅರಣ್ಯವಾಸದಲ್ಲಿದ್ದಾಗ ಋಷ್ಯಾಶ್ರಮದಲ್ಲಿ ರಾಗಿ ಮತ್ತು ನೆಲ್ಲುಗಳನ್ನು ಬಂಧನದಲ್ಲಿರಿಸಿದ ಗಡುವು ಮುಗಿದಿದೆ. ಇಂದಿನ ದಿನಕ್ಕೆ ಏಳು ತಿಂಗಳು ಆಯಿತು. ಅವರನ್ನು ಬಿಡುಗಡೆಗೊಳಿಸಬೇಕು, ಹನುಮಂತ ನೀನು ಹೋಗಿ ಅವರನ್ನು ಕರೆದು ತಾ" ಎಂದು ಶ್ರೀರಾಮನು ಹೇಳಿದ.

ಸುಮಾರು ಏಳು ತಿಂಗಳ ಹಿಂದೆ ರಾಗಿ ಮತ್ತು ನೆಲ್ಲನ್ನು ಬಂಧನದಲ್ಲಿರಿಸಿದ ವಿಚಾರವನ್ನು ನೆನಪಿಟ್ಟುಕೊಂಡು ತನ್ನ ಪಟ್ಟಾಭಿಷೇಕದ ಮರುದಿನವೇ ಶ್ರೀರಾಮನು ವಿಚಾರಿಸುತ್ತಿರುವುದು ವಿಶೇಷ. ತನ್ನ ಸುಖ ಸಂತೋಷವನ್ನು ಬದಿಗಿಟ್ಟು ಸಾಮಾನ್ಯ ಜನರ ಕಷ್ಟಕಾರ್ಪಣ್ಯಗಳಲ್ಲಿ ಭಾಗಿಯಾಗುವುದನ್ನು ಇಲ್ಲಿ ಕಾಣುತ್ತೇವೆ.

ಹೈ ಹಸಾದವೆನುತ್ತ ವಂದಿಸೆ
ಬಾಹುಬಲದಗ್ಗಳಿಕೆ ಮಿಗೆ ನಿ
ರ್ವಾಹದಲಿ ಹೊರವಂಟನತಿ ವೇಗದಲಿ ಪಥವಿಡಿದು
ಸಾಹಸವನೇನೆಂಬೆ ವಜ್ರದ
ದೇಹನಲ್ಲಾ ಹನುಮ ತನ್ನ ಮ
ನೋಹರದ ಋಷಿಗಳನು ಕಂಡನು ಪಂಚನಂದಿಯಲಿ ೧೨೫

ಹೈಹಸಾದವೆನ್ನುತ=ಸಂತೋಷದಿಂದ ತಮ್ಮ ಅಪ್ಪಣೆ ಎನ್ನುತ್ತಾ; ವಂದಿಸೆ= ನಮಸ್ಕರಿಸಿ; ಬಾಹುಬಲದ+ಅಗ್ಗಳಿಕೆ=ತೋಳು ಬಲದ ಸಾಮರ್ಥ್ಯದ ಮೇಲೆ; ಮಿಗೆ ನಿರ್ವಾಹದಲ್ಲಿ=ಹೆಚ್ಚಿನ ಉತ್ಸಾಹದಿಂದ; ಹೊರವಂಟನ+ಅತಿ=ಹೊರ ಹೋದನು ಅತಿ; ವೇಗದಲಿ; ಪಥವಿಡಿದು=ದಾರಿ ಹಿಡಿದು; ಸಾಹಸವನು+ಏನೆಂಬೆ=ಸಾಹಸವನ್ನು ಏನೆಂದು ಹೇಳಲಿ; ವಜ್ರದ ದೇಹನಲ್ಲಾ ಹನುಮ=ವಜ್ರದೇಹಿ ಅಲ್ಲವೇ ಹನುಮಂತನು; ತನ್ನ ಮನೋಹರದ=ಇಷ್ಟವಾದ; ಋಷಿಗಳನ್ನು ಪಂಚನಂದಿಯಲಿ= ಪಂಚನಂದಿ ಎಂಬ ಸ್ಥಳದಲ್ಲಿ; ಕಂಡನು=ನೋಡಿದ.

ರಾಮನ ಆಜ್ಞೆಯನ್ನು ಶಿರಸಾವಹಿಸಿ, ತನ್ನ ಒಡೆಯನಿಗೆ ನಮಸ್ಕರಿಸಿ, ತನ್ನ ಬಾಹುಬಲದ ಮೇಲೆ ಹೆಚ್ಚಿನ ಅಭಿಮಾನವನ್ನು ಹೊಂದಿದ ಹನುಮ ಅತ್ಯಂತ ವೇಗವಾಗಿ ಅಲ್ಲಿಂದ ನಿರ್ಗಮಿಸಿ ತನ್ನ ದಾರಿಯನ್ನು ಹಿಡಿದನು. ಹನುಮನ ಸಾಹಸವನ್ನು ಏನೆಂದು ಹೊಗಳಲಿ, ವಜ್ರದೇಹಿ ಅವನು, ತನ್ನ ಇಷ್ಟದ ಋಷಿಗಳನ್ನು ಪಂಚನಂದಿ ಎಂಬ ಸ್ಥಳದಲ್ಲಿ ಭೇಟಿ ಮಾಡಿದ.

ರಾಮನ ಆಜ್ಞೆಯನ್ನು ಹೊತ್ತ ಹನುಮನ ಪಯಣ ಪಂಚನಂದಿ ಗ್ರಾಮದೆಡೆಗೆ, ಹನುಮನ ಸಾಮರ್ಥ್ಯದ ಮೇಲೆ ಕವಿಗೂ ಅಭಿಮಾನ, ವಜ್ರದೇಹಿ, ಸಾಹಸಿ ಎಂದೆಲ್ಲಾ ವರ್ಣಿಸಿದ್ದಾನೆ ಕವಿ.

ಅವರ ಪಾದಾಂಬುಜಕೆ ವಂದಿಸಿ
ಪವನಸುತ ಬಿನ್ನೈಸಿದನು ರಾ
ಘವ ನೃಪಾಲನು ಕಳುಹೆ ಬಂದೆನು ನಿಮ್ಮ ದರುಶನಕೆ
ಅವಧಿ ಸವೆದುದು ಸೆರೆಮನೆಯೊಳಿ
ರ್ದವರನೊಡಗೊಂಡೀಕ್ಷಣವೆ ನೀ
ವವನಿಪನ ಸಂಮುಖಕೆ ಚಿತ್ತೈಸೆಂದು ಕೈಮುಗಿದ ೧೨೬

ಅವರ=ಋಷಿಗಳ; ಪಾದ+ಅಂಬುಜಕೆ=ತಾವರೆಯಂಥ ಪಾದಗಳಿಗೆ; ವಂದಿಸಿ= ನಮಸ್ಕರಿಸಿ; ಪವನಸುತ=ಹನುಮ; ಬಿನ್ನೈಸಿದನು=ಅರಿಕೆ ಮಾಡಿ ಕೊಂಡನು; ರಾಘವ ನೃಪಾಲನು=ರಾಜ ಶ್ರೀರಾಮನು; ಕಳುಹೆ=ಕಳಿಸಿದಕ್ಕೆ; ಬಂದೆನು; ನಿಮ್ಮ ದರುಶನಕ್ಕೆ=ನಿಮ್ಮನ್ನು ಭೇಟಿಯಾಗಲು; ಅವಧಿ ಸವೆದುದು=ಗಡುವು

ಮುಗಿದಿದೆ; ಸೆರೆಮನೆಯೊಳು+ ಇರ್ದ+ಅವರನು+ ಒಡಗೊಂಡು+ಈ ಕ್ಷಣವೇ= ಸೆರೆಮನೆಯಲ್ಲಿ ಇರುವ ಅವರನ್ನು ಕರೆದುಕೊಂಡು ಈ ಕ್ಷಣದಲ್ಲೇ; ನೀವು+ ಅವನಿಪನ=ನೀವು ರಾಜ ಶ್ರೀರಾಮನ; ಸಂಮುಖಕೆ=ಬಳಿಗೆ; ಚಿತ್ತೈಸು+ಎಂದು =ಬರಬೇಕೆಂದು; ಕೈಮುಗಿದ.

ಋಷಿಮುನಿಗಳ ತಾವರೆಯಂಥ ಪಾದಗಳಿಗೆ ನಮಸ್ಕರಿಸಿ, ಹನುಮಂತನು ಅವರಲ್ಲಿ ವಿಜ್ಞಾಪಿಸಿಕೊಂಡನು. ರಾಜ ಶ್ರೀರಾಮನು ನಿಮ್ಮ ಭೇಟಿಗಾಗಿ ಕಳುಹಿ ಸಿರುವನು, ಗಡುವು ಮುಗಿದಿದೆ, ಬಂಧನದಲ್ಲಿರುವ ರಾಗಿ ಮತ್ತು ನೆಲ್ಲನ್ನು ನಿಮ್ಮೊಡನೆ ಈ ಕ್ಷಣವೇ ಕರೆದುಕೊಂಡು ರಾಮರ ಬಳಿಗೆ ಬರಬೇಕೆಂದು ಹೇಳಿ ಹನುಮ ಕೈ ಮುಗಿದ.

ಹನುಮ ಅರಣ್ಯದಲ್ಲಿ ಹುಟ್ಟಿ ಬೆಳೆದರೂ ಅವನ ಸಂಸ್ಕಾರ ದೊಡ್ಡದು, ಹೋದ ತಕ್ಷಣ ಋಷಿಮುನಿಗಳಿಗೆ ನಮಸ್ಕರಿಸಿ ತಾನು ಬಂದ ವಿಷಯವನ್ನು ತಿಳಿಸಿ, ಮತ್ತೆ ನಮಸ್ಕರಿಸಿ ಹೊರಟ.

ಹನುಮನಾಡಿದ ನುಡಿಗೆ ಗೌತಮ
ಮುನಿಪ ನಸುನಗುತೆದ್ದು ಬನದಲಿ
ಘನತಪೋಬಲ ಮಹಿಮರನು ಕರೆಸಿದನತುಳವೇಗದಲಿ
ಮನದಿ ಹರುಷಿತನಾಗಿ ಮುನಿ ಸೆರೆ
ಮನೆಯ ಪ್ರತಿವಾದಿಗಳನೊಡಗೊಂ
ಡನುಪಮಿತಗುಣನಿಲಯ ಮುನಿ ಹೊರವಂಟನಾಶ್ರಮವ ೧೨೭

ಹನುಮನು+ಆಡಿದ=ಹನುಮ ಹೇಳಿದ; ನುಡಿಗೆ=ಮಾತಿಗೆ; ಗೌತಮ ಮುನಿಪ=ಗೌತಮ ಮುನಿಯು; ನಸುನಗುತ+ ಎದ್ದು=ಸಂತೋಷದಿಂದ ಎದ್ದು; ಬನದಲಿ=ಅರಣ್ಯದಲ್ಲಿ; ಘನ ತಪೋಬಲ ಮಹಿಮರನು=ಹೆಚ್ಚಿನ ತಪೋಬಲ ಹೊಂದಿರುವ ಮಹರ್ಷಿಗಳನ್ನು ಕರೆಸಿದನು; ಅತುಳ ವೇಗದಲಿ=ಅತ್ಯಂತ ಬೇಗನೆ; ಮನದಿ ಹರುಷಿತನಾಗಿ=ಮನಸ್ಸಿನಲ್ಲಿ ಸಂತೋಷಗೊಂಡು; ಮುನಿ=ಗೌತಮ ಮನಿಯು; ಸೆರೆಮನೆಯ; ಪ್ರತಿವಾದಿಗಳನ್ನು+ಒಡಗೊಂಡ+ಅನುಪಮಿತ= ಆರೋಪಿ ಗಳನ್ನು ಕರೆದುಕೊಂಡ; ಹೋಲಿಕೆಗೆ ನಿಲುಕದ; ಗುಣ ನಿಲಯ=ಗುಣಗಳನ್ನು

ಹೊಂದಿದ; ಮುನಿ=ಗೌತಮಮುನಿ; ಹನುಮನಾಡಿದ ಮಾತಿಗೆ ಹೊರವಂಟನು+ ಆಶ್ರಮವ=ಹನುಮನು ಆಡಿದ ಮಾತಿಗೆ ಆಶ್ರಮದಿಂದ ಹೊರಟನು.

ಸಂತೋಷಗೊಂಡ ಗೌತಮಮುನಿ ಆಶ್ರಮಗಳಲ್ಲಿನ ಇತರ ಮುನಿಗಳನ್ನು ಕರೆಸಿದನು, ಶೀಘ್ರದಲ್ಲಿ ಸೆರೆಮನೆಯಲ್ಲಿದ್ದ ರಾಗಿ ಮತ್ತು ಬತ್ತವನ್ನು ಜೊತೆಗೆ ಕರೆದುಕೊಂಡು ಶ್ರೇಷ್ಠ ಗುಣಗಳ ನಿಧಿಯಾದ ಗೌತಮ ಮುನಿ ಆಶ್ರಮದಿಂದ ಹೊರಟ.

ರಾಮನ ಭೇಟಿ ಋಷಿಮುನಿಗಳಿಗೆ ಅಪ್ಯಾಯಮಾನ. ಹಾಗಾಗಿ ರಾಮನ ಆಮಂತ್ರಣದಿಂದ ಸಂತಸಗೊಂಡ ಋಷಿಮುನಿಗಳು ಪ್ರತಿವಾದಿಗಳಾದ ರಾಗಿ ಮತ್ತು ಬತ್ತದೊಂದಿಗೆ ರಾಮನ ಭೇಟಿಗೆ ಕಾತರದಿಂದ ಹೊರಟರು.

ಬಂದನತಿಹರುಷದಲಿ ಮುನಿಕುಲ
ವೃಂದದೊಡನೈತರಲು ರಘುಕುಲ
ನಂದು ಬಿಜಯಂಗೈಸೆ ತಂದನು ರಾಜಮಂದಿರಕೆ
ಬಂದರೇ ಪ್ರತಿವಾದಿಗಳು ಕರ
ತಂದಿರೇ ನೀವೆನುತ ಮುನಿಕುಲ
ವೃಂದವನು ಸತ್ಕರಿಸಿ ಕುಳ್ಳಿರಿಸಿದನು ಗೌತಮನ ೧೨೮

ಬಂದನು+ಅತಿ ಹರುಷದಲಿ=ಬಂದನು ಅತ್ಯಂತ ಸಂತೋಷದಿಂದ; ಮುನಿ ಕುಲ ವೃಂದದೊಡನೆ+ಐತರಲು=ಮುನಿಗಳ ಸಮೂಹದೊಂದಿಗೆ ಬರಲು; ರಘು ಕುಲನು+ಅಂದು=ಶ್ರೀರಾಮನು ಆ ದಿನ; ಬಿಜಯಂಗೈಸೆ=ಆಗಮಿಸಿ; ತಂದನು ರಾಜ ಮಂದಿರಕೆ=ಬಂದನು ಒಡ್ಡೋಲಗಕ್ಕೆ; ಬಂದರೇ ಪ್ರತಿವಾದಿಗಳು=ಬಂದರೇ ಆರೋಪಿತರು; ಕರ ತಂದಿರೇ=ಕರೆದು ತಂದಿರುವಿರೇ; ನೀವು+ಎನುತ=ನೀವು ಎನ್ನುತ್ತಾ; ಮುನಿಕುಲ ವೃಂದವನ್ನು=ಎಲ್ಲಾ ಮುನಿಗಳನ್ನು; ಸತ್ಕರಿಸಿ=ಗೌರವಿಸಿ; ಕುಳ್ಳಿರಿಸಿದನು; ಗೌತಮನ=ಗೌತಮ ಋಷಿಯನ್ನು ಕೂರಿಸಿದನು.

ಶ್ರೀರಾಮ ಅಂದು ಅತ್ಯಂತ ಸಂತೋಷದಿಂದ ಒಡ್ಡೋಲಗಕ್ಕೆ ಬಂದನು. ಗೌತಮ ಮುನಿಗೆ, ಬಂದರೇ ಪ್ರತಿವಾದಿಗಳು ಕರೆತಂದಿರೇ ನೀವು, ಎಂದು ಎಲ್ಲಾ

ಮುನಿಗಳನ್ನು ಆದರದಿಂದ ಮಾತನಾಡಿಸುತ್ತಾ, ಗೌತಮ ಮುನಿಯನ್ನು ಕರೆದು ಕೂರಿಸಿದನು.

ಮುನಿಗಳು ರಾಮನನ್ನು ಕಾಣಲು ಎಷ್ಟು ಕಾತರದಿಂದ ಬಂದರೋ ಅಷ್ಟೇ ಕಾತರದಿಂದ ರಾಮನೂ ಋಷಿಗಳನ್ನು ನೋಡಲು ಅಂದು ಬೇಗನೆ ಬಂದ, ಹಾಗೂ ಅವರನ್ನೆಲ್ಲಾ ಗೌರವಿಸಿ ಕೂರಿಸಿದನು.

ಇವರ ವ್ಯವಹಾರವನು ಪರಿಹರಿ
ಸುವವಿಚಾರವ ನೋಡಿ ಮನದಲಿ
ರವಿಕುಲಾನ್ವಯ ರಾಮ ನೆನೆದನು ಹೃದಯ ಶುದ್ಧಿಯಲಿ
ಶಿವನ ಧ್ಯಾನಿಸಲಾ ಕ್ಷಣವೆ ತ್ರೈ
ಭುವನಕರ್ತರು ಇಂದ್ರ ಮೊದಲಾ
ದವರು ಬಂದರಯೋಧ್ಯ ಪುರಪತಿಧಾಮನೋಲಗಕೆ ೧೨೯

ಇವರ ವ್ಯವಹಾರವನು=ರಾಗಿ ಮತ್ತು ಬತ್ತದ ಜಗಳವನು; ಪರಿಹರಿಸುವ= ತೀರ್ಮಾನಿಸಲು; ವಿಚಾರವ ಮಾಡಿ ಮನದಲಿ=ಮನಸ್ಸಿನಲ್ಲಿ ಆಲೋಚಿಸಿ; ರವಿ ಕುಲ+ಅನ್ವಯ=ರವಿಕುಲಕ್ಕೆ ಸೇರಿದ; ರಾಮ ನೆನೆದನು=ಶ್ರೀರಾಮನು ಸ್ಮರಿಸಿದನು; ಹೃದಯ ಶುದ್ಧಿಯಲಿ=ಶುದ್ಧ ಮನಸ್ಸಿನಿಂದ; ಶಿವನ=ಶಿವನನ್ನು; ಧ್ಯಾನಿಸಲು+ಆ ಕ್ಷಣವೆ=ಪ್ರಾರ್ಥಿಸಲು; ತಕ್ಷಣವೆ; ತ್ರೈಭುವನ ಕರ್ತರು=ಮೂರೂ ಲೋಕದ ಒಡೆಯರು; ಇಂದ್ರ ಮೊದಲಾದವರು ಅಯೋಧ್ಯಪುರ+ಧಾಮನ+ ಓಲಗಕೆ= ಅಯೋಧ್ಯಾಪುರದ ರಾಜಮಂದಿರದ ಒಡ್ಡೋಲಗಕ್ಕೆ ಬಂದರು.

ರಾಗಿ ಮತ್ತು ಬತ್ತದ ಜಗಳವನ್ನು ತೀರ್ಮಾನಿಸುವ ವಿಚಾರವನ್ನು ಮನದಲ್ಲಿ ಆಲೋಚಿಸಿ ರವಿಕುಲದ ಶ್ರೀರಾಮನು ಶುದ್ಧ ಮನಸ್ಸಿನಿಂದ ಶಿವನನ್ನು ಪ್ರಾರ್ಥಿಸಲು, ತಕ್ಷಣವೇ ಮೂರು ಲೋಕಗಳ ಒಡೆಯರು ಹಾಗೂ ಇಂದ್ರ ಮೊದಲಾದವರೆಲ್ಲಾ ಅಯೋಧ್ಯಾ ನಗರದ ಶ್ರೀರಾಮನ ಒಡ್ಡೋಲಗಕ್ಕೆ ಬಂದರು.

ಶ್ರೀರಾಮನು ತಾನು ರಾಜನೆಂಬ ಹಮ್ಮುಬಿಮ್ಮು ಆಗಲಿ, ಇದು ಸಣ್ಣಜಗಳವೆಂಬ ತಾತ್ಸಾರವಾಗಲಿ ತೋರದೇ, ಮೂರು ಲೋಕದ ಒಡೆಯರ ಸಾಕ್ಷಿಯಲ್ಲಿ ನ್ಯಾಯ ತೀರ್ಮಾನಕ್ಕೆ ಮುಂದಾದ.

ವಸುಗಳಮರರು ಭುಜಂಗಾಮರ
ರಸುರ ಕಿನ್ನರ ಯಕ್ಷ ರಾಕ್ಷಸ
ಶಶಿರವಿಗಳಾದಿತ್ಯ ವಿದ್ಯಾಧರರು ಗುಹ್ಯಕರು
ವಸುಧೆಯಮರರು ಕ್ಷತ್ರಿಯರು ಜೋ
ಯಿಸರು ವೈಶ್ಯ ಚತುರ್ಥರುನ್ನತ
ಕುಶಲ ವಿದ್ಯಾಧಿಕರು ನೆರೆದರು ನೃಪನ ಸಭೆಯೊಳಗೆ ೧೩೦

ವಸುಗಳು=ಅಷ್ಟವಸುಗಳು(ಆಪ, ಧರ, ಧ್ರುವ, ಸೋಮ, ಅನಿಲ, ಅನಲ; ಪ್ರತ್ಯೂಷ, ಪ್ರಭಾಸ); ಅಮರರು=ದೇವಲೋಕದ ದೇವತೆಗಳು; ಭುಜಂಗ+ಅಮರರು+ಅಸುರ=ನಾಗಲೋಕದ ದೇವತೆಗಳು; ರಾಕ್ಷಸರು; ಕಿನ್ನರ=ಕುದುರೆಮುಖ ಮಾನವ ದೇಹದ ದೇವತೆಗಳು; ಯಕ್ಷ=ದೇವತೆಗಳ ಒಂದು ಪಂಗಡ; ರಾಕ್ಷಸರು; ಶಶಿ=ಚಂದ್ರ; ರವಿಗಳು; ಆದಿತ್ಯರು=ದ್ವಾದಶ ಆದಿತ್ಯರು(ಧಾತಾ, ಮಿತ್ರ, ಅರ್ಯಮಾ; ಶಕ್ರ(ಇಂದ್ರ), ವರುಣ, ಅಂಶ, ಭಗ, ವಿವಂಸ್ವಾನ್, ಪೂಷಾ, ಸವಿತಾ, ತ್ವಷ್ಟಾ, ವಿಷ್ಣು); ವಿದ್ಯಾಧರರು= ಪಂಡಿತರು; ಗುಹ್ಯಕರು=ಕುಬೇರ, ಯಕ್ಷ ಮುಂತಾದವರು; ವಸುಧೆಯ ಅಮರರು=ಬ್ರಾಹ್ಮಣರು; ಕ್ಷತ್ರಿಯರು; ಜೋಯಿಸರು=ಜ್ಯೋತಿಷ ಬಲ್ಲವರು; ವೈಶ್ಯ= ವ್ಯಾಪಾರಿಗಳು; ಚತುರ್ಥರು=ಶೂದ್ರರು ಉನ್ನತ ಕುಶಲ ವಿದ್ಯಾ+ಅಧಿಕರು= ಉನ್ನತವಾದ ಕುಶಲ=ಕಲಾ ಪಂಡಿತರು; ನೃಪನ ಸಭೆಯೊಳಗೆ=ರಾಜ ಶ್ರೀರಾಮನ ಸಭೆಯಲ್ಲಿ; ನೆರೆದುದು=ಸೇರಿದರು.

ದೇವಲೋಕ, ನಾಗಲೋಕ, ಭೂಲೋಕದ ದೇವತೆಗಳು, ರಾಕ್ಷಸರು ಯಕ್ಷ, ಕಿನ್ನರರು, ಚಂದ್ರ, ಸೂರ್ಯರು, ಕಶ್ಯಪನಿಂದ ಅದಿತಿಯಲ್ಲಿ ಜನಿಸಿದ ಹನ್ನೆರಡುಜನ ಆದಿತ್ಯರು, ವಿದ್ಯಾವಂತರು, ಜ್ಯೋತಿಷಿಗಳು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು, ಉನ್ನತ ಕುಶಲಕರ್ಮಿಗಳು ಹೀಗೆ ಎಲ್ಲಾ ಲೋಕಗಳ, ಎಲ್ಲಾ ವರ್ಗ, ವರ್ಣಗಳ ಮುಖಂಡರು ಶ್ರೀರಾಮನ ಅಂದಿನ ಸಭೆಗೆ ಸೇರಿದರು.

ರಾಮನ ಸಭೆಗೆ ಎಷ್ಟು ಸಾಧ್ಯವೋ ಅಷ್ಟೆಲ್ಲಾ ರೀತಿಯ ಜನರು ಹಾಗೂ ದೇವತೆಗಳನ್ನು ಸೇರಿಸಲು ಕನಕದಾಸರು ಇಲ್ಲಿ ಪ್ರಯತ್ನಪಟ್ಟಿದ್ದಾರೆ. ಸುಮಾರು ಹದಿನೈದು ರೀತಿಯ ಪಂಗಡಗಳು ಈ ಪದ್ಯದಲ್ಲಿ ಕಂಡುಬರುತ್ತವೆ.

ಇಂತೆಸೆವನಾ ಸಭೆಯೊಳಗೆ ಮತಿ
ವಂತ ನುಡಿದನು ಧಾನ್ಯವರ್ಗದ
ಸಂತತಿಯ ಬರಹೇಳಿಯೆನೆ ಸೆರೆಮನೆಯೊಳಿರ್ದವರು
ನಿಂತು ಕರಗಳ ಮುಗಿದು ಧರಣೀ
ಕಾಂತ ರಘುವರನೀ ಸುಬುದ್ಧಿಯ
ನೆಂತು ನಮಗರುಹುವಿರಿಯದ ಪೇಳೆಂದ ನರೆದಲೆಗ ೧೩೧

ಇಂತು+ಎಸೆವನಾ=ಹೀಗೆ ಶೋಭಿಸುವ ಆ ಸಭೆಯೊಳಗೆ; ಮತಿವಂತ= ಬುದ್ಧಿವಂತ; ನುಡಿದನು=ಹೇಳಿದನು; ಧಾನ್ಯವರ್ಗದ ಸಂತತಿಯ= ಧಾನ್ಯಗಳ ಜಾತಿಯ ಸಮೂಹವ; ಬರಹೇಳಿ+ಎನೆ=ಬರಲು ಹೇಳಿ ಎಂದಾಗ; ಸೆರೆಮನೆ ಯೊಳು+ ಇರ್ದವರು=ಬಂಧನದಲ್ಲಿದ್ದವರು; ನಿಂತು; ಕರಗಳ ಮುಗಿದು= ಕೈ ಮುಗಿದು; ಧರಣೀಕಾಂತ ರಘುವರನು+ಈ=ಭೂಪಾಲಕನಾದ ರಘುವಂಶದ ಶ್ರೇಷ್ಠ ರಾಜನೇ ಈ; ಸುಬುದ್ಧಿಯನು+ಎಂತು=ಒಳ್ಳೆಯ ಬುದ್ಧಿಯನ್ನು ಹೇಗೆ; ನಮಗೆ+ ಅರುಹುವಿರಿ=ನಮಗೆ ತಿಳಿಸುವಿರಿ; ಅದ=ಅದನ್ನು; ಪೇಳೆಂದ=ಹೇಳಿ ಎಂದ; ನರೆ ದಲೆಗ=ರಾಗಿ.

ಹೀಗೆ ಶೋಭಿಸುವ ಸಭೆಯೊಳಗೆ ಮುಖಂಡ, ಧಾನ್ಯ ಜಾತಿಯ ಸಮೂಹವನ್ನು ಬರಲು ಹೇಳಿ ಎಂದಾಗ, ಸೆರೆಮನೆಯಲ್ಲಿ ಇದ್ದ ನರೆದಲೆಗ ನಿಂತು ಕೈ ಮುಗಿದು "ಭೂಪಾಲನಾದ ಶ್ರೀರಾಮನೇ ನಮಗೆ ಒಳ್ಳೆಯ ಬುದ್ಧಿಯನ್ನು ಹೇಗೆ ತಿಳಿಸುವಿರಿ" ಎಂದ.

ಎಲ್ಲ ವರ್ಗಗಳ ಮುಖಂಡರು; ಮೂರು ಲೋಕಗಳ ನಾಯಕರು ಸಭೆಯಲ್ಲಿ ನೆರೆದಾಗ ಆರೋಪಿ ಪ್ರತ್ಯಾರೋಪಿಗಳನ್ನು ಅಲ್ಲಿಗೆ ಕರೆತರುತ್ತಾರೆ. ಆಗ ರಾಗಿಯು ನಮಗೆ ಒಳ್ಳೆಯ ಬುದ್ಧಿಯನ್ನು ಕರುಣಿಸೆಂದು ಬೇಡಿಕೊಳ್ಳುವನು.

ಎನಲು ರಾಮನೃಪಾಲ ನೋಡಿದ
ಘನ ತಪೋಮಹಿಮರಿಗೆ ನುಡಿದನು
ಮನವ ವಂಚಿಸಲಾಗದೀ ಧರ್ಮವನು ನೆರೆತಿಳಿದು
ಅನುನಯದಿ ಪೇಳೆನೆ ಮುನೀಂದ್ರರು
ಅನಿಮಿಷರನೀಕ್ಷಿಸಿದರಲ್ಲಿ ಯ
ಘನ ಮಹಾಸಭೆಯೊಳಗೆ ಭಾರ್ಗವರಾಮನಿಂತೆಂದ ೧೩೨

ಎನಲು=ರಾಗಿಯು ಹಾಗೆಂದಾಗ; ರಾಮನೃಪಾಲ=ರಾಜ ಶ್ರೀರಾಮ; ನೋಡಿದ; ಘನ ತಪೋಮಹಿಮರಿಗೆ ನುಡಿದನು=ಶ್ರೇಷ್ಠ ಋಷಿಮುನಿಗಳಿಗೆ ಹೇಳಿದನು; ಮನವ ವಂಚಿಸಲು+ಆಗದು+ಈ=ಈ ಮನಸ್ಸಿಗೆ ಮೋಸ ಮಾಡಿ ಕೊಳ್ಳದೇ; ಧರ್ಮವನ್ನು= ನ್ಯಾಯ ಅನ್ಯಾಯಗಳನ್ನು; ನೆರೆ ತಿಳಿದು=ಚೆನ್ನಾಗಿ ಅರಿತು; ಅನುನಯದಿ=ಪ್ರೀತಿಯಿಂದ; ಪೇಳಿ+ಎನೆ=ಹೇಳಿ ಎಂದಾಗ; ಮುನೀಂದ್ರರು= ಋಷಿ ಮುನಿಗಳು; ಅನಿಮಿಷರನು+ಈಕ್ಷಿಸಿದರು=ದೇವತೆಗಳನ್ನುನೋಡಿದರು; ಅಲ್ಲಿಯ ಘನ ಮಹಾಸಭೆ ಯೊಳಗೆ; ಭಾರ್ಗವ=ವಿಷ್ಣುವಿನ ಆರನೆಯ ಅವತಾರ; ರಾಮನು+ ಇಂತೆಂದ=ಶ್ರೀರಾಮನು ಹೀಗೆ ಹೇಳಿದ.

ರಾಗಿಯು ಮೇಲಿನಂತೆ ಹೇಳಿದಾಗ, ಶ್ರೀರಾಮ ತನ್ನ ಕಡೆಗೆ ನೋಡಿದ ಶ್ರೇಷ್ಠ ಋಷಿಮುನಿಗಳಿಗೆ ಹೀಗೆಂದ, ಮನಃ ಸಾಕ್ಷಿಗೆ ವಂಚನೆ ಮಾಡಿಕೊಳ್ಳದೇ, ನ್ಯಾಯ ಅನ್ಯಾಯಗಳನ್ನು ಚೆನ್ನಾಗಿ ಅರಿತು ಪ್ರೀತಿಯಿಂದ ತೀರ್ಮಾನವನ್ನು ಕೊಡಿ, ಎನಲು ಋಷಿಮುನಿಗಳು ದೇವತೆಗಳ ಕಡೆಗೆ ನೋಡಿದರು, ಆಗ ಆ ಮಹಾಸಭೆಯೊಳಗೆ ವಿಷ್ಣುವಿನ ಅವತಾರವಾದ ಶ್ರೀರಾಮನು ಹೀಗೆಂದ.

ಯಾವುದೇ ನ್ಯಾಯ ತೀರ್ಮಾನಗಳು ಆತ್ಮಸಾಕ್ಷಿಯಿಂದ ಕೂಡಿರಬೇಕು, ಒಳ್ಳೆಯವರಿಗೆ ಅಮಾಯಕರಿಗೆ ಅನ್ಯಾಯವಾಗಬಾರದು ಎಂಬ ನಿಲವಿನಿಂದ ಶ್ರೀರಾಮನು ಋಷಿಮುನಿಗಳ ಹಾಗೂ ದೇವತೆಗಳ ಸಮ್ಮುಖದಲ್ಲಿ ನ್ಯಾಯ ತೀರ್ಮಾನಿಸಲು ನಿರ್ಧರಿಸಿದ.

ಆರು ನುಡಿಯರೆ ನೀವು ಹಿರಿಯರು
ಮಿರಿಸುವರಾರಿವರೊಳಗೆ ಗುಣ

ಸಾರನಾವನು ಪೇಳೆನಲು ಜಂಭಾರಿ ನಸುನಗುತ
ಸಾರಹೃದಯನು ನರೆದಲೆಗ ನಿ
ಸ್ಸಾರನೀ ವ್ರಿಹಿಯೆನಲು ಗುಣನಿಧಿ
ಮಾರುತಾತ್ಮಜ ನೋಡಿದನು ಸನ್ನೆಯಲಿ ನಾರದನ ೧೩೩

ಆರು ನುಡಿಯರೆ=ಯಾರು ಹೇಳುವುದಿಲ್ಲವೇ; ನೀವು ಹಿರಿಯರು=ನೀವೆಲ್ಲಾ ತಿಳಿದಂಥವರು; ಮೀರಿಸುವರು+ಆರು+ ಇವರೊಳಗೆ=ಅಧಿಕನು ಯಾರು ಇವರಲ್ಲಿ; ಗುಣಸಾರನು+ಆವನು=ಸಾರಯುಕ್ತನು ಯಾರು?; ಪೇಳು+ಎನಲು=ಹೇಳಿ ಎಂದಾಗ; ಜಂಭಾರಿ=ಇಂದ್ರನು; ನಸುನಗುತ=ಕಿರುನಗೆ ಬೀರುತ್ತಾ; ಸಾರ ಹೃದಯನು= ಸತ್ವ ಭರಿತನು; ನರೆದಲೆಗ=ರಾಗಿ; ನಿಸ್ಸಾರನು+ಈ+ವ್ರೀಹಿ+ ಎನಲು= ಸತ್ವರಹಿತನು ಈ ನೆಲ್ಲು ಎಂದಾಗ; ಗುಣನಿಧಿ=ಗುಣಗಳ ನಿಧಿಯಾದ; ಮಾರುತ+ ಆತ್ಮಜ=ಮಾರುತನ ಮಗನಾದ ಹನುಮ; ನೋಡಿದನು ಸನ್ನೆಯಲಿ ನಾರದನ= ಸಂಜ್ಞಾಪೂರ್ವಕವಾಗಿ ನಾರದನನ್ನು ನೋಡಿದನು.

ಯಾರು ಹೇಳುವುದಿಲ್ಲವೇ; ನೀವೆಲ್ಲಾ ಅನುಭವಿಗಳು ಇವರಿಬ್ಬರಲ್ಲಿ ಯಾರು ಅಧಿಕರು? ಸತ್ವಭರಿತನು ಯಾರು? ಹೇಳಿ ಎಂದಾಗ ಇಂದ್ರನು ಕಿರುನಗೆ ಬೀರುತ್ತಾ ಸತ್ವ ಹೃದಯದವನು ರಾಗಿ; ಸತ್ವರಹಿತನು ಬತ್ತ ಎಂದಾಗ, ಗುಣವಲ್ಲಭನೂ ವಾಯುಪುತ್ರನೂ ಆದ ಹನುಮಂತನು ಸಂಜ್ಞಾಪೂರಕವಾಗಿ ನಾರದನನ್ನು ನೋಡಿದ.

ಸುಮಾರು ಏಳು ತಿಂಗಳಿಂದ ನೆನೆಗುದಿಗೆ ಬಿದ್ದಿದ್ದ ಹಾಗೂ ಬಂಧನದಲ್ಲಿದ್ದ ರಾಗಿ, ಬತ್ತಗಳ ವಿಚಾರಣೆ ಇಂದು ನಡೆಯುತ್ತಿದೆ. ನ್ಯಾಯ ತೀರ್ಮಾನವೆಂಬಂತೆ ಇಂದ್ರನು ರಾಗಿಯನ್ನು ಶ್ರೇಷ್ಠ, ಬತ್ತವನ್ನು ನಿಸ್ಸಾರವೆಂಬ ತೀರ್ಮಾನವನ್ನು ನೀಡಿದಾಗ ಹನುಮನಿಗೆ ಇದು ಸರಿಯೆನಿಸಿದರೂ ಅದು ಹೇಗೆ? ಎಂಬಂತೆ ಸಂಜ್ಞಾಪೂರಕವಾಗಿ ನಾರದನ ಕಡೆಗೆ ನೋಡುತ್ತಾನೆ.

ಅಹುದು ಸುರಪನ ಮಾತು ನಿಶ್ಚಯ
ವಹುದು ನರೆದಲೆಗನೆ ಸಮರ್ಥನು
ಬಹಳ ಬಲಯುತ ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ

ಸಹಜವಿದು ಪರಪಕ್ಷವಾದಡೆ
ವ್ರಿಹಿ ಕರಗಿ ಕಂದಿದನು ಸೆರೆಯಲಿ
ವಿಹಿತವಿದು ಕೇಳೆಂದು ನಾರದ ನುಡಿದ ನಸುಗುತ ೧೩೪

ಅಹುದು=ಹೌದು; ಸುರಪನ ಮಾತು=ಇಂದ್ರನ ಮಾತು; ನಿಶ್ಚಯವಹುದು=ದಿಟವಹುದು; ನರೆದಲೆಗನೆ=ರಾಗಿಯೆ; ಸಮರ್ಥನು=ಶಕ್ತಿಶಾಲಿ; ಬಹಳ ಬಲಯುತ=ಬಹಳ ಶಕ್ತಿವಂತನು; ಸೆರೆಗೆ ತಳ್ಳಲು=ಬಂಧನದಲ್ಲಿಡಲು; ಕಾಂತಿ+ಕೆಡಲಿಲ್ಲ=ತನ್ನ ಹೊಳಪನ್ನು ಕಳೆದುಕೊಳ್ಳಲಿಲ್ಲ; ಸಹಜವಿದು=ಸಹಜವಾಗಿಯೇ ಇದೆ. ಪರಪಕ್ಷವಾದಡೆ=ಇನ್ನೊಂದು ಪಕ್ಷವಾದ; ವ್ರಿಹಿ ಕರಗಿ ಕಂದಿದನು=ಬತ್ತ ಸವೆದು ಬಣ್ಣಗೆಟ್ಟು ಹೋಗಿದೆ; ಸೆರೆಯಲಿ=ಸೆರೆಮನೆಯಲ್ಲಿ; ವಿಹಿತವದು=ಸರಿಯಾದ ತೀರ್ಮಾ ನವಿದು; ಕೇಳು+ಎಂದು=ಕೇಳೆಂದು; ನಸುನಗುತ್ತಾ=ಮುಗುಳ್ನಗೆ ಬೀರುತ್ತಾ; ನಾರದ ನುಡಿದನು=ನಾರದನು ಹೇಳಿದನು.

ಹೌದು ಇಂದ್ರನ ತೀರ್ಮಾನ ಸರಿಯಾಗಿದೆ. ರಾಗಿಯೇ ಸಮರ್ಥಶಾಲಿ ಹಾಗೂ ಶಕ್ತಿವಂತನು, ಸೆರೆಮನೆಗೆ ಹಾಕಿದಾಗ ತನ್ನ ಹೊಳಪನ್ನು ಕಳೆದುಕೊಳ್ಳದೇ ಸಹಜವಾಗಿಯೇ ಇದೆ, ವಿರೋಧ ಪಕ್ಷವಾದ ಬತ್ತವು ಸವೆದು ಹೋಗಿ, ಬಣ್ಣವನ್ನು ಕಳೆದುಕೊಂಡಿದೆ. ಹಾಗಾಗಿ ಇದು ಸರಿಯಾದ ತೀರ್ಮಾನವಾಗಿದೆ. ಕೇಳು ರಾಜನೇ ಎಂದು ಮುಗುಳ್ನಗೆ ಬೀರುತ್ತಾ ನಾರದ ಶ್ರೀರಾಮನಿಗೆ ಹೇಳಿದನು.

ನ್ಯಾಯ ತೀರ್ಮಾನ ನೀಡಿದ್ದು ಇಂದ್ರನಾದರೆ; ಅದಕ್ಕೆ ಸರಿಯಾದ ಸಮರ್ಥನೆ ಕೊಟ್ಟದ್ದು ನಾರದರು, ಇಲ್ಲಿ ಬತ್ತ ತನ್ನ ಪರ ತೀರ್ಮಾನ ನೀಡಲಿಲ್ಲವೆಂದು ಮತ್ತೊಮ್ಮೆ ಜಗಳ ಮಾಡಬಾರದಂತೆ ಸರಿಯಾದ ಸಮರ್ಥನೆಯನ್ನು ನಾರದ ಕೊಟ್ಟನು.

ಎಲ್ಲ ನವಧಾನ್ಯದಲಿ ಈತನೆ
ಬಲ್ಲಿದನು ಹಸಿಯಲ್ಲ ಬಡವರ
ಬಲ್ಲಿದರನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ

ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ಕಾಣೆಯೆಂದನು ಕಪಿಲಮುನಿ ನಗುತ ೧೩೫

ಎಲ್ಲ ನವ ಧಾನ್ಯಗಳಲ್ಲಿ=ನವಧಾನ್ಯಗಳೆಂದು ಪರಿಗಣಿಸಿರುವ ಎಲ್ಲ ಧಾನ್ಯಗಳಲ್ಲಿ; ಈತನೆ ಬಲ್ಲಿದನು=ರಾಗಿಯೇ ಬಲಾಢ್ಯನು; ಹುಸಿಯಲ್ಲ=ಸುಳ್ಳಲ್ಲ; ಬಡವರ ಬಲ್ಲಿದನ+ಆರೈದು=ಬಡವರು ಹಾಗೂ ಶ್ರೀಮಂತರನ್ನು ಪತ್ತೆ ಹಚ್ಚಿ; ಸಲಹುವನು+ ಇವನಿಗೆ=ಕಾಪಾಡುವನು ಇವನಿಗೆ; ಸರಿಯುಂಟೆ=ಸರಿ ಸಮಾನರು ಇರುವರೇ? ನೆಲ್ಲಿನಲಿ ಗುಣವೇನು=ಬತ್ತದ ಗುಣವೆಂತಹುದು; ಭಾಗ್ಯದಿ=ಸುಖ ದಿಂದಿರುವ; ಬಲ್ಲಿದರ=ಶ್ರೀಮಂತರ; ಪತಿಕರಿಸುವನು=ಗೌರವಿಸುವನು; ಅವನಲ್ಲಿ; ಸಾರವ ಕಾಣೆನು+ಎಂದನು=ಕಪಿಲಮುನಿ ನಗುತ್ತಾ ಸತ್ವವನ್ನು ಕಾಣಲಿಲ್ಲವೆಂದನು.

ನವಧಾನ್ಯಗಳಲ್ಲಿ ರಾಗಿಯೇ ಬಲಾಢ್ಯನು. ಇದು ಸುಳ್ಳಲ್ಲ, ಬಡವರನು, ಶ್ರೀಮಂತರನು ಪತ್ತೆಹಚ್ಚಿ ಕಾಪಾಡುವನು, ಇವನಿಗೆ ಸರಿಸಮಾನರು ಉಂಟೇ? ಬತ್ತದಲ್ಲಿರುವ ಗುಣವೇನು? ಸುಖದಿಂದಿರುವ ಶ್ರೀಮಂತರನ್ನು ಕಾಪಾಡುವುದು ಅಷ್ಟೇ. ಅವನಲ್ಲಿ ಯಾವ ವಿಶಿಷ್ಟ ಶಕ್ತಿಯನ್ನು ಕಾಣಲಿಲ್ಲ ಎಂದು ಕಪಿಲಮುನಿ ನಸುನಗುತ್ತಾ ಹೇಳಿದನು.

ಇಂದ್ರನು ರಾಗಿ ಮತ್ತು ಬತ್ತದ ಬಗ್ಗೆ ಕೊಟ್ಟ ತೀರ್ಮಾನ ಯಾರೂ ಪ್ರಶ್ನಿಸದೇ ಇರುವಂತದ್ದು, ಅಂಥ ಒಳ್ಳೆಯ ತೀರ್ಮಾನವನ್ನು ನೀಡಿದ್ದಾರೆ ಎಂಬ ಮಾತನ್ನು ಹಿಂದಿನ ಪದ್ಯದಲ್ಲಿ ನಾರದರು, ಈ ಪದ್ಯದಲ್ಲಿ ಕಪಿಲಮುನಿ ಪುಷ್ಟೀ ಕರಿಸುವನು.

ಸುರಮುನಿಗಳಿಂತೆನಲು ಭೂಸುರ
ವರರು ಸಂತೋಷಿಸಲು ಸಭಿಕರು
ನರೆದಲಗ ನೀ ಬಾರೆನುತ ರಾಮನೃಪಾಲ ನೆರೆಮೆಚ್ಚಿ
ಕರೆದುಕೊಟ್ಟನು ತನ್ನ ನಾಮವ
ಧರೆಗೆ ರಾಘವನೆಂಬ ಪೆಸರಾ
ಯ್ತರದೆ ವ್ರಿಹಿ ನಾಚಿದನು ಸಭೆಯಲಿ ಶಿರವ ಬಾಗಿಸಿದ ೧೩೬

ಸುರಮುನಿಗಳು+ಇಂತೆನಲು=ದೇವತೆಗಳು ಹಾಗೂ ಮುನಿಗಳು; ಹೀಗೆಂದಾಗ; ಭೂಸುರವರರು=ಶ್ರೇಷ್ಠ ಬ್ರಾಹ್ಮಣರು; ಸಂತೋಷಿಸಲು=ಸಂತೋಷ ಪಡಲು; ಸಭಿಕರು=ಸಭೆಯವರು; ನರೆದಲೆಗ=ರಾಗಿಯೇ; ನೀ ಬಾರೆನುತ=ನೀನು ಬಾ ಎಂದು ಕರೆಯುತ್ತಾ; ರಾಮನೃಪಾಲ=ರಾಜ ಶ್ರೀರಾಮನು; ನೆರೆಮೆಚ್ಚಿ=ತುಂಬಾ ಮೆಚ್ಚಿಕೊಂಡು; ಕರೆದು ಕೊಟ್ಟನು; ತನ್ನ ನಾಮವ=ತನ್ನ ಹೆಸರನು; ಧರೆಗೆ=ಭೂಮಿಗೆ; ರಾಘವನು+ಎಂಬ=ರಾಘವ ಎಂದು; ಪೆಸರಾಯ್ತು+ಇರದೆ=ಹೆಸರಾಯಿತು ಇರಲಾಗದೇ; ವ್ರಿಹಿ=ಬತ್ತ; ನಾಚಿದನು=ನಾಚಿಕೊಂಡನು; ಸಭೆಯಲಿ ಶಿರವ ಬಾಗಿಸಿದ =ಒಡ್ಡೋಲಗದಲ್ಲಿ ತಲೆಯನ್ನು ಬಗ್ಗಿಸಿದ.

ದೇವತೆಗಳು ಹಾಗೂ ಋಷಿಮುನಿಗಳು ಹೀಗೆಂದಾಗ ಬ್ರಾಹ್ಮಣರು, ಸಭಿಕರು ಸಂತೋಷಪಟ್ಟರು, ನರೆದಲೆಗನೆ ನೀನು ಬಾ ಎಂದು ಕರೆದು ರಾಜ ಶ್ರೀರಾಮ ಮೆಚ್ಚುಗೆಯಿಂದ ತನ್ನ ಹೆಸರನ್ನು ರಾಗಿಗೆ ಕೊಟ್ಟನು, ಲೋಕದಲ್ಲಿ ರಾಘವ, ರಾಗಿ ಎಂದು ಹೆಸರಾಯಿತು. ಅವಮಾನ ತಡೆಯಲಾಗದೇ ನೆಲ್ಲು ನಾಚಿಕೆಯಿಂದ ತಲೆಯನ್ನು ತಗ್ಗಿಸಿದ.

ಈ ಮೊದಲು ಭಾರದ್ವಾಜರ ಆಶ್ರಮದಲ್ಲಿ ರಾಗಿ ನೆಲ್ಲುಗಳ ನಡುವೆ ಸಾಕಷ್ಟು ಜಗಳ ನಡೆದು ಒಬ್ಬರ ಮೇಲೊಬ್ಬರು ಪೈಪೋಟಿಗೆ ಇಳಿದು, ಈ ಜಗಳ ತೀರ್ಮಾನಿಸುವ ಸಲುವಾಗಿ ಇಬ್ಬರನ್ನು ಸೆರೆಮನೆಯಲ್ಲಿಟ್ಟಿದ್ದನ್ನು ಸ್ಮರಿಸಬಹುದು. ಅಂದು ನರೆದಲೆಗನಿಗಿಂತ ತಾನೇ ಮೇಲು ಎಂದ ನೆಲ್ಲು ಇಂದು ಯಾವುದೇ ಮಾತನ್ನಾಡದೇ ಅವಮಾನದಿಂದ ತಲೆತಗ್ಗಿಸಿದೆ.

ಹರುಷದೋರಿದ ಮನದಿ ನಲಿವುತ
ನರೆದಲೆಗನೈತಂದು ರಾಮನ
ಸಿರಿಚರಣಕಭಿನಮಿಸೆ ದೇವಾಸುರರು ಕೊಂಡಾಡೆ
ಅರಸಿ ಮುತ್ತಿನ ಸೇಸೆಯನು ಭೂ
ಸುರರು ಮಂತ್ರಾಕ್ಷತೆಯನಿತ್ತುಪ
ಚರಿಸಿದರು ರಾಗಿಯನು ಪೊಗಳಿದರಲ್ಲಿ ಮುನಿವರರು ೧೩೭

ಹರುಷದೋರಿದ ಮನದಿ=ಸಂತೋಷ ತುಂಬಿದ ಮನಸ್ಸಿನಲ್ಲಿ; ನಲಿವುತ=ನಲಿಯುತ್ತ; ನರೆದಲೆಗನು+ಐತಂದು=ರಾಗಿಯು ಬಂದು; ರಾಮನ ಸಿರಿಚರಣಕೆ+ಅಭಿನಮಿಸೆ=ಪವಿತ್ರ ಪಾದಗಳಿಗೆ ನಮಸ್ಕರಿಸಲು; ದೇವಾಸುರರು= ದೇವತೆಗಳು; ಕೊಂಡಾಡೆ=ಹೊಗಳಲು; ಹರಸಿ=ಆಶೀರ್ವದಿಸಿ; ಮುತ್ತಿನ ಸೇಸೆಯನು= ಮುತ್ತಿನ ಅಕ್ಷತೆಯನ್ನು; ಭೂಸುರರು= ಬ್ರಾಹ್ಮಣರು; ಮಂತ್ರಾಕ್ಷತೆಯನ್ನು=ಅಕ್ಷತೆ ಕಾಳನ್ನು ಇತ್ತು+ಉಪಚರಿಸಿದರು=ಇಟ್ಟು ಉಪಚಾರ ಮಾಡಿದರು; ರಾಗಿಯನ್ನು; ಮುನಿವರರು=ಋಷಿಗಳು; ಪೊಗಳಿದರು+ಅಲ್ಲಿ=ಹೊಗಳಿದರು ಅಲ್ಲಿ.

ಸಂತೋಷ ಭರಿತನಾದ ರಾಗಿಯು ನಲಿಯುತ್ತಾ ಬಂದು ಶ್ರೀರಾಮನ ಪವಿತ್ರ ಪಾದಗಳಿಗೆ ನಮಸ್ಕರಿಸಲು, ದೇವತೆಗಳು ರಾಗಿಯನ್ನು ಕೊಂಡಾಡಿ, ಆಶೀರ್ವದಿಸಿ ಮುತ್ತಿನ ಅಕ್ಷತೆಯನ್ನು ಹಾಕಿದರೆ, ಬ್ರಾಹ್ಮಣರು ಮಂತ್ರಾಕ್ಷತೆಯನ್ನು ಹಾಕಿ ಉಪಚರಿಸಿದರೆ ಮುನಿಗಳು ಹೊಗಳಿದರು.

ಏಳು ತಿಂಗಳ ಬಂಧನದ ನಂತರ ಆದ ನ್ಯಾಯತೀರ್ಮಾನದಲ್ಲಿ ರಾಗಿಗೆ ಜಯ ದೊರೆತಿದ್ದರಿಂದ ರಾಗಿಯ ಸಂತೋಷ ಅಪಾರ ಹಾಗೂ ಅದು ಎಲ್ಲರಿಂದ ಆಶೀರ್ವಾದ ಮೆಚ್ಚುಗೆಯನ್ನು ಪಡೆಯುತ್ತಿದೆ.

ಸರಸಿಜೋದ್ಭವ ಮೆಚ್ಚಿ ಕೊಟ್ಟನು
ಕರಕಮಂಡಲ ಪಾತ್ರೆಯನು ಶಂ
ಕರ ತ್ರಿಶೂಲವನಿತ್ತ ಕೊಟ್ಟನು ಕಾಲ ದಂಡವನು
ನಾರದನು ಚಕ್ರವನು ಕೊಟ್ಟನು
ಉರುತರದ ಕೂರಿಗೆಯ ವಾಸವ
ನುರಗಪತಿ ವಾಸುಗಿಗಳಿತ್ತರು ನೇಣು ಪಾಶಗಳ ೧೩೮

ಸರಸಿಜ+ಉದ್ಭವ=ತಾವರೆಯಲ್ಲಿ ಹುಟ್ಟಿದ ಬ್ರಹ್ಮ; ಮೆಚ್ಚಿಕೊಟ್ಟನು=ಉಡುಗೊರೆಯಾಗಿ ಕೊಟ್ಟನು; ಕರಕಮಂಡಲ ಪಾತ್ರೆಯನು=ಕೈಯ ಕಮಂಡಲದ ಪಾತ್ರೆಯನ್ನು; ಶಂಕರ=ಶಿವ; ತ್ರಿಶೂಲವನ್ನು+ಇತ್ತ=ತ್ರಿಶೂಲವನ್ನು ಕೊಟ್ಟ; ಕೊಟ್ಟನು; ಕಾಲ=ಯಮ; ದಂಡವನ್ನು=ಯಮದಂಡವನ್ನು; ನಾರದನು ಚಕ್ರವನ್ನು ಕೊಟ್ಟನು; ಉರುತರದ=ಶ್ರೇಷ್ಠವಾದ; ಕೂರಿಗೆಯ=ಬೀಜ ಬಿತ್ತುವ ಉಪಕರಣವನ್ನು;

ವಾಸವನು= ಇಂದ್ರನು; ಉರಗಪತಿ+ವಾಸುಗಿಗಳು=ಸರ್ಪರಾಜ ವಾಸುಕಿ; ನೇಣು ಪಾಶಗಳ=ಹಗ್ಗ ಮತ್ತು ಬಲೆಗಳನ್ನು; ಇತ್ತರು=ಕೊಟ್ಟರು.

ನ್ಯಾಯ ರಾಗಿಯ ಪರವಾಗಿ ತೀರ್ಮಾನವಾದ ತಕ್ಷಣ ಸಭೆಯಲ್ಲಿದ್ದ ದೇವತೆಗಳು ನರೆದಲೆಗನಿಗೆ ಉಡುಗೊರೆಗಳನ್ನು ಕೊಡಲಾರಂಭಿಸಿದರು. ಬ್ರಹ್ಮನು ಕಮಂಡಲ ಪಾತ್ರೆಯನ್ನು ಕೊಟ್ಟರೆ, ಶಿವ ತ್ರಿಶೂಲವನ್ನು, ಯಮ= ಯಮದಂಡವನ್ನು, ನಾರದ ಚಕ್ರವನ್ನು, ಇಂದ್ರನು ಬೀಜ ಬಿತ್ತುವ ಕೂರಿಗೆಯನ್ನು, ಸರ್ಪರಾಜನಾದ ವಾಸುಕಿ ಹಗ್ಗ ಮತ್ತು ಬಲೆಗಳನ್ನು ನೀಡಿದರು.

ರಾಗಿ ಬಡವರ ಬಂಧು, ಭೂಲೋಕದಲ್ಲಿ ಅದನ್ನು ಬೆಳೆಯಲು ಬೇಕಾದ ಸಲಕರಣೆಗಳಾದ ಪಾತ್ರೆ, ಚಕ್ರ, ನೇಗಿಲು, ದಡಿ, ಕೂರಿಗೆ, ಹಗ್ಗ, ಬಲೆ ಮುಂತಾದ ವಸ್ತುಗಳನ್ನು ಉಡುಗೊರೆಯಾಗಿ ದೇವತೆಗಳು ನೀಡುತ್ತಿರುವುದು ಅರ್ಥಪೂರ್ಣ ವಾಗಿದೆ.

ಧನದನಿತ್ತನು ಯಂತ್ರರಕ್ಷೆಯ
ಬನದೊಳಿಹ ಮೂಲಿಕೆಯ ಮಂತ್ರವ
ವಿನಯದಿಂದ ವಿಭೂತಿಯನು ವರಕಾಲಭೈರವನು
ಇನಶಶಿಗಳಾದರಿಸಿ ಕೊಟ್ಟರು
ಘನತರದ ಜಲ್ಲರಿಯ ವರುಣನು
ಕನಕಮಣಿನಿರ್ಮಿತದ ಕರಗವನಿತ್ತು ಮನವೊಲಿದು ೧೩೭

ಧನದನು+ಇತ್ತನು=ಕುಬೇರನು ಕೊಟ್ಟನು; ಯಂತ್ರರಕ್ಷೆಯ=ತಾಯತಿಯನ್ನು ಬನದೊಳಿಹ=ಅರಣ್ಯದಲ್ಲಿರುವ; ಮೂಲಿಕೆಯ=ಗಿಡಮೂಲಿಕೆಯ; ಮಂತ್ರವ= ಮಂತ್ರ ವನ್ನು; ವಿನಯದಿಂದ; ವಿಭೂತಿಯನ್ನು=ಭಸ್ಮವನ್ನು;ವರಕಾಲಭೈರವನು=ಶ್ರೇಷ್ಠ ಕಾಲ ಭೈರವನು; ಇನ+ಶಶಿಗಳು+ ಆದರಿಸಿಕೊಟ್ಟರು=ಸೂರ್ಯ ಚಂದ್ರರು ಗೌರವಿಸಿ ಕೊಟ್ಟರು; ಘನತರದ=ದೊಡ್ಡದಾದ; ಜಲ್ಲರಿಯ=ಬಿದಿರಿನ ಬುಟ್ಟಿ; ವರುಣನು= ಮಳೆರಾಯನು; ಕನಕಮಣಿ ನಿರ್ಮಿತದ=ಚಿನ್ನ ಮುತ್ತುಗಳಿಂದ ಮಾಡಿದ; ಕರಗ ವನು+ಇತ್ತು=ಕೊಡವನ್ನು ನೀಡಿದನು; ಮನವೊಲಿದು=ಮನ ಒಪ್ಪಿ.

ಕುಬೇರನು ತಾಯತಿಯನ್ನು ಅರಣ್ಯದ ಗಿಡಮೂಲಿಕೆಗಳನ್ನು, ಮಂತ್ರಗಳನ್ನು ನೀಡಿದರೆ, ಕಾಲಭೈರವನು ವಿಭೂತಿ ಭಸ್ಮವನು, ಸೂರ್ಯಚಂದ್ರರು ಘನವಾದ ಬಿದಿರಿನ ಬುಟ್ಟಿಯನ್ನು, ವರುಣನು ಚಿನ್ನ ಮುತ್ತುಗಳಿಂದ ಮಾಡಿದ ಕಳಸವನ್ನು ಕೊಟ್ಟು ನರೆದಲೆಗನನ್ನು ಗೌರವಿಸಿದರು.

ಬಡವರ ಬಂಧು, ಆರೋಗ್ಯ ಸ್ನೇಹಿ ಹಾಗೂ ದೀರ್ಘಾಯುಷಿಯಾದ ನರೆದಲೆಗನೇ ಬತ್ತಕ್ಕಿಂತ ಶ್ರೇಷ್ಠ ಎಂದು ರಾಮನ ಒಡ್ಡೋಲಗದಲ್ಲಿ ಮೆಚ್ಚುಗೆ ಪಡೆದ ನಂತರ ಎಲ್ಲಾ ದೇವತೆಗಳು ತಮ್ಮ ಬಳಿಯಿರುವ ಉಡುಗೊರೆಗಳನ್ನು ಮೆಚ್ಚುಗೆಯಾಗಿ ಮನದುಂಬಿ ನೀಡುವ ಸನ್ನಿವೇಶ.

ಕರೆಸಿದಳು ಶರ್ವಾಣಿ ತನ್ನಯ
ಮರುಳು ಬಳಗವನೆಲ್ಲ ನೀವೀ
ಧರಣಿಯಲಿ ಸತಿರೂಪತಾಳ್ದ ಗಣಿತದ ಮನೆಗಳಲಿ
ಹುರುಳು ಗೆಡಿಸದೆ ಸರ್ವಭೂತಾ
ತ್ಮರಿಗೆ ಪಕ್ವಾನ್ನವನು ನೀಡೆಂ
ದುರುತರದ ಪ್ರೇಮದಲಿ ಕಳುಹಿದಳಗಜೆ ಕರುಣದಲಿ ೧೪೦

ಕರೆಸಿದಳು ಶರ್ವಾಣಿ=ಪಾರ್ವತಿಯು ಕರೆಸಿದಳು; ತನ್ನಯ=ತನ್ನ; ಮರುಳು ಬಳಗವನೆಲ್ಲ=ಮೋಹದ ಬಳಗವಾದ ಗಣಧರೆಯರನ್ನು; ನೀವು+ಈ ಧರಣಿ ಯಲಿ= ನೀವು ಈ ಭೂಮಿಯಲ್ಲಿ; ಸತಿರೂಪ+ತಾಳ್ದು+ಅಗಣಿತ=ಹೆಣ್ಣಾಗಿ ಹುಟ್ಟಿ ಎಲ್ಲಾ; ಮನೆಗಳಲ್ಲಿ; ಹುರುಳುಗೆಡಿಸದೇ=ಸತ್ವವನ್ನು ನಾಶಪಡಿಸದೇ; ಸರ್ವ ಭೂತಾತ್ಮರಿಗೆ= ಸಕಲ ಜೀವಾತ್ಮರಿಗೆ; ಪಕ್ವಾನ್ನವನು= ರುಚಿಯಾದ ಭಕ್ಷ್ಯವನು; ನೀಡೆಂದು+ ಉರುತರದ=ಕೊಡಿ ಎಂದು ಅತಿಯಾದ; ಪ್ರೇಮದಲಿ=ಪ್ರೀತಿಯಿಂದ; ಅಗಜೆ= ಬೆಟ್ಟ ದಲ್ಲಿ ಹುಟ್ಟಿದ ಗಿರಿಜೆ; ಕರುಣದಲಿ=ಕರುಣೆಯಿಂದ ಕಳುಹಿಸಿದಳು.

ಪಾರ್ವತಿಯು ತನ್ನ ಪ್ರೀತಿಯ ಬಳಗವಾದ ಗಣಧರೆಯರನ್ನೆಲ್ಲಾ ಕರೆಸಿ, ನೀವೆಲ್ಲಾ ಭೂಲೋಕದ ಅಸಂಖ್ಯಾತ ಮನೆಗಳಲ್ಲಿ ಹೆಣ್ಣಾಗಿ ಹುಟ್ಟಿ, ಆಹಾರದ ಸತ್ವವನ್ನು ಹಾಳು ಮಾಡದೇ ಎಲ್ಲಾ ಜೀವರಾಶಿಗಳಿಗೂ ರುಚಿರುಚಿಯಾದ ಭಕ್ಷ್ಯಗಳನ್ನು

ತಯಾರಿಸಿ ಜೀವಿಗಳ ಬಲವನ್ನು ಹೆಚ್ಚಿಸಬೇಕೆಂದು ಅತಿಯಾದ ಪ್ರೀತಿಯಿಂದ ಕಳುಹಿಸಿದಳು.

ಭೂಲೋಕದಲ್ಲಿ ಅಡುಗೆ ಮನೆಯ ಜವಾಬ್ದಾರಿಯನ್ನು ಹೆಣ್ಣು ಮಕ್ಕಳೇ ನಿರ್ವಹಿಸಲು ಕಾರಣ ಗಿರಿಜೆ, ಗಿರಿಜೆ ತನ್ನ ಗಣಧರೆಯರನ್ನು ಭೂಲೋಕಕ್ಕೆ ಕಳುಹಿಸಿ ಅಡುಗೆ ಮಾಡಲು ಹೇಳಿದ್ದಾಳೆಂಬ ದಂತಕಥೆಯನ್ನು ಕನಕದಾಸರು ಇಲ್ಲಿ ಕಟ್ಟಿದ್ದಾರೆ.

ಈತರದಿ ದೇವಾಸುರರು ನವ
ನೀತಿಮಾರ್ಗದಿ ಕರೆದು ವರಗಳ
ಪ್ರೀತಿಯಿಂದಾದರಿಸಿ ಕೊಟ್ಟರನೇಕ ವಿಭವದಲಿ
ಭೂತಳದ ಜನರೊಡನೆ ನೀ ಪ್ರ
ಖ್ಯಾತನಾಗೆನೆ ನರೆದಲೆಗ ನೆರೆ
ವಾತನಾದನು ಮರ್ತ್ಯದಲಿ ನರನಾಥ ಕೇಳೆಂದ ೧೪೧

ಈ ತೆರದಿ=ಈ ರೀತಿ; ದೇವಾಸುರರು=ದೇವತೆಗಳು; ನವನೀತಿ ಮಾರ್ಗದಿ= ನವೀನ ರೀತಿಯಲ್ಲಿ; ಕರೆದು; ವರಗಳ=ವರಗಳನ್ನು; ಪ್ರೀತಿಯಿಂದ; ಆದರಿಸಿ= ಗೌರವಿಸಿ; ಕೊಟ್ಟರು+ಅನೇಕ ವಿಭವದಲಿ=ಕೊಟ್ಟರು ಹೆಚ್ಚಿನ ವೈಭವದಿಂದ; ಭೂತ ಳದ=ಭೂಲೋಕದ; ಜನರೊಡನೆ ನೀ; ಪ್ರಖ್ಯಾತನಾಗು+ಎನೆ=ಪ್ರಸಿದ್ಧಿಯನ್ನು ಪಡೆ ಎಂದಾಗ; ನರೆದಲೆಗ=ರಾಗಿಯು; ನೆರೆವಾತನಾದನು ಮರ್ತ್ಯದಲಿ=ಭೂಲೋಕದ ಜನರಿಗೆ ಹೆಚ್ಚು ಸಮೀಪವರ್ತಿಯಾದನು; ನರನಾಥ=ಯುಧಿಷ್ಠಿರ; ಕೇಳೆಂದ=ಕೇಳು ಎಂದರು ಶಾಂಡಿಲ್ಯಮುನಿ.

ಹೀಗೆ ದೇವತೆಗಳು ಗೌರವ ಪ್ರೀತಿಯಿಂದ ಕರೆದು ಅನೇಕ ವಿಧಗಳಲಿ ವರಗಳನ್ನು ದಯಪಾಲಿಸಿದರು ಹಾಗೂ ಭೂಲೋಕದಲ್ಲಿ ನೀನು ಪ್ರಖ್ಯಾತನಾಗು ಎಂದೆನಲು, ಅದರಂತೆ ರಾಗಿಯು ಭೂಲೋಕದ ಜನರಿಗೆ ಹೆಚ್ಚು ಸಮೀಪ ವರ್ತಿಯಾದ, ಕೇಳು ಯುಧಿಷ್ಠಿರ ಎಂದರು ಶಾಂಡಿಲ್ಯಮುನಿಗಳು.

ಹಿಂದಿನ ಪದ್ಯದಲ್ಲಿ ಹೆಣ್ಣು ಮಕ್ಕಳು ಹೇಗೆ ಅಡುಗೆ ಕಾರ್ಯಕ್ಕೆ ನಿಯೋಜಿಸಲ್ಪಟ್ಟರು ಎಂಬುದಕ್ಕೆ ಕನಕದಾಸರು ಕಾರಣವನ್ನು ತಿಳಿಸಿದರೆ ಈ ಪದ್ಯದಲ್ಲಿ

ರಾಗಿಯು ಭೂಲೋಕದ ಜನರಿಗೆ ಹೇಗೆ ಹೆಚ್ಚು ಸಮೀಪವರ್ತಿಯಾದ ಎಂಬುದರ ಕಾರಣಗಳನ್ನು ತಿಳಿಸಿದ್ದಾರೆ.

ಇನಕುಲೇಂದ್ರನ ಪದಕೆ ವಂದಿಸಿ
ಹನುಮ ಬಿನ್ನೈಸಿದನು ನೀವಾ
ತನಿಗೆ ನಾಮಾಂಕಿತವನಿತ್ತಿರಿ ನಿಮ್ಮನಗಲುವೆನೆ
ಎನಗೆ ಹದನೆಂತೆನಲು ನಸುನಗೆ
ಮಿನುಗೆ ನುಡಿದನು ರಾಮನಿದ್ದೆಡೆ
ನಿನಗೆ ನಿನ್ನಭಿಧಾನವಾಗಲು ಹನುಮ ಕೇಳೆಂದ ೧೪೨

ಇನ+ಕುಲ+ಇಂದ್ರನ=ಸೂರ್ಯವಂಶದ ಇಂದ್ರನೆನಿಸಿದ ಶ್ರೀರಾಮ; ಪದಕೆ= ಪಾದಕ್ಕೆ; ವಂದಿಸಿ=ನಮಸ್ಕರಿಸಿ; ಹನುಮ=ಹನುಮಂತ; ಬಿನ್ನೈಸಿದನು= ಕೇಳಿ ಕೊಂಡನು; ನೀವು+ಆತನಿಗೆ=ನೀವು ರಾಗಿಗೆ; ನಾಮಾಂಕಿತವನ್ನು+ ಇತ್ತಿರಿ= ಹೆಸರನ್ನು ಕೊಟ್ಟಿರಿ; ನಿಮ್ಮನು+ಅಗಲುವೆ+ಎನೆ=ನಿಮ್ಮನ್ನು ಅಗಲುವ ಸಂದರ್ಭದಲ್ಲಿ; ಎನಗೆ=ನನ್ನ; ಹದನೆಂತು+ಎನಲು=ಸ್ಥಿತಿ ಹೇಗೆ ಎನಲು; ನಸುನಗೆ ಮಿನುಗೆ= ಮುಗುಳ್ನಗೆಯಿಂದ; ನುಡಿದನು; ರಾಮನು+ಇದ್ದ+ಎಡೆ=ರಾಮನಿದ್ದ ಕಡೆ; ನಿನಗೆ; ನಿನ್ನ+ ಅಭಿಧಾನವಾಗಲಿ ಹನುಮ=ನಿನ್ನ ಹೆಸರು ಪ್ರಸ್ತಾಪವಾಗಲಿ ಹನುಮ; ಕೇಳೆಂದ =ಕೇಳಿಸಿಕೋ ಎಂದ ಶ್ರೀರಾಮ.

ಸೂರ್ಯವಂಶದ ಇಂದ್ರನೆನಿಸಿದ ಶ್ರೀರಾಮನ ಪಾದಕ್ಕೆ ನಮಸ್ಕರಿಸಿ, ಹನುಮ ಹೀಗೆ ಕೇಳುತ್ತಾನೆ. "ನರೆದಲಗನಿಗೆ ನಿಮ್ಮ ಹೆಸರನ್ನು ನೀಡಿದಿರಿ. ಅವನು ಸಂತೋಷದಿಂದ ಭೂಲೋಕದಲ್ಲಿ ಪ್ರಖ್ಯಾತನಾಗುವನು. ನನ್ನ ಸ್ಥಿತಿ ಏನು?" ಎಂದಾಗ ಶ್ರೀರಾಮನು ನಸುನಗುತ್ತಾ ರಾಮನಿರುವ ಎಡೆಯಲ್ಲೆಲ್ಲಾ ಅಂದರೆ ನಾನಿರುವ ಕಡೆಯೆಲ್ಲಾ ನಿನ್ನ ಹೆಸರೂ ಪ್ರಖ್ಯಾತವಾಗಲಿ ಹನುಮ ಎಂದು ಹೇಳಿದ.

ನರೆದಲೆಗನಿಗೆ 'ರಾಘವ' 'ರಾಗಿ' ಎಂಬ ಅಭಿದಾನವನ್ನು ನೀಡಿ ಅದೇ ಹೆಸರಿನಲ್ಲಿ ಭೂಲೋಕದಲ್ಲಿ ಅದು ಪ್ರಖ್ಯಾತವಾದರೆ; ರಾಮನ ಮಾತಿನಂತೆ 'ರಾಮನಿದ್ದೆಡೆ ಹನುಮ' ಎಂಬ ಮಾತು ಭೂಲೋಕದಲ್ಲಿ ಜನಜನಿತವಾಗಿದೆ.

ಸೇವಕನ ಹಿಂದುಳಿದು ದೇವರು
ನೀವು ಮುಂದಡಿಯಿಡಲು ನಿಮ್ಮ ದ
ದಾವಗುಣವೆನೆ ಹನುಮನಾಡಿದ ನುಡಿಗೆ ನಸುನಗುತ
ನಾವು ಜನನದಿ ಮುಂದು ಕಲಹದ
ಠಾವಿನಲಿ ನಾ ಮುಂದೆ ನಡೆಯೆಂ
ದೀ ವಿಚಾರವ ತಿಳುಹಿದನು ನರನಾಥನನಿಲಜಗೆ ೧೪೩

ಸೇವಕನ ಹಿಂದುಳಿದು=ಸೇವಕನ ಹಿಂದೆ ಉಳಿದು; ದೇವರು ನೀವು=ದೇವರಾದ ನೀವು; ಮುಂದೆ ಅಡಿಯಿಡಲು=ಮುಂದೆ ಹೆಜ್ಜೆ ಇಡಲು; ನಿಮ್ಮದು+ಅದಾವ=ನಿಮ್ಮದು ಅದೆಂತಹ; ಗುಣವು+ಎನೆ=ಗುಣ ಎಂದಾಗ; ಹನುಮನು+ಆಡಿದ=ಹನುಮ ಹೇಳಿದ; ನುಡಿಗೆ=ಮಾತಿಗೆ; ನಸುನಗುತ=ಕಿರುನಗೆ ಬೀರುತ್ತಾ; ನಾವು ಜನನದಿ ಮುಂದು=ನಾವು ವಯಸ್ಸಿನಲ್ಲಿ ಹಿರಿಯರು; ಕಲಹದ=ಯುದ್ಧದ; ಠಾವಿನಲಿ=ಸ್ಥಳದಲ್ಲಿ; ನಾಮುಂದೆ; ನಡೆ+ಎಂದು+ಈ=ಮುಂದೆ ನಡೆ ಎಂದು ಈ; ವಿಚಾರವ+ ವಿಷಯವನ್ನು. ನರನಾಥನು+ಅನಿಲಜಗೆ=ಶ್ರೀರಾಮನು ಹನುಮನಿಗೆ; ತಿಳುಹಿದನು=ತಿಳಿಸಿದನು.

ಸೇವಕನ ಹಿಂದೆ ದೇವರಾದ ನೀವು ಉಳಿದು, ಭಕ್ತರನ್ನು ಮುಂದೆ ಬಿಡುವುದು ಇದು ಎಂಥಹ ಗುಣ ನಿಮ್ಮದು, ಎಂದು ಹನುಮನಾಡಿದ ಮಾತಿಗೆ ಶ್ರೀರಾಮನು ಕಿರುನಗೆ ಬೀರುತ್ತಾ "ನಾವು ಜನನದಿ ಅಂದರೆ ವಯಸ್ಸಿನಲ್ಲಿ ಮುಂದೆ ಹಾಗೂ ಯುದ್ಧ ಸಂದರ್ಭದಲ್ಲಿ ನಾವು ಮುಂದೆ ಉಳಿದಂತೆ ಭಕ್ತರು ಮುಂದೆ ನಾನು ಅವರ ಹಿಂದೆ" ಎಂದು ಶ್ರೀರಾಮ ಹೇಳಿದ.

ವಿಜಯದಾಸರ 'ಭಕ್ತರು ಮುಂದೆ ನಾನು ಅವರ ಹಿಂದೆ' ಎಂಬ ಕೀರ್ತನೆಯನ್ನು ಇಲ್ಲಿ ಸ್ಮರಿಸಬಹುದು. ಭಕ್ತರು ದೇವರಿಗೆ ಎಷ್ಟು ಪ್ರಾಶಸ್ತ್ಯವನ್ನು ನೀಡುತ್ತಾರೆಯೋ ಅಷ್ಟೇ ಪ್ರಾಶಸ್ತ್ಯವನ್ನು ದೇವರು ಭಕ್ತನಿಗೂ ನೀಡುವುದನ್ನು ಕಾಣುತ್ತೇವೆ.

ಭಾನುವಂಶಜನಾ ವಿಭೀಷಣ
ನಾನನವನೀಕ್ಷಿಸಲು ನಸುನಗು

ತಾ ನರೇಂದ್ರನ ಸನ್ನೆಯಲಿ ನಿಷ್ಠವಕವನ ಕರೆದು
ದಾನವೇಶ್ವರನಾ ಸತಿಗೆ ಸು
ಮ್ಮಾನದಿಂ ಕೊಡಲೀರ್ವರು ನವ
ಧಾನ್ಯದಲಿ ವಿಖ್ಯಾತರಾದರು ನೃಪತಿ ಕೇಳೆಂದ ೧೪೪

ಭಾನುವಂಶಜನು+ಆ=ರವಿಕುಲದ ಶ್ರೀರಾಮನು ಆ; ವಿಭೀಷಣನ+ ಆನನವನು+ಈಕ್ಷಿಸಲು=ವಿಭೀಷಣನ ಮುಖವನ್ನು ಗಮನಿಸಲು; ನಸುನಗುತ್ತಾ; ನರೇಂದ್ರನ =ಶ್ರೀರಾಮನ; ಸನ್ನೆಯಲಿ=ಸಂಜ್ಞೆಯಲಿ; ನಿಷ್ಠವಕೆ+ಅವನ ಕರೆದು=ಸನಿಹಕೆ ಅವನ ಕರೆದು; ದಾನ ವೇಶ್ವರನ+ ಆ=ವಿಭೀಷಣನ ಆ; ಸತಿಗೆ=ಹೆಂಡತಿಗೆ; ಸುಮ್ಮನದಿಂ= ಸಂತೋಷದಿಂದ; ಕೊಡಲು+ ಈರ್ವರು=ಕೊಡಲು ಇಬ್ಬರೂ; ನವಧಾನ್ಯದಲಿ= ನವಧಾನ್ಯಗಳಲ್ಲಿ; ವಿಖ್ಯಾತರಾದರು=ಪ್ರಸಿದ್ಧಿ ಪಡೆದರು; ನೃಪತಿ=ರಾಜ ಯುಧಿಷ್ಠಿರನೇ; ಕೇಳೆಂದ=ಕೇಳು ಎಂದ.

''ಸೂರ್ಯವಂಶದ ಶ್ರೀರಾಮನು ವಿಭೀಷಣನ ಮುಖವನ್ನು ಗಮನಿಸಿ ನಸುನಗುತ್ತಾ ಸನ್ನೆಯಲಿ ಹತ್ತಿರಕ್ಕೆ ಕರೆದು ವಿಭೀಷಣನ ಪತ್ನಿಗೆ ಸಂತೋಷದಿಂದ ಉಡುಗೊರೆಗಳನ್ನು ಕೊಟ್ಟನು. ಅನಂತರ ರಾಗಿ ಮತ್ತು ಬತ್ತ ಭೂಲೋಕಕ್ಕೆ ಹೋಗಿ ಅಲ್ಲಿ ವಿಖ್ಯಾತರಾದರು. ಯುಧಿಷ್ಠಿರ ಕೇಳು'' ಎಂದ ಶಾಂಡಿಲ್ಯಮುನಿ.

ಸಭೆ ಮುಗಿದ ಬಳಿಕ ಶ್ರೀರಾಮನು ಯಥೋಚಿತವಾದ ಉಡುಗೊರೆಗಳನ್ನು ಕೊಡುವ ಸಂದರ್ಭದಲ್ಲಿ ವಿಭೀಷಣನ ಕುಟುಂಬವನ್ನು ಗೌರವಿಸುವ ಸಂದರ್ಭ.

ಹರಿಹರ ಬ್ರಹ್ಮಾದಿ ದೇವಾ
ಸುರರು ಮಹಾಮುನೀಶ್ವರರು ವಾ
ನರರು ಕೊಂಡಾಡಿದರು ರಘುಕುಲ ಸಾರ್ವಭೌಮನನು
ಸುರರು ದುಂದುಭಿ ಮೊಳಗೆ ಮಲ್ಲಿಗೆ
ಯರಳ ಮಳೆಗರೆದವು ವಿಮಾನದಿ
ಪುರಕೆ ತೆರಳಿದರಲ್ಲಿಹರದುವೆ ನೃಪತಿಯಾಸ್ಥಾನ ೧೪೫

ಹರಿಹರ ಬ್ರಹ್ಮ+ಆದಿ=ಹರಿ; ಹರ; ಬ್ರಹ್ಮ ಮೊದಲಾದ; ದೇವಾಸುರರು= ದೇವತೆಗಳು; ಮಹಾಮುನೀಶ್ವರರು=ಮಹಾಮುನಿಗಳು; ವಾನರರು= ಕಪಿಗಳು; ಕೊಂಡಾ ಡಿದರು=ಹೊಗಳಿದರು; ರಘುಕುಲ=ರಘುವಂಶದ; ಸಾರ್ವ ಭೌಮನ= ಚಕ್ರವರ್ತಿಯನ್ನು; ಸುರರು=ದೇವತೆಗಳು; ದುಂದುಭಿ ಮೊಳಗೆ=ದುಂದುಭಿ ಯನ್ನು ಬಾರಿಸಿ ಮಲ್ಲಿಗೆಯ+ಅರಳ=ಮಲ್ಲಿಗೆ ಮೊಗ್ಗು; ಮಳೆಗರೆದವು=ಮಳೆಯಂತೆ ಸುರಿದವು; ವಿಮಾನದಿ=ವಿಮಾನದಲ್ಲಿ; ಪುರಕೆ ತೆರಳಿದರು+ಅಲ್ಲಿ=ನಗರಕ್ಕೆ ಹೋದರು; ಅಲ್ಲಿ; ನೃಪತಿಯ+ಆಸ್ಥಾನ=ರಾಜನ ಆಸ್ಥಾನ; ಹರದುದು=ತುಂಬಿ ಹರಿಯಿತು.

ಹರಿಹರ ಬ್ರಹ್ಮ ಮುಂತಾದ ದೇವತೆಗಳು, ಮಹಾಮುನಿಗಳು ಕಪಿಗಳು ಎಲ್ಲರೂ ರಘುಕುಲದ ಚಕ್ರವರ್ತಿಯಾದ ಶ್ರೀರಾಮನನ್ನು ಕೊಂಡಾಡಿದರು, ದೇವತೆಗಳು ದುಂದುಭಿಯನ್ನು ಬಾರಿಸಿದಾಗ, ಮಲ್ಲಿಗೆ ಮೊಗ್ಗುಗಳ ಮಳೆ ಸುರಿಯಿತು. ಶ್ರೀರಾಮ ವಿಮಾನದಲ್ಲಿ ನಗರಕ್ಕೆ ತೆರಳಿದರು. ರಾಜನ ಆಸ್ಥಾನ ಅಲ್ಲಿ ತುಂಬಿ ಹರಿಯಿತು.

ಕಥಾನಾಯಕನಾದ ರಘುರಾಮನ ಮೇಲೆ ಕವಿಗೆ ಎಲ್ಲಿಲ್ಲದ ಪ್ರೀತಿ. ಹಾಗಾಗಿ ದೇವತೆಗಳು, ಋಷಿಮುನಿಗಳು ಎಲ್ಲರಿಂದಲೂ ಕಥಾನಾಯಕನನ್ನು ಹೊಗಳಿಸಿ ದೇವತೆಗಳಿಂದ ಮಲ್ಲಿಗೆಯ ಮಳೆಯನ್ನು ಶ್ರೀರಾಮನ ಮೇಲೆ ಸುರಿಸುವರು.

ಇಂತು ಸಭೆಯಲಿ ಮಾನಭಂಗವ
ದೆಂತು ಬಂದುದು ತನಗೆನುತಲತಿ
ಚಿಂತೆಯಲಿ ಕಡುನೊಂದು ತಲೆಗುತ್ತಿದನು ನೀರೊಳಗೆ
ಇಂತು ಪರಿತಾಪದಲಿ ಲಕ್ಷ್ಮೀ
ಕಾಂತ ಶಿವಶಿವಯೆನುತಲಿರೆ ಭೂ
ಕಾಂತ ದಶರಥರಾಮನಾಥನು ಕರೆದು ಲಾಲಿಸಿದ ೧೪೬

ಇಂತು ಸಭೆಯಲಿ=ಹೀಗೆ ಸಭೆಯಲ್ಲಿ; ಮಾನಭಂಗವ+ ಅದೆಂತು= ಅವಮಾನ ಅದು ಹೇಗೆ; ಬಂದುದು=ಆಯಿತು; ತನಗೆ+ಎನುತಲಿ+ಅತಿ ಚಿಂತೆ ಯಲ್ಲಿ=ನನಗೆ ಎನ್ನುತ್ತಾ ಅತಿ ಚಿಂತೆಯಯಿಂದ; ಕಡುನೊಂದು=ತುಂಬಾ ನೊಂದು

ಕೊಂಡು; ತಲೆ+ಕುತ್ತಿದನು=ತಲೆ ತಗ್ಗಿಸಿದನು; ನೀರೊಳಗೆ; ಇಂತು=ಹೀಗೆ; ಪರಿತಾಪದಲಿ=ಅತಿಯಾದ ದುಃಖದಲಿ; ಲಕ್ಷ್ಮೀಕಾಂತ=ವಿಷ್ಣು; ಶಿವ ಶಿವ+ಎನುತಲಿ+ಇರೆ=ಶಿವಶಿವ ಎನ್ನುತ್ತಿರಲು; ಭೂಕಾಂತ=ಭೂಮಿಯ ಒಡೆಯ; ದಶರಥ ರಾಮನಾಥನು=ದಶರಥ ರಾಜನ ಮಗನಾದ ಶ್ರೀರಾಮನು ಕರೆದು ಲಾಲಿಸಿದ=ಕರೆದು ಸಮಾಧಾನ ಪಡಿಸಿದ.

ಸಭೆಯಲ್ಲಿ ಆದಂತಹ ಅವಮಾನವನ್ನು ವ್ರೀಹಿ ಹೇಗೆ ತಾನೆ ಸಹಿಸಲು ಸಾಧ್ಯ. ತನಗೇಕೆ ಇಷ್ಟೊಂದು ಅವಮಾನವಾಯಿತು. ಈ ಸಭೆಯಲ್ಲಿ ಎನ್ನುತ್ತಾ ಚಿಂತೆಗೀಡಾಗಿ ಅತಿಯಾಗಿ ನೊಂದುಕೊಂಡು ಬಂದ ಕೋಪ ಶಮನ ಮಾಡಿಕೊಳ್ಳಲು ನೀರಿನಲ್ಲಿ ತಲೆತಗ್ಗಿಸಿದನು. ಇದನ್ನು ಕಂಡ ವಿಷ್ಣುವು ಶಿವ ಶಿವಾ ಎಂದು ಚಡಪಡಿಸುತ್ತಿರುವಾಗ, ಭೂಪಾಲಕನು ಹಾಗೂ ದಶರಥರಾಜನ ಮಗನೂ ಆದ ಶ್ರೀರಾಮನು ಬತ್ತವನ್ನು ಕರೆದು ಸಮಾಧಾನ ಪಡಿಸಿದ.

ರಾಮನಿಗೆ ಕರುಣಾಸಾಗರ; ಕರುಣಾನಿಧಿ ಎಂಬೆಲ್ಲಾ ವಿಶೇಷಣಗಳು ಇಲ್ಲಿ ಅನ್ವರ್ಥವಾಗಿವೆ. ಸಭೆಯಲ್ಲಿ ಅವಮಾನಿತವಾದ ಬತ್ತವನ್ನು ಅಲ್ಲಿದ್ದವರಾರೂ ಗಮನಿಸಲಿಲ್ಲ. ಅತ್ಯಂತ ಅವಮಾನಿತನಾದ ಬತ್ತವನ್ನು ಗುರುತಿಸಿ ಅದಕ್ಕೂ ಸಮಾಧಾನ ಪಡಿಸುವುದು ರಾಮನ ವಿಶೇಷ ಗುಣ.

ಮರುಳೆ ಬಾರೈ ವ್ರಿಹಿಯೆ ಮನದಲಿ
ಕೊರಗಿ ಚಿಂತಿಸಲೇಕೆ ನಾವೀ
ನರೆದಲೆಗನತಿಶಯವ ಮಾಡಿದೆವೆಂದು ಕನಲಿದೆಯ
ಧರೆಗೆ ಹೊದ್ದಿದ. ಕ್ಷಾಮಕಾಲದಿ
ಕರುಣದಿಂ ನಡೆತಂದು ಲೋಕವ
ಹೊರೆವನದು ಕಾರಣವೆ ಪತಿಕರಿಸಿದೆವು ಕೇಳೆಂದ ೧೪೭

ಮರುಳೆ=ತಿಳಿಗೇಡಿ; ಬಾರೈ ವ್ರಿಹಿಯೆ=ಬಾರಯ್ಯ ಬತ್ತವೇ; ಮನದಲಿ ಕೊರಗಿ=ಮನಸ್ಸಿನಲ್ಲೇ ಕೊರಗಿ; ಚಿಂತಿಸಲು+ ಏಕೆ=ಚಿಂತಿಸುವುದೇಕೆ; ನಾವು+ಈ+ನರೆದಲೆಗನ+ಅತಿಶಯವ=ನಾವು ಈ ರಾಗಿಯನ್ನು ಪ್ರಖ್ಯಾತಿ; ಮಾಡಿದೆವೆಂದು; ಕನಲಿದೆಯ=ಕೋಪಗೊಂಡೆಯಾ; ಧರೆಗೆ=ಭೂಲೋಕಕ್ಕೆ; ಹೊದ್ದಿದ=ಆವರಿಸಿದ; ಕ್ಷಾಮ

ಕಾಲದಿ=ಬರಗಾಲದಲ್ಲಿ; ಕರುಣದಿಂ= ಕರುಣೆಯಿಂದ; ನಡೆತಂದು=ನಡೆದು ಕೊಂಡು; ಲೋಕವ=ಲೋಕವನ್ನು; ಹೊರೆವನು+ಅದುಕಾರಣವೆ=ಕಾಪಾಡಿದ ಆ ಕಾರಣದಿಂದ; ಪತಿಕರಿಸಿದೆವು=ಹೊಗಳಿದೆವು; ಕೇಳೆಂದ=ಕೇಳು ಎಂದ ಶ್ರೀರಾಮ.

ಬುದ್ಧಿಗೇಡಿ ಬತ್ತವೇ ಬಾರಯ್ಯ, ಮನದಲ್ಲಿ ಏಕೆ ಕೊರಗುತ್ತಿರುವೆ, ಚಿಂತಿಸುತ್ತಿರುವೆ, ನಾವು ರಾಗಿಯನ್ನು ಕೊಂಡಾಡಿದೆವೆಂದು ಕೋಪಗೊಂಡೆಯಾ, ಭೂಲೋಕದಲ್ಲಿ ಭೀಕರ ಕ್ಷಾಮ ಉಂಟಾದಾಗ ಕರುಣೆಯಿಂದ ಲೋಕವನ್ನು ಕಾಪಾಡಿದ ಕಾರಣಕ್ಕೆ ರಾಗಿಯನ್ನು ಹೊಗಳಿದೆವು ಕೇಳು ಎಂದು ಶ್ರೀರಾಮ ಬತ್ತವನ್ನು ಸಮಾಧಾನಪಡಿಸಿದರು.

ಶ್ರೀರಾಮನ ತೀರ್ಮಾನ ಸದಾ ನ್ಯಾಯಪರವಾದದ್ದು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಜನ ಸಾಮಾನ್ಯರಿಗೆ ಯಾರು ಕರುಣೆ ತೋರುವರೋ ಅವರ ಪರ ರಾಮ; ಆದರೂ ಬತ್ತಕ್ಕೂ ಸಮಾಧಾನ ಹೇಳುತ್ತಾ ನೀನು ಜನಸಾಮಾನ್ಯರಲ್ಲಿ ನಿರ್ದಯನೆಂದಷ್ಟೇ ನಿನ್ನನ್ನು ನಿರಾಕರಿಸಿದೆವು ಎಂದು ಬತ್ತದ ತಪ್ಪನ್ನು ರಾಮ ಮನವರಿಕೆ ಮಾಡಿದ.

ದೀನರಲಿ ದಾರಿದ್ರ್ಯ ಜನರಲಿ
ನೀನು ನಿರ್ದಯನೆಂದೆವಲ್ಲದೆಶ
ಹೀನಗಳೆದವರಲ್ಲ ನಿನ್ನನು ನಾವು ಸಭೆಯೊಳಗೆ
ಮಾನುಷನು ನಮ್ಮೆಡೆಗೆ ನೀ ಸುರ
ಧೇನುವಿಗೆ ಸಮ ನಿನ್ನ ಚಿತ್ತದಿ
ಹಾನಿದೋರಲದೇಕೆ ಬಿಡು ಬಿಡು ಚಿಂತೆ ಯಾಕೆಂದ ೧೪೮

ದೀನರಲಿ=ಅಮಾಯಕರಲಿ; ದಾರಿದ್ರ ಜನದಲಿ=ಬಡ ಜನರಲ್ಲಿ; ನೀನು; ನಿರ್ದಯನು+ಎಂದೆವು+ಅಲ್ಲದೆ=ಕರುಣೆ ತೋರದವನು ಎಂದೆವು ಅಷ್ಟೇ; ಹೀನ ಗಳೆದವರು+ಅಲ್ಲ=ಹೀಯಾಳಿಸಲಿಲ್ಲ; ನಿನ್ನನು ನಾವು ಸಭೆಯೊಳಗೆ; ಮಾನುಷನು= ಜನ ಸಾಮಾನ್ಯರು; ನಮ್ಮೆಡೆಗೆ=ನಮ್ಮಕಡೆಗೆ; ನೀ=ನೀನು; ಸುರಧೇನುವಿಗೆ= ಕಾಮಧೇನುವಿಗೆ; ಸಮ; ನಿನ್ನ ಚಿತ್ತದಿ=ನಿನ್ನ ಮನಸ್ಸಿನಲ್ಲಿ; ಹಾನಿದೋರಲು+

ಅದೇಕೆ=ಅಘಾತ ಮಾಡಿಕೊಳ್ಳುವುದೇಕೆ? ಬಿಡುಬಿಡು=ಬಿಟ್ಟು ಬಿಡು; ಚಿಂತೆ ಯಾಕೆಂದ =ಯಾಕೆ ಚಿಂತಿಸುವೆ ಎಂದು ರಾಮ ಬತ್ತವನ್ನು ಪ್ರಶ್ನಿಸಿದ.

“ನಿರ್ಗತಿಕರು ಹಾಗೂ ಬಡವರಲ್ಲಿ ನೀನು ಕರುಣೆ ತೋರುವುದಿಲ್ಲ ಎಂದು ಹೇಳಿದೆವಷ್ಟೇ, ಅದಲ್ಲದೇ ನಿನ್ನನ್ನು ನಾವು ಸಭೆಯಲ್ಲಿ ಅವಮಾನಿಸಲಿಲ್ಲ, ಸಾಮಾನ್ಯ ಮನುಷ್ಯರು ನಮ್ಮ ಕಡೆಗೆ, ನೀನು ಕಾಮಧೇನುವಿಗೆ ಸಮ. ನಿನ್ನ ಮನಸ್ಸನ್ನು ಘಾಸಿಗೊಳಿಸಿಕೊಳ್ಳದೇ ನಿಶ್ಚಿಂತೆಯಿಂದ ಇರು, ಎಂದು ರಾಮ ಬತ್ತವನ್ನು ಸಮಾಧಾನ ಪಡಿಸಿದ.

ಎಲ್ಲರನ್ನು ಸಭೆಗೆ ಸೇರಿಸಿ ರಾಗಿ ಮತ್ತು ಬತ್ತದ ನ್ಯಾಯವನ್ನು ಇತ್ಯರ್ಥ ಗೊಳಿಸಿದ ಮೇಲೂ ರಾಮ ಅವಮಾನಿತವಾದ ಬತ್ತವನ್ನು ಸಮಾಧಾನ ಗೊಳಿಸುವ ಪರಿ ಅನನ್ಯವಾಗಿದೆ.

ದೇವರಿಗೆ ಪರಮಾನ್ನ ನೀ ಮನು
ಜಾವಳಿಗೆ ಪಕ್ವಾನ್ನಮೀತನು
ನೀವು ಧರೆಯೊಳಗಿಬ್ಬರತಿ ಹಿತದಲ್ಲಿ ನೀವಿಹುದು
ನಾವು ಕೊಟ್ಟೆವು ವರವ ಸಲ್ಲುವು
ದಾವ ಕಾಲದಲಿನ್ನು ನೀವೇ
ಪಾವನರು ಪರಮಸುಖಿಯೆಂದುಪಚರಿಸಿದನು ನೃಪತಿ ೧೪೪

ದೇವರಿಗೆ; ಪರಮಾನ್ನ ನೀ=ನೀನು ಶ್ರೇಷ್ಠವಾದ ಅನ್ನ; ಮನುಜಾವಳಿಗೆ= ಮನುಷ್ಯರಿಗೆ; ಪಕ್ವಾನ್ನವು+ಈತನು=ಹಿತವಾದ ಆಹಾರ ಈತನು; ನೀವು; ಧರೆ ಯೊಳಗೆ+ಇಬ್ಬರು+ಅತಿ=-ಭೂಮಿಯಲ್ಲಿ ಇಬ್ಬರೂ ಹೆಚ್ಚಿನ; ಹಿತದಲಿ= ಸಂತೋಷ ದಲ್ಲಿ; ನೀವಿಹುದು=ನೀವು ಇರುವುದೆಂದು; ನಾವು ಕೊಟ್ಟೆವು ವರವ=ನಾನು ವರವನ್ನು ನೀಡಿದ್ದೇನೆ; ಸಲ್ಲುವುದು+ಆವ=ಎಲ್ಲಾ ಸಲ್ಲುತ್ತದೆ; ಕಾಲದಲ್ಲಿ+ ಇನ್ನು=ಕಾಲದಲ್ಲೂ ಇನ್ನು; ನೀವೆ ಪಾವನರು=ಪುನೀತರು; ಪರಮ ಸುಖಿಯೆಂದು+ ಉಪಚರಿ ಸಿದರು=ಸದಾಸುಖಿಗಳೆಂದು ಉಪಚಾರ ಮಾಡಿದನು. ನೃಪತಿ=ರಾಜ ಶ್ರೀರಾಮ.

ದೇವತೆಗಳಿಗೆ ನೀಡುವ ಶ್ರೇಷ್ಠವಾದ ನೈವೇದ್ಯದ ಅನ್ನ ನೀನಾಗು, ಮನುಷ್ಯರಿಗೆ ಹಿತವಾದ ಆಹಾರ ನರೆದಲೆಗನಾಗಲಿ, ನೀವಿಬ್ಬರೂ ಭೂಲೋಕದಲ್ಲಿ ಅತ್ಯಂತ ಆನಂದದಿಂದ ಇರುವುದು, ನಾವು ಕೊಟ್ಟ ವರ ಎಲ್ಲಾ ಕಾಲಕ್ಕೂ ಸಲ್ಲುವುದು, ಇನ್ನು ನೀವೇ ಪುನೀತರು, ಸದಾ ಸುಖಿಗಳಾಗಿ ಇರಿ ಎಂದು ರಾಜ ಶ್ರೀರಾಮನು ಉಪಚರಿಸಿದ.

ಶ್ರೀರಾಮನ ಸಭೆಯಲ್ಲಿ ರಾಗಿಗೆ ಹೆಚ್ಚಿನ ಮಾನ್ಯತೆ ದೊರೆತಿದ್ದರಿಂದ ಬತ್ತವು ತಲೆತಗ್ಗಿಸಿ ಚಿಂತಿತವಾಯಿತು. ಇದನ್ನು ಕಂಡ ಕರುಣಾಮಯಿ ಶ್ರೀರಾಮನು ಬತ್ತಕ್ಕೂ ಒಂದು ಸ್ಥಾನವನ್ನು ಕಲ್ಪಿಸಿ ಭೂಲೋಕದಲ್ಲಿ ರಾಗಿಯೊಂದಿಗೆ ಆನಂದದಿಂದ ಇರಲು ಅವಕಾಶವನ್ನು ಮಾಡಿಕೊಟ್ಟ.

ನಲವು ಹಿಂಗಿದ ವ್ರಿಹಿಯ ರಾಗಿಯು
ಜಲವ ಹಸ್ತದೊಳೊರಸಿ ಇಂದ್ರನ
ಬಳಿಗೆ ಕಳುಹುವೆ ನಿನಗೆ ಸಂಶಯವೇಕೆ ಚಿತ್ತದಲಿ
ಕಲಿತನವ ಕೈಕೊಂಡು ಸತ್ಯದ
ಹೊಲಬುದಪ್ಪದೆ ಚೋಳದೇಶವ
ನೊಲಿದು ನೀ ಸಲಹೆಂದು ನೇಮವನಿತ್ತು ಕಳುಹಿಸಿದ ೧೫೦

ನಲವು ಹಿಂಗಿದ ವ್ರಿಹಿಯ=ದುಃಖಿತನಾದ ಬತ್ತವನ್ನು; ರಾಗಿಯು; ಜಲವ ಹಸ್ತದೊಳು+ಒರಸಿ=ಬತ್ತದ ಕಣ್ಣೀರನ್ನು ಕೈಯಿಂದ ಒರಸಿ; ಇಂದ್ರನ ಬಳಿಗೆ=ಇಂದ್ರನ ಹತ್ತಿರ; ಕಳುಹುವೆ=ಕಳುಹಿಸುವೆ; ನಿನ್ನ=ನಿನ್ನನ್ನು; ಸಂಶಯವೇಕೆ ಚಿತ್ತದಲಿ= ಅನುಮಾನವೇಕೆ ಮನದಲಿ; ಕಲಿತನವ ಕೈಕೊಂಡು=ಶೂರತನವನ್ನು ಮೈಗೂಡಿಸಿ ಕೊಂಡು; ಸತ್ಯದ ಹೊಲಬು+ತಪ್ಪದೇ=ಸತ್ಯದ ದಾರಿಯನ್ನು ಬಿಡದೇ; ಚೋಳ ದೇಶವನು+ಒಲಿದು=ಚೋಳ ದೇಶವನ್ನು ಪ್ರೀತಿಯಿಂದ; ನೀ ಸಲಹು+ಎಂದು=ನೀನು ಕಾಪಾಡೆಂದು; ನೇಮವನು+ಇತ್ತು=ನಿಯಮಿಸಿ; ಕಳುಹಿಸಿದ=ಕಳಿಸಿದ.

ದುಃಖಿತನಾದ ಬತ್ತವನ್ನು ರಾಗಿಯು ಸಮಾಧಾನ ಪಡಿಸಿ, ಕಣ್ಣೀರು ಒರಸಿ ಇಂದ್ರನ ಬಳಿಗೆ ನಿನ್ನನ್ನು ಕಳಿಸುವೆ, ಇದರ ಬಗ್ಗೆ ನಿನಗೆ ಸಂಶಯಬೇಡ,

ಪರಾಕ್ರಮವನ್ನು ಮೈಗೂಡಿಸಿಕೊಂಡು, ಸತ್ಯದ ದಾರಿಯಲ್ಲಿ ನಡೆ, ಚೋಳದೇಶವನ್ನು ಪ್ರೀತಿಯಿಂದ ಸಲಹು ಎಂದು ನೇಮಿಸಿ ಕಳಿಸಿದ.

ಬತ್ತ ತನ್ನನ್ನು ಎಷ್ಟೇ ಅವಮಾನಿಸಿದರೂ ಅಂತಿಮವಾಗಿ ಗೆದ್ದ ರಾಗಿಯು ಅದೆಲ್ಲವನ್ನೂ ಮರೆತು ಮಾನವೀಯತೆ ಮೈಗೂಡಿಸಿಕೊಂಡು, ಸೋತು ಅವಮಾನಕ್ಕೀಡಾದ ಬತ್ತವನ್ನು ಸಮಾಧಾನ ಪಡಿಸಿ ಚೋಳದೇಶವೆಂದು ಪ್ರಸಿದ್ಧಿ ಯಾದ ತಮಿಳುನಾಡನ್ನು ಪೊರೆವ ಜವಾಬ್ದಾರಿಯನ್ನು ಕೊಟ್ಟು ಕಳುಹಿಸುವುದು ಈ ಪದ್ಯದ ವಿಶೇಷ.

ಪಾಂಡವಾಗ್ರಜ ಕೇಳಿದೈ ಮಾ
ರ್ತಾಂಡ ವಂಶಜ ದಾಶರಥಿಯಾ
ಖಂಡಲನ ಮತವಿಡಿದು ಕರೆಸಿದನತುಳ ಧಾನ್ಯವನು
ಗಂಡುಗಲಿಗಳು ನೀವು ಧರಣೀ
ಮಂಡಲದೊಳಾದರಿಸಿ ದೇವರ
ನಂಡಲೆದು ಸಲಹೆಂದು ನೇಮವನಿತ್ತು ಕಳುಹಿಸಿದ ೧೫೧

ಪಾಂಡವ+ಅಗ್ರಜ=ಪಾಂಡವರಲ್ಲಿ ಹಿರಿಯನೇ; ಕೇಳಿದೈ=ಕೇಳಿದೆಯಾ; ಮಾರ್ತಾಂಡ=ಸೂರ್ಯ; ವಂಶಜ=ವಂಶದಲ್ಲಿ ಹುಟ್ಟಿದ; ದಾಶರಥಿಯು+ ಅಖಂಡ ಲನ=ಶ್ರೀರಾಮನು ದೇವೇಂದ್ರನ; ಮತವಿಡಿದು=ಅಭಿಪ್ರಾಯದಂತೆ; ಕರೆಸಿದನು; ಅತುಳ=ಅಸಾಮಾನ್ಯ; ಧಾನ್ಯವನು; ಗಂಡುಗಲಿಗಳು ನೀವು=ಪರಾಕ್ರಮಿಗಳು ನೀವು; ಧರಣೀಮಂಡಲದೊಳು+ ಆದರಿಸಿ=ಭೂಮಂಡಲದಲ್ಲಿ ಗೌರವದಿಂದ; ದೇವರನು+ ಅಂಡಲೆದು=ದೇವರನ್ನು ಸ್ಮರಿಸುತ್ತಾ; ಸಲಹೆಂದು=ಕಾಪಾಡಿ ಎಂದು; ನೇಮವನು+ ಇತ್ತು=ಕಟ್ಟಳೆಯನ್ನು ವಿಧಿಸಿ; ಕಳುಹಿಸಿದ=ಕಳಿಸಿದ.

ಪಾಂಡವರಲ್ಲಿ ಹಿರಿಯನೇ ಕೇಳು, ಸೂರ್ಯವಂಶದವನಾದ, ದಶರಥ ಮಹಾರಾಜನ ಪುತ್ರನಾದ ಶ್ರೀರಾಮನು ದೇವೇಂದ್ರನ ಅಭಿಪ್ರಾಯದಂತೆ ಎಲ್ಲಾ ಧಾನ್ಯಗಳನ್ನು ಕರೆಸಿ ನೀವೆಲ್ಲಾ ಪರಾಕ್ರಮಿಗಳು, ಸತ್ವಭರಿತರು ಭೂಲೋಕಕ್ಕೆ ತೆರಳಿ ಅಲ್ಲಿ ದೇವತೆಗಳಿಗೆ ಹಾಗೂ ಮನುಷ್ಯರಿಗೆ ಹಿತವಾಗುವಂತೆ ನಡೆದುಕೊಳ್ಳುವುದು

ಹಾಗೂ ಜನರನ್ನು ಕಾಪಾಡುವುದು ಎಂದು ಕಟ್ಟಳೆಯನ್ನು ವಿಧಿಸಿ ಭೋಲೋಕಕ್ಕೆ ಕಳುಹಿಸಿದನು ಶ್ರೀರಾಮ.

ಭೂಲೋಕದಲ್ಲಿ ರಾಗಿ ಮಾತ್ರವಲ್ಲದೇ ಬತ್ತ ಹಾಗೂ ಇನ್ನಿತರ ದವಸ-ಧಾನ್ಯಗಳಿಗೂ ಅವಕಾಶ ಮಾಡಿಕೊಟ್ಟ ಶ್ರೀರಾಮ ಎಂಬುದನ್ನು ಕನಕದಾಸರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಅಂದರೆ ಭೂಮಿಯ ಮೇಲೆ ಬಳಕೆಯಾಗುತ್ತಿರುವ ಪ್ರತಿಯೊಂದು ದವಸ ಧಾನ್ಯಕ್ಕೂ ಭಗವಂತನ ಕೃಪೆಯಿದೆ ಎಂಬುದು ಕವಿಯ ನಿಲವು.

ತಪಸಿಗಳನಾದರಿಸಿ ದೇಶಾ
ಧಿಪರ ಮನ್ನಿಸಿ ಧರಣಿಯಮರರ
ನುಪಚರಿಸಿ ವಿದ್ವಾಂಸ ಕವಿಜನ ಮಲ್ಲಗಾಯಕರ
ಅಪರಿಮಿತ ಯಾಚಕರ ಕಳುಹಿಸಿ
ತಪನತನಯನ ಸತಿಯರಿಗೆ ರಘು
ನೃಪತಿ ಕೊಡಿಸಿದನಖಿಳ ದಿವ್ಯಾಂಬರ ಸುಭೂಷಣವ ೧೫೨

ತಪಸಿಗಳನ್ನು+ಆದರಿಸಿ=ತಪಸ್ವಿಗಳನ್ನು ಸತ್ಕರಿಸಿ; ದೇಶ+ಅಧಿಪರ=ರಾಜ ಮಹಾರಾಜರ; ಮನ್ನಿಸಿ=ಗೌರವಿಸಿ; ಧರಣಿಯ+ ಅಮರರನು+ಉಪಚರಿಸಿ= ಭೂಲೋಕದ ದೇವತೆಗಳೆನಿಸಿದ ಬ್ರಾಹ್ಮಣರನ್ನು ಉಪಚಾರ ಮಾಡಿ; ವಿದ್ವಾಂಸರು; ಕವಿಜನ= ಕವಿಗಳು; ಮಲ್ಲ=ಜಟ್ಟಿಗಳು; ಗಾಯಕರು=ಹಾಡುಗಾರರು; ಅಪರಿಮಿತ= ಮಿತಿಯಿಲ್ಲದ; ಯಾಚಕರ=ಪ್ರಾರ್ಥಿಸುವವರ; ಕಳುಹಿಸಿ=ಕಳಿಸಿ; ತಪನತನಯನ= ಸೂರ್ಯನ ಮಗ ಸುಗ್ರೀವನ; ಸತಿಯರಿಗೆ=ಹೆಂಡತಿಯರಿಗೆ; ರಘು ನೃಪತಿ= ರಘುವಂಶದ ರಾಜ ಶ್ರೀರಾಮನು; ಅಖಿಲ ದಿವ್ಯಾಂಬರ=ವಿಶೇಷವಾದ ಸಕಲ ರೇಷ್ಮೆವಸ್ತ್ರ; ಸುಭೂಷಣವ=ಒಳ್ಳೆಯ ಒಡವೆಗಳನ್ನು ಕೊಡಿಸಿದನು.

ಮುನಿಗಳನ್ನು ಸತ್ಕರಿಸಿ, ರಾಜ ಮಹಾರಾಜರನ್ನು ಗೌರವಿಸಿ, ಬ್ರಾಹ್ಮಣರನ್ನು ಉಪಚರಿಸಿ; ಪಂಡಿತರು; ಕವಿಗಳು, ಜಟ್ಟಿಗಳು, ಸಂಗೀತಗಾರರು, ಪ್ರಾರ್ಥಿಸುವವರು ಎಲ್ಲರನ್ನು ಗೌರವದಿಂದ ಕಳುಹಿಸಿ, ಸುಗ್ರೀವನ ಪತ್ನಿಯರಿಗೆ ಅಮೂಲ್ಯ ಆಭರಣಗಳು ಹಾಗೂ ರೇಷ್ಮೆ ವಸ್ತ್ರಗಳನ್ನು ರಘುವಂಶದ ರಾಜ ಶ್ರೀರಾಮ ಕೊಡಿಸಿದನು.

ಸಭೆ ಮುಗಿದ ಬಳಿಕ ಸಭೆಗೆ ಆಗಮಿಸಿದ ಎಲ್ಲಾ ವರ್ಗದ ಜನರನ್ನು ಅವರವರ ಯೋಗ್ಯತಾನುಸಾರ ಸತ್ಕರಿಸಿ ಕಳುಹಿಸುವುದು ರಾಜಧರ್ಮ, ಅದರಂತೆ ಶ್ರೀರಾಮನು ನಡೆದುಕೊಂಡ.

ಪಾಂಡವಾಗ್ರಜ ಕೇಳು ಘನ ಕೋ
ದಂಡ ದೀಕ್ಷಾಚಾರ್ಯನೀ ಭೂ
ಮಂಡಲದೊಳತಿಕೀರ್ತಿವಡೆದನು ಸತ್ಯಧರ್ಮದಲಿ
ಚಂಡ ವಿಕ್ರಮ ರಾಮ ನೃಪ ಮಾ
ರ್ತಾಂಡಸುತ ಮೊದಲಾದ ವಾನರ
ತಂಡವನು ಕಳುಹಿಸಿ ಸುವಸ್ತುವನಿತ್ತು ಸತ್ಕರಿಸಿ ೧೫೩

ಪಾಂಡವ+ಅಗ್ರಜ=ಯುಧಿಷ್ಠಿರ; ಕೇಳು; ಘನಕೋದಂಡ=ದೊಡ್ಡ ಧನುಸ್ಸನ್ನು; ದೀಕ್ಷಾಚಾರ್ಯ+ಈ=ಮುರಿಯುವ ನಿಯಮವನ್ನು ಈಡೇರಿಸಿದ ಶ್ರೀರಾಮನು ಈ; ಭೂಮಂಡಲದೊಳು+ಅತಿ=ಭೂಲೋಕದಲ್ಲಿ ಹೆಚ್ಚು; ಕೀರ್ತಿ ವಡೆದನು= ಕೀರ್ತಿಯನು ಪಡೆದನು; ಸತ್ಯಧರ್ಮದಲ್ಲಿ; ಚಂಡ ವಿಕ್ರಮ=ಅತ್ಯಂತ ಪರಾಕ್ರಮಿ; ರಾಮನೃಪ= ಶ್ರೀರಾಮನು; ಮಾರ್ತಾಂಡಸುತ=ಸೂರ್ಯನ ಮಗ ಸುಗ್ರೀವ; ಮೊದಲಾದ; ವಾನರ ತಂಡವನು=ಕಪಿ ಸೈನ್ಯವನು; ಕಳುಹಿಸಿ; ಸುವಸ್ತುವನು+ ಇತ್ತು=ಬೆಲೆಬಾಳುವ ವಸ್ತು ಗಳನ್ನು ಕೊಟ್ಟು ಸತ್ಕರಿಸಿ=ಗೌರವಿಸಿದರು.

ಯುಧಿಷ್ಠಿರನೇ ಕೇಳು, ಅತ್ಯಂತ ಕಠಿಣವಾದ ಶಿವಧನುಸ್ಸನ್ನು ಮುರಿಯುವ ಪಂಥ್ಯವನ್ನು ಈಡೇರಿಸಿ, ಸೀತೆಯನ್ನು ಗೆದ್ದ ಶ್ರೀರಾಮನು ಈ ಭೂಮಂಡಲದಲ್ಲೆಲ್ಲಾ ಹೆಚ್ಚಿನ ಕೀರ್ತಿಯನ್ನು ಪಡೆದು ಪ್ರಸಿದ್ಧಿಯಾದನು. ಸತ್ಯಧರ್ಮದಲ್ಲಿ ನಡೆದು ವೀರ ಪರಾಕ್ರಮಿ ಎನಿಸಿಕೊಂಡ, ಸುಗ್ರೀವ ಮೊದಲಾದ ಕಪಿಸೈನ್ಯಕ್ಕೆ ಒಳ್ಳೆಯ ವಸ್ತುಗಳನ್ನು ಕೊಟ್ಟು ಸತ್ಕರಿಸಿ ಕಳುಹಿಸಿದ.

ಶ್ರೀರಾಮನು ಶಿವಧನುಸ್ಸನ್ನು ಮುರಿದ ವಿಶೇಷ ಸಂದರ್ಭವನ್ನು ಸಿಂಹಾವಲೋಕನ ಕ್ರಮದಲ್ಲಿ ಕವಿ ಈ ಪದ್ಯದಲ್ಲಿ ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲ ಅರಣ್ಯವಾಸದಲ್ಲಿ ತನ್ನೊಡನಿದ್ದು, ಸಹಾಯ ಮಾಡಿದ ಸುಗ್ರೀವ; ಕಪಿಸೈನ್ಯ ಮೊದಲಾದವರಿಗೆ ಶ್ರೀರಾಮ ಆದರದಿಂದ ಸತ್ಕರಿಸಿ ಕಳುಹಿಸಿಕೊಡುತ್ತಾನೆ.

ಕರುಣದಿಂದ ವಿಭೀಷಣನ ಪತಿ
ಕರಿಸಿ ಕರಿರಥ ತುರಗ ವಸ್ತ್ರಾ
ಭರಣವಿತ್ತುಪಚರಿಸಿ ಕಳುಹಿದನಾಗಳಸುರರನು
ಗುರು ವಸಿಷ್ಠನ ಮತದಿ ತಮ್ಮಂ
ದಿರು ಸಹಿತ ಸಾಮ್ರಾಜ್ಯವಾಳಿದ
ವರದನಗಪತಿ ಯಾದಿಕೇಶವರಾಮ ವಿಭವದಲಿ ೧೫೪

ಕರುಣದಿಂದ=ಕರುಣೆಯಿಂದ; ವಿಭೀಷಣನ ಪತಿಕರಿಸಿ=ವಿಭೀಷಣನನ್ನು ಉಪಚರಿಸಿ; ಕರಿ; ರಥ; ತುರಗ=ಆನೆ; ರಥ; ಕುದುರೆ ವಸ್ತ್ರ+ಆಭರಣವ+ಇತ್ತು+ ಉಪಚರಿಸಿ=ವಸ್ತ್ರ ಮತ್ತು ಆಭರಣಗಳನ್ನು ಕೊಟ್ಟು ಉಪಚಾರ ಮಾಡಿ; ಕಳುಹಿದನು+ ಆಗಳ್+ಅಸುರರನು=ಕಳುಹಿಸಿದನು ಆಗ ರಾಕ್ಷಸರನ್ನು; ಗುರು ವಸಿಷ್ಠನ ಮತದಿ= ಗುರುಗಳಾದ ವಸಿಷ್ಠ ಋಷಿಯ ಅಭಿಪ್ರಾಯದಂತೆ; ತಮ್ಮಂದಿರು ಸಹಿತ= ಸಹೋ ದರರೊಂದಿಗೆ; ವಿಭವದಲಿ=ಅತ್ಯಂತ ವೈಭವದಿಂದ; ಸಾಮ್ರಾಜ್ಯ ವಾಳಿದ= ರಾಜ್ಯಭಾರ ಮಾಡಿದ.

ಕರುಣೆಯಿಂದ ವಿಭೀಷಣನಿಗೆ ಆನೆ ಕುದುರೆ ರಥ ಅಮೂಲ್ಯವಾದ ವಸ್ತ್ರ ಆಭರಣಗಳನ್ನು ಕೊಟ್ಟು ಪ್ರೀತಿಯಿಂದ ಉಪಚರಿಸಿ ಅವರನ್ನು ಕಳುಹಿಸಿ, ಅನಂತರ ಗುರು ವಸಿಷ್ಠರ ಅಭಿಪ್ರಾಯದಂತೆ, ತಮ್ಮಂದಿರೊಂದಿಗೆ ಅತ್ಯಂತ ವೈಭವದಿಂದ ರಾಜ್ಯಭಾರವನ್ನು ನಡೆಸಿದ. ಸಂಪತ್ತಿನ ಒಡೆಯನಾದ ಆದಿಕೇಶವನ ಅನುಗ್ರಹದಂತೆ ಶ್ರೀರಾಮನು ತನ್ನ ಸಹೋದರರೊಡಗೂಡಿ ವೈಭವದಿಂದ ರಾಜ್ಯವಾಳುವುದು ಒಂದು ವಿಶೇಷವಾದರೆ ಕವಿ ಕನಕದಾಸರು ತನ್ನ ಆರಾಧ್ಯದೈವ ಕಾಗಿನೆಲೆಯ ಆದಿಕೇಶವನ ಅನುಗ್ರಹವನ್ನು ಶ್ರೀರಾಮನಿಗೆ ನೀಡುವುದು ಮತ್ತೊಂದು ವಿಶೇಷವಾಗಿದೆ.

ವ್ಯೋಮಕೇಶ ವಿರಿಂಚಿ ವಾಸವ
ತಾಮರಸದಳನಯನರಿವರು ಮ
ಹಾ ಮಹಿಮರೀ ವ್ರಿಹಿಯ-ನರೆದಲೆಗರ ವಿವಾದವನು
ರಾಮ ಸಭೆಯಲಿ ತೀರಿದುದು ಸು

ತ್ರಾಮನೋಲಗದಲ್ಲಿ ಕೇಳ್ದೆವು
ರಾಮಧಾನ್ಯದ ಕಥೆಯನಭಿವರ್ಣಿಸಿದೆ ನಿನಗೆಂದ ೧೫೫

ವ್ಯೋಮಕೇಶ=ವಾಯುಮಂಡಲವನ್ನೇ ಕೇಶವಾಗುಳ್ಳ; ವಿರಿಂಚಿ=ಬ್ರಹ್ಮ; ವಿಷ್ಣು; ಶಿವ; ವಾಸವ=ಇಂದ್ರ; ತಾಮರಸದಳ=ತಾವರೆ ದಳದಂತೆ; ನಯನರು+ ಇವರು=ಕಣ್ಣುಳ್ಳವರು; ಮಹಾಮಹಿಮರು+ಈ=ಹೆಚ್ಚು ಘನತೆಯನ್ನು ಹೊಂದಿದವರು ಈ; ವ್ರಿಹಿಯ ನರೆದಲೆಗರ=ಬತ್ತ ಮತ್ತು ರಾಗಿಯರ; ವಿವಾದವನು=ಜಗಳವನು; ರಾಮಸಭೆಯಲ್ಲಿ=ಶ್ರೀರಾಮನ ಸಭೆಯಲ್ಲಿ; ತೀರಿದುದು= ತೀರ್ಮಾನಿಸಿದ್ದನು; ಸುತ್ರಾ ಮನ+ ಓಲಗದಲ್ಲಿ=ದೇವೇಂದ್ರನ ಒಡ್ಡೋಲಗದಲ್ಲಿ; ಕೇಳ್ದೆವು=ಆಲಿಸಿದೆವು; ರಾಮ ಧಾನ್ಯದ=ರಾಮಧಾನ್ಯವಾದ ರಾಗಿಯ; ಕಥೆಯನು+ ಅಭಿವರ್ಣಿಸಿದೆ=ಕಥೆಯನ್ನು ವಿವರಿಸಿದೆ; ನಿನಗೆ+ಎಂದ=ನಿನಗೆ ಎಂದು ಶಾಂಡಿಲ್ಯ ಮುನಿ ಯುಧಿಷ್ಠಿರನಿಗೆ ಹೇಳಿದನು.

ವಾಯುಮಂಡಲವನ್ನೇ ಕೇಶವಾಗುಳ್ಳ ಶಿವ, ವಿಷ್ಣು, ಬ್ರಹ್ಮ, ಇಂದ್ರ ಮುಂತಾದವರು, ತಾವರೆ ದಳದಂತೆ ಕಣ್ಣುಳ್ಳವರು, ಹೆಚ್ಚು ಘನತೆ ಗೌರವಗಳನ್ನು ಹೊಂದಿರುವಂಥವರು, ಇವರೆಲ್ಲಾ ಸೇರಿ ರಾಗಿ ಮತ್ತು ಬತ್ತದ ಜಗಳವನ್ನು ರಾಮನ ಸಭೆಯಲ್ಲಿ ತೀರ್ಮಾನಿಸಿದ ಕಥೆಯನ್ನು ನಾನು ದೇವೇಂದ್ರನ ಒಡ್ಡೋಲಗದಲ್ಲಿ ಕೇಳಿದ್ದೆನು. ರಾಗಿಯು ರಾಮಧಾನ್ಯವಾದ ಆ ಕಥೆಯನ್ನು ನಾನು ನಿನಗೆ ವರ್ಣಿಸಿದೆನೆಂದು ಶಾಂಡಿಲ್ಯಮುನಿಯು ಯುಧಿಷ್ಠಿರನಿಗೆ ಹೇಳಿದನು.

ಅರಣ್ಯವಾಸಕ್ಕೆ ಬಂದಿದ್ದ ಪಾಂಡವರನ್ನು ಆಶ್ರಮಕ್ಕೆ ಆಹ್ವಾನಿಸಿ, ಅವರನ್ನು ಸಮಾಧಾನ ಪಡಿಸಲು ಶಾಂಡಿಲ್ಯಮುನಿಯು ಆರಂಭಿಸಿದ ರಾಮನ ಕಥೆಯನ್ನು ಈ ಪದ್ಯದಲ್ಲಿ ಕವಿ ಮುಕ್ತಾಯಗೊಳಿಸುವರು.

ಆಲಿಸಿದೆನೆಲೆ ಮುನಿಪ ನೀವಿದ
ಪೇಳೆ ಕೇಳ್ದೆನು ಮೇಲೆ ಸಜ್ಜನ
ಜಾಲ ತಣಿಯಿತು ಸಕಲ ಕರ್ಣಾಮೃತದಿ ರಂಜಿಸಿತು
ಹೇಳಲೇನದ ಮನದ ಬೇಸರ

ಬೀಳುಕೊಂಡುದು ಹರುಷ ಚಿತ್ತದೆ
ದಾಳಿ ಹರಿಯಿತ್ತೆ ನುತಮುನಿಪದಕೆರಗಿ ಕೈಮುಗಿದ ೧೫೬

ಆಲಿಸಿದೆನು+ಎಲೆ ಮುನಿಪ=ಕೇಳಿಸಿಕೊಂಡೆನು ಮುನಿವರ್ಯರೇ ನೀವು+ ಇದ ಪೇಳೆ=ನೀವು ಇದನ್ನು ಹೇಳಲು; ಕೇಳ್ದೆನು=ಆಲಿಸಿದೆನು; ಮೇಲೆ= ಜೊತೆಗೆ; ಸಜ್ಜನ ಜಾಲ=ಸಹೃದಯರ ಸಮೂಹ; ತಣಿಯಿತು=ತೃಪ್ತಿಗೊಂಡಿತು; ಸಕಲ ಕರ್ಣಾಮೃತದಿ=ಎಲ್ಲಾ ಕಿವಿಗಳಿಗೂ ಅಮೃತದಂತೆ; ರಂಜಿಸಿತು=ಸಂತೋಷಪಡಿಸಿತು. ಹೇಳಲೇನು+ಅದ=ಯಾವ ರೀತಿ ಹೇಳಲಿ ಅದು; ಮನದ ಬೇಸರ=ಮನಸ್ಸಿನ ಬೇಸರವನ್ನು; ಬೀಳುಕೊಂಡುದು=ನೀಗಿಸಿತು; ಹರುಷ=ಸಂತಸ; ಚಿತ್ತದೆ=ಮನಸ್ಸಿಗೆ; ದಾಳಿ=ಮುತ್ತಿಗೆಯನ್ನು; ಹರಿಯಿತು+ಎನುತ=ಹಾಕಿತು ಎಂದೆನ್ನುತ್ತಾ; ಮುನಿ+ಪದಕೆ+ ಎರಗಿ=ಶಾಂಡಿಲ್ಯ ಮುನಿಯ ಪಾದಕ್ಕೆ ನಮಸ್ಕರಿಸಿ; ಕೈ ಮುಗಿದ=ಕೈಗಳನ್ನು ಮುಗಿದ ಯುಧಿಷ್ಠಿರ.

ರಾಮಧಾನ್ಯದ ಕಥೆಯನ್ನು ಆಲಿಸಿದೆನು ಮುನಿವರ್ಯರೇ ನೀವು ಇದನ್ನು ಹೇಳಿದ್ದರಿಂದ ನಾನು ಮಾತ್ರವಲ್ಲ. ಕೇಳಿದ ಸಹೃದಯರ ಕಿವಿಗಳೂ ಪುನೀತವಾಗಿವೆ. ಹೃದಯಗಳು ತಂಪಾಗಿವೆ. ಬೇಸರ ದೂರವಾಗಿ ಸಂತೋಷ ಮನಸ್ಸಿಗೆ ದಾಳಿ ಇಟ್ಟಿದೆ ಎನ್ನುತ್ತಾ ಶಾಂಡಿಲ್ಯಮುನಿಗಳ ಪಾದಕ್ಕೆ ಎರಗಿ ಯುಧಿಷ್ಠಿರ ಕೈಮುಗಿದ.

ರಾಮಧಾನ್ಯದ ಕಥೆಯನ್ನು ಕೇಳಿದ್ದರಿಂದ ತನಗೆ ಏನೆಲ್ಲಾ ಸುಖ ಸಂತೋಷ ಒದಗಿ ಬಂತು ಎಂದು ಯುಧಿಷ್ಠಿರ ಹೇಳುವುದರ ಮೂಲಕ ಕನಕದಾಸರು ತನ್ನ ಕಾವ್ಯ ಜನಮಾನಸದಲ್ಲಿ ಎಂಥ ಪರಿಣಾಮವನ್ನುಂಟು ಮಾಡಿ ನೆಲೆ ನಿಲ್ಲಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಅರಸ ನೀ ಮನವೊಲಿದು ಕೇಳದ
ಚರಿತೆ ತಾನೊಂದಿಲ್ಲ ಲೋಕದಿ
ಪರಮ ಪುಣ್ಯದ ರಾಮಕಥೆಯಿದ ಕೇಳ್ದೆ ನೀನಿಂದು
ಕೊರತೆಯುಂಟೇ ಇಷ್ಟಭೋಗವ
ಹರಿಕೊಡುವ ನಿಮಗಿನ್ನು ಎನುತುಪ
ಚರಿಸಿ ಕಳುಹಿಸಿಕೊಂಡು ಮುನಿ ಹೊರವಂಟನಾಶ್ರಮಕೆ ೧೫೭

ಅರಸ=ರಾಜ ಯುಧಿಷ್ಠಿರನೇ; ನೀ=ನೀನು; ಮನವೊಲಿದು=ಮನಃ ಪೂರ್ವಕವಾಗಿ; ಕೇಳದ=ಕೇಳದೇ ಇರುವ; ಚರಿತೆ=ಕಥೆ; ತಾನೊಂದಿಲ್ಲ ಲೋಕದಿ=ಈ ಲೋಕದಲ್ಲಿ ಯಾವುದೂ ಇಲ್ಲ; ಪರಮಪುಣ್ಯದ=ಶ್ರೇಷ್ಠವಾದ ಪುಣ್ಯದ; ರಾಮಕಥೆ+ ಇದ=ರಾಮಕಥೆ ಇದನ್ನು; ಕೇಳ್ದೆ=ಕೇಳಿರುವೆ; ನೀನಿಂದು=ನೀನು ಈ ದಿನ; ಕೊರತೆಯುಂಟೇ=ಯಾವ ಕೊರತೆಯೂ ಇರುವುದಿಲ್ಲ; ಇಷ್ಟಭೋಗವ=ಬಯಸಿದ ಸಂಪತ್ತನ್ನು; ಹರಿ ಕೊಡುವ=ವಿಷ್ಣು ಕೊಡುವನು; ನಿಮಗೆ+ಇನ್ನು+ ಎನುತ+ಉಪಚರಿಸಿ=ನಿಮಗೆ ಇನ್ನು ಮುಂದೆ ಎಂದು ಹೇಳಿ ಉಪಚಾರ ಮಾಡಿ; ಕಳುಹಿಸಿಕೊಂಡು=ಕಳುಹಿಸಿ ಕೊಟ್ಟು; ಮುನಿ ಹೊರವಂಟನು+ ಆಶ್ರಮಕೆ=ಶಾಂಡಿಲ್ಯಮುನಿಯು ಆಶ್ರಮಕ್ಕೆ ತೆರಳಿದನು.

ಅರಸ ಯುಧಿಷ್ಠಿರನೇ ನೀನು ಆಸಕ್ತಿಯಿಂದ ಕೇಳದೇ ಇರುವ ಕಥೆ ಈ ಲೋಕದಲ್ಲಿ ಯಾವುದೂ ಇಲ್ಲ, ಅತ್ಯಂತ ಪುಣ್ಯವನ್ನು ನೀಡುವ ರಾಮಕಥೆಯನ್ನು ಕೇಳಿರುವೆ ಈ ದಿನ, ಬಯಸಿದ ಸಕಲ ಸಂಪತ್ತನ್ನು ಹರಿಯು ನಿಮಗೆ ನೀಡುವನು, ಯಾವುದರಲ್ಲೂ ಕೊರತೆ ಇರುವುದಿಲ್ಲ ಎಂದು ಹೇಳುತ್ತಾ ಯುಧಿಷ್ಠಿರನನ್ನು ಸತ್ಕರಿಸಿ ಅಲ್ಲಿಂದ ತನ್ನ ಆಶ್ರಮಕ್ಕೆ ಶಾಂಡಿಲ್ಯಮುನಿ ತೆರಳಿದನು.

ಲೋಕದಲ್ಲೇ ಇದು ಪರಮಪುಣ್ಯದ ಕಥೆ, ಇದನ್ನು ಕೇಳಿದವರಿಗೆ ಯಾವುದೇ ಕೊರತೆಯಿರುವುದಿಲ್ಲ, ಸಕಲ ಸಂಪತ್ತು ಒದಗಿ ಬರುತ್ತದೆ ಎಂದು ಕನಕದಾಸರು ತನ್ನ ಕಾವ್ಯದ ಮಹತ್ವವನ್ನು ಪ್ರಯೋಜನಗಳನ್ನು ಶಾಂಡಿಲ್ಯಮುನಿಯ ಮೂಲಕ ಹೇಳಿಸಿದ್ದಾರೆ.

ಶರಧಿಶಯನ ಮುಕುಂದ ಸಚರಾ
ಚರಭರಿತ ನಿರ್ಗುಣ ನಿರಾಮಯ
ಸುರ ನರೋರಗವಂದ್ಯ ವರಪುರದಾದಿಕೇಶವನ
ಚರಣದಂಕಿತವಾಗಿ ಪೇಳಿದ
ಪರಮಧಾನ್ಯದ ಚರಿತೆ ಸಂತತ
ಧರೆಯೊಳಿಂತೊಪ್ಪಿಹುದು ಆಚಂದ್ರಾರ್ಕ ಪರಿಯಂತ ೧೫೮

ಶರಧಿಶಯನ=ಸಮುದ್ರದ ಮೇಲೆ ಮಲಗಿರುವ; ಮುಕುಂದ=ವಿಷ್ಣು; ಸಚರ+ಅಚರಭರಿತ=ಜಂಗಮ ಮತ್ತು ಸ್ಥಾವರದಿಂದ ಕೂಡಿರುವ; ನಿರ್ಗುಣ=ಪರಮಾತ್ಮ; ನಿರಾಮಯ=ಸುಂದರನು; ಸುರ+ನರ+ಉರಗ+ವಂದ್ಯ= ದೇವಲೋಕ; ಭೂಲೋಕ; ಪಾತಾಳಲೋಕಗಳಿಂದ ವಂದಿತನಾದ; ವರಪುರದ+ ಆದಿಕೇಶವನ=ಶ್ರೇಷ್ಠ ಪುರದ ಆರಾಧ್ಯ ದೈವ ಆದಿಕೇಶವನ; ಚರಣದ+ ಅಂಕಿತ ಮಾಗಿ=ಪಾದಕ್ಕೆ ಅರ್ಪಿಸಿ(ಪಾದ ಸಾಕ್ಷಿಯಾಗಿ) ಪೇಳಿದ=ಹೇಳಿದ; ಪರಮ ಧಾನ್ಯದ= ಶ್ರೇಷ್ಠಧಾನ್ಯದ; ಚರಿತೆ=ಕಥೆ; ಸಂತತ=ನಿರಂತರವಾಗಿ; ಆ ಚಂದ್ರ+ಅರ್ಕ ಪರಿಯಂತ=ಸೂರ್ಯ ಚಂದ್ರರು ಇರುವವರೆಗೂ; ಧರೆಯೊಳು+ ಇಂತೊಪ್ಪಿಹುದು = ಭೂಮಿಯಲ್ಲಿ ನೆಲೆನಿಲ್ಲುವುದು.

ಸಮುದ್ರವನ್ನೇ ಹಾಸಿಗೆಯಾಗಿಸಿಕೊಂಡ ವಿಷ್ಣು, ಸ್ಥಾವರ ಹಾಗೂ ಜಂಗಮಗಳಿಗೆ ಒಡೆಯನಾಗಿರುವಂಥ, ಪರಮಾತ್ಮನು ಅತ್ಯಂತ ಮನೋಹರನು ಭೂಲೋಕ, ದೇವಲೋಕ, ಪಾತಾಳಲೋಕಗಳಿಂದ ವಂದಿಸಲ್ಪಟ್ಟ ದೇವನು ವರಪುರದ ಆರಾಧ್ಯದೈವ ಆದಿಕೇಶವನ ಪಾದ ಸಾಕ್ಷಿಯಲ್ಲಿ ಹೇಳಿದ ಪರಮಧಾನ್ಯ ರಾಗಿಯ ಕಥೆ, ಸೂರ್ಯ ಚಂದ್ರರಿರುವವರೆಗೆ ಭೂಲೋಕದಲ್ಲಿ ಶಾಶ್ವತವಾಗಿ ನೆಲೆಸಲಿ ಎಂದು ಆಶಿಸುತ್ತಾ ಕನಕದಾಸರು ರಾಮಧಾನ್ಯ ಚರಿತೆ ಕಥೆಯನ್ನು ಮುಕ್ತಾಯಗೊಳಿಸುತ್ತಾರೆ.

ತಾನು ಹೇಳಿದ ಶ್ರೀರಾಮನ ಕಥೆ ಸೂರ್ಯಚಂದ್ರರಿರುವವರೆಗೂ ಅಂದರೆ ಶಾಶ್ವತವಾಗಿ ಭೂಲೋಕದಲ್ಲಿ ಇರಬೇಕೆಂಬುದು ಕವಿಯ ಆಶಯ. ಅವರ ಆಶಯದಂತೆ ಪ್ರಸ್ತುತದಲ್ಲೂ ಅಂದರೆ ಸುಮಾರು ಐದುನೂರು ವರ್ಷಗಳಿಂದಲೂ ಜನ ಮಾನಸದಲ್ಲಿ ನೆಲೆ ನಿಂತಿದೆ.

❐ ❐ ❐

# ಪರಾಮರ್ಶನ ಕೃತಿಗಳು


೧. ಕನಕ ಕಿರಣ, ಶಿವರುದ್ರಪ್ಪ ಜಿ.ಎಸ್., ಕಾ.ತಾ.ಚಿಕ್ಕಣ್ಣ(ಸಂ), ೧೯೮೨.

೨. ಕನಕದಾಸರ ಜೀವನ, ವಿಚಾರ ಜ್ಯೋತಿ ಹೊಸೂರ, ೧೯೮೩.

೩. ಕನಕ ಪುರಂದರ – ಡಾ.ಶಿವಪ್ರಸಾದ್ ವೈ.ಎಸ್., ಐ.ಬಿ.ಎಚ್ ಪ್ರಕಾಶನ, ಬೆಂಗಳೂರು,೨೦೧೧.

೪. ಕನಕ ಸಾಹಿತ್ಯ ದರ್ಶನ, ರಾಜೇಗೌಡ ಹ.ಕ., ೧೯೯೦.

೫. ದಾಸ ಶ್ರೇಷ್ಠ ಕನಕದಾಸರ ರಾಮಧಾನ್ಯ ಚರಿತ್ರೆ, ತಳಗೇರಿ ಕೆ.ಬಿ.(ಸಂ), ಜೀವನ ದರ್ಶನ ಹಾಗೂ ಕೃತಿಗಳ ಪರಿಚಯ, ೧೯೯೮.

೬. ದಾಸ ಸಾಹಿತ್ಯ ಮತ್ತು ಸಂಸ್ಕೃತಿ, ರಾಮಚಂದ್ರರಾವ್, ಸಾ.ಕೃ., ೨೦೦೩.

೭. ಬಯಲು ಆಲಯದೊಳಗೊ, ಸಂ.ಡಾ.ರಾಜಶೇಖರ ಮಠಪತಿ, ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.೨೦೧೬

೮. ರಾಮಧಾನ್ಯ ಚರಿತೆಯ ನಾಟಕ, ಅಂಬಾತನಯ ಮುಂದ್ರಾಡಿ, ಕನಕದಾಸ ಅಧ್ಯಯನ ಸಂಶೋಧನಾ ಪೀಠ, ಉಡುಪಿ.

೯. ರಾಮಧಾನ್ಯ ಚರಿತೆ ಸಂಘರ್ಷದ ನೆಲೆ, ಸರೋಜಿನಿ ಸಿ. ಹಿರೇಮಠ, ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.

೧೦. ರಾಮಧಾನ್ಯ ಚರಿತ್ರೆ, ಜವರೇಗೌಡ ದೇ.,(ಸಂ), ೧೯೬೫.

೧೧. ರಾಮಧಾನ್ಯ ಚರಿತ್ರೆ, ಸಾ.ಶಿ.ಮರುಳಯ್ಯ(ಸಂ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೧೨.

೧೨. 'ರಾಮಧಾನ್ಯ' ನಾಟಕ, ರಾಮಕೃಷ್ಣ ಮರಾಠೆ(ಸಂ), ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ.

೧೩. ಶ್ರೀ ಕನಕದಾಸರ ಕೃತಿಗಳು, ಸುಬೋಧ ರಾಮರಾಯರು(ಸಂ), ೨೦೦೨.

೧೪. The golden Servant of lord Hari, Basavaraj Naikar, 2001.

೧೫. Kanakadasa, Basruru Subba Rao, 2001.


❒ ❒ ❒